ಬುಧವಾರ, ಫೆಬ್ರುವರಿ 4, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಿಶ್ವದ ಚಿತ್ತ ಭಾರತದತ್ತ

ಬಾಹ್ಯಾಕಾಶ ಯೋಜನೆಗಳಲ್ಲಿ ಉದಯೋನ್ಮುಖ ಶಕ್ತಿಯಾಗಿರುವ ಭಾರತ ವಿಶ್ವದ ಗಮನ ಸೆಳೆಯುತ್ತಿದೆ ಎಂದು ಗಗನಯಾನಿ ಶುಭಾಂಶು ಶುಕ್ಲಾ ಹೇಳಿದರು



ಅನುದಾನಕ್ಕೆ ಬೇಡಿಕೆ

ಹಡಪದ ಅಪ್ಪಣ್ಣ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ ₹100 ಕೋಟಿ ಮೀಸಲಿಡಬೇಕು ಎಂದು ಒತ್ತಾಯಿಸಿ ರಾಜ ಶಿವಯೋಗಿ ಶಿವಾಚಾರ್ಯರು ಕಲಬುರಗಿಯಲ್ಲಿ ಪ್ರತಿಭಟಿಸಿದರು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಿಂದ ಜಾಗೃತಿ ಜಾಥಾ

'ಕ್ಯಾನ್ಸರ್: ವಾರ್ಷಿಕ 22 ಸಾವಿರ ಮಂದಿ ನೋಂದಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ಯಾನ್ಸರ್ ರೋಗ ಪತ್ತೆ ಮತ್ತು ಚಿಕಿತ್ಸೆ ಸಂಬಂಧ ವಾರ್ಷಿಕ ಸರಾಸರಿ 22 ಸಾವಿರ ಮಂದಿ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಆರಂಭಿಕ ಹಂತದಲ್ಲಿಯೇ ರೋಗ ನಿರ್ಣಯದ ನಂತರ ಚಿಕಿತ್ಸೆ ಒದಗಿಸಿದಲ್ಲಿ ಶೇ 60ರಿಂದ ಶೇ 70ರಷ್ಟು ಮಂದಿಗೆ ರೋಗ ಗುಣಪಡಿಸಬಹುದು' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಸಂಸ್ಥೆಯು ಬುಧವಾರ (ಫೆ.4) ಬೆಳಿಗ್ಗೆ 7.30ಕ್ಕೆ ಸಂಸ್ಥೆಯ ಆವರಣದಿಂದ ಲಾಲ್‌ಬಾಗ್‌ವರೆಗೆ ಜಾಗೃತಿ ಜಾಥಾ ಹಮ್ಮಿಕೊಂಡಿದೆ.

'ರಾಜ್ಯದಲ್ಲಿ 89,125 ಹೊಸ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಬೆಂಗಳೂರಿನಲ್ಲಿ ಪುರುಷರಲ್ಲಿ ಶ್ವಾಸಕೋಶ, ಉದರ, ಪ್ರಾಸ್ಟೇಟ್ (ಮೂತ್ರನಾಳ), ಅನ್ನನಾಳದ ಕ್ಯಾನ್ಸರ್, ಮಹಿಳೆಯರಲ್ಲಿ ಸ್ತನ, ಗರ್ಭಕಂಠ, ಅಂಡಾಶಯದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿವೆ. ಫಾಲೋಅಪ್ ಚಿಕಿತ್ಸೆಗಾಗಿ ಸಂಸ್ಥೆಗೆ ವಾರ್ಷಿಕ 3.5 ಲಕ್ಷದಿಂದ 4 ಲಕ್ಷದವರೆಗೂ ಪ್ರಕರಣಗಳು ನೋಂದಣಿಯಾಗುತ್ತಿವೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ತಿಳಿಸಿದ್ದಾರೆ.

ವಿಶ್ವ ಕ್ಯಾನ್ಸರ್ ದಿನ ಪ್ರಯುಕ್ತ

'ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿಯ (ಪಿಬಿಸಿಆರ್) ಪ್ರಕಾರ, ರಾಜ್ಯದಲ್ಲಿ ವಾರ್ಷಿಕ ಸರಾಸರಿ ಶೇ 10ರಷ್ಟು ಪುರುಷರು ಮತ್ತು ಮಹಿಳೆಯರಲ್ಲಿ ಕ್ಯಾನ್ಸರ್ ಪ್ರಕರಣಗಳ ಹೆಚ್ಚಳ ಗುರುತಿಸಲಾಗಿದೆ. ಏರಿಳಿತ ಜೀವನಶೈಲಿ, ತಂಬಾಕು ಉತ್ಪನ್ನಗಳ ಸೇವನೆಯಂತಹ ವ್ಯಸನ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಏರಿಕೆಯಾಗುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ಕ್ಯಾನ್ಸರ್ ಮತ್ತು ಅದರ ಲಕ್ಷಣಗಳು, ತಂಬಾಕು ಉತ್ಪನ್ನಗಳ ಸೇವನೆಯಿಂದ ಉಂಟಾಗುವ ಅಪಾಯಗಳು, ಕ್ಯಾನ್ಸರ್ ರೋಗಕ್ಕೆ ಕಾರಣವಾಗುವ ಅಂಶಗಳ ಬಗ್ಗೆ ಸಾರ್ವಜನಿಕರಲ್ಲಿ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ. ಸಂಚಾರಿ ಕ್ಯಾನ್ಸರ್ ತಪಾಸಣಾ ವಾಹನ ಮತ್ತು ಮ್ಯಾಮೋಗ್ರಫಿ ಯಂತ್ರದ ನೆರವಿನಿಂದ ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆಗೆ ಶಿಬಿರಗಳನ್ನೂ ನಡೆಸಲಾಗುತ್ತಿದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಜನರು ಕ್ಯಾನ್ಸರ್ ಬಗ್ಗೆ ಭಯ ಪಡದೆ, ವೈದ್ಯಕೀಯ ಪರೀಕ್ಷೆಗೆ ಒಳಗಾಗುವ ಮೂಲಕ ರೋಗವನ್ನು ಖಚಿತಪಡಿಸಬೇಕು. ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆಯಾದರೆ ಚಿಕಿತ್ಸೆ ಸುಲಭ
ಡಾ.ಟಿ.ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸುದ್ದಿ 2 ನಿಮಿಷ

'ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ರಂಗಭೂಮಿ ಅವಶ್ಯಕ'

ಬೆಂಗಳೂರು: 'ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲೇ ರಂಗಭೂಮಿಯ ಸನಿಹಕ್ಕೆ ತರಬೇಕು ಹಾಗೂ ನಾಟಕ, ಅಭಿನಯ ಮತ್ತು ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು ಎಂಬ ಅಭಿಪ್ರಾಯ ಹೆಚ್ಚು ಬಲ ಪಡೆದುಕೊಳ್ಳುತ್ತಿದೆ' ಎಂದು ನಟ ಲಕ್ಷ್ಮೀ ಭಟ್ ಹೇಳಿದರು.

ಚಿಣ್ಣರ ಮಕ್ಕಳ ನಾಟಕ ಕೇಂದ್ರದ ವತಿಯಿಂದ ಉದಯಭಾನು ಕಲಾ ಸಂಘದಲ್ಲಿ ಏರ್ಪಡಿಸಿದ್ದ 47ನೇ ಮಕ್ಕಳ ರಂಗಯಾನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

'ಎರಡು ದಶಕಗಳ ಹಿಂದೆ ಪೋಷಕರು ತಮ್ಮ ಮಕ್ಕಳನ್ನು ರಂಗಭೂಮಿ ಅಥವಾ ಸಿನಿಮಾರಂಗಕ್ಕೆ ಕಳುಹಿಸಲು ಹಿಂದೇಟು ಹಾಕುತ್ತಿದ್ದರು. ಕಲಾರಂಗವನ್ನು ಭದ್ರ ಭವಿಷ್ಯದ ಕ್ಷೇತ್ರವೆಂದು ಪರಿಗಣಿಸದ ಮನೋಭಾವ ಸಮಾಜದಲ್ಲಿ ಸಾಮಾನ್ಯವಾಗಿತ್ತು. ಆದರೆ, ಕಾಲ ಬದಲಾಗಿದೆ. ಕಲೆಯ ಮಹತ್ವವನ್ನು ಇಂದಿನ ಪೋಷಕರು ಅರಿತಿದ್ದಾರೆ' ಎಂದರು.

ನಟ ಭುವನ್ ಮಾತನಾಡಿ, 'ರಂಗಭೂಮಿ ಕೇವಲ ಕಲೆಯ ವೇದಿಕೆಯಷ್ಟೇ ಅಲ್ಲ, ಅದು ಮಕ್ಕಳಿಗೆ ಜೀವನ ಪಾಠ ಕಲಿಸುವ ಶಾಲೆಯಾಗಿದೆ. ಹೀಗಾಗಿ ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕಾಗಿ ಅವರನ್ನು ಬಾಲ್ಯದಲ್ಲೇ ರಂಗಭೂಮಿಯೊಂದಿಗೆ ಸಂಪರ್ಕಕ್ಕೆ ತರಬೇಕು' ಎಂದರು.

ಬ್ಯಾಂಕರ್ಸ್ ಕನ್ನಡಿಗರ ಬಳಗದ ಅಧ್ಯಕ್ಷ ಎಂ. ವೆಂಕಟೇಶ ಶೇಷಾದ್ರಿ ಮಾತನಾಡಿದರು. ಕೇಂದ್ರದ ಮಕ್ಕಳು ರಂಗ ಗೀತೆಗಳು ಮತ್ತು ರಾಜೇಶ್ ಕಶ್ಯಪ್ ನಿರ್ದೇಶನದ ಜಾನಪದ ಕಥೆ ಆಧಾರಿತ ನಾಟಕ 'ದಾನದ ಮಹತ್ವ' ಪ್ರದರ್ಶಿಸಿದರು.

'ಹಳೇ ಸಿನಿಮಾಗಳ ಸಂರಕ್ಷಣೆ ಅಗತ್ಯ'

ಬೆಂಗಳೂರು: 'ಭಾರತೀಯ ಚಿತ್ರರಂಗದಲ್ಲಿ 1970ರ ದಶಕಕ್ಕಿಂತ ಮೊದಲಿನ ಶೇ 70ರಷ್ಟು ಹಳೆಯ ಸಿನಿಮಾಗಳು ಈಗ ಯಾವುದೇ ರೂಪದಲ್ಲಿ ಲಭ್ಯವಿಲ್ಲ. ಸಿನಿಮಾ ಕೂಡ ಸಂಸ್ಕೃತಿಯ ಒಂದು ಭಾಗವಾಗಿದ್ದು, ವರ್ಷಕ್ಕೆ ಕನಿಷ್ಠ 15 ಕನ್ನಡ ಸಿನಿಮಾಗಳನ್ನಾದರೂ ಡಿಜಿಟಲ್ ರೂಪದಲ್ಲಿ ಸಂರಕ್ಷಿಸಬೇಕಿದೆ' ಎಂದು ಪುಣೆ ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿನಿಮಾ ಸಂಶೋಧಕಿ ಅಪರ್ಣಾ ಸುಬ್ರಮಣಿಯನ್ ಹೇಳಿದರು.

17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಮಂಗಳವಾರ ನಡೆದ 'ಸಿನಿಮಾಗಳ ಸಂಗ್ರಹಣೆ, ಸಂರಕ್ಷಣೆ ಮತ್ತು ಪುನಶ್ಚೇತನ' ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಒಂದು ಸಿನಿಮಾವನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸಲು ₹15–20 ಲಕ್ಷ ವೆಚ್ಚವಾಗಲಿದ್ದು, ನಮ್ಮಲ್ಲಿ ಈ ಕೆಲಸಕ್ಕೆ ಅನುದಾನದ ಕೊರತೆಯಿದೆ. ಚಿತ್ರೋತ್ಸವದಲ್ಲಿ ಪ್ರದರ್ಶನವಾದ ಹಳೆಯ ಕನ್ನಡ ಕ್ಲಾಸಿಕ್ ಸಿನಿಮಾಗಳನ್ನು ವೀಕ್ಷಿಸಿದ ಬಳಿಕ ಅದರ ಗುಣಮಟ್ಟ ಸಮರ್ಪಕವಾಗಿಲ್ಲದೇ ಇರುವುದು ಅರಿವಿಗೆ ಬಂದಿದೆ' ಎಂದು ಸಲಹೆ ನೀಡಿದರು.

'ವಿದೇಶಗಳಲ್ಲಿ ಈ ಕಾರ್ಯಕ್ಕಾಗಿ ಸುಮಾರು ₹300 ಶತಕೋಟಿ ಅನುದಾನ ದೊರೆಯುತ್ತದೆ. ಆದರೆ ನಮ್ಮಲ್ಲಿ ₹1 ಕೋಟಿ ದೊರೆಯುವುದೂ ಕಷ್ಟ. ನ್ಯಾಷನಲ್ ಫಿಲ್ಮ್ ಆರ್ಕೈವ್ ಆಫ್ ಇಂಡಿಯಾ ಇದುವರೆಗೆ 5,000 ಸಿನಿಮಾಗಳ ಸಂರಕ್ಷಣೆ ಮಾಡಿದೆ. ಇನ್ನೂ 2,500 ಸಿನಿಮಾಗಳ ಸಂರಕ್ಷಣಾ ಕಾರ್ಯ ನಡೆಯುತ್ತಿದೆ' ಎಂದರು.

ಚಿಟಿಕೆ ಸುದ್ದಿ

'ಕೇಂದ್ರ ಬಜೆಟ್: ಅಂಗವಿಕಲರಿಗೆ ನಿರಾಸೆ'

ಬೆಂಗಳೂರು: 'ಕೇಂದ್ರ ಬಜೆಟ್‌ನಲ್ಲಿ ಅಂಗವಿಕಲರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ್ ಪುಟ್ಟಪ್ಪ ತಿಳಿಸಿದ್ದಾರೆ.

'ದೇಶದ ಜನಸಂಖ್ಯೆಯಲ್ಲಿ ಶೇಕಡ 5ರಿಂದ 8ರಷ್ಟು ಅಂಗವಿಕಲರು ಇದ್ದಾರೆ. ಇವರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದು, ಕೇಂದ್ರ ಬಜೆಟ್ ನಮಗೆ ತುಂಬಾ ನಿರಾಸೆ ಮೂಡಿಸಿದೆ. ಅಂಗವಿಕಲರಿಗೆ ಕೇವಲ ಎರಡು ಹೊಸ ಯೋಜನೆಗಳನ್ನು ಘೋಷಿಸುವ ಮೂಲಕ ಕಣ್ಣೊರೆಸುವ ತಂತ್ರ ಮಾಡಲಾಗಿದೆ' ಎಂದು ಆರೋಪಿಸಿದ್ದಾರೆ.

'ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಹೆಚ್ಚಿಸಿ'

ಬೆಂಗಳೂರು: ಬೆಂಗಳೂರು ನಗರದ ಸಾರ್ವಜನಿಕ ಪ್ರದೇಶಗಳಲ್ಲಿರುವ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಹೆಚ್ಚಿಸುವುದರ ಜೊತೆಗೆ ಸರಿಯಾಗಿ ನಿರ್ವಹಣೆ ಮಾಡಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, 'ಬೆಂಗಳೂರು ನಗರದ ಸಾರ್ವಜನಿಕ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಕಡಿಮೆ ಇದ್ದು, ಮಹಿಳೆಯರು ಸೇರಿದಂತೆ ಸಾರ್ವಜನಿಕರು ಪರದಾಡುತ್ತಿದ್ದಾರೆ. ಪ್ರಸ್ತುತ ನಗರದಲ್ಲಿ ಇರುವ ಶೌಚಾಲಯಗಳು ಸಮರ್ಪಕವಾಗಿ ನಿರ್ವಹಣೆಯಾಗದೇ, ಮಹಿಳೆಯರ ಅನಾರೋಗ್ಯಕ್ಕೆ ಕಾರಣವಾಗುತ್ತಿವೆ. ಶೌಚಾಲಯಗಳ ಸಂಖ್ಯೆ ಹೆಚ್ಚಿಸುವುದು ಸೇರಿದಂತೆ ಶುಚಿತ್ವ ಕಾಪಾಡಿಕೊಳ್ಳುವಂತೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಬೆಂಗಳೂರು: ಎಚ್.ಬಿ.ಆರ್. 66/11 ಕೆ.ವಿ. ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಫೆ.4ರ (ಮಂಗಳವಾರ) ಬೆಳಿಗ್ಗೆ 6ರಿಂದ ಫೆ. 9 (ಸೋಮವಾರ) ರಾತ್ರಿ 10 ಗಂಟೆವರೆಗೆ ಮಧ್ಯಂತರವಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಲ್‌ಆರ್‌ಪಿ ಕಚೇರಿ, ಜಯಕುಮಾರ್ ಆರ್‌ಎಂಯು, ದಿವ್ಯ ಶಾಂತಿ, ಗೋವಿಂದಪುರ, ಕಾರ್ಲೆ, ಬೃಂದಾವನ ನಗರ, ಟೈಟಾನ್ ಗ್ಯಾರೇಜ್, ಗಾಂಧಿನಗರ, ಭೈರವಿ ಅಪಾರ್ಟ್‌ಮೆಂಟ್ಸ್, ಹೆಗ್ಗಡೆ ನಗರ, ಚಂದ್ರಿಕಾ ಸೋಪ್ ಫ್ಯಾಕ್ಟರಿ, ಬಿಎಂಟಿಸಿ ಡಿಪೊ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಶುಲ್ಕ ಹೊರೆ: ವಿದ್ಯಾರ್ಥಿಗಳ ಆತಂಕ

ನಗರ ವಿ.ವಿ ಘಟಕಗಳಾಗಿ ಆರ್.ಸಿ., ಕಲಾ ಕಾಲೇಜು ಪರಿವರ್ತನೆಗೆ ವಿರೋಧ

• ಎ.ಎಂ.ಸುರೇಶ

ಬೆಂಗಳೂರು: ಪ್ರಮುಖ ಶಿಕ್ಷಣ ಸಂಸ್ಥೆಗಳಾಗಿರುವ ರಾಮನಾರಾಯಣ ಚೆಲ್ಲಾರಾಂ (ಆರ್.ಸಿ) ಕಾಲೇಜು ಮತ್ತು ಸರ್ಕಾರಿ ಕಲಾ ಕಾಲೇಜುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕಕ್ಕೆ ಸೇರಿಸುವ ಯತ್ನ ಮತ್ತೆ ನಡೆದಿದೆ. ಇದರಿಂದ ತಮ್ಮ ಭವಿಷ್ಯಕ್ಕೆ ಮಾರಕವಾಗಲಿದೆ ಎಂದು ಸಾವಿರಾರು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಆರ್.ಸಿ ಕಾಲೇಜಿನಲ್ಲಿ ಸುಮಾರು ಐದು ಸಾವಿರ ಹಾಗೂ ಕಲಾ ಕಾಲೇಜಿನಲ್ಲಿ 2,100ಕ್ಕೂ ಅಧಿಕ ವಿದ್ಯಾರ್ಥಿಗಳು ಈಗ ಕಡಿಮೆ ಶುಲ್ಕದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಎರಡೂ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಮಾಡಿದರೆ ಶುಲ್ಕ ದುಬಾರಿಯಾಗಲಿದೆ ಎಂಬ ಆತಂಕವನ್ನು ವಿದ್ಯಾರ್ಥಿಗಳು, ಪೋಷಕರು ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಕಲಾ ಕಾಲೇಜಿನಲ್ಲಿ ಬಿಎ, ಬಿಕಾಂ ಮತ್ತು ಬಿಬಿಎಗೆ ಹೆಣ್ಣು ಮಕ್ಕಳಿಗೆ ₹4,987 ಮತ್ತು ಗಂಡು ಮಕ್ಕಳಿಗೆ ₹5,974 ಶುಲ್ಕವಿದೆ. ಆರ್.ಸಿ ಕಾಲೇಜಿನಲ್ಲಿ ಬಿ.ಕಾಂ ಮತ್ತು ಬಿಬಿಎಗೆ ಹೆಣ್ಣು ಮಕ್ಕಳಿಗೆ ₹5,502 ಮತ್ತು ಗಂಡು ಮಕ್ಕಳಿಗೆ ₹6,489 ಶುಲ್ಕವಿದೆ. ಒಂದು ವೇಳೆ ಇವೆರಡೂ ವಿ.ವಿಯ ಘಟಕ ಕಾಲೇಜುಗಳಾದರೆ, ಶುಲ್ಕ ಹೆಚ್ಚಾಗಲಿದ್ದು, ಬಡವರು, ಮಧ್ಯಮ ವರ್ಗದವರಿಗೆ ಪದವಿ ಶಿಕ್ಷಣ ದುಬಾರಿಯಾಗಲಿದೆ ಎನ್ನುತ್ತಾರೆ ವಿದ್ಯಾರ್ಥಿಗಳು.

ಈಗಿರುವ ಶುಲ್ಕವೇ ಇದ್ದರೆ ಅನುಕೂಲವಾಗಲಿದೆ. ಇದರ ಸಾಧಕ–ಬಾಧಕಗಳ ಬಗ್ಗೆ ಅಧ್ಯಯನ ಮಾಡಬೇಕು. ಅಂತಿಮವಾಗಿ ಸರ್ಕಾರದ ನಿರ್ಧಾರಕ್ಕೆ ನಾವು ಬದ್ಧ
ಪ್ರೊ.ನಾಗೇಂದ್ರ ಕುಮಾರ್, ಪ್ರಾಂಶುಪಾಲ, ಸರ್ಕಾರಿ ಕಲಾ ಕಾಲೇಜು

'ಮಲ್ಲೇಶ್ವರದ ಮಹಿಳಾ ಕಾಲೇಜು ಪ್ರಸ್ತುತ ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿದ್ದು, ಅಲ್ಲಿ ಬಿಎಗೆ ₹13,502, ಬಿ.ಕಾಂಗೆ ₹20,489, ಬಿಸಿಎಗೆ ₹31,721 ಹಾಗೂ ಬಿಬಿಎಗೆ ₹25,369 ಶುಲ್ಕ ನಿಗದಿಪಡಿಸಲಾಗಿದೆ. ಈಗ ಆರ್.ಸಿ ಮತ್ತು ಕಲಾ ಕಾಲೇಜುಗಳನ್ನು ವಿ.ವಿಯ ಘಟಕಗಳನ್ನಾಗಿ ಮಾಡಿದರೆ ನಾವು ಕೂಡ ಇದೇ ರೀತಿ ದುಬಾರಿ ಶುಲ್ಕ ಪಾವತಿಸಬೇಕಾಗುತ್ತದೆ' ಎಂಬುದು ಈ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಆತಂಕ.

ಮಲ್ಲೇಶ್ವರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎ, ಬಿ.ಕಾಂ ಮತ್ತು ಬಿಬಿಎ ಕೋರ್ಸ್‌ಗಳಿಗೆ ಗಂಡು ಮಕ್ಕಳಿಗೆ ₹6,021 ಹಾಗೂ ಹೆಣ್ಣು ಮಕ್ಕಳಿಗೆ ₹5,034 ಶುಲ್ಕವಿದೆ. ಒಂದು ವೇಳೆ ಮಲ್ಲೇಶ್ವರದ ಮಹಿಳಾ ಕಾಲೇಜು ನಗರ ವಿ.ವಿಯ ಘಟಕ ಕಾಲೇಜು ಆಗದೆ ಇದ್ದಿದ್ದರೆ, ಅಲ್ಲಿ ವ್ಯಾಸಂಗ ಮಾಡುತ್ತಿರುವವರು ಕೂಡ ಇಷ್ಟೇ ಪ್ರಮಾಣದಲ್ಲಿ ಶುಲ್ಕ ನೀಡುತ್ತಿದ್ದರು. ಆದರೆ, ಘಟಕ ಕಾಲೇಜು ಆಗಿರುವ ಕಾರಣ ಅಧಿಕ ಶುಲ್ಕ ಪಾವತಿಸುತ್ತಿದ್ದಾರೆ.

'ಈಗ ಇನ್ನೂ ಎರಡು ಕಾಲೇಜುಗಳನ್ನು ಘಟಕ ಕಾಲೇಜುಗಳಾಗಿ ಪರಿವರ್ತಿಸುವ ಮೂಲಕ ಇಲ್ಲಿರುವ ಸಾವಿರಾರು ಬಡ ವಿದ್ಯಾರ್ಥಿಗಳನ್ನು ದುಬಾರಿ ಶುಲ್ಕದ ಕೂಪಕ್ಕೆ ತಳ್ಳುವುದು ಬೇಡ. ಈಗಿರುವ ವ್ಯವಸ್ಥೆಯನ್ನೇ ಮುಂದುವರಿಸಬೇಕು' ಎಂದು 'ಪ್ರಜಾವಾಣಿ' ಯೊಂದಿಗೆ ಮಾತನಾಡಿದ ವಿದ್ಯಾರ್ಥಿಗಳಾದ ನಾಗರಾಜ್, ಮುನಿರಾಜು ಅವರು ಸರ್ಕಾರವನ್ನು ಒತ್ತಾಯಿಸಿದರು.

'ಅನುದಾನ ಸ್ಥಗಿತವಾದರೆ, ಶುಲ್ಕ ಹೆಚ್ಚಳ ಅನಿವಾರ್ಯ'

ಎರಡೂ ಕಾಲೇಜುಗಳಿಗೆ ಈಗ ಸರ್ಕಾರದಿಂದ ಅನುದಾನ ಬರುತ್ತಿದೆ. ಘಟಕ ಕಾಲೇಜುಗಳಾಗಿ ಪರಿವರ್ತನೆ ಆದ ನಂತರ ಸರ್ಕಾರ ಅನುದಾನ ನೀಡುವುದಿಲ್ಲ. ಆಗ ಪೂರ್ಣ ಜವಾಬ್ದಾರಿ ನಗರ ವಿಶ್ವವಿದ್ಯಾಲಯದ ಮೇಲೆ ಬೀಳಲಿದೆ.

'ಈಗಿರುವ ಶುಲ್ಕದಲ್ಲಿ ಮೂಲಸೌಕರ್ಯ ಕಲ್ಪಿಸಲು ಆಗುವುದಿಲ್ಲ. ಉತ್ತಮ ಸೌಲಭ್ಯಗಳು ಬೇಕು ಎನ್ನುವುದಾದರೆ ಶುಲ್ಕ ಹೆಚ್ಚಳ ಮಾಡುವುದು ಅನಿವಾರ್ಯವಾಗಲಿದೆ. ಈಗ ಬರುತ್ತಿರುವ ಅನುದಾನ ಸ್ಥಗಿತವಾದರೆ ಶುಲ್ಕ ಹೆಚ್ಚಳ ಅನಿವಾರ್ಯವಾಗಲಿದೆ. ಇದಕ್ಕೆ ಸಂಬಂಧಿಸಿದ ಹಾಗೆ ವಸ್ತುಸ್ಥಿತಿಯ ವರದಿಯನ್ನು ಸರ್ಕಾರಕ್ಕೆ ನೀಡಲಾಗಿದೆ' ಎಂದು ವಿಶ್ವವಿದ್ಯಾಲಯದ ಮೂಲಗಳು ತಿಳಿಸಿವೆ.

ಆ ಎರಡೂ ಕಾಲೇಜುಗಳಲ್ಲಿ ಈಗಿರುವ ಹುದ್ದೆಗಳ ಸಮೇತ ಹಸ್ತಾಂತರ ಮಾಡಿದರೆ, ಸರ್ಕಾರವೇ ಸಂಬಳ ನೀಡಬೇಕಾಗುತ್ತದೆ. ಇತರೆ ವೆಚ್ಚಗಳು, ಮೂಲಸೌಕರ್ಯಗಳಿಗೆ ಸರ್ಕಾರ ಅನುದಾನ ನೀಡಿದರೆ ಪರವಾಗಿಲ್ಲ. ನೀಡದೆ ಇದ್ದರೆ ಅದರ ಹೊರೆಯನ್ನು ವಿಶ್ವವಿದ್ಯಾಲಯ ಹೊರಲು ಸಾಧ್ಯವಿಲ್ಲ. ಈಗ ಇರುವ ₹ 6 ಸಾವಿರ ಶುಲ್ಕದಲ್ಲಿ ಏನು ಮಾಡಲು ಸಾಧ್ಯ? ಈ ಎಲ್ಲ ಅಂಶಗಳನ್ನು ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಯಾರಿಗೆ ಲಾಭ?

'ಘಟಕ ಕಾಲೇಜುಗಳನ್ನಾಗಿ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಉಪಯೋಗ ಆಗುವುದಿಲ್ಲ. ಇಲ್ಲಿರುವ ಸಿಬ್ಬಂದಿ ಮತ್ತು ವಿಶ್ವವಿದ್ಯಾಲಯಕ್ಕೆ ಲಾಭ ಆಗುತ್ತದೆ ಅಷ್ಟೇ. ಸರ್ಕಾರ ನಮ್ಮ ಹಿತವನ್ನು ಪರಿಗಣಿಸಬೇಕೇ ಹೊರತು ಸಿಬ್ಬಂದಿಯ ಹಿತವನ್ನು ಅಲ್ಲ' ಎಂಬುದು ವಿದ್ಯಾರ್ಥಿಗಳ ಆಗ್ರಹವಾಗಿದೆ.

'ಘಟಕ ಕಾಲೇಜು ಆದರೆ ಸಿಬ್ಬಂದಿಯ ನಿವೃತ್ತಿ ವಯೋಮಿತಿ 60ರಿಂದ 62 ವರ್ಷಕ್ಕೆ ಏರಲಿದೆ. ವರ್ಗಾವಣೆ ಇರುವುದಿಲ್ಲ. ವಿಶ್ವವಿದ್ಯಾಲಯಕ್ಕೆ ಶುಲ್ಕದ ರೂಪದಲ್ಲಿ ಅಧಿಕ ಆದಾಯ ಬರಲಿದೆ. ಆದರೆ, ನಮಗೆ ದುಬಾರಿ ಶುಲ್ಕ ಭರಿಸಲು ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ ಪದವಿ ಪಡೆಯುವ ಅವಕಾಶದಿಂದ ವಂಚಿತರಾಗಲಿದ್ದೇವೆ' ಎಂದರು.

'ನಿವೃತ್ತಿಯ ಅಂಚಿನಲ್ಲಿ ಇರುವವರು ಹಾಗೂ ಈ ಬಾರಿ ವರ್ಗಾವಣೆಯಾಗುವ ಆತಂಕದಲ್ಲಿ ಇರುವ ಬೆರಳೆಣಿಕೆಯಷ್ಟು ಬೋಧಕ ಸಿಬ್ಬಂದಿ ಪಿತೂರಿ ನಡೆಸಿ, ಘಟಕ ಕಾಲೇಜುಗಳನ್ನಾಗಿ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದಾರೆ. ಯಾವುದೇ ಕಾರಣಕ್ಕೂ ಇದನ್ನು ಒಪ್ಪಬಾರದು. ಈ ಪ್ರಸ್ತಾವವನ್ನು ಕೂಡಲೇ ತಿರಸ್ಕರಿಸಬೇಕು' ಎಂದು ವಿದ್ಯಾರ್ಥಿಗಳು, ಪೋಷಕರು ಆಗ್ರಹಿಸಿದರು.

ಆರ್‌ಎಸ್‌ಎಸ್ ಬರೆದುಕೊಟ್ಟ ಭಾಷಣ: ಮುಖ್ಯಮಂತ್ರಿ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ವಿಧಾನಮಂಡಲ ಅಧಿವೇಶನ

ಬೆಂಗಳೂರು: 'ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಆರ್‌ಎಸ್‌ಎಸ್‌ನವರು ಬರೆದುಕೊಟ್ಟ ಚೀಟಿ ಇಟ್ಟುಕೊಂಡು ಸದನದಲ್ಲಿ ಮಾತನಾಡುತ್ತಾರೆ. ನಾವು ಬರೆದುಕೊಟ್ಟಿದ್ದನ್ನು ಮಾತನಾಡುತ್ತಿದ್ದಾರಾ, ಇಲ್ಲವೇ ಎಂದು ಪರೀಕ್ಷಿಸಲು ಆರ್‌ಎಸ್‌ಎಸ್ ಪ್ರತಿನಿಧಿಯೊಬ್ಬರು ಸದನಕ್ಕೆ ಬಂದಿರುತ್ತಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ವಿಬಿ ಜಿ ರಾಮ್ ಜಿ' ಕಾಯ್ದೆ ವಿರುದ್ಧ ನಿರ್ಣಯ ಮಂಡಿಸಿ ಮಾತನಾಡುವ ವೇಳೆ ಬಿಜೆಪಿಯ ಕೆಲವು ಸದಸ್ಯರು ಪದೇ ಪದೇ ಅಡ್ಡಿಪಡಿಸಿದಾಗ ಸಿದ್ದರಾಮಯ್ಯ, 'ಆರ್‌ಎಸ್‌ಎಸ್‌ನವರು ಬರೆದುಕೊಟ್ಟ ಭಾಷಣವನ್ನು ಅಶೋಕ ಓದುತ್ತಾರೆ ಎಂಬ ಮಾಹಿತಿ ಇದೆ. ಸ್ಪೀಕರ್ ಪಕ್ಕದ ಗ್ಯಾಲರಿಯಲ್ಲಿ ಆರ್‌ಎಸ್‌ಎಸ್‌ನ ಒಬ್ಬರು ಬಂದು ಚೀಟಿ ಕಳುಹಿಸುತ್ತಾರೆ. ಹೀಗಾಗಿ, ಅದನ್ನು ಓದಿಕೊಂಡು ಮಾತನಾಡಲಿ' ಎಂದರು.

ಆಗ ಅಶೋಕ, 'ನಾನು ಆರ್‌ಎಸ್‌ಎಸ್ ಎಂಬುದು ಸತ್ಯ. ಏಳು ಬಾರಿ ಶಾಸಕನಾಗಿದ್ದು ಮಾತನಾಡುವುದು ಗೊತ್ತಿದೆ. ನನಗೆ ಅಧಿಕಾರಿಗಳು ಮಾಹಿತಿ ನೀಡುತ್ತಾರೆ. ಯಾವ ಆರ್‌ಎಸ್‌ಎಸ್‌ನವರೂ ಬಂದು ಮಾಹಿತಿ ನೀಡುವುದಿಲ್ಲ' ಎಂದರು. ಬಿಜೆಪಿಯ ಸುನಿಲ್ ಕುಮಾರ್, 'ಅಶೋಕ ಅವರು ಡಿ.ಕೆ. ಶಿವಕುಮಾರ್ ಹೇಳಿದ್ದನ್ನು ಓದುತ್ತಾರೆ. ನಿಮಗೆ ಇರುವ ಮಾಹಿತಿ ತಪ್ಪಿದೆ' ಎಂದು ಅವರು ವ್ಯಂಗ್ಯವಾಡಿದರು.

'ಹಾಗಾದರೆ ಬೇರೆಯವರು ಬರೆದುಕೊಟ್ಟಿದ್ದನ್ನು ಓದುವುದು ಬಿಟ್ಟು ನಿಮಗೆ ಸ್ವಂತಿಕೆ ಇಲ್ಲ ಎಂಬುದು ಸಾಬೀತು ಆಯಿತಲ್ಲವೇ' ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

'ನಮ್ಮ ರಕ್ತದಲ್ಲೇ ಆರ್‌ಎಸ್‌ಎಸ್ ಬಂದಿದೆ. 17ನೇ ವರ್ಷದಲ್ಲೇ ತುರ್ತು ಪರಿಸ್ಥಿತಿಯಲ್ಲಿ ಜೈಲಿಗೆ ಹೋಗಿದ್ದವನು ನಾನು. ನಾವು ಸದಾ ವತ್ಸಲೆ ಹಾಡುವವರು' ಎಂದು ಅಶೋಕ ಹೇಳಿದರು.

'ಡಿ.ಕೆ ಶಿವಕುಮಾರ್ ಕೂಡ ಚಿಕ್ಕ ವಯಸ್ಸಿನಲ್ಲಿ ಸದಾ ವತ್ಸಲೆ ಹಾಡಿದವರು. ನಾನು ಒಂದು ಬಾರಿಯೂ ಸೋತಿಲ್ಲ. ಡಿ.ಕೆ. ಶಿವಕುಮಾರ್ ಕೂಡ ಸೋತಿಲ್ಲ. ನಾನು ಜೀವನಪೂರ್ತಿ ಆರ್‌ಎಸ್‌ಎಸ್, ಬಿಜೆಪಿ ಅಷ್ಟೇ? ಬೇರೆ ಪಕ್ಷಕ್ಕೆ ಎಂಟ್ರಿ ಆಗಿಲ್ಲ' ಎಂದರು.

ಅದಕ್ಕೆ ಸಿದ್ದರಾಮಯ್ಯ, 'ಶಿವಕುಮಾರ್ ಒಂದು ಬಾರಿ ಸೋತಿದ್ದಾರೆ ಎಂದು ಹೇಳಿದ್ದಾರೆ. ನೀವು ಶಿವಕುಮಾರ್ ವಿರುದ್ಧ ಸೋತು ಠೇವಣಿ ಕಳೆದುಕೊಂಡಿದ್ದೀರಿ. ನಾನು ನಾಲ್ಕು ಸಲ ಸೋತಿದ್ದೇನೆ' ಎಂದರು.

'ನೀವು ಹಲವು ಪಕ್ಷ ಬದಲಿಸಿದ್ದೀರಿ' ಎಂದು ಬಿಜೆಪಿಯವರು ಆರೋಪಿಸಿದಾಗ, 'ಹಲವು ಪಕ್ಷದಲ್ಲಿ ಹಲವು ಅಧಿಕಾರ ಅನುಭವಿಸಿದ್ದೇನೆ. ಆದರೆ, ನಾನು ಆರ್‌ಎಸ್‌ಎಸ್, ಮನುಸ್ಮೃತಿ ಒಪ್ಪಲ್ಲ. ಹೀಗಾಗಿ ಬಿಜೆಪಿಯನ್ನು ಒಪ್ಪಲ್ಲ. ಆರ್‌ಎಸ್‌ಎಸ್, ಬಿಜೆಪಿ ಹಾಗೂ ಮನುಸ್ಮೃತಿ ಕಡೆಗೆ ತಲೆ ಕೂಡ ಹಾಕಿ ಮಲಗುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಇಂದು

ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಜಾಗೃತಿ ಜಾಥಾ: ಶರಣ್, ಉಮಾಶ್ರೀ, ಲೋಕೇಶ್ ಬಿ. ಜಗಲಾಸರ್, ರಮೇಶ್ ಭಟ್, ಆಯೋಜನೆ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಜಾಥಾ ಪ್ರಾರಂಭವಾಗುವ ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯಿಂದ ಲಾಲ್‌ಬಾಗ್ ಗೇಟ್‌ನವರೆಗೆ, ಬೆಳಿಗ್ಗೆ 7.30

'ಕೃಷಿ–ರೈತರ ಸಮೃದ್ಧಿಗಾಗಿ ಸ್ಥಿರ ಪರಿಸರ ವ್ಯವಸ್ಥೆಯ ನಿರ್ಮಾಣ' ಸಮ್ಮೇಳನ: ಅತಿಥಿಗಳು: ಎನ್. ಚಲುವರಾಯಸ್ವಾಮಿ, ಸೆಲ್ವಕುಮಾರ್, ಆಯೋಜನೆ: ಕೃಷಿ ಇಲಾಖೆ, ಸ್ಥಳ: ಆಯುಕ್ತರ ಕಚೇರಿ, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಳಿಗ್ಗೆ 9.30

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ನರಸಿಂಹನ್, ವೂಡೇ ಪಿ. ಕೃಷ್ಣ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಸಂಜೆ 5.45

ಭಾರತ ರಂಗ ಮಹೋತ್ಸವ ಹಾಗೂ ರಂಗ ಪರಿಷೆ: ಸಂಜೆ 4ಕ್ಕೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಶತಮಾನೋತ್ಸವ ಸಂಭ್ರಮ ಕವಿಗೋಷ್ಠಿ: ಉಪನ್ಯಾಸ: ಚಿತ್ರ ವೆಂಕಟರಾಜು, ಅಧ್ಯಕ್ಷತೆ: ಹೇಮಲತಾ ವಸ್ತ್ರದ, ಸಂಜೆ 5.30ಕ್ಕೆ ಅತಿಥಿಗಳು: 'ಸಿಹಿಕಹಿ' ಚಂದ್ರು, 'ಸಿಹಿಕಹಿ' ಗೀತಾ, ಉತ್ಸವ ಗೌರವ ಸ್ವೀಕರಿಸುವವರು: ಕೆ. ಶಿವರುದ್ರಯ್ಯ, ಉಪಸ್ಥಿತಿ: ತಲ್ಲೂರು ಶಿವರಾಮ ಶೆಟ್ಟಿ, ಮೋತಿಲಾಲ ರೂ. ಚೌವ್ಹಾಣ, ಶಿವನಾಯಕ ದೊರೆ, ಚಾಂದ್ ಪಾಷ, 'ರುದ್ರಗಣಿಕ' ನಾಟಕ ಪ್ರದರ್ಶನ: ನಿರ್ದೇಶನ: ಸೋಮಗಿರಿ, ಸಂಜೆ 7ಕ್ಕೆ 'ಕಂದಗಲ್ಲರಿಗೆ ನಮಸ್ಕಾರ ಅರ್ಥಾತ್ ಕಂದಗಲ್ಲ ಭಾರತ' ನಾಟಕ ಪ್ರದರ್ಶನ: ನಿರ್ದೇಶನ: ಪ್ರಕಾಶ್ ಗರುಡ, 7ಕ್ಕೆ 'ಶತಮರ್ಕಟ' ನಾಟಕ ಪ್ರದರ್ಶನ: ನಿರ್ದೇಶನ: ಎಸ್.ವಿ. ಕಶ್ಯಪ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಕಲಾ ಗ್ರಾಮ, ಮಲ್ಲತ್ತಹಳ್ಳಿ.

ಸಾಂಘಿಕವಾಗಿ ಬೆಳೆಯಲು ರಂಗಭೂಮಿ ಅಗತ್ಯ: ನಾಗಾಭರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಘಿಕವಾಗಿ ಬೆಳೆಯಲು ರಂಗಭೂಮಿ ಅಗತ್ಯವಾಗಿದ್ದು, ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ರಂಗ ಕಲೆಯತ್ತ ಬರುವಂತಾಗಬೇಕು' ಎಂದು ರಂಗಕರ್ಮಿ ಟಿ.ಎಸ್. ನಾಗಾಭರಣ ಅಭಿಪ್ರಾಯಪಟ್ಟರು.

ಕರ್ನಾಟಕ ನಾಟಕ ಅಕಾಡೆಮಿ ಮತ್ತು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಜಂಟಿಯಾಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಹಮ್ಮಿಕೊಂಡಿರುವ 'ಭಾರತ ರಂಗ ಮಹೋತ್ಸವ' ಹಾಗೂ 'ರಂಗ ಪರಿಷೆ'ಯ ಮೂರನೇ ದಿನವಾದ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ, ರಂಗ ನಿರ್ದೇಶಕ ಸುರೇಶ್ ಆನಗಳ್ಳಿ ಅವರಿಗೆ 'ಉತ್ಸವ ಗೌರವ' ನೀಡಿ ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ನಾಗಾಭರಣ, 'ಮೊಬೈಲ್‌ನಿಂದಾಗಿ ಬಹಳಷ್ಟು ಜನರಿಗೆ ಜಗತ್ತೇ ಕೈಗೆ ಬಂದಿದೆಯೆಂಬ ಗರ್ವವಿದೆ. ರೀಲ್ಸ್‌ನಲ್ಲಿಯೇ ಎಲ್ಲವನ್ನೂ ನೋಡಬಹುದು ಅಂದುಕೊಂಡಿದ್ದಾರೆ. ಭಾವನೆಗಳನ್ನು ಹೇಳಿಕೊಳ್ಳಲು, ಪರಸ್ಪರ ಒಬ್ಬರನ್ನೊಬ್ಬರು ಬೈದುಕೊಳ್ಳಲಾದರೂ ಇನ್ನೊಬ್ಬರು ಅಗತ್ಯ. ಈ ನಿಟ್ಟಿನಲ್ಲಿ ರಂಗಭೂಮಿ ಎಲ್ಲರನ್ನೂ ಒಳಗೊಳ್ಳಲಿದ್ದು, ಇದು ಸಾಮುದಾಯಿಕ ಕಲೆಯಾಗಿದೆ. ಆದ್ದರಿಂದ ರಂಗ ಪರಿಷೆ ನಿರಂತರ ನಡೆಯಬೇಕು' ಎಂದು ಹೇಳಿದರು.

ಸಾಹಿತಿ ಹಂಪ ನಾಗರಾಜಯ್ಯ ಮತ್ತು ಸುರೇಶ್ ಆನಗಳ್ಳಿ ಅವರು ಭಾರತ ರಂಗ ಮಹೋತ್ಸವ ಹಾಗೂ ರಂಗ ಪರಿಷೆಗೆ ಮೆಚ್ಚುಗೆ ವ್ಯಕ್ತಪಡಿಸಿ, ಈ ಉತ್ಸವ ಮತ್ತು ಪರಿಷೆ ಪ್ರತಿ ವರ್ಷ ನಡೆಯುವಂತಾಗಬೇಕು ಎಂದರು.

40 ವರ್ಷ ಪೂರೈಸಿರುವ ಉತ್ತರ ಕನ್ನಡ ಜಿಲ್ಲೆಯ ಮಂಚಿಕೇರಿಯ 'ರಾಜರಾಜೇಶ್ವರಿ ರಂಗ ಸಮೂಹ' ಮತ್ತು ಬಾಗಲಕೋಟೆ ಜಿಲ್ಲೆಯ ಇಳಕಲ್‌ನ 'ಸ್ನೇಹರಂಗ' ತಂಡಗಳಿಗೆ ಇದೇ ವೇಳೆ 'ರಂಗ ಗೌರವ' ಪ್ರದಾನ ಮಾಡಲಾಯಿತು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶುಭ ಧನಂಜಯ್, ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ, ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ ನಾಗರಾಜಮೂರ್ತಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸುರೇಶ್ ಆನಗಳ್ಳಿ ಅವರಿಗೆ 'ಉತ್ಸವ ಗೌರವ' ನೀಡಿ ಸನ್ಮಾನಿಸಲಾಯಿತು. ರವೀಂದ್ರನಾಥ್ ಸಿರಿವರ, ಟಿ.ಎಸ್.ನಾಗಾಭರಣ, ಜಿಪಿಒ ಚಂದ್ರು, ಹಂಪ ನಾಗರಾಜಯ್ಯ, ಕೆ.ವಿ.ನಾಗರಾಜಮೂರ್ತಿ ಮತ್ತು ಸುಮಾ ವಿಜಯ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ನಾಟಕ ಪ್ರದರ್ಶನ

ಪೋಲ್ಯಾಂಡ್‌ನ ಥಿಯೇಟರ್ ಮಲಬಾರ್ ಹೋಟೆಲ್ ತಂಡವು ಲಿಕಾಸ್ ಚೋಕ್ಕೊಸ್ಕಿ ನಿರ್ದೇಶನದಲ್ಲಿ 'ಉಮಾದೇವಿ ಅಬ್ಸರ್ವ್ಸ್ ವಾಂಡ ಡೈನೌಸ್ಕ' ಹಾಗೂ ಬೆನಕ ತಂಡವು 'ಸತ್ತವರ ನೆರಳು' ನಾಟಕ ಪ್ರಸ್ತುತಪಡಿಸಿದವು. ಯುವ ರಂಗ ಸಂಭ್ರಮದಲ್ಲಿ 'ಶೂದ್ರತಪಸ್ವಿ' ಮತ್ತು 'ರಣದುಂದುಭಿ' ನಾಟಕಗಳು ಪ್ರದರ್ಶನಗೊಂಡವು. ರೂಪಾಂತರ ಮತ್ತು ವೇದಿಕೆ ಫೌಂಡೇಷನ್‌ನ ತಂಡಗಳು ಕಿರು ನಾಟಕ ಪ್ರಸ್ತುತಪಡಿಸಿದವು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ

ಶೋಷಿತರ ದನಿ ಅಡಗಿಸಲು ಯತ್ನ: ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದಿಂದಲೇ ಸಂವಿಧಾನ ಮುಗಿಸುವ ಷಡ್ಯಂತ್ರ, ಮೌನದಿಂದಲೇ ಮೀಸಲಾತಿ ಸೌಲಭ್ಯ ಕಿತ್ತುಕೊಳ್ಳುವುದು ಹಾಗೂ ಶೋಷಿತರ ದನಿ ಅಡಗಿಸುವ ಕೆಲಸ ನಡೆಯುತ್ತಿದೆ' ಎಂದು ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಭಾರತೀಯ ದಲಿತ ಪ್ಯಾಂಥರ್ ಮಂಗಳವಾರ ಆಯೋಜಿಸಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವ ಮತ್ತು ದಲಿತರ ಮುಂದಿರುವ ಸವಾಲುಗಳ ಕುರಿತ ವಿಚಾರ ಸಂಕಿರಣದ ಸಾನಿಧ್ಯ ವಹಿಸಿ ಮಾತನಾಡಿದರು.

'ವರದಿ ಪ್ರಕಾರ, 2024–25ರ ಶೈಕ್ಷಣಿಕ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೊರಗುಳಿದಿರುವ ವಿದ್ಯಾರ್ಥಿಗಳು ಶೇಕಡ 42ರಷ್ಟಿದ್ದಾರೆ. ರಾಜ್ಯದ 7,029 ಹಳ್ಳಿಗಳಲ್ಲಿ ಮೃತ ದೇಹ ಹೂಳಲು ಜಾಗವಿಲ್ಲ. ಪರಿಸ್ಥಿತಿ ಹೀಗಿರುವಾಗ ಯಾವ ಯುದ್ಧವನ್ನು, ಯಾರ ಜತೆ ಮಾಡಬೇಕು?' ಎಂದರು.

'ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಬೇಕು. ಭೂಮಿ, ನೀರು, ವಿದ್ಯುತ್, ದುಡಿಮೆ ನಮ್ಮದು. ಇದೆಲ್ಲವನ್ನು ಬಳಸಿಕೊಂಡು ಉದ್ಯೋಗ ಕೊಡದಿದ್ದರೆ ಹೇಗೆ? ಬೇಡುವ ಸಮುದಾಯ ಆಳುವ ಸಮುದಾಯ ಆಗುವುದಿಲ್ಲ. ಅಂಬೇಡ್ಕರ್ ಹೇಳಿದಂತೆ ನೀಡುವ ಸಮುದಾಯ ಆಗಬೇಕು' ಎಂದರು.

ಸಂವಿಧಾನದ ಎಲ್ಲ ಬೇರುಗಳನ್ನು ಕಿತ್ತು ಹಾಕುವ ಕೆಲಸ ನಡೆಯುತ್ತಿದೆ. ಅಂಬೇಡ್ಕರ್ ಅವರ ವಿರುದ್ಧ 32 ಜನರು ಪುಸ್ತಕ ಬರೆದಿದ್ದಾರೆ. ಅವರ ವಿರುದ್ಧ ನಾಟಕ ಮಾಡಿಸಲಾಗುತ್ತಿದೆ. ಮೊದಲು ಗುಲಾಮಗಿರಿಯಿಂದ ಹೊರಬೇಕು ಎಂದರು.

ಇದೇ ವೇಳೆ ಭೀಮಾ ಕೋರೆಗಾಂವ್ ಇತಿಹಾಸವನ್ನು ಪಠ್ಯದಲ್ಲಿ ಅಳವಡಿಸುವಂತೆ, ಮರ್ಯಾದೆಗೇಡು ಹತ್ಯೆಯಂಥ ಹೀನ ಕೃತ್ಯಗಳ ವಿರುದ್ಧ ಕಠಿಣ ಕಾನೂನು ರೂಪಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡಲಾಯಿತು.

ಭಾರತೀಯ ದಲಿತ ಪ್ಯಾಂಥರ್ ರಾಜ್ಯ ಘಟಕದ ಅಧ್ಯಕ್ಷ ಮಲ್ಲಪ್ಪ ಹೊಸ್ಮನಿ ಇಂಗನಕಲ್, ಅಣದೂರನ ವರಜ್ಯೋತಿ ಭಂತೇಜಿ, ದಲಿತ ಮುಖಂಡರಾದ ಬಸವರಾಜ್ ಕೌತಾಳ್, ದತ್ತಾತ್ರಯ ಇಕ್ಕಳಕಿ, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ್ ಜಾನೆ, ರಾಜ್ಯ ಪೊಲೀಸ್ ದೂರು ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪ, ಅಂಗವಿಕಲರ ಹೋರಾಟ ಸಮಿತಿ ಅಧ್ಯಕ್ಷ ಉಮೇಶ್ ಕುಲಕರ್ಣಿ ಪಾಲ್ಗೊಂಡಿದ್ದರು.

ನಗರದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಲ್ಲಪ್ಪ ಹೊಸ್ಮನಿ ಇಂಗನಕಲ್, ವರ್ಷಾ ರಾಜೀವ್ ಜಾನೆ, ದಿನೇಶ್ ಅಮಿನ್ ಮಟ್ಟು, ವರಜ್ಯೋತಿ ಭಂತೇಜಿ, ಜ್ಞಾನಪ್ರಕಾಶ ಸ್ವಾಮೀಜಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಆಚರಣೆ ಜೊತೆ ಸವಾಲು ಗುರುತಿಸಬೇಕು'

ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಮಾತನಾಡಿ, 'ದೇಶದಲ್ಲಿ ಪ್ರತಿ 16 ನಿಮಿಷಕ್ಕೆ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ನಿತ್ಯ ನಾಲ್ವರು ಮಹಿಳೆಯರ ಮೇಲೆ ಮೇಲ್ಜಾತಿಯವರು ಅತ್ಯಾಚಾರ ಮಾಡುತ್ತಿದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೊ ಪ್ರಕಾರ, ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಕಡಿಮೆ ಆಗಿಲ್ಲ. ಕೋರೆಗಾಂವ್ ವಿಜಯೋತ್ಸವ ಆಚರಣೆ ಜತೆಗೆ ಆತ್ಮಾವಲೋಕನ ಮಾಡಬೇಕು ಮತ್ತು ಸವಾಲುಗಳನ್ನು ಗುರುತಿಸಬೇಕು' ಎಂದು ಹೇಳಿದರು.

'ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಹಾಗೂ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹಿಸಿ ಹೋರಾಟ ಕೈಗೊಳ್ಳಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸರ್ಕಾರಿ ಉದ್ಯೋಗದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ದೊರೆತಿದೆಯೇ ಎಂಬುದನ್ನು ನೋಡಬೇಕು' ಎಂದರು.

'₹10 ಲಕ್ಷ ಅನುದಾನ ಬಿಡುಗಡೆಗೆ ₹2 ಲಕ್ಷ ಕಮಿಷನ್'

ಕರಗ ಉತ್ಸವ ಅನುದಾನ ಬಿಡುಗಡೆಗೆ ಬೇಡಿಕೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರಗ ಉತ್ಸವದ ಅನುದಾನ ಬಿಡುಗಡೆಗೆ ಶೇ 20ರಷ್ಟು ಕಮಿಷನ್ ಕೇಳಲಾಗುತ್ತಿದೆ' ಎಂದು ಧರ್ಮರಾಯಸ್ವಾಮಿ ದೇವಾಲಯದ ನಿಕಟಪೂರ್ವ ಆಡಳಿತ ಮಂಡಳಿ ಅಧ್ಯಕ್ಷ ಕೆ. ಸತೀಶ್ ಆರೋಪಿಸಿದರು.

'₹10 ಲಕ್ಷ ಅನುದಾನ ಬಿಡುಗಡೆಗೆ ₹2 ಲಕ್ಷ ಕಮಿಷನ್ ಕೇಳುತ್ತಿದ್ದಾರೆ. ಹೂವಿನ ಅಲಂಕಾರ, ಲೈಟಿಂಗ್ ಸೇರಿದಂತೆ ವಿವಿಧ ಗುತ್ತಿಗೆ ಪಡೆದವರಿಂದ ಮುಜರಾಯಿ ಇಲಾಖೆಯ ಅಧಿಕಾರಿಗಳು ಕಮಿಷನ್ ಕೇಳುತ್ತಿದ್ದಾರೆ. ಈ ಭ್ರಷ್ಟಾಚಾರದಲ್ಲಿ ಇಲಾಖೆಯ ಆರು ಅಧಿಕಾರಿಗಳು ಭಾಗಿಯಾಗಿದ್ದು, ಅವರೆಲ್ಲ ಒಂದು ತಂಡವಾಗಿದ್ದಾರೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಆರೋಪಿಸಿದರು.

'ಕಳೆದ ವರ್ಷದ ಕರಗ ಉತ್ಸವ ಮುಗಿದ ಎರಡು ತಿಂಗಳ ನಂತರ ಟೆಂಡರ್ ಕರೆಯುತ್ತಾರೆ. ಕರಗ ಉತ್ಸವದಲ್ಲಿ ಹೂವಿನ ಅಲಂಕಾರ, ವಿದ್ಯುತ್ ಅಲಂಕಾರ ಮಾಡಿದವರಿಗೆ ಹಣ ನೀಡಿಲ್ಲ. ಎಲ್ಲವನ್ನೂ ಮುಚ್ಚಿಟ್ಟು, ಅಧಿಕಾರಿಗಳೇ ಹಣ ಪಡೆದುಕೊಂಡು ಗುತ್ತಿಗೆದಾರರಿಗೆ ಮೋಸ ಮಾಡಿದ್ದಾರೆ. ಕರಗ ಉತ್ಸವಕ್ಕೆ ಬಿಬಿಎಂಪಿ ₹1.5 ಕೋಟಿ ಅನುದಾನ ಮೀಸಲಿಟ್ಟಿದ್ದರೂ ಅದನ್ನು ಪಡೆಯದೆ ₹40 ಲಕ್ಷದಲ್ಲೇ ಕರಗ ನಡೆಸಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಯಾರಿಗೂ ದುಡ್ಡು ಕೊಟ್ಟಿಲ್ಲ' ಎಂದು ದೂರಿದರು.

'ದಾಖಲೆ ಒದಗಿಸಲಿ'

'ಕರಗ ಮಹೋತ್ಸವ ವೆಚ್ಚಗಳಿಗೆ ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳು ಕಮಿಷನ್ ಕೇಳಿದ್ದಾರೆ ಎಂದು ಕೆ. ಸತೀಶ್ ಅವರು ಆರೋಪ ಮಾಡಿದ್ದಾರೆ. ಈ ಆರೋಪಗಳಿಗೆ ಸೂಕ್ತ ದಾಖಲೆಗಳನ್ನು ಒದಗಿಸಿದರೆ, ಪರಿಶೀಲಿಸಿ, ಅಕ್ರಮವೆಸಗಿರುವುದು ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು' ಎಂದು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ನಿಕಟಪೂರ್ವ ಆಡಳಿತ ಮಂಡಳಿ ಅಧ್ಯಕ್ಷ ಸತೀಶ್ ಆರೋಪ
- ಆರು ಅಧಿಕಾರಿಗಳು ಭಾಗಿ

f prajavani.net prajavani | ಬುಧವಾರ, ಫೆಬ್ರುವರಿ 4, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 35 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಾಂಬ್ರಿಗೆ ಬಡ್ತಿ
ಭಾರತದ ಟೆನಿಸ್ ಆಟಗಾರ ಯುಕಿ ಭಾಂಬ್ರಿ ಅವರು ಎಟಿಪಿ ಡಬಲ್ಸ್ ರ‍್ಯಾಂಕಿಂಗ್‌ನಲ್ಲಿ 18ನೇ ಸ್ಥಾನಕ್ಕೇರಿದ್ದಾರೆ. ಇದು ಅವರ ವೃತ್ತಿಜೀವನದ ಶ್ರೇಷ್ಠ ಸಾಧನೆಯಾಗಿದೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,739 | ನಿಫ್ಟಿ 25,727 | $/₹ 90.32 | ಚಿನ್ನ (Std. 10g) ₹1,56,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,72,900 (ಬೆಂಗಳೂರು)

‘ಕೃಷಿ, ಹೈನುಗಾರಿಕೆ ರಕ್ಷಣೆಗೆ ಬದ್ಧ’

‘ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಕುರಿತ ಮಾಹಿತಿ ಇನ್ನಷ್ಟೇ ಬಹಿರಂಗ ಆಗಬೇಕಿದೆ’

ನವದೆಹಲಿ (ಪಿಟಿಐ): ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದ ಅಂತಿಮಗೊಳ್ಳುತ್ತಿದ್ದು, ಕೃಷಿ ಮತ್ತು ಹೈನುಗಾರಿಕೆ ವಲಯಗಳ ಹಿತಾಸಕ್ತಿಯನ್ನು ಒಪ್ಪಂದದ ಪರಿಣಾಮದಿಂದ ರಕ್ಷಿಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸ್ಪಷ್ಟಪಡಿಸಿದರು.

ಪೀಯೂಷ್ ಗೋಯಲ್

ಭಾರತದಿಂದ ಆಮದಾಗುವ ಸರಕುಗಳ ಮೇಲಿನ ಸುಂಕ ಶೇಕಡ 50ರಷ್ಟು ಇದ್ದಿದ್ದನ್ನು ಶೇ 18ಕ್ಕೆ ಇಳಿಕೆ ಮಾಡಲಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ ನಂತರದಲ್ಲಿ ಗೋಯಲ್ ಪತ್ರಿಕಾಗೋಷ್ಠಿ ನಡೆಸಿದರು. ಅಮೆರಿಕ ಮತ್ತು ಭಾರತ ಜಂಟಿ ಹೇಳಿಕೆಯೊಂದನ್ನು ಶೀಘ್ರವೇ ಹೊರಡಿಸಲಿವೆ, ಅದು ಒಪ್ಪಂದದ ವಿವರಗಳನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದರು.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಚೌಕಟ್ಟೊಂದನ್ನು ಎರಡೂ ದೇಶಗಳು ಅಂತಿಮಗೊಳಿಸಿವೆ.

ವ್ಯಾಪಾರ ಒಪ್ಪಂದವು ದೇಶದ ಜನರಿಗೆ ಭಾರಿ ಅವಕಾಶಗಳನ್ನು ಒದಗಿಸಲಿದೆ ಎಂದು ಗೋಯಲ್ ಭರವಸೆ ನೀಡಿದರು. ‘ಒಪ್ಪಂದವು ಸೂಕ್ಷ್ಮ ವಲಯಗಳ ಹಿತವನ್ನು ರಕ್ಷಿಸಲಿದೆ, ಕೃಷಿ ಹಾಗೂ ಹೈನುಗಾರಿಕೆ ವಲಯಗಳ ಹಿತವನ್ನು ಪೂರ್ಣವಾಗಿ ಕಾಯಲಿದೆ’ ಎಂದು ಹೇಳಿದರು.

ಭಾರತದಲ್ಲಿ ಕಾರ್ಮಿಕರ ಭಾಗೀದಾರಿಕೆಯು ಹೆಚ್ಚಿನ ಪ್ರಮಾಣದಲ್ಲಿ ಅಗತ್ಯವಿರುವ ಜವಳಿ, ಪ್ಲಾಸ್ಟಿಕ್, ಉಡುಪು, ಮನೆಗಳ ಅಲಂಕಾರದಲ್ಲಿ ಬಳಸುವ ಉತ್ಪನ್ನಗಳು, ಚರ್ಮೋದ್ಯಮ ಮತ್ತು ಪಾದರಕ್ಷೆ, ಹವಳ ಮತ್ತು ಆಭರಣ, ಸಾವಯವ ರಾಸಾಯನಿಕಗಳು, ರಬ್ಬರ್ ಉತ್ಪನ್ನಗಳು, ಯಂತ್ರೋಪಕರಣಗಳು, ವಿಮಾನ ತಯಾರಿಕೆ ವಲಯಗಳಿಗೆ ಒಪ್ಪಂದವು ದೊಡ್ಡ ಅವಕಾಶಗಳ ಬಾಗಿಲು ತೆರೆಯಲಿದೆ ಎಂದರು.

ಈ ವಲಯದ ಬಹುತೇಕ ಉತ್ಪನ್ನಗಳಿಗೆ ಅಮೆರಿಕ ಈಗ ವಿಧಿಸುತ್ತಿರುವ ಆಮದು ಸುಂಕ ಶೇ 50ರಷ್ಟು ಇದ್ದು, ಅದು ಶೇ 18ಕ್ಕೆ ಇಳಿಕೆ ಆಗಲಿದೆ.

ಒಪ್ಪಂದವು ಭಾರತದ ಬೆಳವಣಿಗೆಗೆ ಶಕ್ತಿ ನೀಡಲು ಅಗತ್ಯವಿರುವ ವಿಶ್ವದರ್ಜೆಯ ತಂತ್ರಜ್ಞಾನವನ್ನು ಪಡೆಯಲು ಕೂಡ ಅವಕಾಶ ಮಾಡಿಕೊಡಲಿದೆ ಎಂದು ಹೇಳಿದರು. ಭಾರತವು ಅಮೆರಿಕದ ಜೊತೆ ಬಹಳ ಉತ್ತಮವಾದ ಒಪ್ಪಂದ ಮಾಡಿಕೊಳ್ಳುತ್ತಿದೆ, ಇದು ಭಾರತದ ಜೊತೆ ಸ್ಪರ್ಧೆಯಲ್ಲಿರುವ ಇತರ ದೇಶಗಳು ಮಾಡಿಕೊಂಡಿರುವ ಒಪ್ಪಂದಕ್ಕಿಂತ ಉತ್ತಮವಾಗಿದೆ ಎಂದರು.

ಅಮೆರಿಕದ ಜೊತೆಗಿನ ಒಪ್ಪಂದದ ಕುರಿತಾಗಿ ಹೆಚ್ಚಿನ ಮಾಹಿತಿ ನೀಡದ ಗೋಯಲ್ ಅವರು, ‘ಒಪ್ಪಂದವು ಅಂತಿಮ ಹಂತದಲ್ಲಿದೆ’ ಎಂದು ತಿಳಿಸಿದರು. ▶10

> ಭಾರತ ಹಾಗೂ ಅಮೆರಿಕ ನಡುವಿನ ವ್ಯಾಪಾರ ಒಪ್ಪಂದವು ಬಹುದೊಡ್ಡ ನಿರ್ಧಾರವಾಗಿದೆ. ದೇಶದ ಪ್ರತಿಯೊಬ್ಬರಿಗೂ ಅನುಕೂಲವಾಗಲಿದೆ
> **ನರೇಂದ್ರ ಮೋದಿ,** ಪ್ರಧಾನಿ

> ಒಪ್ಪಂದದ ಬಗ್ಗೆ ಟ್ರಂಪ್ ಮಾಹಿತಿ ನೀಡಿದ್ದಾರೆ. ಅಮೆರಿಕ ಅಧ್ಯಕ್ಷರ ಓಲೈಕೆಗಾಗಿ ಪ್ರಧಾನಿ ಮೋದಿ ಅವರು ಸಂಪೂರ್ಣವಾಗಿ ಶರಣಾಗಿದ್ದಾರೆ
> **ಜೈರಾಮ್ ರಮೇಶ್,** ಕಾಂಗ್ರೆಸ್ ನಾಯಕ

ಅಮೆರಿಕಕ್ಕೆ ಯಾವ ಬಗೆಯ ವಿನಾಯಿತಿ?

ಬೇರೆ ದೇಶಗಳೊಂದಿಗೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದಗಳಲ್ಲಿ ಯಾವ ಬಗೆಯಲ್ಲಿ ವಿನಾಯಿತಿಗಳನ್ನು ನೀಡಲಾಗಿದೆಯೋ ಅದೇ ಬಗೆಯಲ್ಲಿ ಅಮೆರಿಕದ ಉತ್ಪನ್ನಗಳಿಗೂ ವಿವಿಧ ವಲಯಗಳಲ್ಲಿ ಸುಂಕ ವಿನಾಯಿತಿ ನೀಡಲು ಭಾರತ ಒಪ್ಪಿದೆ ಎಂದು ಗೊತ್ತಾಗಿದೆ. ಭಾರತವು ತನ್ನ ಹೈನುಗಾರಿಕೆ, ಅಕ್ಕಿ, ಗೋಧಿ, ಮಾಂಸ, ಕೋಳಿ ಮಾಂಸ ಹಾಗೂ ಮೊಟ್ಟೆ, ಧಾನ್ಯಗಳು, ಕುಲಾಂತರಿ ಆಹಾರ ಉತ್ಪನ್ನಗಳು, ಜೋಳ ವಲಯವನ್ನು ವ್ಯಾಪಾರ ಒಪ್ಪಂದದ ವ್ಯಾಪ್ತಿಯಿಂದ ಯಾವಾಗಲೂ ಹೊರಕ್ಕೆ ಇರಿಸಿದೆ ಎನ್ನಲಾಗಿದೆ.

ಅಮೆರಿಕದಿಂದ ಖರೀದಿ

ಅಮೆರಿಕದಿಂದ 500 ಬಿಲಿಯನ್ ಡಾಲರ್ (₹45 ಲಕ್ಷ ಕೋಟಿ) ಮೊತ್ತದ ಇಂಧನ, ತಂತ್ರಜ್ಞಾನ, ಕೃಷಿ ಉತ್ಪನ್ನಗಳು, ಕಲ್ಲಿದ್ದಲು ಖರೀದಿಸಲು ಭಾರತ ಒಪ್ಪಿದೆ ಎಂದು ಡೊನಾಲ್ಡ್ ಟ್ರಂಪ್ ಅವರು ಹೇಳಿರುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮೂಲವೊಂದು, ‘ಇಷ್ಟು ದೊಡ್ಡ ಮೊತ್ತದ ಖರೀದಿಯು ಐದು ವರ್ಷಗಳಲ್ಲಿ ನಡೆಯಲಿದೆ, ವಿಮಾನ ಮತ್ತು ಅದರ ಬಿಡಿಭಾಗಗಳ ಖರೀದಿಯೂ ಇದರಲ್ಲಿ ಸೇರಿದೆ’ ಎಂದು ತಿಳಿಸಿದೆ.

‘ದತ್ತಾಂಶ ಕೇಂದ್ರಗಳಿಗಾಗಿಯೇ ನಮಗೆ ಪ್ರತಿವರ್ಷ 20 ಬಿಲಿಯನ್ ಡಾಲರ್‌ನಷ್ಟು (₹1.80 ಲಕ್ಷ ಕೋಟಿ) ಮೌಲ್ಯದ ಸರಕುಗಳು ಬೇಕು’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಭಾರತಕ್ಕೆ ಕೃಷಿ ಉತ್ಪನ್ನ ರಫ್ತು ಹೆಚ್ಚಳ’

ನ್ಯೂಯಾರ್ಕ್ (ಪಿಟಿಐ): ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಬಹುದು. ಈ ಒಪ್ಪಂದವು ರಷ್ಯಾದ ಆಕ್ರಮಣವನ್ನು ಎದುರಿಸಲು ಸಹ ನೆರವಾಗುತ್ತದೆ ಎಂದು ಅಮೆರಿಕದ ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

ಭಾರತದಿಂದ ಯಾವುದೇ ಸಂದೇಶವಿಲ್ಲ: ರಷ್ಯಾ

ಮಾಸ್ಕೊ (ಪಿಟಿಐ): ಕಚ್ಚಾ ತೈಲ ಖರೀದಿ ಸ್ಥಗಿತಗೊಳಿಸುವ ಕುರಿತು ಭಾರತದಿಂದ ಯಾವುದೇ ರೀತಿಯ ಸಂದೇಶ ಸ್ವೀಕರಿಸಿಲ್ಲ ಎಂದು ರಷ್ಯಾ ಸ್ಪಷ್ಟಪಡಿಸಿದೆ.

ರಷ್ಯಾ ಸರ್ಕಾರದ ವಕ್ತಾರ ದಿಮಿತ್ರಿ ಪೆಸ್ಕೋವ್ ಸ್ಪಷ್ಟನೆ ನೀಡಿದ್ದು, ‘ಈ ವಿಚಾರವಾಗಿ ಭಾರತದಿಂದ ಇದುವರೆಗೂ ಅಧಿಕೃತ ಹೇಳಿಕೆ ಹೊರ ಬಿದ್ದಿರುವ ಕುರಿತು ನಮಗೆ ತಿಳಿದಿಲ್ಲ’ ಎಂದು ವಿವರಿಸಿದ್ದಾರೆ.

‘ಸಾಧ್ಯವಿರುವ ಎಲ್ಲ ರೀತಿಯಲ್ಲೂ ಭಾರತದ ಜೊತೆಗಿನ ಸಂಬಂಧವನ್ನು ಮುಂದುವರಿಸಲು ರಷ್ಯಾ ನಿರ್ಧರಿಸಿದೆ’ ಎಂದು ಪೆಸ್ಕೋವ್ ಹೇಳಿದ್ದಾರೆ ಎಂದು ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ.

‘ಕಚ್ಚಾ ತೈಲ ಖರೀದಿ ಒಪ್ಪಂದಗಳನ್ನು ರದ್ದುಗೊಳಿಸುವ ಕುರಿತು ಭಾರತದ ತೈಲ ಸಂಸ್ಕರಣಾ ಕೇಂದ್ರಗಳಿಂದ ಯಾವುದೇ ಮಾಹಿತಿ ಬಂದಿಲ್ಲ’ ಎಂದು ರಷ್ಯಾದ ಇಂಧನ ಸಚಿವಾಲಯವು ತಿಳಿಸಿರುವುದಾಗಿ ಮೂಲಗಳು ತಿಳಿಸಿವೆ.

ಭಾರತವು ತನ್ನ ಬೇಡಿಕೆಯ ಶೇಕಡ 88ರಷ್ಟು ಕಚ್ಚಾತೈಲವನ್ನು ವಿದೇಶದಿಂದಲೇ ಖರೀದಿಸುತ್ತಿದೆ. 2022ರಲ್ಲಿ ಉಕ್ರೇನ್ ಮೇಲೆ ಯುದ್ಧ ಆರಂಭಗೊಂಡ ನಂತರ ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿದ್ದ ವಿಶ್ವದ ಮೂರನೇ ಅತೀ ದೊಡ್ಡ ರಾಷ್ಟ್ರವಾಗಿ ಭಾರತ ಹೊರಹೊಮ್ಮಿತ್ತು.

ಇನ್ನಷ್ಟು ಸುದ್ದಿಗಳು ▶10

8 ಸಂಸದರ ಅಮಾನತು • ಸಂಸತ್ ಹೊರಗೆ ಪ್ರತಿಭಟನೆ

ಸಂಸತ್‌ನಲ್ಲಿ ಮತ್ತೆ ಗದ್ದಲ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತು ಮಾತನಾಡಲು ಅವಕಾಶ ನಿರಾಕರಿಸಿದ್ದು ಮತ್ತು ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ವಿಚಾರವು ಲೋಕಸಭೆಯಲ್ಲಿ ಮಂಗಳವಾರ ತೀವ್ರ ಗದ್ದಲಕ್ಕೆ ಕಾರಣವಾಯಿತು.

ಪರಿಣಾಮವಾಗಿ, ಕಲಾಪವು ಹಲವು ಬಾರಿ ಮುಂದೂಡಿಕೆಯಾಯಿತು. ಅಶಿಸ್ತಿನ ವರ್ತನೆಯ ಆರೋಪದ ಮೇಲೆ ಕಾಂಗ್ರೆಸ್‌ನ ಏಳು ಮತ್ತು ಸಿಪಿಎಂನ ಒಬ್ಬರು ಸಂಸದರನ್ನು ಅಮಾನತು ಮಾಡಲಾಯಿತು.

ದಿನದ ಆರಂಭದಲ್ಲಿ ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ವಿಚಾರವಾಗಿ ವಿರೋಧ ಪಕ್ಷಗಳು ತೀವ್ರ ಪ್ರತಿಭಟನೆ ನಡೆಸಿದ ಕಾರಣ ಕಲಾಪವನ್ನು ಪದೇ ಪದೇ ಮುಂದೂಡಲಾಯಿತು. ಮಧ್ಯಾಹ್ನದ ಬಳಿಕ ರಾಹುಲ್ ಗಾಂಧಿ ಅವರು, ಭಾರತೀಯ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಅಪ್ರಕಟಿತ ‘ಆತ್ಮಚರಿತ್ರೆ’ಯ ಅಂಶಗಳ ಕುರಿತು ನಿಯತಕಾಲಿಕವೊಂದರಲ್ಲಿ ಪ್ರಕಟವಾಗಿರುವ ಲೇಖನದ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪಿಸಲು ಮುಂದಾದಾಗ ಮತ್ತೆ ಗದ್ದಲ ಏರ್ಪಟ್ಟಿತು. ರಾಹುಲ್ ಅವರಿಗೆ ಮಾತನಾಡಲು ಅವಕಾಶ ನಿರಾಕರಿಸಿದ್ದನ್ನು ಪ್ರಶ್ನಿಸಿ ಹಲವು ಸಂಸದರು ಪ್ರತಿಭಟಿಸಿದರು.

ಕೆಲವರು ಕಾಗದ ಪತ್ರಗಳನ್ನು ಹರಿದುಹಾಕಿ, ಅದನ್ನು ಸಭಾಪತಿ ಪೀಠದತ್ತ ಎಸೆದರು. ಈ ರೀತಿ ಅಶಿಸ್ತಿನ ವರ್ತನೆ ತೋರಿದ ಕಾರಣಕ್ಕಾಗಿ ಸಭಾಪತಿ ಪೀಠದಲ್ಲಿದ್ದ ದಿಲೀಪ್ ಸೈಕಿಯಾ ಅವರು ಎಂಟು ಸಂಸದರನ್ನು ಅಮಾನತು ಮಾಡಿದರು. ▶6

ಸಂಸದರ ಅಮಾನತು ಖಂಡಿಸಿ ಸಂಸತ್ ಹೊರಗಡೆ ರಾಹುಲ್ ಗಾಂಧಿ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು —ಪಿಟಿಐ ಚಿತ್ರ

ಲೇಖನ ಪ್ರಮಾಣೀಕರಿಸಿದ ರಾಹುಲ್

ಭಾರತೀಯ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಅಪ್ರಕಟಿತ ‘ಆತ್ಮಚರಿತ್ರೆ’ಯ ಅಂಶಗಳನ್ನು ಒಳಗೊಂಡ ಲೇಖನದ ಪ್ರಮಾಣೀಕರಿಸಿದ ಪ್ರತಿಯನ್ನು ರಾಹುಲ್ ಗಾಂಧಿ ಅವರು ಲೋಕಸಭೆಗೆ ಮಂಗಳವಾರ ಸಲ್ಲಿಸಿದರು.

ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತು ಮಾತನಾಡಿದ ರಾಹುಲ್ ಗಾಂಧಿ ಅವರು, ‘ನಾನು ಎಂ.ಎಂ. ನರವಣೆ ಅವರ ಆತ್ಮಚರಿತ್ರೆಯ ಕುರಿತಾದ ಲೇಖನದ ಪ್ರತಿಯನ್ನು ಪ್ರಮಾಣೀಕರಿಸುತ್ತೇನೆ’ ಎಂದು ಹೇಳಿದರು.

ಲೋಕಸಭೆಯ ಕಲಾಪದಲ್ಲಿ ಯಾವುದೇ ದಾಖಲೆಯನ್ನು ಪ್ರಮಾಣೀಕರಿಸುವಾಗ, ಸದಸ್ಯರು ತಮ್ಮ ತಿಳಿವಳಿಕೆ ಪ್ರಕಾರ ಅದು ಸರಿಯಾಗಿದೆ ಎಂಬುದನ್ನು ದೃಢೀಕರಿಸಿ ಸಹಿ ಮಾಡಿದ ಪ್ರತಿಯನ್ನು ಸಲ್ಲಿಸಬೇಕು.

ಸದನದ ಅಧ್ಯಕ್ಷತೆ ವಹಿಸಿದ್ದ ಕೃಷ್ಣ ಪ್ರಸಾದ್ ಟೆನೇಟಿ ಅವರು, ‘ಸಹಿ ಮಾಡಿದ ಪ್ರತಿಯನ್ನು ಮಂಡಿಸಿ, ಅದನ್ನು ಪರಿಶೀಲಿಸಿ ಹಿಂತಿರುಗಿಸುತ್ತೇನೆ’ ಎಂದು ಹೇಳಿದರು.

ಈ ವೇಳೆ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ‘ಸ್ಪೀಕರ್ ಆದೇಶ ನೀಡಿದ್ದಾರೆ. ಹೀಗಾಗಿ ಮತ್ತೆ ರಾಹುಲ್ ಗಾಂಧಿ ಅವರು ಈ ವಿಚಾರ ಪ್ರಸ್ತಾಪಿಸಬಾರದು’ ಎಂದರು.

ರಾಹುಲ್ ಗಾಂಧಿಯವರು ಲೇಖನವನ್ನು ಉಲ್ಲೇಖಿಸಿ ಮಾತು ಮುಂದುವರಿಸಿದಾಗ ಸದನದಲ್ಲಿ ಮತ್ತೆ ಗದ್ದಲ ಉಂಟಾಯಿತು. ರಾಹುಲ್ ಗಾಂಧಿ ಅವರು ಭಾಷಣವನ್ನು ಮುಂದುವರಿಸಲು ಟೆನೇಟಿ ಅವರು ಅವಕಾಶ ನಿರಾಕರಿಸಿದರು.

ವಿದೇಶಿಗರ ಅಕ್ರಮ ವಾಸ: ಸರ್ಕಾರದ ಲೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನ್ಯತೆ ಹೊಂದಿದ ವೀಸಾ, ಪಾಸ್‌ಪೋರ್ಟ್ ಇಲ್ಲದೆ ಅಕ್ರಮವಾಗಿ ನೆಲಸಿರುವ ವಿದೇಶಿಯರಿಂದ ದೇಶದ ಭದ್ರತೆಗೆ ಅಪಾಯ ಕಾದಿದೆ’ ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

‘ನಮ್ಮನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಲಾಗಿದ್ದು ಬಿಡುಗಡೆ ಮಾಡಲು ನಿರ್ದೇಶಿಸಬೇಕು’ ಎಂದು ಕೋರಿ ನೈಜೀರಿಯಾದ (ಸದ್ಯ ಕೋಗಿಲು ಲೇ ಔಟ್ ವಿಳಾಸ) ಇಮೆಕಾ ಜೇಮ್ಸ್ ಐವೊಬಾ ಅಲಿಯಾಸ್ ಆಸ್ಟಿನ್ ನೊಸೊ ಐವೊಬಾ ಹಾಗೂ ವುಡೆರಿಕ್ ಫಿಡೆಲಿಸ್ ಎಂಬ ಇಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ▶5

ಚಿನಕುರುಳಿ ಪ್ರಕಾಶ್ ಶೆಟ್ಟಿ

ವಿಧಾನಸಭೆ: ವಿಪಕ್ಷಗಳ ಆಕ್ಷೇಪದ ನಡುವೆಯೇ ನಿರ್ಣಯ ಮಂಡಿಸಿದ ಸಿ.ಎಂ

ವಿಬಿ ಜಿ ರಾಮ್ ಜಿ ವಿರುದ್ಧ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧಪಕ್ಷಗಳ ಆಕ್ಷೇಪ ಮತ್ತು ಗದ್ದಲದ ನಡುವೆಯೇ, ‘ವಿಬಿ ಜಿ ರಾಮ್ ಜಿ’ ಕಾಯ್ದೆ ರದ್ದುಪಡಿಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಿದರು.

ನಿರ್ಣಯದ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದ ವಿರೋಧ ಪಕ್ಷದ ಸದಸ್ಯರು, ‘ಇದು ಸದನದ ನಿರ್ಣಯವಾಗಲು ಸಾಧ್ಯವಿಲ್ಲ. ಅದನ್ನು ನಾವು ಒಪ್ಪುವುದೂ ಇಲ್ಲ. ಕಾಂಗ್ರೆಸ್ ಸರ್ಕಾರದ ನಿರ್ಣಯ ಎಂದು ಬೇಕಾದರೆ ಮಂಡಿಸಿ ನಮ್ಮ ತಕರಾರಿಲ್ಲ’ ಎಂದರು.

ಆಕ್ಷೇಪಕ್ಕೆ ಜಗ್ಗದ ಮುಖ್ಯಮಂತ್ರಿ ನಿರ್ಣಯವನ್ನು ಓದಿದರು. ಈ ವೇಳೆ ಬಿಜೆಪಿ ಸದಸ್ಯರು ಘೋಷಣೆಗಳನ್ನು ಕೂಗುವ ಮೂಲಕ ಅಡ್ಡಿಪಡಿಸಿದರು.

ನಿರ್ಣಯದ ಸಾರಾಂಶ: ಗ್ರಾಮೀಣ ಬಡವರ ಪಾಲಿನ ‘ಸಂಜೀವಿನಿ’ಯಾಗಿದ್ದ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು (ನರೇಗಾ) ರದ್ದುಗೊಳಿಸಿರುವುದನ್ನು ಈ ಸದನವು ಗಂಭೀರವಾಗಿ ಪರಿಗಣಿಸುತ್ತದೆ. ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ‘ವಿಬಿ ಜಿ ರಾಮ್ ಜಿ’ ಕಾಯ್ದೆಯು ಒಕ್ಕೂಟ ವ್ಯವಸ್ಥೆಯ ಮೂಲ ಆಶಯಗಳಿಗೆ ಮತ್ತು ಗ್ರಾಮೀಣ ಜನರ ಜೀವನೋಪಾಯದ ಹಕ್ಕಿಗೆ ಮಾರಕವಾಗಿದೆ.

ಯುಪಿಎ ಸರ್ಕಾರ ನರೇಗಾ ಜಾರಿ ತಂದಿತ್ತು. ಈ ಯೋಜನೆಯು ನಿರುದ್ಯೋಗ ನಿರ್ಮೂಲನೆ, ವಲಸೆ ತಡೆ, ಲಿಂಗ ತಾರತಮ್ಯವಿಲ್ಲದೆ ವೇತನ ನೀಡುವಿಕೆ, ಪಂಚಾಯತ್ ವಿಕೇಂದ್ರೀಕರಣದ ಬಲವರ್ಧನೆ ಹಾಗೂ ಗ್ರಾಮೀಣ ಜನರ ವೈಯಕ್ತಿಕ ಹಾಗೂ ಸಮುದಾಯ ಆಸ್ತಿಗಳ ಸೃಜನೆಯಿಂದ ಕ್ರಾಂತಿಕಾರಿ ಬದಲಾವಣೆ ತಂದಿದೆ.

ಹೊಸ ಕಾಯ್ದೆಯು ಸಂವಿಧಾನದ 21ನೇ ಅನುಚ್ಛೇದದಡಿ ಸಿಗುವ ಜೀವಿಸುವ ಮತ್ತು ಜೀವನೋಪಾಯದ ಹಕ್ಕನ್ನು ಉಲ್ಲಂಘಿಸುತ್ತದೆ ಮತ್ತು ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ನೀಡಲಾದ ಅಧಿಕಾರ ಮತ್ತು ಸ್ವಾಯತ್ತೆಯನ್ನು ಕಸಿದುಕೊಳ್ಳುತ್ತದೆ. ಗಾಂಧಿಯವರ ಗ್ರಾಮ ಸ್ವರಾಜ್ಯದ ಉದ್ದೇಶವನ್ನು ವಿಫಲಗೊಳಿಸುತ್ತದೆ.

ದೆಹಲಿಯ ದಂತ ಗೋಪುರದಲ್ಲಿ ಕುಳಿತು ಯೋಜನೆಗಳನ್ನು ರೂಪಿಸುವ ಮೂಲಕ, ಗ್ರಾಮ ಸಭೆಗಳ ಅಧಿಕಾರ ಕಿತ್ತುಕೊಳ್ಳಲಾಗಿದೆ.

ವಿಬಿ ಜಿ ರಾಮ್ ಜಿ ರದ್ದು ಮಾಡಬೇಕೆಂಬ ನಿರ್ಣಯವನ್ನು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದರು

> ನರೇಗಾ ಯೋಜನೆ ಮರುಜಾರಿಗೊಳಿಸಿ, ಜನರ ಉದ್ಯೋಗದ ಹಕ್ಕನ್ನು ಮರು ಸ್ಥಾಪಿಸಬೇಕು. ವೇತನವನ್ನು ಕನಿಷ್ಠ ₹400 ನೀಡಬೇಕು. ಈ ಕುರಿತ ನಿರ್ಣಯವನ್ನು ರಾಷ್ಟ್ರಪತಿಯವರಿಗೆ ಕಳುಹಿಸಲಾಗುವುದು
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಇದು ಸದನದ ನಿರ್ಣಯ ಎಂದು ಅವರು ಹೇಳಿದ್ದಾರೆ. ಇದು ಕಾಂಗ್ರೆಸ್ ಸರ್ಕಾರದ ನಿರ್ಣಯ, ರಾಹುಲ್ ಗಾಂಧಿಯ ನಿರ್ಣಯ ಎಂದು ಹೇಳಬೇಕು
> **ಆರ್.ಅಶೋಕ,** ವಿರೋಧ ಪಕ್ಷದ ನಾಯಕ

ಜನರ ಹಕ್ಕು ಕಸಿದ ಕೇಂದ್ರ: ನಿರ್ಣಯ

ನರೇಗಾದಲ್ಲಿ ಉದ್ಯೋಗವು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು ಹಾಗೂ ಬೇಡಿಕೆ ಆಧಾರಿತವಾಗಿತ್ತು. ಆದರೆ ಹೊಸ ಕಾಯ್ದೆಯಲ್ಲಿ ಇದನ್ನು ಕೇಂದ್ರ ಸರ್ಕಾರ ರೂಪಿಸುವ ಮಾನದಂಡಗಳ ಹಂಗಿಗೆ ಒಳಪಡಿಸಿ ಜನರ ಹಕ್ಕನ್ನು ಕಸಿದುಕೊಳ್ಳಲಾಗಿದೆ ಎಂದು ನಿರ್ಣಯ ಪ್ರತಿಪಾದಿಸಿದೆ.

ನರೇಗಾ ಕಾಯ್ದೆ ಅನುಸಾರ 100 ಮಾನವ ದಿನಗಳ ಕೂಲಿ ಹಣವನ್ನು ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಭರಿಸುತ್ತಿತ್ತು. ಯಾವುದೇ ಸಮಾಲೋಚನೆ ನಡೆಸದ ಕೇಂದ್ರವು ಏಕಾಏಕಿ ರಾಜ್ಯ ಸರ್ಕಾರಗಳು ಶೇ 40ರಷ್ಟು ಅನುದಾನವನ್ನು ಭರಿಸಬೇಕು ಎಂಬ ನಿಯಮ ಹೇರಿದೆ. 125 ಮಾನವ ದಿನಗಳ ಕೆಲಸ ಒದಗಿಸುವುದಾಗಿ ಹೊಸ ಕಾಯ್ದೆಯಲ್ಲಿ ಹೇಳಿದ್ದರೂ 50 ಮಾನವ ದಿನಗಳ ವೆಚ್ಚವನ್ನು ರಾಜ್ಯವೇ ಭರಿಸಬೇಕಾಗುತ್ತದೆ. ಹೊಸ ಕಾಯ್ದೆಯ ಮೂಲಕ ಶೇ 40ರಷ್ಟು ಹೊರೆಯನ್ನು ರಾಜ್ಯದ ಮೇಲೆ ಹೊರಿಸುತ್ತಿರುವುದು ರಾಜ್ಯದ ಆರ್ಥಿಕತೆ ಮತ್ತು ಅಭಿವೃದ್ಧಿಯನ್ನು ಅಪಾಯಕ್ಕೆ ದೂಡುವ ಹುನ್ನಾರ ಎಂದು ದೂರಲಾಗಿದೆ.

ವಾಟ್ಸ್‌ಆ್ಯಪ್‌ಗೆ ‘ಸುಪ್ರೀಂ’ ತರಾಟೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದತ್ತಾಂಶ ಹಂಚಿಕೊಳ್ಳುವಿಕೆಯ ಹೆಸರಿನಲ್ಲಿ ಭಾರತದ ಜನರ ಖಾಸಗಿತನದ ಹಕ್ಕಿನೊಂದಿಗೆ ಆಟವಾಡಲು ಅವಕಾಶ ಕೊಡುವುದಿಲ್ಲ ಎಂದು ಮೆಟಾ ಪ್ಲಾಟ್‌ಫಾರ್ಮ್ಸ್ ಮತ್ತು ವಾಟ್ಸ್‌ಆ್ಯಪ್ ಅನ್ನು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿದೆ. ಖಾಸಗಿತನ ರಕ್ಷಣೆಗೆ ಸಂಬಂಧಿಸಿ ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ವಿಧಿಸಿದ್ದ ₹213.14 ಕೋಟಿ ದಂಡದ ಆದೇಶವನ್ನು ಪ್ರಶ್ನಿಸಿ ಮೆಟಾ ಪ್ಲಾಟ್‌ಫಾರ್ಮ್ಸ್ ಮತ್ತು ವಾಟ್ಸ್‌ಆ್ಯಪ್ ಸಲ್ಲಿಸಿದ್ದ ಮೇಲ್ಮನವಿಯನ್ನು ಕೋರ್ಟ್ ವಿಚಾರಣೆ ನಡೆಸಿತು.

ವಾಟ್ಸ್‌ಆ್ಯಪ್ ಮತ್ತು ಅದರ ಮಾತೃಸಂಸ್ಥೆ ಮೆಟಾ, ತಮ್ಮ ಖಾಸಗಿತನ ನೀತಿಯನ್ನು ರೂಪಿಸಿಕೊಳ್ಳುವ ವಿಧಾನವನ್ನು ಭಾರತದ ಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪಿಲ್ ಎಂ. ಪಾಂಚೋಲಿ ಅವರಿದ್ದ ಪೀಠವು ಪ್ರಶ್ನಿಸಿದೆ. ಗ್ರಾಹಕರೊಂದಿಗೆ ಮಾಡಿಕೊಂಡ ಅಸಮಾನ ಒಪ್ಪಂದಗಳ ಆಧಾರದಲ್ಲಿ ಅವರ ದತ್ತಾಂಶಗಳನ್ನು ಹಂಚಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಪೀಠವು ಹೇಳಿದೆ. ಈ ಕುರಿತು ಫೆಬ್ರುವರಿ 9ರಂದು ಮಧ್ಯಂತರ ತೀರ್ಪು ಪ್ರಕಟಿಸುವುದಾಗಿ ತಿಳಿಸಿದೆ. ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಯನ್ನು ಪ್ರತಿವಾದಿಯನ್ನಾಗಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ಹೇಳಿದೆ.

ಜಾಹೀರಾತಿಗೆ ಸಂಬಂಧಿಸಿದಂತೆ ಸೀಮಿತ ದತ್ತಾಂಶ ಹಂಚಿಕೆಗೆ ಮಾತ್ರ ಅವಕಾಶ ಕೊಟ್ಟು, ಪ್ರಾಬಲ್ಯದ ದುರ್ಬಳಕೆ ಮಾಡಲಾಗುತ್ತಿದೆ ಎಂಬ ಸಿಸಿಐ ಅಭಿಪ್ರಾಯವನ್ನು ಎತ್ತಿಹಿಡಿದ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ ಆದೇಶವನ್ನೂ ಮೆಟಾ ಮತ್ತು ವಾಟ್ಸ್‌ಆ್ಯಪ್ ಪ್ರಶ್ನಿಸಿವೆ. ▶11

www.bachpanglobal.com

BACHPAN

ನಿಮ್ಮ ನಗರದಲ್ಲಿ ಬಚ್‌ಪನ್ ಪ್ಲೇ ಸ್ಕೂಲ್ ಪ್ರಾರಂಭಿಸಿ

- ಪಠ್ಯಕ್ರಮ ಮತ್ತು ವ್ಯವಸ್ಥೆಗಳ ಬೆಂಬಲ
- ನಿಮ್ಮ ಪ್ರಸಕ್ತ ಶಾಲೆಯನ್ನು ಪ್ರಾಥಮಿಕ/ ಕೆ–12 ಮಾದರಿಯಲ್ಲಿ ಬದಲಾಯಿಸಿ
- ₹ 15+ ಲಕ್ಷ ಬಂಡವಾಳ ಮತ್ತು 225 ಚ. ಯಾರ್ಡ್ಸ್ ಜಾಗ

1300+ School | 3 Lakh Students | 400+ Cities | 25 States

ಕರ್ನಾಟಕದಾದ್ಯಂತ ಎಲ್ಲಾ ಬಚ್ಪನ್ ವಿಚಾರಣೆಗಳಿಗೆ ಸ್ವಾಗತ

Yeshvanth Gowda 8123065553 | Charu Khindria 9900083744

ADMISSIONS OPEN FOR SESSION 2026-27

• Arasinakunte - 9980833955 • Avalahalli - 9591522979 • AECS Layout - 9880978590 • Akshayanagar - 9741132614 • Avalahalli-Yelahanka - 9900920600 • Arekere - 9900056977 • Attibele - 9738211888 • Ayyappa Nagar - 9148029955 • Budigere Cross - 9008421983 • Bagalur KIADB Road - 9880282699 • B Narayanpura - 9902901454 • Borewell Road - 8618255235 • Bagalur Road - 6364898686 • Balagere - 6364619999 • Basaveshwar Nagar - 9148005047 • Byrathi - 9986004391 • Chokkanahalli - 8050809798 • Dommasandra - 9381642771 • Domlur - 9916246426 • Electronic City -9900408935 • Gottigere - 9844609296 • Gunjur - 9845141485 • Haralur Road - 9900052789 • HBR Layout - 9591652552 • Horamavu - 9632317733 • Hongasandra - 9845951144 • Hosakote - 8494924999 • Hebbal kampapura - 9686652694 • HSR Layout - 9900094177 • ISRO Layout - 7975323917 • J.P. Nagar Dollars Colony - 7411216399 • Jalahalli Cross - 9845208633 • J.P. Nagar 7th Phase - 9900061977 • Jakkur - 9606676120 • K. Channasandra - 99025 00998 • Kaggadasapura - 9739000600 • Kengeri Shirke Circle - 8217694499 • Kasturi Nagar - 7406588877 • Kithaganur - 6366414488 • Kodigehalli - 8971857455 • Koramangala - 9686044111 • KR Puram - 9148029955 • Manyata Tech Park - 9900920600 • Manorayana Palya - 7411353555 • Munnekolala - 7338567423 • Nagasandra - 7259570236 • New Thippasandra - 9916768811 • Nandini Layout - 9449513005 • Nagarbhavi - 9686033399 • Padmanabhnagar - 9019254629 • Panathur - 9901053610 • Rayasandra Circle - 9739006066 • Ramurthynagar - 9108323555 • Rajankunte - 7760553167 • R.T. Nagar - 7411353555 • Sanjay Nagar - 9964353555 • Sarjapur Road - 9900085177 • Seegehalli - 9606299494 • Soukya Road - 9448040193 • Srinivasapura R.R Nagar - 9606063144 • Surya Nagar phase-1 - 9916969459 • Silk Institute - 8105190701 • Sompura Gate -7795413036 • TC Palya - 9591793344 • Varthur - 9986111881 • Whitefield - 9900038268 • Yelahanka - 7022055537

OPENING SHORTLY • Bidarahalli - +91 8792166010

For Admissions call us at 7290047000 ; QR School Locator
Web : www.bachpanglobal.com ; Mail : franchise@bachpanglobal.com
Phone : 011-35106666/7777 ; U74899DL1999PTC101251
Regd. Office :- S.K Tower, 9988/B-1, Sarai Rohilla, New Rohtak Road, Delhi-110005

විಧಾನಸಭೆಯಲ್ಲಿ ಬಿಜೆಪಿ–ಜೆಡಿಎಸ್ ಅಹೋರಾತ್ರಿ ಧರಣಿ • ಸದನದಲ್ಲೇ ಊಟ, ನಿದ್ದೆ

ತಿಮ್ಮಾಪುರ ರಾಜೀನಾಮೆಗೆ ಬಿಗಿಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರು ರಾಜೀನಾಮೆ ನೀಡಬೇಕೆಂದು ಪಟ್ಟು ಹಿಡಿದಿರುವ ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಸದಸ್ಯರು ಸದನದಲ್ಲಿ ಮಂಗಳವಾರ ಅಹೋರಾತ್ರಿ ಧರಣಿ ನಡೆಸಿದರು.

ಸದನದಲ್ಲಿಯೇ ರಾತ್ರಿಯ ಭೋಜನ ಸೇವಿಸಿದ ನಂತರ, ಅಲ್ಲಿಯೇ ನಿದ್ದೆ ಮಾಡಿದರು. ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಸದನಕ್ಕೆ ಬಂದು ಧರಣಿನಿರತರನ್ನು ಭೇಟಿಮಾಡಿ ಮಾತುಕತೆ ನಡೆಸಿದರು.

ಬಳಿಕ ಮಾತನಾಡಿದ ಖಾದರ್, ‘ಬಿಜೆಪಿಯವರು ಸದನದಲ್ಲಿ ರಾತ್ರಿಯಿಡೀ ಧರಣಿ ನಡೆಸಲು ತೀರ್ಮಾನಿಸಿದ್ದಾರೆ. ಅವರ ಜೊತೆಗೆ ಮಾತನಾಡಿದ್ದೇನೆ. ಮಾತನಾಡುವುದು ನಮ್ಮ ಕರ್ತವ್ಯ. ಧರಣಿ ನಿರತರಿಗೆ ನೆಮ್ಮದಿಯಾಗಿ ನಿದ್ದೆ ಮಾಡಲು ಅಗತ್ಯವಾದ ವ್ಯವಸ್ಥೆ ಮಾಡಿದ್ದೇನೆ’ ಎಂದು ತಿಳಿಸಿದರು.

‘ಅಬಕಾರಿ ಇಲಾಖೆ ಭ್ರಷ್ಟಾಚಾರದ ಕೂಪವಾಗಿದೆ’ ಎಂದು ಬಿಜೆಪಿ ಸದಸ್ಯರು ಬೆಳಿಗ್ಗೆಯೇ ಆರೋಪಿಸಿದ್ದರು. ಸಂಜೆ ಉತ್ತರ ನೀಡುವುದಾಗಿ ಸರ್ಕಾರ ಹೇಳಿತ್ತು. ಬಳಿಕ, ವಿಬಿ ಜಿ ರಾಮ್ ಜಿ ಕುರಿತ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು. ಈ ವಿಷಯದಲ್ಲಿ ಗದ್ದಲ ನಡೆದಿದ್ದರಿಂದಾಗಿ ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಲಾಗಿತ್ತು.

ಬಳಿಕ, ಕಲಾಪ ಆರಂಭವಾದಾಗ ನಿರ್ಣಯದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚೆ ಆರಂಭಿಸಿದರು. ಬಿಜೆಪಿ ಸದಸ್ಯರು ಗದ್ದಲ ಎಬ್ಬಿಸಿದಾಗ, ಕಲಾಪ ಮುಂದೂಡಲಾಯಿತು. ಮಾತುಕತೆ ಬಳಿಕ ಕಲಾಪ ಆರಂಭವಾದಾಗ ಚರ್ಚೆ ನಡೆಯಿತು. ▶2

ತಿಮ್ಮಾಪುರ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ವಿಧಾನಸಭೆಯಲ್ಲಿ ಬಿಜೆಪಿ, ಜೆಡಿಎಸ್ ಸದಸ್ಯರು ಮಂಗಳವಾರ ಅಹೋರಾತ್ರಿ ಪ್ರತಿಭಟನೆ ನಡೆಸಿದರು

ರಾಜೀನಾಮೆ ಏಕೆ ಕೊಡಲಿ: ತಿಮ್ಮಾಪುರ

‘ಈ ಹಿಂದೆ ಯಾರ‍್ಯಾರು ಅಬಕಾರಿ ಸಚಿವರಾಗಿದ್ದರೂ ಅವರೆಲ್ಲರ ಮೇಲೆಯೂ ಆರೋಪಗಳು ಬಂದಿವೆ. ನನ್ನ ಮೇಲೂ ಆರೋಪ ಮಾಡಿದ್ದಾರೆ. ತೇಜೋವಧೆ ಮಾಡಬೇಕಾದರೆ ಆಧಾರ ಬೇಡವೇ? ಹೀಗಾಗಿ, ನಾನು ರಾಜೀನಾಮೆ ಕೊಡುವುದಿಲ್ಲ’ ಎಂದು ತಿಮ್ಮಾಪುರ ಹೇಳಿದರು.

‘ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಕೆ. ಗೋಪಾಲಯ್ಯ, ಶಶಿಕಲಾ ಜೊಲ್ಲೆ, ಸಿ.ಸಿ. ಪಾಟೀಲ ಮೇಲೆಯೂ ಲಂಚದ ಆರೋಪ ಬಂದಿತ್ತು. ಅವರೇನು ರಾಜೀನಾಮೆ ಕೊಟ್ಟಿದ್ದಾರೆಯೇ? ಈಗ ಬಂದಿರುವ ಆರೋಪದಲ್ಲಿ ನನ್ನ ಪಾತ್ರವೇನಿದೆ? ಆರೋಪದಲ್ಲಿ ಸಿಲುಕಿಕೊಂಡಿರುವ ಅಧಿಕಾರಿಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲ’ ಎಂದರು. ಆರೋಪ ಮಾಡಿರುವ ಮದ್ಯ ಮಾರಾಟಗಾರರ ಸಂಘ ಅಸ್ತಿತ್ವದಲ್ಲಿಯೇ ಇಲ್ಲ ಎಂದೂ ಅವರು ಹೇಳಿದರು.

ಹವಾಮಾನ ಮುನ್ಸೂಚನೆ: ಬೆಳಗಿನ ಜಾವ ಚಳಿಯ ವಾತಾವರಣ, ನಂತರ ಶುಭ್ರ ಆಕಾಶ ಇರಲಿದೆ

ಜಾನಪದ ಜಾತ್ರೆ ಇಂದು

ಬೆಂಗಳೂರು: ಬಸವನಗುಡಿಯ ಬಿ.ಎಂ.ಎಸ್. ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಫೆ.4ರಂದು ಬೆಳಿಗ್ಗೆ 11.30ಕ್ಕೆ ಜಾನಪದ ಜಾತ್ರೆ ಕಾರ್ಯಕ್ರಮ ನಡೆಯಲಿದೆ.

‘ಕಳೆದ 10 ವರ್ಷಗಳಿಂದ ಈ ಜಾತ್ರೆಯನ್ನು ಆಯೋಜಿಸಲಾಗುತ್ತಿದೆ. ಮೆರವಣಿಗೆ, ಜಾನಪದ ಸೊಗಡಿನ ವಸ್ತ್ರಗಳು, ಆಟ, ಊಟದ ಮಳಿಗೆಗಳನ್ನು ತೆರೆಯಲಾಗುತ್ತಿದೆ. ಇದರ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ’ ಎಂದು ಕಾಲೇಜಿನ ಪ್ರಾಂಶುಪಾಲ ರಘು ಕುಮಾರ್ ಎನ್. ತಿಳಿಸಿದ್ದಾರೆ.

‘ಬಿ.ಎಂ.ಎಸ್. ಶಿಕ್ಷಣ ದತ್ತಿಯ ದಾನಿಗಳು ಹಾಗೂ ಹಾಗೂ ಬಿ.ಎಂ.ಎಸ್. ಮಹಿಳಾ ಕಾಲೇಜಿನ ಅಧ್ಯಕ್ಷೆ ಬಿ.ಎಸ್. ರಾಗಿಣಿ ನಾರಾಯಣ್ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ವಿದ್ವಾಂಸ ಕೃಷ್ಣೇಗೌಡ ಮತ್ತು ಸಂಗೀತ ನಿರ್ದೇಶಕ ಕಂಬದ ರಾಮಯ್ಯ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾಲಕೆರೆ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಎಸ್‌.ಆರ್‌.ವಿಶ್ವನಾಥ್, ಯೋಜನಾ ನಕ್ಷೆಯನ್ನು ವೀಕ್ಷಿಸಿದರು

₹2.50 ಕೋಟಿ ವೆಚ್ಚದಲ್ಲಿ ಕಬಡ್ಡಿ ಕೋರ್ಟ್

‘ರಸ್ತೆ ಜನ ಬಳಕೆಗೆ ಮುಕ್ತ’

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಹೆಸರಘಟ್ಟ ಹೋಬಳಿ ವ್ಯಾಪ್ತಿಯಲ್ಲಿ ₹28 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿರುವ ಅಭಿವೃದ್ಧಿ ಸೌಲಭ್ಯಗಳನ್ನು ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರು ಜನ ಬಳಕೆಗೆ ಮುಕ್ತಗೊಳಿಸಿದರು.

ಹೆಸರಘಟ್ಟ ಗ್ರಾಮದ ವಾರ್ಡ್ 2, 3, 8 ಮತ್ತು 9 ಹಾಗೂ ಕೊಡಗಿ ತಿರುಮಳಾಪುರ, ಹುರಳಿಚಿಕ್ಕನಹಳ್ಳಿ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣವಾಗಿವೆ.

ಬ್ಯಾಲಕೆರೆ ಹಾಗೂ ಗುಣಿ ಅಗ್ರಹಾರ ಗ್ರಾಮಗಳಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ವಿಶ್ವನಾಥ್, ‘ಹೆಸರಘಟ್ಟ ಭಾಗದಿಂದ ಅನೇಕ ಕಬಡ್ಡಿ ಕ್ರೀಡಾಪಟುಗಳಿದ್ದಾರೆ. ಅವರಿಗೆ ಕ್ರೀಡಾಂಗಣದ ಕೊರತೆ ಇತ್ತು. ಈ ಕಾರಣದಿಂದ ₹2.50 ಕೋಟಿ ವೆಚ್ಚದಲ್ಲಿ ಕಬಡ್ಡಿ ಕೋರ್ಟ್ ನಿರ್ಮಿಸಲಾಗಿದೆ’ ಎಂದರು.

ಅಂಗವಿಕಲರಿಗೆ ಸಲಕರಣೆಗಳನ್ನು ವಿತರಿಸಲಾಯಿತು.

ಸೇರ್ಪಡೆ: ಮುಖಂಡರಾದ ಮಂಜುನಾಥ್, ಕೆಂಪರಾಜು, ಗಂಗಾಧರ್, ವಸಂತ್, ನಾಗೇಶ್ ಸೇರಿದಂತೆ 100ಕ್ಕೂ ಹೆಚ್ಚು ಕಾರ್ಯಕರ್ತರು ಕಾಂಗ್ರೆಸ್ ಪಕ್ಷವನ್ನು ತೊರೆದು ಬಿಜೆಪಿಗೆ ಈ ಸಂದರ್ಭದಲ್ಲಿ ಸೇರ್ಪಡೆಯಾದರು.

ಬಿಜೆಪಿ ಮುಖಂಡರಾದ ಅಲೋಕ್ ವಿಶ್ವನಾಥ್, ದಿಬ್ಬೂರು ಜಯಣ್ಣ, ಎಸ್‌.ಎನ್‌.ರಾಜಣ್ಣ, ಸಿ.ವೆಂಕಟೇಶ್, ಪಿ.ಕೆ.ರಾಜಣ್ಣ, ಎಚ್‌.ಸಿ.ರಾಜೇಶ್, ಕುಂಬಾರಹಳ್ಳಿ ಶ್ರೀನಿವಾಸಯ್ಯ, ಎಸ್‌.ಜಿ. ನರಸಿಂಹಮೂರ್ತಿ, ಅದ್ದೆ ವಿಶ್ವನಾಥಪುರ ಮಂಜುನಾಥ್, ಎಸ್‌.ಜಿ. ಪ್ರಶಾಂತ್‌ರೆಡ್ಡಿ ಉಪಸ್ಥಿತರಿದ್ದರು.

ಚುಟುಕು ಸುದ್ದಿ

ಪುಸ್ತಕ ಬಹುಮಾನಕ್ಕೆ ಕೃತಿ ಆಹ್ವಾನ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು 2025–26ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಕೃತಿಗಳನ್ನು ಆಹ್ವಾನಿಸಿದೆ.

ಲಂಬಾಣಿ– ಬಂಜಾರ ಸಂಸ್ಕೃತಿ, ಸಾಹಿತ್ಯ, ಭಾಷೆ ಹಾಗೂ ವಿವಿಧ ಕಲಾ ಪ್ರಕಾರಗಳಿಗೆ ಸಂಬಂಧಿಸಿದಂತೆ ಗರಿಷ್ಠ ಮೂರು ಪುಸ್ತಕಗಳಿಗೆ ಬಹುಮಾನಗಳನ್ನು ನೀಡಲಾಗುತ್ತಿದೆ.

ಬಹುಮಾನವು ತಲಾ ₹25 ಸಾವಿರ ನಗದು ಒಳಗೊಂಡಿದೆ. ಆಸಕ್ತರು ಸ್ವವಿವರದೊಂದಿಗೆ ಕೃತಿಯ ಮೂರು ಪ್ರತಿಗಳನ್ನು ಇದೇ 28ರೊಳಗೆ ರಿಜಿಸ್ಟ್ರಾರ್, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಕನ್ನಡ ಭವನ, 1ನೇ ಮಹಡಿ, ಜೆ.ಸಿ ರಸ್ತೆ, ಬೆಂಗಳೂರು-560002 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 080 29917745

ತಿಮ್ಮಾಪುರ ರಾಜೀನಾಮೆಗೆ ಬಿಗಿಪಟ್ಟು

ಒಂದನೇ ಪುಟದಿಂದ...

ವಿರೋಧ ಪಕ್ಷದ ಆರೋಪಗಳಿಗೆ ಸದನದಲ್ಲಿ ಸಂಜೆ ಉತ್ತರ ನೀಡಿದ ತಿಮ್ಮಾಪುರ, ‘ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ’ ಎಂದರು. ಇದರಿಂದ ಸಿಟ್ಟಿಗೆದ್ದ ಬಿಜೆಪಿ, ಜೆಡಿಎಸ್ ಸದಸ್ಯರು ಧರಣಿಗೆ ಮುಂದಾದರು. ತಕ್ಷಣವೇ ಕಲಾಪವನ್ನು ಬುಧವಾರಕ್ಕೆ ಮುಂದೂಡಲಾಯಿತು.

ಕಲಾಪ ಮುಂದೂಡಿದ ಬಳಿಕವೂ ವಿರೋಧ ಪಕ್ಷಗಳ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಮುಂದುವರಿಸಿದರು. ಬಳಿಕ, ಅಹೋರಾತ್ರಿ ಧರಣಿ ನಡೆಸಲು ಬಿಜೆಪಿ ಮತ್ತು ಜೆಡಿಎಸ್ ನಾಯಕರು ತೀರ್ಮಾನಿಸಿದರು.

ಪುರಸಭಾ ಕಾರ್ಯಾಲಯ ಆನೇಕಲ್

ಆನೇಕಲ್– 562106, ಬೆಂಗಳೂರು ನಗರ ಜಿಲ್ಲೆ
ದೂರವಾಣಿ ಸಂಖ್ಯೆ: 080–27859225, ಇ–ಮೇಲ್: itstaff_ulb_anekal@yahoo.co.in
ಫ್ಯಾಕ್ಸ್: 080–27830092

ಸಂಖ್ಯೆ: ಪು.ಕಾ.ಆ/ಆ.ಶಾ/ಟೆಂಡರ್/10/2025–26 ದಿನಾಂಕ:03.02.2026

ಟೆಂಡರ್ ಪ್ರಕಟಣೆ (ಕೆಪಿಪಿಪಿ– ಪೋರ್ಟಲ್ ಮೂಲಕ ಮಾತ್ರ)

ಆನೇಕಲ್ ಪುರಸಭೆಯ ಪುರಸಭಾ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿದಾರರು/ಗುತ್ತಿಗೆದಾರರು/ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಸ್ಟ್ಯಾಂಡರ್ಡ್ ಡಾಕ್ಯುಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ http:// kppp.karnataka.gov.in ಮುಖಾಂತರ ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಆರೋಗ್ಯ ಶಾಖೆಯ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬಹುದು. ಟೆಂಡರ್ ಡಾಕ್ಯುಮೆಂಟ್ ಮತ್ತು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ನಿಗಧಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ಗಳ ಮೌಲ್ಯಮಾಪನ ಮಾಡಲಾಗುವುದು ಮತ್ತು ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಲಾಗುವುದು.

ಕ್ರ. ಸಂ	ಕಾಮಗಾರಿ ವಿವರ	ಇಂಡೆಂಟ್ ನಂ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ರೂಗಳಲ್ಲಿ (2.5%)
01	ಆನೇಕಲ್ ಪುರಸಭಾ ವ್ಯಾಪ್ತಿಯ ದೊಡ್ಡಕೆರೆ ಬಳಿ ಇರುವ 3.3 ಎಂ.ಎಲ್.ಡಿ ಹಾಲೇನಹಳ್ಳಿ ಕೆರೆ ಬಳಿ ಇರುವ 3.1 ಎಂ.ಎಲ್.ಡಿ ಎಸ್.ಟಿ.ಪಿ ಘಟಕಗಳು 2 ಸಂಖ್ಯೆ ಸೆಪ್ಟಿಕ್ ಟ್ಯಾಂಕ್, 3 ಸಂಖ್ಯೆ ರೈಸಿಂಗ್ ಮೇನ್ಸ್, 3 ಸಂಖ್ಯೆ ವೆಟ್‌ವೆಲ್, 3 ಸಂಖ್ಯೆ ಡೀಸೆಲ್ ಜನರೇಟರ್ ರೂಂ ಮತ್ತು ಸೇವೇಜ್ ಪಂಪ್‌ಸೆಟ್‌ಗಳ ವಾರ್ಷಿಕ ನಿರ್ವಹಣೆ ಹಾಗೂ ಕಾರ್ಯಾಚರಣೆ.	DMA/2025-26/OW/WORK_INDENT 53758	68.46	1,36,920/-

ವೇಳಾಪಟ್ಟಿ: 1. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 12.02.2026** ರಂದು **ಸಂಜೆ 5.30 ಘಂಟೆ**ಯವರೆಗೆ.
2. ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್‌ನಲ್ಲಿ ನೋಡಬಹುದು.

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಆನೇಕಲ್.

ವಾಸಾಸಂಇ/ವಾ.ಪ್ರ/5386/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ

ಬೆಂಗಳೂರು ಉತ್ತರ ಉಪ ವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರಸ್ತೆ, ಮಲ್ಲೇಶ್ವರಂ 18ನೇ ಅಡ್ಡರಸ್ತೆ, ಬೆಂಗಳೂರು–560 055. Email ID - acfnorthsubdivision@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ವಿಷಯ:– ಬೆಂಗಳೂರು ಉತ್ತರ ಉಪ ವಿಭಾಗದ ಜಾರಕಬಂಡೆ ಅರಣ್ಯ ವಸತಿ ಸಂಕೀರ್ಣದ ಆವರಣದಲ್ಲಿ ಮುಂಚೂಣಿ ಸಿಬ್ಬಂದಿಗಳಿಗೆ ವಸತಿ ಗೃಹ (Group Housing) ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಬಗ್ಗೆ.

2025–26ನೇ ಸಾಲಿನಲ್ಲಿ ಕಾಂಪಾ ಯೋಜನೆಯಡಿ ಬೆಂಗಳೂರು ಉತ್ತರ ಉಪ ವಿಭಾಗದ ಜಾರಕಬಂಡೆ ಅರಣ್ಯ ವಸತಿ ಸಂಕೀರ್ಣದ ಆವರಣದಲ್ಲಿ ಮುಂಚೂಣಿ ಸಿಬ್ಬಂದಿಗಳಿಗೆ ವಸತಿ ಗೃಹ (Group Housing) ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಲೋಕೋಪಯೋಗಿ ಇಲಾಖೆಯ 1ನೇ/2ನೇ/3ನೇ ದರ್ಜೆಯ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರು ಮಾತ್ರ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ (https://kppp.karnataka.gov.in) ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.02.2026 ರ ಅಪರಾಹ್ನ 5.00 ಗಂಟೆಗೆ. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 09.02.2026 ರ ಪೂರ್ವಾಹ್ನ 11.00 ಗಂಟೆಗೆ. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ: 10.02.2026 ರ ಅಪರಾಹ್ನ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದು ವೇಳೆ ದಿನಾಂಕ: 07.02.2026 ರಂದು ನಡೆಯುವ ಟೆಂಡರ್‌ಗಳಲ್ಲಿ ಗುತ್ತಿಗೆದಾರರು ಭಾಗವಹಿಸದೇ ಇದ್ದಲ್ಲಿ ಇದನ್ನೇ ಮರು ಟೆಂಡರ್ ಪ್ರಕಟಣೆ ಎಂದು ತಿಳಿದು ದಿನಾಂಕ: 14.02.2026 ರಂದು 5.00 ಗಂಟೆಯವರೆಗೆ ಇ–ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.02.2026 ರ ಪೂರ್ವಾಹ್ನ 11.00 ಗಂಟೆಗೆ. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ದಿನಾಂಕ: 17.02.2026 ರ ಅಪರಾಹ್ನ 5.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು.

DIPR/CP/5406/ZEN/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–356/3947/2025–26 (E-168442) ದಿನಾಂಕ: 03.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಮೆ॥ ವಿಶ್ವ ಪ್ರಮೋಟರ್ಸ್‌ನ ಪರವಾಗಿ ಶ್ರೀ ವಿಶ್ವನಾಥ ರೆಡ್ಡಿ ಬಿನ್ ಚಿನ್ನಾರೆಡ್ಡಿ, ನಂ.470, ಪ್ರಶಾಂತ ನಿಲಯ, 18ನೇ ಅಡ್ಡರಸ್ತೆ, 24ನೇ ಮುಖ್ಯರಸ್ತೆ, ಹೆಚ್.ಎಸ್.ಆರ್. ಬಡಾವಣೆ ಬೆಂಗಳೂರು–560 102	ದಕ್ಷಿಣ	ಬೇಗೂರು	ಸಿಂಗಸಂದ್ರ	58/2ಎ1	2–39 (0ಎ–22 ಗುಂ ಖರಾಬು ಹೊರತುಪಡಿಸಿ)	ಕೈಗಾರಿಕೆ ವಲಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ಕೈಗಾರಿಕೆಗೆ ಬಳಸಲು ಸಾಧ್ಯವಿರುವುದಿಲ್ಲ. ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು ‘ಕೈಗಾರಿಕೆ ವಲಯ’ ದಿಂದ ‘ವಸತಿ ವಲಯ’ ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

S.E.A. EDUCATION TRUST (R)
Ekta Nagar, Ayyappa Nagar, Virgonagar P.O (K.R.Puram), Bangalore 560049. Email: seat2024@gmail.com

REQUIRE TELE-CALLERS

Persons having Degree qualification and can speak **English and Kannada fluently** and having at least **one year Experience in making calls for admission of students.** Candidates should also be able to enter data and generate reports through MS-Office, as & when required. Interested candidates can send their resume **on or before 14th February 2026** to the following Email-ID.**seaet2024@gmail.com**

WANTED: MEDICAL MBBS Doctors, MSW, Staff Nurses, B.Sc Laboratory, Technicians. Contact: 9448465835, 9901665601

WANTED FOR MEDICINE DISTRIBUTORS Delivery Boys-with-2 Wheeler & License, Salary 16000/- + ESI, PF, Petrol Allowance, Bonus etc., Contact: Zenex International 77/K, 1st floor,17th cross, 4th stage 4th block Basaveswaranagar Bangalore. Phone: 9513522201 infozenex@gmail.com

LADY TYPIST- Reqd Skills: Kannada Reading, English Typing (Junior/Senior)/ Computer Skill, Title Verification work/Conveyance, Fresher preferred Off: Sheshadripuram, Timings: 10:00AM to 6:30PM, Contact: 9141218400/ 9844034104 E-mail: dpshiva@gmail.com

Wanted

WANTED DIPLOMA in Mechanical Electrical Engineering, Job: LAB INSTRUCTOR. Peenya Industrial Area, Bangalore. Contact: 8147011054.

REQUIRED JUNIOR ADVOCATES 'DNM Associates' Required having Experience of TWO TO THREE years (2-3) Fluency in Languages, hardworking and interested in profession. Both trial and High Court work. Call 9845081411/ 9632671467 Email dnmanjunathadvocate@gmail.com

Marketing & Sales

WANTED SALES Managers, Sales Executives, Telecallers for real estate firm. Attractive salary + Incentives. 8867627879

Hospital & Medical Jobs

WANTED HR (5+Years) & MARKETING EXECUTIVES (2+Years) Hospital Experience only. MAHARAJA AGRASEN HOSPITAL Bengaluru-70 Mobile- 9513362681 (9am-to-6pm) E-mail: ceo.mahb@gmail.com

Teachers/ Professors

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27 for Nursery, Primary, High-School, Computer Teacher, Music Teacher & PE Teacher.STATE & ICSE. Qualification: B.A./B.Sc.,B.Ed/ M.A./ M.Sc.,M.Ed. NTT, CPEd. Only English Medium Candidates need to apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DHANWANTARI INSTITUTE OF TECHNOLOGY
39/1, Vinayaka Nagar, Chikkabanavara Bengaluru-560090

STAFF RECRUITMENT

TEACHING STAFF
- Principal
- Associate Professor
- Professor
- Assistant Professor

QUALIFICATION AND EXPERIENCE As per AICTE & UGC Norms
PRINCIPAL: Ph.D in Computer Science
ASSOCIATE PROFESSOR/PROFESSOR/ASST.PROFESSOR Specialisation in
- Computer Science
- Cyber Security
- Artificial Intelligence & Machine learning
- Electrical & Electronics Engineering
- Data Science
- Electronics & Communication Engineering

PHYSICS,CHEMISTRY, MATHEMATICS,ENGLISH & KANNADA

NON-TEACHING STAFF
- Receptionist
- Librarian
- Admin Staff
- Lab Assistant
- Bus Driver
- House Keeping Staff

Interested and Eligible Candidates Mail the CV to hr@majfoundation.com Contact :9606996276

Janatha Education Society®
VIVEKANANDA EDUCATIONAL INSTITUTIONS
Dr. Rajkumar Road, Next to Orion Mall, Rajajinagar, Bengaluru - 560055.
Phone: 080 - 23371952 | 6366733434
Applications are invited for the following vacancies

ENGINEERING COLLEGE
Assistant Professor : CS/AIML, Dept- M.Tech in Computer Science
Placement Officer :MBA in HR with 2 years exp.
(Qualification & Experience as per AICTE Norms)

INSTITUTE OF MANAGEMENT
Assistant Professor : MCA Dept.-MCA with Ph.D
Assistant Professor: BCA Dept.-MCA/ M.Sc (Computer Science) / M.Tech
Assistant Professor: BBA Dept. - Accounting & Finance, Statistics-MBA
(Qualification & Experience as per AICTE Norms)

B.Ed COLLEGE
Principal:B.Ed Dept.- MA,M.Ed,Ph.D (NET/ SLET) with minimum 10 years of experience.
Assistant Professor:B.Ed Dept.-MA, M.Ed (NET/ SLET) with relevant teaching exp in English subject.

COLLEGE OF LAW
Full Time Lecturer : Commerce: M.Com
Part Time Lecturers : 1.Land Law, LLB/LLM, with 10 year exp. 2.Kannada : MA in Kannada

JANATHA EDUCATION SOCIETY
Web Designer : B.Sc with additional HTML, Java script, Design tools (Coreldraw and Illustrator)

Eligible candidates are informed to submit their BIODATA along with supporting documents with 2 passport size photos through registered post or in person to the Hon.Secretary, JES within 10 days from the date of this notification or Email to jobs@vivekanandacolleges.in

Sri H. C. Balakrishna, Hon. President | Sri Appareddy Harish, Hon. Secretary

MEC PUBLIC SCHOOL CBSE
Affiliated to CBSE, New Delhi. Affiliation No.: 830341
YELAHANKA
Teachers Required for 2026-27
TGT and PRT in:
- English & Social Science BA/MA, B Ed, D Ed
- Mathematics & Science: B Sc/M Sc, B Ed, D Ed
- Yoga & Physical Education: B P Ed/ MA in Yoga
- Special Education with B Ed

Minimum 3 years of teaching experience with good communication skills.
APPLY NOW! Send your CV to: career.mecschool@gmail.com or Call 96861 90882

MODERN PUBLIC ENGLISH SCHOOL, R.T.Nagar, Bangalore-32 requires qualified TEACHERS for all SUBJECTS for PRIMARY, HIGH SCHOOL Whatsapp CV:9739981605 www.mpes-edu.com

Multiple Vacancy

6 YOUNG EXPERIENCED TELECALLERS to best CBSE School near to PEENYA DASARAHALLI. 6 Boys with 10th Standard for Office related works. Walk-in Interview: 05.02.2026.9449835744, 9535601743.

Smt. Bylamma Educational & Charitable Trust (R)
HARWARD INTERNATIONAL SCHOOL
CBSE Affiliation No. 830335
Dasanapura, Tumkur Road, Bengaluru North 562162
IMMEDIATE REQUIREMENT
MATHS and NTT TEACHERS
WALK-IN 10-30 to 2-30
ACADEMIC YEAR 2026-27
TGT, PRT - All Subjects
Vice Principal & Primary Co-ordinator
Eligible candidates mail your application with updated CV to : email: infoharwardints@gmail.com
Contact : 9880112833 / 9945230285

Gopalan Foundation Invites application for Teaching and Non-teaching Positions

- **GOPALAN INTERNATIONAL SCHOOL, WHITEFIELD**
  High school Teacher (French, Psychology). Middle School (English, Physics, Chemistry & History). Sr. Sec School (Social Science, Physics), International School - Std. 3rd & 4th (Social Science), International School - Std. 6th, 7th & 8th (Science & Geography)
- **GOPALAN P.U COLLEGE, WHITEFIELD**
  Computer Lab Instructer, Lecturer (Economics, Physics, Accountancy & Buisness Studies)
- **GOPALAN P.U COLLEGE, YELAHANKA**
  Lecturer (Chemistry, Accounts and Buisness Studies)
- **GOPALAN COLLEGE OF COMMERCE, WHITEFIELD**
  Assistant Professor (Economics, MBA & BBA, Computer Science, English, Assistant Librarian)
- **GOPALAN COLLEGE OF ENGINEERING AND MANAGEMENT, WHITEFIELD**
  Assistant Professor (CSE, ISE, AI & ML, ECE, Chemistry), Aeronautical Engineer (HOD)
- **GOPALAN SCHOOL OF ARCHITECTURE AND PLANNING, WHITEFIELD**
  Assistant Professor, Associate Professor (M.Arch)
- **NON-TEACHING - GOPALAN COLLEGE OF ENGINEERING AND MANAGEMENT, WHITEFIELD**
  Alumini Manager, Marketing Executive, Admission coordinator / Councellor, Front Desk Executive, Marketing Coordinator, Personal Assistant (CEO)

Contact : hr@gopalanfoundation.com / careers@gopalanfoundation.com

- **GOPALAN NATIONAL SCHOOL, BROOKEFIELD**
  Primary Teacher (English & EVS, Maths, Computer), Upper Primary (English, SST, Science, Maths), Middle School (TGT Physics), High School (English, Physics, Visual Arts, Maths & computers), Pre-Primary
- **GOPALAN NATIONAL SCHOOL (SOUTH), KUMBALGODU**
  High School (English, Social Science, Art), Higher primary (Science, Art)
- **GOPALAN NATIONAL SCHOOL (NORTH), YELAHANKA**
  Secondary (English, Hindi, Social Science, Computer Science, kannada, Physics & Maths), Primary and Higher primary (Art, Dance, Music)

Contact : hr@gopalancolleges.com

VACANCY
Shri Lakshmi Steel Suppliers, One of the Leading Steel companies In South India, is looking for HR Manager, Sales Managers, Accounts Manager and Warehouse Operations Manager in Bengaluru.
CONTACT: Mr. Rajganesh 948 0834 473 Email:ganesh.c@slgroup.in

BUSINESS

Business to Business

Business

BOOK KEEPING SERVICES AVAILABLE Will undertake book keeping work for small and medium businesses like: Weekly/ monthly accounts Ledger maintenance Payroll Processing Bank reconciliation Invoicing & Payment tracking Contact: 8861887799

EDUCATIONAL

Correspondence Courses

PASS DIRECT SSLC, 2nd-PUC within 4 months, eligible for NEET and CET also for Admission Contact: 9880498484/ 9900004099.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EPOXY GROUTING for bathroom & balconies. Heat reflecting coating for terraces. Contact Roof & Walls, Bangalore. 9845987989

PERSONAL

Change of Name

I, MANJULA GOPAL BAI, residing at Bengaluru-57 have changed my name as MANJULA BAI, vide affidavit dated 03/02/2026 before Notary K.S. Bammappanavar, Bengaluru

ಹೆಸರು ಬದಲಾವಣೆ
ನಾನು, ಭುವನ ಎಸ್., ಶ್ರೀ ಶಿವಪ್ರಕಾಶ್ ಬಿ. ರವರ ಪುತ್ರಿ, ನಿವಾಸಿ: ನಂ. 12, ಡೆಲ್ಲಿ ಪಬ್ಲಿಕ್ ಸ್ಕೂಲ್ ಎದುರು, ಕಂಟ್ರಿ ಕ್ಲಬ್ ಹಿಂಭಾಗ, ಸಾತನೂರ್, ಬೆಂಗಳೂರು–562149, ನಮ್ಮ ಅಪ್ರಾಪ್ತ ಮಗ ತನಯ್ ಕೆ ಒಮೇಶ್ @ ತನಯ್ ಕೆ ಓ ಎಂಬ ಹೆಸರನ್ನು ತನಯ್‌ಕೃಷ್ಣ ಬಿ ಎನ್ ಎಂಬುದಾಗಿ ಬದಲಾಯಿಸಿರುತ್ತೇವೆ ಮತ್ತು 27.01.2026 ರಂದು ಬೆಂಗಳೂರಿನ ನೋಟರಿಯಾದ ಎಂ.ಎಸ್. ಬಲ್ಲಾಳ ಇವರ ಸಮ್ಮುಖದಲ್ಲಿ ಪ್ರಾಮಾಣೀಕರಿಸಿದ್ದೇವೆ.

I,ENITH RAJ KUMAR MANNI CHANDRASHEKAR Residing at No.4235, VBHCS Layout 4th-Phase, Girinagar, Bengaluru-560085 have changed my minor Daughter's Name from SOWMYASHREE MANNI ENITHKUMAR to SOWMYA SAHASRA MANNI ENITH vide Affidavit Dtd:02.02.2026 Sworn Before Notary Deepa.M, Bengaluru

I,DIVYA BODAPATI KRISHNAPPA Residing at No.4235, VBHCS Layout 4th-Phase,Girinagar, Bengaluru-560085 have changed my Name to DIVYA ENITH vide Affidavi Dtd:02.02.2026 Sworn Before Notary Deepa.M, Bengaluru

PUBLIC NOTICE

S.E.A. EDUCATION TRUST (R)
Ekta Nagar, Ayyappa Nagar, Virgonagar P.O (K.R Puram), Bangalore 560049.

INVITATION FOR BIDS FOR RUNNING CANTEEN IN THE CAMPUS

Sealed Bids are invited from interested firms for maintaining New Canteen in the campus. The space available for measures: **5914 sqft (162 x 27)=4374 sqft** and **(70 x 22 1540 sqft)** as one piece. The canteen area has necessary facilities.Suitable furniture is also available. The firms are requested to bid indicating their interest, specifying the advance amount and rent which they will be able to pay. The water and electricity charges are to be borne by the bidder. **Total students in the Campus 6500 and Total Staff are 700.**
The bids are required to be submitted with details including experience in maintaining canteen in the educational institutions. The Bidders can inspect the facility available for running the canteen during **working days from 10 AM to 5 PM, Contact: 9449653345.**
The bids are required to be submitted **on or before 14th February 2026** to the following Address.

Administrative Officer
Admin. Block
S.E.A Group of Institutions
Ekta Nagar, Ayyappa Nagar, Virgonagar P.O, K.R.Puram, Bangalore 560049
-Management

Change of Name

ಹೆಸರು ಬದಲಾವಣೆ
ನಾನು, ಭುವನ ಎಸ್., ಶ್ರೀ ಶಿವಪ್ರಕಾಶ್ ಬಿ. ರವರ ಪುತ್ರಿ, ನಿವಾಸಿ: ನಂ. 12, ಡೆಲ್ಲಿ ಪಬ್ಲಿಕ್ ಸ್ಕೂಲ್ ಎದುರು, ಕಂಟ್ರಿ ಕ್ಲಬ್ ಹಿಂಭಾಗ, ಸಾತನೂರ್, ಬೆಂಗಳೂರು–562149, ನಮ್ಮ ಅಪ್ರಾಪ್ತ ಮಗಳ ರಿಷಿತಾ ಒಮೇಶ್ @ ರಿಷಿತಾ ಒ ಎಂಬ ಹೆಸರನ್ನು ರಿಷಿತಾ ಭುವನ ಎನ್ ಎಂಬುದಾಗಿ ಬದಲಾಯಿಸಿರುತ್ತೇವೆ ಮತ್ತು 27.01.2026 ರಂದು ಬೆಂಗಳೂರಿನ ನೋಟರಿಯಾದ ಎಂ.ಎಸ್. ಬಲ್ಲಾಳ ಇವರ ಸಮ್ಮುಖದಲ್ಲಿ ಪ್ರಾಮಾಣೀಕರಿಸಿದ್ದೇವೆ.

CHANGE OF NAME
I, **Chandana K S** W/o Muralidhar Bhat, residing at No. 16/1/2, Gupta Layout, South - End Road Circle, Basavanagudi, Bengaluru-560004, have changed my name to **K M CHANDANA BHAT** vide affidavit dated 30-01-2026 before notary Mamatha N.K., Bengaluru. Henceforth I shall be called **K M CHANDANA BHAT** only

I,ENITH RAJ KUMAR MANNI CHANDRASHEKAR Residing at No.4235, VBHCS Layout 4th-Phase, Girinagar, Bengaluru-560085 have changed my minor Daughter's Name from MITHRASHREE MANNI ENITHKUMAR to MITHRA VINDHA MANNI ENITH vide Affidavit Dtd:02.02.2026 Sworn Before Notary Deepa.M, Bengaluru

I,ENITH RAJ KUMAR MANNI CHANDRASHEKAR Residing at No.4235, VBHCS Layout 4th-Phase, Girinagar, Bengaluru-560085 have changed my minor son's Name from ROHITH KRISHNA MANNI ENITHKUMAR to ROHITH KRISHNA MANNI ENITH vide Affidavit Dtd:02.02.2026 Sworn Before Notary Deepa.M, Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9845114560 | +91 9886213331 | +91 9731810277

ಚಿಟಿಕೆ ಸುದ್ದಿ

ಇಬ್ಬರು ಕಾನ್‌ಸ್ಟೆಬಲ್‌ಗಳ ಅಮಾನತು

ಬೆಂಗಳೂರು: ಕರ್ತವ್ಯ ಲೋಪದ ಆರೋಪದ ಮೇರೆಗೆ ಕೆ.ಪಿ. ಅಗ್ರಹಾರ ಠಾಣೆಯ ಇಬ್ಬರು ಹೆಡ್ ಕಾನ್‌ಸ್ಟೆಬಲ್‌ಗಳನ್ನು ಪಶ್ಚಿಮ ವಿಭಾಗದ ಡಿಸಿಪಿ ಅಮಾನತುಗೊಳಿಸಿ ಆದೇಶಿಸಿದ್ದಾರೆ.

ಹರೀಶ್ ಕುಮಾರ್ ಹಾಗೂ ಶಿವರಾಜ್ ಮಸೂತಿ ಅಮಾನತುಗೊಂಡವರು.

ವಾರಂಟ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದ ಕಾರಣದಿಂದ ಇಬ್ಬರನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಪುನೀತ್ ಕೆರೆಹಳ್ಳಿ ಸೇರಿ ಮೂವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಹೋರಾಟಗಾರ ಬೈರಪ್ಪ ಹರೀಶ್‌ಕುಮಾರ್ ಅವರನ್ನು ನಿಂದಿಸಿ, ಹಲ್ಲೆಗೆ ಯತ್ನಿಸಿದ್ದ ಆರೋಪದ ಅಡಿ ಮೂವರ ವಿರುದ್ಧ ಎಸ್.ಜೆ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ.

ಉಡುಪಿ ಜಿಲ್ಲೆಯ ಬ್ರಹ್ಮಾವರದ ನಿವಾಸಿ, ಹೋರಾಟಗಾರ ವಸಂತ್ ಗಿಳಿಯಾರ್, ರಾಷ್ಟ್ರ ರಕ್ಷಣಾ ಪಡೆಯ ಮುಖಂಡ ಪುನೀತ್ ಕೆರೆಹಳ್ಳಿ ಹಾಗೂ ಪತ್ರಕರ್ತ 'ಕಿರಿಕ್' ಕೀರ್ತಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

48ನೇ ಎಸಿಜೆಎಂ ನ್ಯಾಯಾಲಯದ ಸೂಚನೆ ಮೇರೆಗೆ ಎಸ್.ಜೆ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೆಪ್ಟೆಂಬರ್ 9ರಂದು ಕನ್ನಡ ಸುದ್ದಿ ವಾಹಿನಿಯೊಂದರಲ್ಲಿ ನಡೆದಿದ್ದ ಚರ್ಚಾ ಕಾರ್ಯಕ್ರಮಕ್ಕೆ ನನ್ನನ್ನು ಅತಿಥಿಯಾಗಿ ಆಹ್ವಾನಿಸಲಾಗಿತ್ತು. ಅಂದು ಮಧ್ಯಾಹ್ನ 12.45ರ ಸುಮಾರಿಗೆ ಕಾರ್ಯಕ್ರಮ ಆರಂಭವಾಗಿತ್ತು. ಅದರಲ್ಲಿ ವಸಂತ್ ಗಿಳಿಯಾರ್ ಸಹ ಪಾಲ್ಗೊಂಡಿದ್ದರು. ಚರ್ಚೆಯ ವೇಳೆ ಅಭಿಪ್ರಾಯ ಭಿನ್ನತೆಯಿಂದ ವಾಗ್ವಾದ ಉಂಟಾಗಿತ್ತು. ಕಾರ್ಯಕ್ರಮ ಮುಕ್ತಾಯವಾದ ಮೇಲೆ ಎಲ್ಲವನ್ನೂ ಮರೆತು ಮನೆಯತ್ತ ಹೊರಟಿದ್ದೆ. ಸುದ್ದಿ ವಾಹಿನಿ ಕಚೇರಿ ಎದುರಿಗೆ ಪುನೀತ್ ಕೆರೆಹಳ್ಳಿ ಅವರನ್ನು ಕರೆಸಿಕೊಂಡು ಅಶ್ಲೀಲವಾಗಿ ನಿಂದಿಸಿ, ಬೆದರಿಕೆ ಒಡ್ಡಲಾಗಿತ್ತು. ಅಲ್ಲದೇ ಹಲ್ಲೆಗೆ ಯತ್ನಿಸಲಾಗಿತ್ತು' ಎಂದು ಬೈರಪ್ಪ ಹರೀಶ್ ಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಬಾಲಕನ ಮೇಲೆ ಹಲ್ಲೆ: ವರದಿಗೆ ಸೂಚನೆ

ಪೊಲೀಸರ ವಿರುದ್ಧ ಕ್ರಮಕ್ಕೆ ಮುಂದಾದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ಆಭರಣ ಕಳ್ಳತನ ಪ್ರಕರಣದ ವಿಚಾರಣೆಯ ನೆಪದಲ್ಲಿ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಾಲಕನ ಮೇಲೆ ದೌರ್ಜನ್ಯ ಎಸಗಿ, ಹಲ್ಲೆ ನಡೆಸಿದ್ದಾರೆ ಎಂಬ ಆರೋಪವಿದ್ದು, ಪ್ರಕರಣದ ಸಂಬಂಧ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

'ವಿನಾಯಕ ಲೇಔಟ್ ವ್ಯಾಪ್ತಿಯ ಶಾಂತಿಪುರದಲ್ಲಿ ಚಿನ್ನ ಕದ್ದ ಆರೋಪದ ಅಡಿ 11 ವರ್ಷದ ಬಾಲಕನಿಗೆ ಪೊಲೀಸ್ ಕಾನ್‌ಸ್ಟೆಬಲ್ ಥಳಿಸಿರುವ ಆರೋಪವಿದೆ. ಆಗ್ನೇಯ ವಿಭಾಗದ ಡಿಸಿಪಿ ಅವರು ಆ ಠಾಣೆಗೆ ಖುದ್ದು ಭೇಟಿ ನೀಡಿ, ಸಂಬಂಧಪಟ್ಟ ಇನ್‌ಸ್ಪೆಕ್ಟರ್‌ರಿಂದ ಮಾಹಿತಿ ಪಡೆದು ತಕ್ಷಣವೇ ಆಯೋಗಕ್ಕೆ ವರದಿ ಸಲ್ಲಿಸಬೇಕೆಂದು ಸೂಚಿಸಲಾಗಿದೆ' ಎಂದು ಆಯೋಗದ ಅಧ್ಯಕ್ಷ ಶಶಿಧರ್ ಎಸ್. ಕೋಸಂಬೆ ತಿಳಿಸಿದ್ದಾರೆ.

'ಮಗು ತಿಳಿದೋ–ತಿಳಿಯದೋ ತಪ್ಪು ಮಾಡಿದ್ದಲ್ಲಿ ಕಾನೂನಿನ ಅಡಿ ಕ್ರಮಕ್ಕೆ ಅವಕಾಶವಿದೆ. ಮಗುವಿನ ತ್ವರಿತ ರಕ್ಷಣೆ ಮಾಡಬೇಕಾಗಿರುವುದು ಸಂವಿಧಾನಾತ್ಮಕ ಕರ್ತವ್ಯವಾಗಿದೆ. ವಿಚಾರಣೆಯ ನೆಪದಲ್ಲಿ ಬಾಲಕನನ್ನು ಥಳಿಸಿರುವುದು ಬಾಲ ನ್ಯಾಯಾಲಯ-2006ರ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಹೇಳಿದ್ದಾರೆ.

ಏನಿದು ಪ್ರಕರಣ?: 'ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯ ವಿನಾಯಕ ಲೇಔಟ್‌ನಲ್ಲಿ ಬಾಲಾಜಿ ಎಂಬುವವರು ಡ್ರೈ ಕ್ಲೀನಿಂಗ್ ಶಾಪ್ ನಡೆಸುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಸುಮಿತ್ರಮ್ಮ ಎಂಬುವರು ಡ್ರೈ ಕ್ಲೀನಿಂಗ್ ಶಾಪ್ ಬಳಿಗೆ ಬಂದಿದ್ದರು. ಆಗ ಶಾಪ್‌ನಲ್ಲಿದ್ದ ಬಾಲಾಜಿ ಅವರ ಪುತ್ರನಿಗೆ ಸುಮಿತ್ರಮ್ಮ ₹10 ಕೊಟ್ಟಿದ್ದರು. ಪರಿಚಯಸ್ಥರು ಕೊಟ್ಟಿದ್ದರಿಂದ ಬಾಲಕ ಪಡೆದುಕೊಂಡಿದ್ದ. ಬಳಿಕ, ಸುಮಿತ್ರಮ್ಮ ಅವರು ತಮಿಳುನಾಡಿನ ಕೃಷ್ಣಗಿರಿಗೆ ಹೋಗಿದ್ದರು. ಆದರೆ, ಒಂದು ವಾರದ ಬಳಿಕ 120 ಗ್ರಾಂ ಚಿನ್ನಾಭರಣವಿದ್ದ ತನ್ನ ಬ್ಯಾಗ್ ಕಳ್ಳತನ ಆಗಿದೆ ಎಂದು ಆರೋಪಿಸಿ ಸುಮಿತ್ರಮ್ಮ ಅವರು ಬಾಲಾಜಿ ಅವರಿಗೆ ಕರೆ ಮಾಡಿದ್ದರು. ಆಗ ಬಾಲಾಜಿ ಅದು 'ನಮಗೆ ಗೊತ್ತಿಲ್ಲ' ಎಂದಿದ್ದರು. ಹೀಗಾಗಿ ಸುಮಿತ್ರಮ್ಮ ಪರಪ್ಪನ ಅಗ್ರಹಾರ ಠಾಣೆಗೆ ದೂರು ನೀಡಿದ್ದರು. ತನಿಖೆಯಲ್ಲಿ ಬಾಲಾಜಿ ಕಳ್ಳತನ ಮಾಡಿಲ್ಲ ಎಂಬುದು ಗೊತ್ತಾಗಿ ಪೊಲೀಸರು ವಾಪಸ್ ಕಳುಹಿಸಿದ್ದರು' ಎಂದು ಮೂಲಗಳು ಹೇಳಿವೆ.

ವಿದ್ಯಾರ್ಥಿ ಮೃತಪಟ್ಟಿದ್ದ ಸ್ಥಳಕ್ಕೆ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಅಧ್ಯಕ್ಷ ಶಶಿಧರ್ ಎಸ್. ಕೋಸಂಬೆ ಅವರು ಭೇಟಿ ನೀಡಿ ಪರಿಶೀಲಿಸಿದರು

ಸ್ವಯಂ ಪ್ರೇರಿತ ಪ್ರಕರಣ ದಾಖಲು

ಬೆಂಗಳೂರು: ಜಲಮಂಡಳಿಯ ಕಾವೇರಿ ಐದನೇ ಹಂತದ ಕೊಳವೆ ಮಾರ್ಗದ ಚೇಂಬರ್‌ಗೆ ಬಿದ್ದು, 9ನೇ ತರಗತಿಯ ವಿದ್ಯಾರ್ಥಿ ಪ್ರೀತಂ (14) ಮೃತಪಟ್ಟಿದ್ದ ಪ್ರಕರಣದಲ್ಲೂ ರಾಜ್ಯ ಮಕ್ಕಳ ಹಕ್ಕುಗಳ ಆಯೋಗವು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ತಾತಗುಣಿ ಎಂಬಲ್ಲಿ ನಡೆದ ಘಟನಾ ಸ್ಥಳಕ್ಕೆ ಆಯೋಗದ ಅಧ್ಯಕ್ಷ ಶಶಿಧರ್ ಎಸ್. ಕೋಸಂಬೆ ಅವರು ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ, ಕೈಗೊಂಡ ಕ್ರಮದ ವರದಿಯನ್ನು ಆಯೋಗಕ್ಕೆ ಸಲ್ಲಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ತಿಳಿಸಿದ್ದೇನೆ' ಎಂದು ಶಶಿಧರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಲವು ದಿನಗಳ ಬಳಿಕ ಸುಮಿತ್ರಮ್ಮ ಅವರು ಶಾಪ್‌ನಲ್ಲಿದ್ದ ಬಾಲಾಜಿ ಅವರ ಪುತ್ರನ ಮೇಲೆ ಮತ್ತೆ ದೂರು ನೀಡಿದ್ದರು. ಹೀಗಾಗಿ, ಬಾಲಕನನ್ನು ಠಾಣೆಗೆ ಕರೆಸಿದ್ದ ಪೊಲಿಸರು ವಿಚಾರಣೆ ಮಾಡಿದ್ದರು. ಆಗ ಹಲ್ಲೆ ನಡೆಸಿದ್ದಾರೆ ಎಂಬ ಆರೋಪವಿದೆ.

ಮಾಹಿತಿ ಸಂಗ್ರಹಿಸಿದ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಕಂಪನಿಯಾದ 'ಕಾನ್ಫಿಡೆಂಟ್ ಗ್ರೂಪ್'ನ ಮುಖ್ಯಸ್ಥ ಸಿ.ಜೆ.ರಾಯ್ ಅವರ ಆತ್ಮಹತ್ಯೆ ಪ್ರಕರಣದಲ್ಲಿ ಕಂಪನಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧಕರಿಂದ (ಸಿ.ಎ) ವಿಶೇಷ ತನಿಖಾ ತಂಡದ (ಎಸ್‌ಐಟಿ) ಪೊಲೀಸರು ಮಾಹಿತಿ ಪಡೆದುಕೊಂಡಿದ್ದಾರೆ.

ರಾಯ್

'ಕಂಪನಿಯ ವಾರ್ಷಿಕ ವಹಿವಾಟು, ಸಾಲ, ವಿದೇಶದಲ್ಲಿ ಹೂಡಿಕೆ ಸಂಬಂಧ ಲೆಕ್ಕ ಪರಿಶೋಧಕರಿಂದ ಪ್ರಾಥಮಿಕ ಮಾಹಿತಿ ಪಡೆಯಲಾಗಿದೆ. ಕರ್ನಾಟಕ, ಕೇರಳ ಹಾಗೂ ದುಬೈನಲ್ಲಿ 'ಕಾನ್ಫಿಡೆಂಟ್ ಗ್ರೂಪ್' ವಿವಿಧ ಯೋಜನೆಗಳಿಗೆ ಹೂಡಿಕೆ ಮಾಡಿರುವ ಮಾಹಿತಿ ಸಿಕ್ಕಿದೆ. ಪೂರ್ಣ ಪ್ರಮಾಣದ ವಿವರ ನೀಡಲು ಮತ್ತಷ್ಟು ಸಮಯ ಬೇಕಾಗಿದೆ ಎಂದು ಕಂಪನಿ ತಿಳಿಸಿದೆ. ರಾಯ್ ಅವರು ಸಾಲ ಪಡೆದು ಸಂಕಷ್ಟಕ್ಕೆ ಸಿಲುಕಿದ್ದರೇ? ಐ.ಟಿ ಅಧಿಕಾರಿಗಳ ಒತ್ತಡವಿತ್ತೇ ಎಂಬ ಆಯಾಮದಲ್ಲೂ ತನಿಖೆ ಚುರುಕುಗೊಳಿಸಲಾಗಿದೆ' ಎಂದು ಎಸ್‌ಐಟಿ ತಿಳಿಸಿದೆ.

'ಜಪ್ತಿ ಮಾಡಿರುವ ಡೈರಿ ಹಾಗೂ ಆ್ಯಂಡ್ರಾಯ್ಡ್, ಐ–ಫೋನ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ಪಾಸ್‌ವರ್ಡ್ ಹಾಕಿದ್ದರಿಂದ ಐ–ಫೋನ್ ತೆರೆಯಲು ಸಾಧ್ಯವಾಗಿಲ್ಲ. ಆ್ಯಂಡ್ರಾಯ್ಡ್ ಫೋನ್‌ನಲ್ಲಿ ರಾಯ್ ಅವರು ಯಾರೊಂದಿಗೂ ಹೆಚ್ಚು ಮಾತನಾಡಿಲ್ಲ. ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದ ವ್ಯವಹಾರಗಳ ಬಗ್ಗೆ ರಾಯ್ ಅವರು ಮುಖಾಮುಖಿಯಾಗಿ ಚರ್ಚಿಸುತ್ತಿದ್ದರು ಎಂಬುದು ಗೊತ್ತಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ರಾಯ್ ಅವರು ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ 'ಕಾನ್ಫಿಡೆಂಟ್ ಗ್ರೂಪ್'ನ ಕಚೇರಿಯಲ್ಲಿ ಜ.30ರಂದು ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ರನ್ ವೇಗೆ ನುಗ್ಗಿದ ನಾಯಿ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರ ಹೊಸ ರನ್ ವೇಗೆ ಸೋಮವಾರ ಬೀದಿ ನಾಯಿಯೊಂದು ಏಕಾಏಕಿ ನುಗ್ಗಿದೆ. ಇದರಿಂದ ಕೆಲ ಸಮಯ ಆತಂಕ ಉಂಟಾಯಿತು. ನಾಯಿ ಒಳಕ್ಕೆ ನುಗ್ಗಿದ ಸಂದರ್ಭದಲ್ಲಿ ರನ್‌ವೇನಲ್ಲಿ ಯಾವುದೇ ವಿಮಾನ ಇರಲಿಲ್ಲ. ತಕ್ಷಣವೇ ಕಾರ್ಯಪ್ರವೃತ್ತರಾದ ಭದ್ರತಾ ಸಿಬ್ಬಂದಿ ನಾಯಿಯನ್ನು ಸೆರೆ ಹಿಡಿದರು.

ನಿಲ್ದಾಣದ ಆವರಣ ಹಾಗೂ ರನ್‌ವೇ ಸಮೀಪ ಬೀದಿ ನಾಯಿಗಳು ಓಡಾಡುತ್ತಿರುವುದು ಈಚೆಗೆ ಸಾಮಾನ್ಯವಾಗಿದೆ.

ನಾಯಿ ಹೊತ್ತೊಯ್ದ ಚಿರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರಹಳ್ಳಿ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಬನಶಂಕರಿ ಆರನೇ ಹಂತದ ಎರಡನೇ ಬ್ಲಾಕ್‌ನಲ್ಲಿ ಚಿರತೆ ಕಾಣಿಸಿಕೊಂಡಿದ್ದು, ನಿವಾಸಿಗಳು ಆತಂಕಗೊಂಡಿದ್ದಾರೆ.

ಎರಡನೇ ಬ್ಲಾಕ್‌ನ ರಸ್ತೆಯಲ್ಲಿ ಮಂಗಳವಾರ ಬೆಳಗಿನ ಜಾವ ಚಿರತೆ ಓಡಾಡಿರುವ ದೃಶ್ಯ ಮನೆಯೊಂದರ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಚಿರತೆಯು ನಾಯಿಯನ್ನು ಹೊತ್ತೊಯ್ದ ದೃಶ್ಯ ನೋಡಿ ಸುತ್ತಮುತ್ತಲ ಬ್ಲಾಕ್‌ಗಳ ನಿವಾಸಿಗಳು ಭಯಭೀತರಾಗಿದ್ದಾರೆ.

ತುರಹಳ್ಳಿ ಅರಣ್ಯ ಪ್ರದೇಶದಿಂದಲೇ ಚಿರತೆ ಬಂದಿರುವ ಸಾಧ್ಯತೆ ಇದೆ ಎಂದು ಸ್ಥಳೀಯರು ಶಂಕೆ ವ್ಯಕ್ತಪಡಿಸಿದ್ದಾರೆ.

ಚಿರತೆ ಸೆರೆ ಹಿಡಿಯುವಂತೆ ಈ ಸಂಬಂಧ ಬನಶಂಕರಿ 6ನೇ ಹಂತ 2ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

'ಬನಶಂಕರಿ ಆರನೇ ಹಂತದ ಎರಡನೇ ಬ್ಲಾಕ್‌ನಲ್ಲಿ ಮಂಗಳವಾರ ಚಿರತೆ ಕಾಣಿಸಿಕೊಂಡಿದ್ದು, ಬೀದಿ ನಾಯಿಯನ್ನು ಹೊತ್ತೊಯ್ದಿದೆ. ಜನವರಿ 19ರಂದು ನವಿಲನ್ನು ಸಾಯಿಸಿ, ಅರಣ್ಯದೊಳಗೆ ಎಳೆದುಕೊಂಡು ಹೋಗಿರುವುದನ್ನು ಸ್ಥಳೀಯರು ನೋಡಿದ್ದಾರೆ. ಅಲ್ಲದೇ ಕರಿಯನಪಾಳ್ಯದಲ್ಲಿ ರೈತರ ಕುರಿ, ಮೇಕೆ, ಕೋಳಿಗಳನ್ನು ತಿಂದು ಸಾಯಿಸಿದೆ. ಈ ಪ್ರದೇಶದಲ್ಲಿ ಬೀದಿ ನಾಯಿಗಳು ಚಿರತೆ ದಾಳಿಗೆ ಬಲಿಯಾಗಿವೆ. ಜನರು ಜೀವ ಭಯದಲ್ಲಿ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಸ್ಥಳೀಯ ನಿವಾಸಿ ಸತೀಶ್ ಆತಂಕ ವ್ಯಕ್ತಪಡಿಸಿದರು.

'ಚಿರತೆ ಸೆರೆಗೆ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರಿಗೂ ಮನವಿ ಮಾಡಲಾಗಿದೆ. ಆದರೆ, ಯಾವುದೇ ಕ್ರಮ ಕೈಗೊಂಡಿಲ್ಲ. ಜನರು ರಸ್ತೆಯಲ್ಲಿ ಓಡಾಡಲು ಹೆದರುತ್ತಿದ್ದಾರೆ. ಕಾಡಿನಂಚಿನ ರಸ್ತೆಯಲ್ಲಿ ಓಡಾಡುವಾಗ ಅತ್ಯಂತ ಜಾಗರೂಕರಾಗಿ ಇರಬೇಕು' ಎಂದು ಸಂಘದ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

'ಅರಣ್ಯದ ಗಡಿ ಭಾಗದಲ್ಲಿ ಕನಿಷ್ಠ ಹತ್ತು ಅಡಿ ಎತ್ತರದ ಕಾಂಕ್ರೀಟ್ ಗೋಡೆ ನಿರ್ಮಿಸಿ, ಮೇಲ್ಭಾಗದಲ್ಲಿ ಕಬ್ಬಿಣದ ಬೇಲಿ ಅಳವಡಿಸಬೇಕು. ಅರಣ್ಯದ ಕಡೆ ಆಳವಾದ ಕಂದಕ ನಿರ್ಮಿಸಬೇಕು. ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಗಸ್ತು ವ್ಯವಸ್ಥೆ ಜಾರಿಗೆ ತರಬೇಕು' ಎಂದು ಕೋರಿದ್ದಾರೆ.

ನಿವೇಶನದ ಮಾಲೀಕನ ವಿರುದ್ಧ ಹುಳಿಮಾವು ಠಾಣೆಯಲ್ಲಿ ಎಫ್‌ಐಆರ್

15 ಜಿಲೆಟಿನ್ ಕಡ್ಡಿ, 30 ಡಿಟೊನೇಟರ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ಅಕ್ಷಯನಗರದಲ್ಲಿ ಜಿಲೆಟಿನ್ ಕಡ್ಡಿಗಳು ಹಾಗೂ ಡಿಟೊನೇಟರ್‌ಗಳು ಪತ್ತೆಯಾಗಿದ್ದು, ಅವುಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಚಂದ್ರು ಅವರಿಗೆ ಸೇರಿದ ನಿವೇಶನದಲ್ಲಿ 15 ಜಿಲೆಟಿನ್ ಕಡ್ಡಿಗಳು ಹಾಗೂ 30 ಡಿಟೊನೇಟರ್‌ಗಳು, ಒಂದು ಟ್ರ್ಯಾಕ್ಟರ್ ಹಾಗೂ ಜೆಸಿಬಿ ಯಂತ್ರ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

'ಸ್ಥಳಕ್ಕೆ ಬಾಂಬ್ ಪತ್ತೆ ಹಾಗೂ ನಿಷ್ಕ್ರಿಯ ದಳದ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಹುಳಿಮಾವು ಪೊಲೀಸ್ ಠಾಣೆಯಲ್ಲಿ ನಿವೇಶನದ ಮಾಲೀಕ ಚಂದ್ರು ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

'ಅಕ್ರಮವಾಗಿ ಸ್ಫೋಟಕ ವಸ್ತುಗಳನ್ನು ಸಂಗ್ರಹ ಮಾಡಿಕೊಂಡಿರುವುದು ಪತ್ತೆಯಾಗಿದೆ. ಪ್ರತಿನಿತ್ಯ ಮಧ್ಯಾಹ್ನ 10.30ರಿಂದ 2ರ ಒಳಗೆ ಕಲ್ಲುಬಂಡೆ ಒಡೆಯಲು ಈ ಸ್ಫೋಟಕಗಳನ್ನು ಬಳಕೆ ಮಾಡಲಾಗುತ್ತಿತ್ತು. ಖಚಿತ ಮಾಹಿತಿ ಆಧರಿಸಿ, ದಾಳಿ ನಡೆಸಿ ಸ್ಫೋಟಕ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

ಪೊಲೀಸರು ಸ್ಥಳಕ್ಕೆ ಭೇಟಿ ನೀಡುತ್ತಿದ್ದಂತೆಯೇ ಕಾರ್ಮಿಕರು ಪರಾರಿ ಆಗಿದ್ದಾರೆ ಎಂದು ಮೂಲಗಳು ಹೇಳಿವೆ.

ಅಕ್ರಮವಾಗಿ ಸಂಗ್ರಹಿಸಿಕೊಂಡಿದ್ದ ಜಿಲೆಟಿನ್ ಕಡ್ಡಿಗಳು, ಡಿಟೊನೇಟರ್‌ಗಳನ್ನು ಹುಳಿಮಾವು ಪೊಲೀಸ್ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ

ಯುವಕನ ಅಪಹರಿಸಿ ಸುಲಿಗೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣಕ್ಕಾಗಿ ಬಿಬಿಎಂ ಪದವಿ ವಿದ್ಯಾರ್ಥಿಯನ್ನು ಅಪಹರಿಸಿದ್ದ ನಾಲ್ವರು ಆರೋಪಿಗಳನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬನ್ನೇರುಘಟ್ಟದ ಜಯರಾಂ ಲೇಔಟ್‌ನ ನಿವಾಸಿ ನಿಹಾರ್ ರಂಜನ್, ಜೆ.ಪಿ ನಗರದ ಸಂತೋಷ್, ಮಧು ಹಾಗೂ ಕೊತ್ತನೂರು ದಿಣ್ಣೆಯ ಮಂಜುನಾಥ್ ಅಲಿಯಾಸ್ 'ಸೈಕೊ' ಮಂಜು ಬಂಧಿತರು. ಬಂಧಿತರಿಂದ ₹39 ಸಾವಿರ ನಗದು ಹಾಗೂ ಕೃತ್ಯಕ್ಕೆ ಬಳಸಿದ ಆಟೊರಿಕ್ಷಾ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳು, ಬನ್ನೇರುಘಟ್ಟದ ಸುತ್ತಮುತ್ತ ಆಟೊ, ಕ್ಯಾಬ್ ಚಾಲಕರಾಗಿ ಹಾಗೂ ಸಮೋಸ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಜ.24ರಂದು ಸಂಜೆ 6.30ರ ಸುಮಾರಿಗೆ ಬನಶಂಕರಿ ಎರಡನೇ ಹಂತದ ಬಿಡಿಎ ಕಾಂಪ್ಲೆಕ್ಸ್, ಕಬಾಬ್ ಎಕ್ಸ್‌ಪ್ರೆಸ್ ಹೋಟೆಲ್ ಎದುರು ನಿಂತಿದ್ದ ನಿತಿನ್ ಗೌಡ ಅವರನ್ನು ಆಟೊದಲ್ಲಿ ಅಪಹರಿಸಿದ್ದರು. ಬಳಿಕ ಕೊತ್ತನೂರು ದಿಣ್ಣೆಯ ಹಿಂದೂ ರುದ್ರಭೂಮಿಯ ಒಳಗೆ ಕರೆದೊಯ್ದು ಹಣ ಕೊಡುವಂತೆ ನಿತಿನ್ ಗೌಡ ಅವರ ಮೇಲೆ ಹಲ್ಲೆ ನಡೆಸಿದ್ದರು. 'ಹಣ ಇಲ್ಲ' ಎಂದಾಗ, ಮೊಬೈಲ್ ಕಸಿದುಕೊಂಡಿದ್ದರು. ನಂತರ, ಮತ್ತೆ ಹಲ್ಲೆ ನಡೆಸಿ ಫೋನ್ ಪೇ ಮೂಲಕ ₹47 ಸಾವಿರವನ್ನು ಆರೋಪಿಗಳು ತಮ್ಮ ಖಾತೆಗೆ ವರ್ಗಾಹಿಸಿಕೊಂಡಿದ್ದರು. ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಮತ್ತೆ ಅದೇ ಆಟೊದಲ್ಲಿ ವಾಪಸ್ ಕರೆತಂದು ಕೊತ್ತನೂರು ದಿಣ್ಣೆಯ ಬಳಿಗೆ ಬಿಟ್ಟು ಹೋಗಿದ್ದರು. ಬಳಿಕ, ನಿತಿನ್ ಗೌಡ ಅವರು ದೂರು ನೀಡಿದ್ದರು.

ಹಣ ಕಳೆದುಕೊಂಡ ಯುವಕ ನೀಡಿದ ದೂರು ಹಾಗೂ ಸುಳಿವು ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಯಿತು. ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಯನ್ನೂ ಪರಿಶೀಲಿಸಲಾಗಿತ್ತು. ಕೃತ್ಯಕ್ಕೆ ಬಳಸಿದ ಆಟೊವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆಟೊ ಪಲ್ಟಿ: ಚಾಲಕ ಸಾವು

ಬೆಂಗಳೂರು: ಜೀವನ್‌ಬಿಮಾ ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಟೊವೊಂದು ಪಲ್ಟಿಯಾಗಿ ಚಾಲಕ ಮೃತಪಟ್ಟಿದ್ದಾರೆ.

ಹಲಸೂರಿನ ಎಂ.ವಿ ಗಾರ್ಡನ್ 10ನೇ ಕ್ರಾಸ್ ನಿವಾಸಿ ಹರೀಶ್ (22) ಮೃತಪಟ್ಟ ಆಟೊ ರಿಕ್ಷಾ ಚಾಲಕ. ಸೋಮವಾರ ರಾತ್ರಿ 10.20ರ ಸುಮಾರಿಗೆ ಹರೀಶ್ ಅವರು ಆಟೊ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಇಂದಿರಾನಗರದ ಸಿಎಂಎಚ್ ರಸ್ತೆಯ ಮೂಲಕ ಲಕ್ಷ್ಮಿಪುರ ಸ್ಮಶಾನದ ಹತ್ತಿರದ ಆದರ್ಶ ಚಿತ್ರಮಂದಿರದ ಜಂಕ್ಷನ್ ಕಡೆಗೆ ಹೋಗುತ್ತಿದ್ದರು. ಆಗ ಆಟೊ ಪಲ್ಟಿಯಾಗಿ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು. ಅತಿವೇಗವೇ ಆಟೊ ಪಲ್ಟಿಯಾಗಲು ಕಾರಣ ಎಂದು ಸಂಚಾರ ಪೊಲೀಸರು ಹೇಳಿದರು.

ಯುವತಿ ವಿಚಾರಕ್ಕೆ ಗಲಾಟೆ: ಆಟೊ ಚಾಲಕನಿಗೆ ಇರಿತ

ಬೆಂಗಳೂರು: ಕೆ.ಆರ್. ಪುರದ ದೇವಸಂದ್ರದಲ್ಲಿ ಯುವತಿ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಆಟೊ ಚಾಲಕನಿಗೆ ಚಾಕುವಿನಿಂದ ಇರಿಯಲಾಗಿದೆ.

ಆಟೊ ಚಾಲಕ ರೋಷನ್ ಅವರ ಕುತ್ತಿಗೆಗೆ ಚಾಕುವಿನಿಂದ ಇರಿದು ಮಾಮು, ವಾಸಿಂ, ಯಾಸೀಫ್, ಖಲೀಂ ಎಂಬುವವರು ಪರಾರಿ ಆಗಿದ್ದಾರೆ. ಕೆ.ಆರ್. ಪುರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆರೋಪಿ ಮಾಮು ಹಾಗೂ ಹಲ್ಲೆಗೆ ಒಳಗಾದ ರೋಷನ್ ಅವರು ನೇಪಾಳದ ಯುವತಿಯನ್ನು ಪ್ರೀತಿಸುತ್ತಿದ್ದರು. ಇದೇ ವಿಚಾರಕ್ಕೆ ಇಬ್ಬರ ನಡುವೆ ವಾಗ್ವಾದ ನಡೆದಿತ್ತು. ಫೆ.1ರಂದು ರಾತ್ರಿ ಮಾತನಾಡಲು ದೇವಸಂದ್ರದಲ್ಲಿ ಸೇರಿದ್ದರು. ಸ್ವಲ್ಪ ಸಮಯದ ನಂತರ ಇಬ್ಬರ ನಡುವೆ ಜಗಳ ನಡೆದಿತ್ತು.

ವಾನಳ್ಳಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ನಿರಂಜನ ವಾನಳ್ಳಿ ವಿರುದ್ಧದ ಮಾನನಷ್ಟ ಆರೋಪದ ಪ್ರಕರಣವನ್ನು ತನಿಖೆಗೆ ಒಳಪಡಿಸಲು ಪೊಲೀಸರಿಗೆ ನಿರ್ದೇಶಿಸಿ ವಿಚಾರಣಾ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

'ಕೋಲಾರದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಹೊರಡಿಸಿದ್ದ ಆದೇಶ ಮತ್ತು ಗಲ್‌ಪೇಟೆ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ನಿರಂಜನ ವಾನಳ್ಳಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ.

'ಪ್ರಕರಣವನ್ನು ವಿಚಾರಣೆಗೆ ಅಂಗೀಕರಿಸುವ ಮುನ್ನ ಅರ್ಜಿದಾರರಿಗೆ ವಿವರಣೆ ನೀಡಲು ಸೂಕ್ತ ಅವಕಾಶ ಕಲ್ಪಿಸಿಲ್ಲ. ಈ ಕಾನೂನಾತ್ಮಕ ತೊಡಕಿನ ಕಾರಣದಿಂದ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿ ಪ್ರಕರಣವನ್ನು ಹಿಂದಿರುಗಿಸಲಾಗುತ್ತಿದೆ. ತೀರ್ಪಿನಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಗಮನದಲ್ಲಿ ಇರಿಸಿಕೊಂಡು ವಿಚಾರಣಾ ನ್ಯಾಯಾಲಯ ಪ್ರಕರಣವನ್ನು ಹೊಸದಾಗಿ ಪರಿಗಣಿಸಿ ವಿಚಾರಣೆ ನಡೆಸಬೇಕು' ಎಂದು ನಿರ್ದೇಶಿಸಿದೆ.

ನಿರಂಜನ ವಾನಳ್ಳಿ ಬೆಂಗಳೂರು ಉತ್ತರ ವಿವಿ ಕುಲಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ದೂರುದಾರ ಆರ್.ಮಂಜುನಾಥ್ ಪತ್ರಿಕೋದ್ಯಮ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಕೆಲವು ಆರೋಪಗಳ ಅಡಿಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಮಂಜುನಾಥ್ ಅವರನ್ನು ಕೆಲಸದಿಂದ ತೆಗೆದುಹಾಕಿತ್ತು.

ಇದನ್ನು ಪ್ರಶ್ನಿಸಿ ಮಂಜುನಾಥ್ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಮಂಜುನಾಥ್ ಅವರನ್ನು ಕೆಲಸದಿಂದ ತೆಗೆದುಹಾಕಿದ್ದ ಆದೇಶವನ್ನು ರದ್ದುಪಡಿಸಿ, ಪ್ರಕರಣವನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸಿತ್ತು.

ಏತನ್ಮಧ್ಯೆ, ಮಂಜುನಾಥ್ ಅವರು ನಿರಂಜನ ವಿರುದ್ಧ ಮಾನನಷ್ಟ ಹಾಗೂ ಪರಿಶಿಷ್ಟ ಜಾತಿ– ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಖಾಸಗಿ ದೂರು ದಾಖಲಿಸಿದ್ದರು. ಈ ದೂರಿನ ಕುರಿತು ತನಿಖೆ ನಡೆಸುವಂತೆ ವಿಶೇಷ ನ್ಯಾಯಾಲಯ ಗಲ್‌ಪೇಟೆ ಠಾಣಾ ಪೊಲೀಸರಿಗೆ 2025ರ ಜೂನ್ 4ರಂದು ಆದೇಶಿಸಿತ್ತು.

ಹೊಲೆ ಮಾದಿಗರ ಹಾಡುಗಳಿಗೆ 50 ವರ್ಷದ ಸಂಭ್ರಮ

'ಸಿದ್ಧಲಿಂಗಯ್ಯ ಸ್ಮಾರಕ, ಪ್ರತಿಷ್ಠಾನ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಕವಿ ಸಿದ್ಧಲಿಂಗಯ್ಯ ಸ್ಮಾರಕ ಹಾಗೂ ಪ್ರತಿಷ್ಠಾನ ಸ್ಥಾಪಿಸುವ ಕುರಿತು ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು' ಎಂದು ದಲಿತ ಸಮುದಾಯದ ಮುಖಂಡರು ಆಗ್ರಹಿಸಿದರು.

ಕರ್ನಾಟಕ ಅಹಿಂದ ಹೋರಾಟ ಸಮಿತಿ ಹಾಗೂ ಡಾ. ಸಿದ್ಧಲಿಂಗಯ್ಯ ಪ್ರತಿಷ್ಠಾನದ ಸಹಯೋಗದಲ್ಲಿ ಮಂಗಳವಾರ ನಡೆದ ಹೊಲೆ ಮಾದಿಗರ ಹಾಡುಗಳಿಗೆ 50 ವರ್ಷದ ಸಂಭ್ರಮ ಹಾಗೂ ಸಿದ್ಧಲಿಂಗಯ್ಯ ಅವರ 73ನೇ ವರ್ಷದ ನುಡಿನಮನ ಕಾರ್ಯಕ್ರಮದಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ವಿಮರ್ಶಕ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, 'ಸಿದ್ಧಲಿಂಗಯ್ಯ ದಲಿತ ಕವಿಯಲ್ಲ. ಅವರು ಜನಸಾಮಾನ್ಯರ ಕವಿಯಾಗಿದ್ದರು. ಅವರ ಎಲ್ಲ ಕವಿತೆಗಳ ಮೂಲ ಧಾತು ಜನರೇ ಆಗಿರುತ್ತಿದ್ದರು' ಎಂದು ಹೇಳಿದರು.

ಮುಖ್ಯಾಂಶ

- 'ಸಿದ್ಧಲಿಂಗಯ್ಯ ದಲಿತ, ಕನ್ನಡ ಹಾಗೂ ದುಡಿಯುವ ಜನರ ಕವಿ'

ಮಾಜಿ ಸಚಿವ ಎಚ್. ಆಂಜನೇಯ ಮಾತನಾಡಿ, 'ಕವಿ ಸಿದ್ಧಲಿಂಗಯ್ಯ ಅವರು ಹೊಲೆಯ ಮಾದಿಗರ ಬಗ್ಗೆ ತಮ್ಮ ಕವಿತೆಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಅವರ ಜನ್ಮದಿನವನ್ನು ಇನ್ನೂ ದೊಡ್ಡಮಟ್ಟದಲ್ಲಿ ಆಯೋಜಿಸಬೇಕು' ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, 'ರಾಜ್ಯ ಸರ್ಕಾರ ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಸಿದ್ಧಲಿಂಗಯ್ಯ ಅವರ ಸ್ಮಾರಕ ನಿರ್ಮಿಸಬೇಕು' ಎಂದರು.

ಸಾಹಿತಿ ಕಾಳೇಗೌಡ ನಾಗವಾರ, ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ಡಾ. ಸಿದ್ಧಲಿಂಗಯ್ಯ ಪ್ರತಿಷ್ಠಾನದ ಅಧ್ಯಕ್ಷೆ ರಮಾ ಕುಮಾರಿ, ಎಸ್.ಸಿ, ಎಸ್.ಟಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ್ ಉಪಸ್ಥಿತರಿದ್ದರು.

ನುಡಿ ನಮನ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ, ರಮಾ ಕುಮಾರಿ, ಕಾಳೇಗೌಡ ನಾಗವಾರ, ಎಂ. ವೆಂಕಟಸ್ವಾಮಿ, ಎಚ್. ಆಂಜನೇಯ, ಅಗ್ರಹಾರ ಕೃಷ್ಣಮೂರ್ತಿ ಅವರು ಡಾ.ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ್ ರಾಮ್ ಹಾಗೂ ಸಿದ್ಧಲಿಂಗಯ್ಯ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in
ಸಂಖ್ಯೆ: FPI-PROC0TNDR(GRDN)/1/2025-ADMN ದಿನಾಂಕ: 04-02-2026
ಇ–ಟೆಂಡರ್ ಪ್ರಕಟಣೆ
ವಿತ್ತೀಯ ಕಾರ್ಯನೀತಿ ಸಂಸ್ಥೆಯು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಸಂಬಂಧಿತ ಏಜೆನ್ಸಿಗಳಿಂದ ಕೆಳಕಂಡ ಸೇವೆಯನ್ನು ಪಡೆಯಲು ಟೆಂಡರ್ ಕರೆಯಲಾಗಿದೆ.
"To Provide Comprehensive Annual Maintenance Contract for Maintenance of Garden, Landscape and Potted Plants etc., in Fiscal Policy Institute".
Last date: **10-02-2026 till 4.30 PM.**
ಸದರಿ ಟೆಂಡರ್‌ನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ನಲ್ಲಿ ಪಡೆಯಬಹುದು.
ಸಹಿ/– ನಿರ್ದೇಶಕರ ಪರವಾಗಿ
ವಿತ್ತೀಯ ಕಾರ್ಯನೀತಿ ಸಂಸ್ಥೆ
DIPR/CP/YC/5400/2025-26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156295427 ಇಮೇಲ್ : eemidcbpura@gmail.com
ಮರು ಟೆಂಡರ್ ಅಧಿಸೂಚನೆ
ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಮರು ಟೆಂಡರ್/2025–26 ದಿನಾಂಕ : 02/02/2026
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 14/2025–26, ದಿನಾಂಕ: 14/11/2025. ರಲ್ಲಿ ಆಹ್ವಾನಿಸಲಾಗಿದ್ದ ಇಂಡೆಂಟ್ ಸಂಖ್ಯೆ : MI/2025-26/LI/WORK_INDENT8487/CALL-3 ಟೆಂಡರ್‌ನಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 11/02/2026 ಸಂಜೆ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 13/02/2026 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದಲ್ಲಿ). ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

Skill India
कौशल विकास और उद्यमशीलता मंत्रालय
MINISTRY OF SKILL DEVELOPMENT & ENTREPRENEURSHIP GOVERNMENT OF INDIA
PMKVY
ವಿಕಸಿತ ಭಾರತ ಪ್ರಯಾಣದಲ್ಲಿ ಪಾಲ್ಗೊಳ್ಳಲು ಕೈಗಾರಿಕೆ / ಕೈಗಾರಿಕಾ ಸಹಭಾಗಿಗಳು / ಎಸ್‌ಎಂಇ'ಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ
ಸೆಮಿಕಂಡಕ್ಟರ್, ಎಐ, ರಿನ್ಯೂಯೇಬಲ್, ಹೆಲ್ತ್‌ಕೇರ್ ಜೆಮ್ಸ್ & ಜ್ಯುವೆಲ್ಲರಿ, ಟೂರಿಸಂ ಮತ್ತು ಇನ್ನೂ ಅನೇಕ ಕ್ಷೇತ್ರಗಳು ಸೇರಿದಂತೆ, 16 ಗರಿಷ್ಠ ಬೇಡಿಕೆಯುಳ್ಳ ಕ್ಷೇತ್ರಗಳಾದ್ಯಂತ ಕೌಶಲ್ಯ ಪ್ರಶಿಕ್ಷಣ ಒದಗಿಸುವುದಕ್ಕಾಗಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಕೈಗಾರಿಕೆ/ಕೈಗಾರಿಕಾ ಸಹಭಾಗಿಗಳು/ಎಸ್‌ಎಂಇ'ಗಳು ಕೆಳಕಂಡ ಸಂಬಂಧಿತ ಅನುಭವ ಹೊಂದಿರತಕ್ಕದ್ದು:
- ಭವಿಷ್ಯ–ಸನ್ನದ್ಧ ಮತ್ತು ಮುಂಬರಲಿರುವ ಕ್ಷೇತ್ರಗಳಲ್ಲಿ ವೈಶಿಷ್ಟ್ಯಮಯ ಪ್ರಶಿಕ್ಷಣ ನೀಡುವುದು
- ಸಶಕ್ತ ಉದ್ಯೋಗ ಪಾಲುದಾರಿಕೆ ಮತ್ತು ಸುಧಾರಿತ ಪರಿಣಾಮಕಾರಿ ಪ್ಲೇಸ್‌ಮೆಂಟ್
- ದೇಶದ ದೂರ ದೂರದ ಪ್ರದೇಶಗಳವರೆಗೆ, ವಿಶೇಷವಾಗಿ ಪ್ರಾಥಮಿಕ ಕ್ಷೇತ್ರಗಳಲ್ಲಿ ಸಂಪರ್ಕ
- ವಿವಿಧ ಸಂಸ್ಥೆಗಳ ಸಹಭಾಗಿತ್ವದ ಜೊತೆಗೆ, ಉತ್ತಮ ಗುಣಮಟ್ಟದ ಪ್ರಶಿಕ್ಷಣ ನೀಡುವುದು

ಆಸಕ್ತಿಯುಳ್ಳ ಕೈಗಾರಿಕೆ / ಕೈಗಾರಿಕೆ ಸಹಭಾಗಿಗಳು / ಎಸ್‌ಎಂಇ'ಗಳು ಕೆಳಗಿನ ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದು:
www.skillindiadigital.gov.in
ಪ್ರಸ್ತಾವನೆ ಸಲ್ಲಿಕೆಗೆ ಕೊನೆಯ ದಿನಾಂಕ: ಫೆಬ್ರವರಿ 13, 2026
CBC 63101/11/0011/2526

ವಿರಳ ಭೂಭಾಗಗಳ 'ಸೆರೆ'ಗೆ ನೆರವಾಗುವ 'ಕೃತಕಬುದ್ಧಿ'

• ಸುಧೀರ್ ಎಚ್.ಎಸ್.

ಭೂಮಿಯ ಮೇಲ್ಮೈಯನ್ನು ಆಕಾಶದಿಂದ ವೀಕ್ಷಿಸುವ ಉಪಗ್ರಹಗಳು ನಮಗೆ ನಿರಂತರವಾಗಿ ದತ್ತಾಂಶಗಳನ್ನು ನೀಡುತ್ತಲೇ ಇರುತ್ತವೆ. ಆದರೆ, ಈ ಉಪಗ್ರಹಗಳು ಕಳುಹಿಸುವ ಚಿತ್ರಗಳನ್ನು ವಿಶ್ಲೇಷಿಸುವಾಗ ಒಂದು ದೊಡ್ಡ ಸವಾಲು ಎದುರಾಗುತ್ತದೆ. ಉಪಗ್ರಹದ ಕಣ್ಣಿಗೆ ವಿಶಾಲವಾಗಿ ಹರಡಿರುವ ಕೃಷಿಭೂಮಿಗಳು ಸುಲಭವಾಗಿ ಕಾಣಿಸುತ್ತವೆಯೇ ಹೊರತು, ಸಣ್ಣ ನದಿಗಳು, ದಟ್ಟ ಅರಣ್ಯದ ನಡುವಿನ ಅಪರೂಪದ ಮರಗಳು ಅಥವಾ ಸಣ್ಣ ಜನವಸತಿ ಪ್ರದೇಶಗಳು ಹೆಚ್ಚಾಗಿ ಪತ್ತೆಯಾಗುವುದೇ ಇಲ್ಲ.

ಈ ಸಮಸ್ಯೆಯನ್ನು ಹೋಗಲಾಡಿಸಲು ಇದೀಗ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ, ISRO) ಹೈದರಾಬಾದ್‌ನಲ್ಲಿರುವ ರಾಷ್ಟ್ರೀಯ ದೂರಸಂವೇದಿ ಕೇಂದ್ರ ಮತ್ತು ದೆಹಲಿಯ ಜಿಜಿಎಸ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಸಂಶೋಧಕರು ಕೈಜೋಡಿಸಿ 'MO-DGAN' ಎಂಬ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ (AI) ಮಾದರಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಸಂಶೋಧನೆಯು ಪರಿಸರ ಸಂರಕ್ಷಣೆ ಮತ್ತು ನಗರಾಭಿವೃದ್ಧಿ ಯೋಜನೆಗಳಲ್ಲಿ ಹೊಸ ಕ್ರಾಂತಿಯನ್ನೇ ಸೃಷ್ಟಿಸುವ ಮುನ್ಸೂಚನೆಯನ್ನು ನೀಡಿದೆ.

ಉಪಗ್ರಹ ನಕ್ಷೆಗಳಲ್ಲಿ ಎದುರಾಗುವ ಈ ಸಮಸ್ಯೆಯನ್ನು ವಿಜ್ಞಾನಿಗಳು 'ಕ್ಲಾಸ್ ಇಂಬ್ಯಾಲೆನ್ಸ್' ಅಥವಾ 'ವರ್ಗ ಅಸಮತೋಲನ' ಎಂದು ಕರೆಯುತ್ತಾರೆ. ಉದಾಹರಣೆಗೆ, ಯುರೋಪಿನ ಸ್ಯಾಟಲೈಟ್ ದತ್ತಾಂಶಗಳನ್ನು ಗಮನಿಸಿದರೆ ಅಲ್ಲಿ ಕೃಷಿಭೂಮಿಯ ಚಿತ್ರಗಳೇ ಹೆಚ್ಚಾಗಿರುತ್ತವೆ. ಕೃತಕ ಬುದ್ಧಿಮತ್ತೆಗೆ ತರಬೇತಿ ನೀಡುವಾಗ ಹೆಚ್ಚಿನ ಸಂಖ್ಯೆಯಲ್ಲಿರುವ ಇಂತಹ ಕೃಷಿಭೂಮಿಯ ಚಿತ್ರಗಳನ್ನೇ ಬಳಸುವುದರಿಂದ, ಆ ತಂತ್ರಜ್ಞಾನವು ಕೇವಲ ಕೃಷಿ ಭೂಮಿಯನ್ನು ಗುರುತಿಸುವುದರಲ್ಲಿ ಮಾತ್ರ ನಿಪುಣವಾಗುತ್ತದೆ. ಇದು ಅಪರೂಪದ ಭೂಭಾಗಗಳನ್ನು ಕೇವಲ ಕೃಷಿಭೂಮಿ ಎಂದು ತಪ್ಪಾಗಿ ಗುರುತಿಸಬಹುದು ಅಥವಾ ಸಂಪೂರ್ಣವಾಗಿ ನಿರ್ಲಕ್ಷಿಸಬಹುದು.

ನಮ್ಮ ಕರ್ನಾಟಕದ ಸಂದರ್ಭದಲ್ಲಿ ನೋಡುವುದಾದರೆ, ಪಶ್ಚಿಮ ಘಟ್ಟಗಳ ದಟ್ಟ ಅರಣ್ಯದ ನಡುವೆ ಇರುವ ಸಣ್ಣ ತೊರೆಗಳು ಅಥವಾ ಅಭಿವೃದ್ಧಿ ಹೊಂದುತ್ತಿರುವ ಬೆಂಗಳೂರಿನ ಹೊರವಲಯದ ಸಣ್ಣ ಜನವಸತಿ ಪ್ರದೇಶಗಳನ್ನು ನಿಖರವಾಗಿ ಗುರುತಿಸುವುದು ಇಂದಿನ ಸವಾಲಾಗಿದೆ. ಇಂತಹ ಸಂದರ್ಭಗಳಲ್ಲಿ ಈ ಹೊಸ ಎ.ಐ. ತಂತ್ರಜ್ಞಾನವು ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು.

ಈ ಸಂಶೋಧಕರು ಅಭಿವೃದ್ಧಿಪಡಿಸಿರುವ MO-DGAN ಮಾದರಿಯು 'ಜನರೇಟಿವ್ ಅಡ್ವರ್ಸೇರಿಯಲ್ ನೆಟ್‌ವರ್ಕ್ಸ್' (GANs) ಎಂಬ ತಂತ್ರಜ್ಞಾನದ ಮೇಲೆ ಆಧಾರಿತವಾಗಿದೆ. ಇದನ್ನು ಸರಳವಾಗಿ ಹೇಳುವುದಾದರೆ, ಇದು ಒಬ್ಬ ಕಳ್ಳ ಮತ್ತು ಒಬ್ಬ ಪೊಲೀಸನ ನಡುವಿನ ಬುದ್ಧಿವಂತಿಕೆಯ ಆಟದಂತಿದೆ. ಇಲ್ಲಿ ಜನರೇಟರ್ ಎಂಬ ಸಿಸ್ಟಮ್ ಒಬ್ಬ ನಕಲಿ ಚಿತ್ರಗಳನ್ನು ತಯಾರಿಸುವ ಕಲಾವಿದನಂತೆ ಕೆಲಸ ಮಾಡುತ್ತದೆ. ಅದು ನಿಜವಾದ ಉಪಗ್ರಹ ಚಿತ್ರಗಳಂತೆಯೇ ಕಾಣುವ ಕೃತಕ ಚಿತ್ರಗಳನ್ನು ಸೃಷ್ಟಿಸುತ್ತದೆ. ಮತ್ತೊಂದೆಡೆ, ಡಿಸ್ಕ್ರಿಮಿನೇಟರ್ ಎಂಬ ಸಿಸ್ಟಮ್ ಒಬ್ಬ ಪತ್ತೇದಾರನಂತೆ ಕೆಲಸ ಮಾಡಿ, ಆ ಚಿತ್ರವು ಅಸಲಿಯೇ ಅಥವಾ ನಕಲಿಯೇ ಎಂದು ಪತ್ತೆಹಚ್ಚುತ್ತದೆ. ಈ ಇಬ್ಬರ ನಡುವಿನ ಸ್ಪರ್ಧೆಯು ಸೆಕೆಂಡಿಗೆ ಲಕ್ಷಾಂತರ ಬಾರಿ ನಡೆಯುತ್ತದೆ. ಅಂತಿಮವಾಗಿ, ಜನರೇಟರ್ ಎಷ್ಟೊಂದು ಪರಿಣತಿಯನ್ನು ಪಡೆಯುತ್ತದೆ ಎಂದರೆ ಅದು ಸೃಷ್ಟಿಸುವ ಚಿತ್ರಗಳು ಅಸಲಿ ಉಪಗ್ರಹ ಚಿತ್ರಗಳಿಗಿಂತ ಕಿಂಚಿತ್ತೂ ಭಿನ್ನವಾಗಿರುವುದಿಲ್ಲ. ಹೀಗೆ ಸೃಷ್ಟಿಯಾದ ಕೃತಕ ಚಿತ್ರಗಳನ್ನು ಬಳಸಿ ಎ.ಐ. ಮಾದರಿಗೆ ತರಬೇತಿ ನೀಡಿದಾಗ, ಅದು ಅಪರೂಪದ ಭೂಭಾಗಗಳನ್ನೂ ನಿಖರವಾಗಿ ಗುರುತಿಸಲು ಕಲಿಯುತ್ತದೆ.

ಸಂಶೋಧನೆಯ ಮುಂದಿನ ಹಂತವಾಗಿ, ವಿಜ್ಞಾನಿಗಳು ಈ ವ್ಯವಸ್ಥೆಗೆ 'ವೇರಿಯೇಶನಲ್ ಆಟೋಎನ್‌ಕೋಡರ್' (VAE) ಎಂಬ ಮತ್ತೊಂದು ತಾಂತ್ರಿಕತೆಯನ್ನು ಸೇರಿಸಿದ್ದಾರೆ. ಹಳೆಯ ಮಾದರಿಗಳಲ್ಲಿ ಎ.ಐ. ಒಂದೇ ರೀತಿಯ ಚಿತ್ರಗಳನ್ನು ಪುನರಾವರ್ತಿತವಾಗಿ ಸೃಷ್ಟಿಸುವ 'ಮೋಡ್ ಕೊಲ್ಯಾಪ್ಸ್' ಎಂಬ ಸಮಸ್ಯೆಯನ್ನು ಎದುರಿಸುತ್ತಿತ್ತು. ಆದರೆ VAE ತಂತ್ರಜ್ಞಾನವು ಎ.ಐ.ಗೆ ಹೆಚ್ಚಿನ ವೈವಿಧ್ಯಮಯ ಚಿತ್ರಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ. ಇದರ ಜೊತೆಗೆ ಈ ಹೊಸ ಮಾದರಿಯು ಏಕಕಾಲದಲ್ಲಿ ಹಲವಾರು ರೀತಿಯ ಅಪರೂಪದ ಭೂಭಾಗಗಳನ್ನು (ಉದಾಹರಣೆಗೆ ನದಿಗಳು ಮತ್ತು ದಟ್ಟ ಕಾಡುಗಳು) ಗುರುತಿಸುವ ಸಾಮರ್ಥ್ಯವನ್ನು ಹೊಂದಿದೆ, ಇದು ಹಳೆಯ ಮಾದರಿಗಳಲ್ಲಿ ಸಾಧ್ಯವಿರಲಿಲ್ಲ. ಶ್ವೇತಾ ಶರ್ಮಾ ಮತ್ತು ಅಂಜನಾ ಗೋಸ್ಸೈನ್ ಅವರ ನೇತೃತ್ವದ ಈ ಸಂಶೋಧನಾ ತಂಡವು ವಿವಿಧ ಮಾದರಿಗಳನ್ನು ಪರೀಕ್ಷಿಸಿ, 'ResNet101' ಎಂಬ ಸಿಸ್ಟಮ್ ಈ ಕೆಲಸಕ್ಕೆ ಅತ್ಯಂತ ಸೂಕ್ತವಾದುದು ಎಂದು ಕಂಡುಕೊಂಡಿದೆ.

ಈ ತಂತ್ರಜ್ಞಾನದ ಅನ್ವಯಿಕೆಗಳು ಆಧುನಿಕ ಸಮಾಜಕ್ಕೆ ಅತ್ಯಂತ ಅಗತ್ಯವಾಗಿವೆ. ನಗರಯೋಜಕರು ಬೆಂಗಳೂರಿನಂತಹ ವೇಗವಾಗಿ ಬೆಳೆಯುತ್ತಿರುವ ನಗರಗಳ ವಿಸ್ತರಣೆಯನ್ನು ವೈಜ್ಞಾನಿಕವಾಗಿ ನಿರ್ವಹಿಸಲು ಈ ನಿಖರವಾದ ನಕ್ಷೆಗಳನ್ನು ಬಳಸಬಹುದು. ಪರಿಸರವಾದಿಗಳು ಅಳಿವಿನ ಅಂಚಿನಲ್ಲಿರುವ ಜೌಗು ಪ್ರದೇಶಗಳು ಅಥವಾ ಕಾಡುಗಳನ್ನು ಪತ್ತೆಹಚ್ಚಲು ಮತ್ತು ಅವುಗಳನ್ನು ರಕ್ಷಿಸಲು ಇದು ಸಹಕಾರಿ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಈ ತಂತ್ರಜ್ಞಾನವು ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ, ಭೀಕರ ಪ್ರವಾಹ ಬಂದಾಗ, ಉಪಗ್ರಹ ಚಿತ್ರಗಳಲ್ಲಿ ಕಾಣಿಸುವ ನೀರು ಹಳೆಯ ನದಿಯದ್ದೇ ಅಥವಾ ಹೊಸದಾಗಿ ಪ್ರವಾಹಕ್ಕೆ ತುತ್ತಾದ ಜನವಸತಿ ಪ್ರದೇಶದ್ದೇ ಎಂಬುದನ್ನು ನಿಖರವಾಗಿ ತಿಳಿಯುವುದು ಬಹಳ ಮುಖ್ಯ. ಈ ಎ.ಐ. ಮಾದರಿಯು ಅಂತಹ ವ್ಯತ್ಯಾಸಗಳನ್ನು ಕ್ಷಣಾಂತರದಲ್ಲಿ ಗುರುತಿಸಿ ರಕ್ಷಣಾ ಕಾರ್ಯಗಳಿಗೆ ನೆರವಾಗಬಲ್ಲದು.

ಆದಾಗ್ಯೂ, ಈ ತಂತ್ರಜ್ಞಾನವು ಇನ್ನೂ ಕೆಲವು ಸವಾಲುಗಳನ್ನು ಎದುರಿಸುತ್ತಿದೆ. ಪ್ರಸ್ತುತ ಇದನ್ನು ಮಾನವನ ಕಣ್ಣಿಗೆ ಕಾಣಿಸುವ ಸಾಮಾನ್ಯ ಬಣ್ಣಗಳ (RGB) ಚಿತ್ರಗಳ ಮೇಲೆ ಪರೀಕ್ಷಿಸಲಾಗಿದೆ. ಆದರೆ ಉಪಗ್ರಹಗಳು ಮಣ್ಣಿನ ಗುಣಲಕ್ಷಣ ಅಥವಾ ಎಲೆಯ ಆರೋಗ್ಯವನ್ನು ತಿಳಿಸುವ ಅತಿನೇರಳೆ ಅಥವಾ ಅತಿಗೆಂಪು ಕಿರಣಗಳಂತಹ ಅದೃಶ್ಯ ಬೆಳಕಿನ ದತ್ತಾಂಶಗಳನ್ನೂ ಸಂಗ್ರಹಿಸುತ್ತವೆ. ಇಂತಹ ಕ್ಲಿಷ್ಟಕರ ಮತ್ತು ಬೃಹತ್ ದತ್ತಾಂಶಗಳಿಗೆ ಈ ಎ.ಐ. ಮಾದರಿಯನ್ನು ಅಳವಡಿಸಲು ಇನ್ನು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಅಲ್ಲದೆ, ಈ ವ್ಯವಸ್ಥೆಯು ತನ್ನ ಕಲ್ಪನಾ ಪ್ರಕ್ರಿಯೆಯನ್ನು ಆರಂಭಿಸಲು ಕನಿಷ್ಠ ಕೆಲವು ನೈಜ ಚಿತ್ರಗಳನ್ನಾದರೂ ಅವಲಂಬಿಸಿರುತ್ತದೆ. ಏನೇ ಆದರೂ, ವಿಜ್ಞಾನಿಗಳ ಈ ಸಾಧನೆಯು ನಮ್ಮ ಭೂಮಿಯನ್ನು ಮತ್ತಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಮತ್ತು ಸಂರಕ್ಷಿಸಲು ನಮಗೊಂದು ಡಿಜಿಟಲ್ ಕನ್ನಡಿಗೆ ನಾಂದಿ ಹಾಡಿದೆ.



ಬಾವಲಿಗಳ ಜಾಡಿನಲ್ಲಿ...

• ಅಮೃತೇಶ್ವರಿ ಬಿ.

ಬಾವಲಿಗಳು ಕಗ್ಗತ್ತಲಲ್ಲಿ ಅರಣ್ಯದೊಳಗೆ ಸಂಚಾರ ಮಾಡುವ ಜಾಣ್ಮೆಯುಳ್ಳ ಪ್ರಾಣಿಗಳು. ನಮ್ಮ ಹಾಗೆ ಅವು ಜಿಪಿಎಸ್ ತಂತ್ರಜ್ಞಾನವನ್ನು ನಂಬಿಕೊಂಡು ತಮ್ಮ ಪ್ರಯಾಣ ಬೆಳೆಸುವುದಿಲ್ಲವೆನ್ನಿ. ಬಾವಲಿಗಳು ಮನುಷ್ಯರ ಕಿವಿಗೆ ಕೇಳಿಸಿಕೊಳ್ಳಲಾಗದ (20-200KHZ), ಅತ್ಯಂತ ಹೆಚ್ಚಿನ ಆವರ್ತನವುಳ್ಳ ಶಬ್ದವನ್ನು ಹೊರಡಿಸುತ್ತವೆ. ಆ ಶಬ್ದವು ಸುತ್ತಲಿನ ವಸ್ತುಗಳು ಅಥವಾ ಪ್ರಾಣಿಗಳನ್ನು ಮುಟ್ಟಿ ಪ್ರತಿಧ್ವನಿಸುತ್ತವೆ. ಬಾವಲಿಗಳು ಅದನ್ನು ಗ್ರಹಿಸಿ ತಮ್ಮ ಬೇಟೆ ಅಥವಾ ಅಪಾಯದ ದೂರ, ಅವುಗಳ ಗಾತ್ರ ಹಾಗೂ ಆಕಾರ ಹಾಗೂ ಅವುಗಳ ಚಲನೆ ಮುಂತಾದವನ್ನು ಲೆಕ್ಕ ಹಾಕಬಲ್ಲವು! ತಮಗೆ ಬರಬಹುದಾದ ಅಪಾಯದಿಂದಲೂ ರಕ್ಷಿಸಿಕೊಳ್ಳಬಲ್ಲವು! ಇದನ್ನೇ ಎಕೋಲೊಕೇಶನ್ ಎನ್ನುತ್ತೇವೆ. ಈ ವಿಶೇಷ ಬುದ್ಧಿಶಕ್ತಿಯೇ ಬಾವಲಿಗಳ ಸೂಪರ್ ಪವರ್! ಹಾಗೆಯೇ ದಟ್ಟ ಅರಣ್ಯಗಳು, ಗುಹೆ ಅಥವಾ ಪ್ರಾಣಿ ಸಮೂಹಗಳಿರುವೆಡೆ ಇವು ತಮ್ಮ ಎಕೋಲೊಕೇಶನ್ ಅನ್ನು ಬೇಕಾದಂತೆ ಹೊಂದಿಸಿಕೊಳ್ಳುತ್ತವೆ. ಉದಾಹರಣೆಗೆ, ದಟ್ಟ ಪ್ರದೇಶಗಳಲ್ಲಿ ವೇಗವಾಗಿ ಕೂಗುವುದು ಮತ್ತು ಶಬ್ದದ ತೀವ್ರತೆ ಕಡಿಮೆ ಮಾಡುವುದು ಮತ್ತು ನಿರ್ದಿಷ್ಟ ವಸ್ತುವಿನ ಮೇಲೆ ಮಾತ್ರ ಗಮನ ಹರಿಸಲು ನಿರ್ದಿಷ್ಟ ದಿಕ್ಕಿನಲ್ಲಿ ಮಾತ್ರವೇ ಶಬ್ದ ಹೊರಡಿಸುವುದು. ಆಗ ಅವುಗಳ ವಿಶ್ಲೇಷಣೆಗೆ ಬರುವ ಅಡ್ಡಿಗಳನ್ನು ನಿವಾರಿಸಿಕೊಂಡು, ತಮ್ಮ ಪ್ರಯಾಣವನ್ನು ಸುರಕ್ಷಿತವಾಗಿ ಬೆಳೆಸಿಕೊಳ್ಳಬಹುದು. ಇವು ಬಹಳ ದೂರದವರೆಗೂ ದೃಷ್ಟಿ ಹಾಯಿಸಬಲ್ಲವು. ಮಂದ ಬೆಳಕಿನಲ್ಲಿಯೂ ತಮ್ಮ ಎಕೋಲೊಕೇಶನ್ ಹಾಗೂ ದೂರದೃಷ್ಟಿ ಶಕ್ತಿಯನ್ನು ಬಳಸಿಕೊಂಡು ಅತ್ಯಂತ ನಿಖರವಾಗಿ ತಮ್ಮ ಪ್ರಯಾಣವನ್ನು ಯೋಜಿಸಬಲ್ಲವು! ನಾವೋ, ಗೂಗಲ್ ಮ್ಯಾಪ್ ಕೆಲಸ ಮಾಡದಿದ್ದರೆ ಕಳೆದು ಹೋಗುವುದೇ ಸರಿ.

ಬಾವಲಿಗಳು ದಟ್ಟಾರಣ್ಯಗಳಲ್ಲಿ ಕತ್ತಲೆಯಲ್ಲಿ ಹೇಗೆ ಸಂಚರಿಸಬಲ್ಲವು ಎನ್ನುವ ದೀರ್ಘಕಾಲದ ರಹಸ್ಯವನ್ನು ಇಂಗ್ಲೆಂಡಿನ ಬ್ರಿಸ್ಟೊಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಪತ್ತೆ ಹಚ್ಚಲು ಪ್ರಯತ್ನಿಸಿದ್ದಾರೆ. ಬಾವಲಿಗಳು ರಾತ್ರಿವೇಳೆ ಬೇಟೆಗಾಗಿ ಬಯೋಸೆನ್ಸಾರು ಅಥವಾ ಎಕೋಲೊಕೇಷನ್ ತಂತ್ರವನ್ನು ಬಳಸುತ್ತವೆ ಎನ್ನುವುದು ನಮಗೆ ತಿಳಿದಿದ್ದರೂ, ಸಂಚಾರ ವೇಳೆಯಲ್ಲಿ ಒಮ್ಮೆಲೆ ಕೇಳಿಸುವ ಸಾವಿರಾರು ಧ್ವನಿ-ಪ್ರತಿಧ್ವನಿಗಳ ನಡುವೆ ತಮಗೆ ಬೇಕಾದ ಮಾಹಿತಿಯನ್ನು ಹೇಗೆ ಹೆಕ್ಕುತ್ತವೆ, ಆ ಮಾಹಿತಿಯನ್ನು ಹೇಗೆ ವಿಶ್ಲೇಷಿಸುತ್ತವೆ ಎನ್ನುವುದು ಮಾತ್ರ ಕಗ್ಗಂಟೇ ಎನ್ನಬಹುದು.

ಹಾಗಾಗಿ, ಬಾವಲಿಗಳ ಈ ಅಸಾಧಾರಣ ಶಕ್ತಿಯ ಹಿಂದಿರುವ ವಿಜ್ಞಾನವನ್ನು ತಿಳಿಯಲು, ಬ್ರಿಸ್ಟೊಲ್ ವಿಶ್ವವಿದ್ಯಾಲಯದ ಅಂತರಿಕ್ಷ ವಿಜ್ಞಾನಿಗಳು ಹಾಗೂ ಜೀವವಿಜ್ಞಾನಿಗಳು ಒಗ್ಗೂಡಿ ಹೊಸದೊಂದು ಸಾಧನವನ್ನು ರೂಪಿಸಿದ್ದಾರೆ. ಅದುವೇ 'ಬ್ಯಾಟ್ ಆಕ್ಸಲೆರೇಟರ್ ಮಷೀನ್'. ಈ ಸುದ್ದಿಯು ಮೊನ್ನೆ ಪ್ರೊಸೀಡಿಂಗ್ಸ್ ಆಫ್ ದಿ ರಾಯಲ್ ಸೊಸೈಟಿ ಬಿ ಪತ್ರಿಕೆಯಲ್ಲಿ ವರದಿಯಾಗಿತ್ತು. ಬಾವಲಿಗಳು 'ಅಕಾಸ್ಟಿಕ್ ಫ್ಲೋ ವೆಲಾಸಿಟಿ'ಯನ್ನು ಅನುಸರಿಸಿಕೊಂಡು ಸಂಕೀರ್ಣ ಪರಿಸರಗಳಲ್ಲಿ ತಮ್ಮ ಮಾರ್ಗಗಳನ್ನು ಕಂಡುಕೊಳ್ಳುತ್ತವೆ. ಚಲಿಸುತ್ತಿರುವಾಗ ಅವುಗಳು ಗ್ರಹಿಸುವ ಶಬ್ದಗಳ ಮಾಹಿತಿಯು ಬದಲಾಗುವ ದರವೇ ಅಕಾಸ್ಟಿಕ್ ಫ್ಲೋ ವೆಲಾಸಿಟಿ. ಈ ಸಿದ್ಧಾಂತವನ್ನು ವಿಜ್ಞಾನಿಗಳು ವಿನ್ಯಾಸ ಮಾಡಿರುವ ಯಂತ್ರದ ಮೇಲೆ ಪ್ರಯೋಗಿಸಿ ಪರೀಕ್ಷಿಸಿದ್ದಾರೆ. ಬಾವಲಿಗಳಿಗೆ ಅಸಾಮಾನ್ಯ ಸಂವೇದನಾ ಸಾಮರ್ಥ್ಯವಿದೆ. ಅದರಿಂದ ಅವು ಹೊರಡಿಸುವ ಶಬ್ದವು ಹತ್ತಿರದ ವಸ್ತುಗಳನ್ನು ಮುಟ್ಟಿ ಮರಳಿ ಬರುವ ತಮ್ಮದೇ ಪ್ರತಿಧ್ವನಿ ಹಾಗೂ ಇತರೆ ಪ್ರಾಣಿಗಳದ್ದನ್ನು ಸುಲಭವಾಗಿ ತಿಳಿದುಕೊಳ್ಳಬಲ್ಲವು. ಆದರೆ, ದಂಡಾರಣ್ಯಗಳಂತಹ ಆವಾಸಸ್ಥಾನಗಳಲ್ಲಿ ಅಡಚಣೆಗಳೂ ಹೆಚ್ಚು. ಇಲ್ಲಿ ಅವು ಹೇಗೆ ತಮ್ಮದೇ ಬೇಟೆಯನ್ನು ನಿಖರವಾಗಿ ಗುರುತಿಸಬಲ್ಲವು ಎನ್ನುವುದನ್ನು ನಾವಿನ್ನೂ ಅರ್ಥ ಮಾಡಿಕೊಳ್ಳಬೇಕಿದೆ ಎನ್ನುತ್ತಾರೆ, ಅಂತರಿಕ್ಷ ವಿಜ್ಞಾನಿ ಪ್ರೊ ಅಥಿಯಾ ಹರೊನ್.

ಬ್ರಿಸ್ಟೊಲ್ ವಿಶ್ವವಿದ್ಯಾಲಯದ ಜೀವವಿಜ್ಞಾನಿ ಮಾರ್ಕ್ ಹೋಲ್ಡೆರೀಡ್ ಅವರ ಪ್ರಕಾರ, 'ಬಾವಲಿಗಳು ಗ್ರಹಿಸುವ ಶಬ್ದವು ಅವು ಚಲಿಸುತ್ತಿರುವ ವೇಗ ಹಾಗೂ ಪ್ರತಿಧ್ವನಿಸುತ್ತಿರುವ ವಸ್ತುವಿನ ದೂರವನ್ನಾಧರಿಸಿರುತ್ತದೆ. ಶಬ್ದದ ಮಾಹಿತಿ ಕೂಡ ಅವು ಚಲನೆಯಲ್ಲಿರುವುದರಿಂದ ನಿರಂತರವಾಗಿ ಬದಲಿಸುತ್ತಿರುತ್ತದೆ. ಬೈಕ್ ಚಲಾಯಿಸುವಾಗ ವೇಗವನ್ನು ಹೆಚ್ಚಿಸಿದಂತೆಯೇ ನಮ್ಮ ಸುತ್ತಲಿನ ವಸ್ತುಗಳು ನಮ್ಮ ಕಣ್ಣಳತೆಯಿಂದ ಹೇಗೆ ವೇಗವಾಗಿ ಮರೆಯಾಗುತ್ತಿರುತ್ತವೆಯೋ ಅಂತೆಯೇ. ಈ ಶಬ್ದದ ಹೊನಲಿನಲ್ಲಾಗುವ ಬದಲಾವಣೆಯನ್ನು ಗ್ರಹಿಸಿಕೊಂಡು ಬಾವಲಿಗಳು ತಮ್ಮ ವೇಗ ಮತ್ತು ಸಂಚಾರವನ್ನು ನಿಖರವಾಗಿಸಿಕೊಳ್ಳುತ್ತವೆ ಹಾಗೂ ತಮ್ಮ ಪರಿಸರವನ್ನು ಅಂದಾಜಿಸಿಕೊಳ್ಳುತ್ತವೆ' ಎನ್ನುತ್ತಾರೆ, ಮಾರ್ಕ್.

ಇದನ್ನು ಪರೀಕ್ಷಿಸಲು ಅವರು ರೂಪಿಸಿರುವ ಬ್ಯಾಟ್ ಆಕ್ಸಲೆರೇಟರ್ ಮಷೀನ್‌ನಲ್ಲಿ ಎಂಟು ಮೀಟರು ಉದ್ದದ ತಿರುಗುತ್ತಿರುವ ರೆಕ್ಕೆಗಳಂತಹ ರಚನೆಯಿದ್ದು ಅದರೊಳಗೆ ಸುಮಾರು ಎಂಟು ಸಾವಿರದಷ್ಟು ತಿರುಗುವ ಶಬ್ದ ಪ್ರತಿಫಲಕಗಳನ್ನು ಇರಿಸಲಾಗಿತ್ತಂತೆ. ಇವು ಒಂದು ರೀತಿಯ ಕೃತಕ ಎಲೆಗಳೆಂದುಕೊಳ್ಳಿ. ನೈಸರ್ಗಿಕವಾಗಿ ಬರುವ ಪ್ರತಿಧ್ವನಿ ಅಥವಾ ಶಬ್ದಗಳನ್ನು ಗ್ರಹಿಸಿ ಅನುಕರಿಸಲೆಂದು ಈ ಪ್ರತಿಫಲಕಗಳು. ಅರ್ಥಾತ್, ಬಾವಲಿಗಳು ಶಬ್ದವನ್ನು ಹೊರಡಿಸಿದಾಗ ಈ ಯಂತ್ರವು ಅದನ್ನು ಯಾಂತ್ರಿಕವಾಗಿ ಪ್ರತಿಧ್ವನಿಸುತ್ತಿತ್ತು. ಮೂರು ರಾತ್ರಿಗಳಲ್ಲಿ ಈ ಯಂತ್ರವು 181 ಬಾವಲಿಗಳ ಸಂಚಾರವನ್ನು ದಾಖಲಿಸಿತ್ತಂತೆ. ಅದರಲ್ಲಿ ಸುಮಾರು 104 ಬಾವಲಿಗಳು ಈ ಯಂತ್ರದಲ್ಲಿನ ಪರೀಕ್ಷೆಯ ಮುಖ್ಯ ಭಾಗವಾದ ಎಂಟು ಮೀಟರು ಉದ್ದದ ರೆಕ್ಕೆಗಳಂತಹ ರಚನೆಯನ್ನು ಹಾಯ್ದು ಹೋಗಿವೆ. ಬಾವಲಿಗಳು ತಮ್ಮ ಪ್ರಯಾಣದ ವೇಳೆ ಅನುಸರಿಸುವ 'ಅಕಾಸ್ಟಿಕ್ ಫ್ಲೋ ವೆಲಾಸಿಟಿ'ಯನ್ನು ಈ ಪ್ರತಿಫಲಕಗಳು ಬದಲಾಯಿಸಿಬಿಡುವಂತೆ ಇವನ್ನು ಉಪಾಯದಿಂದ ನಿಭಾಯಿಸಲಾಗಿತ್ತಂತೆ. ಬಾವಲಿಗಳು ಈ ಬದಲಾಯಿಸಿದ ಶಬ್ದಗಳನ್ನು ಗ್ರಹಿಸಿ ತಮ್ಮ ಸಂಚಾರವನ್ನು ಹೇಗೆ ಹೊಂದಿಸಿಕೊಂಡವು ಎಂದು ವಿಜ್ಞಾನಿಗಳು ಅಳೆದಿದ್ದಾರೆ.

ಯಂತ್ರದ ತಿರುಗುವ ಶಬ್ದ ಪ್ರತಿಫಲಕವು ಪ್ರತಿಧ್ವನಿಸುವ ಶಬ್ದದ ವೇಗವನ್ನು ಬಾವಲಿಗಳು ಚಲಿಸುತ್ತಿರುವ ವಿರುದ್ಧ ದಿಕ್ಕಿನಲ್ಲಿ ಹೆಚ್ಚಿಸಿದಾಗ, ಅವು ಸುಮಾರು ಪ್ರತಿಶತ 28ರಷ್ಟು ನಿಧಾನವಾಗಿ ಚಲಿಸಲಾರಂಭಿಸಿದುವಂತೆ. ಆದರೆ ಶಬ್ದ ಪ್ರತಿಫಲಕವು ಬಾವಲಿಗಳ ಸಂಚಾರ ದಿಕ್ಕಿನಲ್ಲಿಯೇ ತಿರುಗಿದಾಗ, ಬಾವಲಿಗಳ ವೇಗ ಹೆಚ್ಚಾಯಿತಂತೆ. ಅರ್ಥಾತ್, ಇವು ಶಬ್ದಗಳಲ್ಲಿನ ಬದಲಾವಣೆಯನ್ನು ಗ್ರಹಿಸಿ ತಮ್ಮ ವೇಗವನ್ನು ನಿಯಂತ್ರಿಸಿಕೊಳ್ಳುವವು. ಶಬ್ದ ಗ್ರಹಿಕೆಯಲ್ಲಿ ಸಂವೇದನಾಶೀಲತೆಯುಳ್ಳವು. ಅಂದ ಹಾಗೆ, ನಿಮ್ಮ ಶಾಲಾ ಪಠ್ಯದಲ್ಲಿ ನೀವು ಡಾಪ್ಲರ್ ಶಿಫ್ಟ್ ಬಗ್ಗೆ ಕೇಳಿರಬೇಕಲ್ಲಾ? ಶಬ್ದದ ಆಕರ ಮತ್ತು ಗ್ರಾಹಕ ಇವುಗಳೆರಡೂ ಚಲನೆಯಲ್ಲಿದ್ದಾಗ ಶಬ್ದದ ಆವರ್ತನಾ ತೀವ್ರತೆ ಬದಲಾಗುತ್ತಿರುತ್ತದೆ. ಎರಡೂ ಒಂದೇ ದಿಕ್ಕಿನಲ್ಲಿದ್ದಾಗ ಶಬ್ದದ ತೀವ್ರತೆ ಹೆಚ್ಚಾಗುತ್ತದೆ, ವಿರುದ್ಧ ದಿಕ್ಕಿನಲ್ಲಿದ್ದಾಗ ಕಡಿಮೆಯಾಗುತ್ತದೆ. ಇದುವೇ ಡಾಪ್ಲರ್ ಪರಿಣಾಮ. ಬಾವಲಿಗಳೂ ಸಂಚಾರ ತಂತ್ರದಲ್ಲಿ ಡಾಪ್ಲರ್ ಸಿದ್ಧಾಂತವನ್ನೇ ಅನುಸರಿಸುವುದಂತೆ.

ಬಾವಲಿಗಳು ವೇಗವಾಗಿ ಚಲಿಸಬಲ್ಲವು ಮತ್ತು ಅದಕ್ಕಾಗಿ ಎಕೋಲೊಕೇಷನ್ ತಂತ್ರವನ್ನು ಬಳಸುತ್ತವೆ ಎಂದು ನಮಗೆ ಈಗಾಗಲೇ ತಿಳಿದಿತ್ತು. ಅದಕ್ಕಾಗಿ ಬಾವಲಿಗಳು ಈ ಸಂಕೀರ್ಣ ಮಾಹಿತಿಗಳನ್ನು ವಿಶ್ಲೇಷಿಸುವ ಬಗ್ಗೆ ಇನ್ನೂ ಸಂಶೋಧನೆ ಕೈಗೊಳ್ಳಬೇಕಿದೆ ಎನ್ನುತ್ತಾರೆ ವಿಜ್ಞಾನಿಗಳು. ಆ ರಹಸ್ಯವನ್ನು ಪತ್ತೆ ಹಚ್ಚಿದಲ್ಲಿ ಇವರು ರೂಪಿಸಿರುವ ಈ ಹೊಸ ಬ್ಯಾಟ್ ಆಕ್ಸಲೆರೇಟರ್ ಯಂತ್ರವು ಹೆಚ್ಚಿನ ರೀತಿಯಲ್ಲಿ ಬಳಕೆಯಾಗುತ್ತದೆ. ಈ ತಂತ್ರಜ್ಞಾನದಿಂದ ಸಂಕೀರ್ಣ ಹಾಗೂ ದಟ್ಟವಾದ ಧ್ವನಿ-ಪ್ರತಿಧ್ವನಿಗಳಿರುವೆಡೆ ಡ್ರೋನ್, ಆಪ್ಟಿಕ್ ಫ್ಲೋ ಆಧಾರಿತ ಕ್ಯಾಮೆರಾ, ಸೋನಾರ್ ಹಾಗೂ ರೇಡಾರ್ ಆಧಾರಿತ ಸಂಚಾರ ತಂತ್ರಗಳನ್ನು ಇನ್ನಷ್ಟು ಸುಧಾರಿಸಬಹುದು ಎನ್ನುವುದು ವಿಜ್ಞಾನಿಗಳ ಆಶಯ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

30) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಓಮ್‌ನ ನಿಯಮಗಳನ್ನು ನಿರೂಪಿಸಿ (ಜೂನ್ 2019 ಪರೀಕ್ಷೆ)

2) ವಾಹಕ ರೋಧವು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ವಿವರಿಸಿ

ಉತ್ತರ:– (1) ಓಮ್‌ನ ನಿಯಮ ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರ. Vಯು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ನೇರಾನುಪಾತದಲ್ಲಿ ಇರುತ್ತದೆ

(2) ವಾಹಕದ ರೋಧವು ಈ ಕೆಳಗಿನ ಅಂಶಗಳ ಮೇಲೆ ಅವಲಂಬಿಸಿದೆ(ಅ) ವಾಹಕದ ಉದ್ದ (ಬ) ವಸ್ತುವಿನ ಪ್ರಾಕೃತಿಕ ಗುಣ ಕ) ವಾಹಕದ ಅಡ್ಡ ಕೊಯ್ತ

ವಾಹಕದ ರೋಧವು ಅದರ ಉದ್ದಕ್ಕೆ ನೇರ ಅನುಪಾತದಲ್ಲಿರುತ್ತದೆ. ವಾಹಕದ ರೋಧವು ಅದರ ಅಡ್ಡ ಕೊಯ್ತಕ್ಕೆ ವಿಲೋಮ ಅನುಪಾತದಲ್ಲಿರುತ್ತದೆ.

31) ಪ್ರಿಸ್‌ಬಯೋಪಿಯ ಕುರಿತು ಬರೆಯಿರಿ

ಉತ್ತರ:– ವಯಸ್ಸಾದಂತೆ ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯ ಸಾಮಾನ್ಯವಾಗಿ ಕಡಿಮೆಯಾಗುತ್ತದೆ. ಹೆಚ್ಚಿನ ಜನರಿಗೆ ಸಮೀಪ ಬಿಂದುವು ಕ್ರಮೇಣ ದೂರ ಸರಿಯುತ್ತದೆ. ಅಂತಹವರು ಹತ್ತಿರದ ವಸ್ತುಗಳನ್ನು ಆರಾಮದಾಯಕವಾಗಿ ಮತ್ತು ಸ್ಪಷ್ಟವಾಗಿ ಸರಿಪಡಿಸುವ ಕನ್ನಡಕವಿಲ್ಲದೆ ನೋಡಲು ಸಾಧ್ಯವಿಲ್ಲ. ಈ ದೋಷವನ್ನು ಪ್ರಿಸ್‌ಬಯೋಪಿಯ ಎನ್ನುತ್ತೇವೆ. ಈ ದೋಷವುಂಟಾಗಲು ಕಾರಣ ಮಸೂರವು ತನ್ನ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುವುದು ಅಥವಾ ಕ್ರಮೇಣ ಸಿಲಿಯರಿ ಸ್ನಾಯುಗಳು ದುರ್ಬಲಗೊಳ್ಳುವುದು. ಕೆಲವೊಮ್ಮೆ ಕೆಲವರು ಸಮೀಪದೃಷ್ಟಿ ಮತ್ತು ದೂರದೃಷ್ಟಿ ಎರಡರಿಂದಲೂ ಬಳಲಬಹುದು. ಇಂತಹವರಿಗೆ ದ್ವಿಸಂಗಮ(bifocal) ಮಸೂರಗಳ ಅವಶ್ಯಕತೆಯಿದೆ.

ಸಾಮಾನ್ಯವಾಗಿ ದ್ವಿಸಂಗಮ ಮಸೂರಗಳು ನಿಮ್ನ ಮತ್ತು ಪೀನ ಮಸೂರಗಳೆರಡನ್ನೂ ಹೊಂದಿರುತ್ತವೆ. ಮೇಲ್ಭಾಗದಲ್ಲಿರುವ ನಿಮ್ನ ಮಸೂರವು ದೂರದ ನೋಟವನ್ನು ಹಾಗೂ ಕೆಳಗಿನ ಭಾಗದ ಪೀನ ಮಸೂರವು ಸಮೀಪದ ನೋಟವನ್ನು ಸುಗಮಗೊಳಿಸುತ್ತದೆ. ಈಗಿನ ದಿನಗಳಲ್ಲಿ, ಕಣ್ಣಿನ ವಕ್ರೀಭವನ ದೋಷಗಳನ್ನು ಕಣ್ಣಿನೊಳಗೆ ಅಳವಡಿಸುವ ಮಸೂರದಿಂದ (contact len) ಅಥವಾ ಶಸ್ತ್ರಚಿಕಿತ್ಸೆಗಳಿಂದಲೂ ಸರಿಪಡಿಸಬಹುದು.

32) ಇವುಗಳಿಗೆ ಕಾರಣ ಕೊಡಿ

1) ಆಹಾರ ಸರಪಣಿಯಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.

2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.

ಉತ್ತರ:– (1) ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯ ಬಳಕೆಗೆ ಉಳಿಯುತ್ತದೆ.

2) ವಿಘಟಕಗಳು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತದೆ. ಸಂಕೀರ್ಣ ಸಾವಯವ ಪದಾರ್ಥಗಳನ್ನು ಸರಳ ನಿರವಯವ ಪದಾರ್ಥಗಳನ್ನಾಗಿ ವಿಘಟಿಸಿ ಮಣ್ಣಿಗೆ ಸೇರಿಸುತ್ತವೆ.

33) ಸರಿದೂಗಿಸಿದ ರಾಸಾಯನಿಕ ಸಮೀಕರಣ ಎಂದರೇನು? ರಾಸಾಯನಿಕ ಸಮೀಕರಣಗಳನ್ನು ಏಕೆ ಸರಿದೂಗಿಸಬೇಕು?

ಉತ್ತರ:– ಪ್ರತಿ ಧಾತುವಿನ ಪರಮಾಣುಗಳ ಸಂಖ್ಯೆ ರಾಸಾಯನಿಕ ಕ್ರಿಯೆಯ ಮೊದಲು ಮತ್ತು ನಂತರ ಒಂದೇ ರೀತಿ ಇರಬೇಕು ಅಂದರೆ ಪ್ರತಿವರ್ತಕ ಮತ್ತು ಉತ್ಪನ್ನಗಳಲ್ಲಿ ಸಮನಾದ ಧಾತುಗಳ ಒಟ್ಟು ರಾಶಿ ಇರುವಿಕೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣ ಎನ್ನುವರು.

ರಾಶಿ ಸಂರಕ್ಷಣೆಯ ನಿಯಮದಂತೆ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ ಆದ್ದರಿಂದ ಸಮೀಕರಣಗಳನ್ನು ಸರಿದೂಗಿಸಬೇಕು.

34) ಮಾನವನ ಕಣ್ಣಿನ ನೀಳ ಭೇದ ನೋಟದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

ಉತ್ತರ:–



ಮಾನವನ ಕಣ್ಣಿನ ನೀಳ ಭೇದನೋಟ

35) ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಮತ್ತು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ:–



1) ಮೇಲಿನ ಚಿತ್ರಗಳಲ್ಲಿ ಯಾವ ಚಿತ್ರವು ಕಾಂತಕ್ಷೇತ್ರದ ದಿಕ್ಕನ್ನು ಸರಿಯಾಗಿ ತೋರಿಸುವುದು?

2) ಸರಿಯಾದ ಚಿತ್ರವನ್ನು ಆರಿಸಲು ಸಹಾಯ ಮಾಡಿದ ನಿಯಮವನ್ನು ಹೆಸರಿಸಿ ಮತ್ತು ನಿರೂಪಿಸಿ

ಉತ್ತರ:–(1) ಚಿತ್ರ(ಬಿ) ಕಾಂತಕ್ಷೇತ್ರದ ಸರಿಯಾದ ದಿಕ್ಕನ್ನು ತೋರಿಸುತ್ತದೆ

(2) ಸರಿಯಾದ ಚಿತ್ರವನ್ನು ಆರಿಸಲು ಸಹಾಯ ಮಾಡಿದ ನಿಯಮವು " ಬಲಗೈ ಹೆಬ್ಬೆರಳ ನಿಯಮ"

36) ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಕ್ಕಿಂತಲೂ ಸಮಾಂತರವಾಗಿ ಜೋಡಿಸುವುದು ಅನುಕೂಲಕರ ಏಕೆ?

ಉತ್ತರ:– * ಸರಣಿ ಕ್ರಮದಲ್ಲಿ ಜೋಡಿಸಿದ ಉಪಕರಣಗಳು ಕಾರ್ಯನಿರ್ವಹಿಸಲು ವ್ಯಾಪಕವಾದ ವಿಭಿನ್ನ ಮೌಲ್ಯದ ವಿದ್ಯುತ್ ಪ್ರವಾಹ ಅಗತ್ಯವಿದೆ.

* ಸರಣಿ ಕ್ರಮದಲ್ಲಿ ಜೋಡಿಸಿದಾಗ ಯಾವುದಾದರೂ ಘಟಕ ವಿಫಲವಾದರೆ ಮಂಡಲವು ಮುರಿದು ಹೋಗುತ್ತದೆ. ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. ಆದರೆ ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ.

* ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸಲು ವಿಭಿನ್ನ ಪ್ರವಾಹದ ಅಗತ್ಯವಿರುವ ಸಂದರ್ಭದಲ್ಲಿ ಸಮಾಂತರ ಜೋಡಣೆ ಸಹಕಾರಿಯಾಗಿವೆ

(ಮುಂದುವರಿಯುವುದು)

REVISION : MODEL QUESTIONS

37. a) i] Write the equations for the steps in SN1 mechanism of the conversion of tertiary butyl bromide in to tertiary butyl alcohol.

ii] Haloarenes are less reactive towards nucleophilic substitution reactions than Haloalkanes. Give a reason.

b) Complete the following equation:

i) $C_2H_5OH + SOCl_2 \rightarrow$



Ans:-



ii) Haloarenes are resonance stabilized with carbon halogen double bond.

b] i) $C_2H_5OH + SOCl_2 \rightarrow C_2H_5Cl + SO_2 + HCl$



30. a) i) Explain the preparation of phenol from cumene.

ii) Complete the reaction

b) Explain Williamson's ether synthesis.

Ans:- a) i) Cumene is oxidized in air to cumene hydroperoxide. Cumene hydroperoxide is treated with dilute acid to get phenol and acetone



b) Alkyl halide reacts with sodium alkoxide to form ether

$$\underset{\text{alkyl halide}}{R-X} + \underset{\text{Sodium alkoxide}}{NaOR'} \rightarrow \underset{\text{Ether}}{R-O-R'} + NaX$$

32. What is meant by the chelate effect? Give an example.

Ans: When a polydentate or a bidentate ligand fastens itself to a metal ion in such a way that it assumes the shape of a ring, the metal-ligand bond becomes more stable. These rings are called chelate rings.

From here, we can infer that complexes with chelate rings are more stable than complexes without the rings. This phenomenon is termed the chelate effect.

$Ni^{2+}(aq) + 6NH_3 \leftrightarrow [Ni(NH_3)_6]^{2+}(aq)$

$\log\beta = 7.99$

$Ni^{2+}(aq) + 3en(aq) \leftrightarrow [Ni(en)_3]^{2+}(aq)$

$\log\beta = 18.1$ (more stable)



33. a) i) Example Hoffmann bromamide degradation for the preparation of aniline.

ii] Give the IUPAC name of $CH_3-NH-CH_2-CH_3$.

b) What is Hinsberg's reagent? Between CH_3NH_2 and C_6H_5NH which is more basic?

Ans:(a)i) When amides are heated with bromine and NaOH/KOH(alcoholic/aqueous) Hoffmann's bromamide degradation takes place leading to the formation of amines containing one carbon less than the respective amide.

$$\underset{\text{Amide}}{R\text{-}CO\text{-}NH_2} + Br_2 + 4\,NaOH \xrightarrow{\Delta} \underset{\text{Amine}}{R\text{-}NH_2} + Na_2CO_3 + 2\,NaBr + 2\,H_2O$$

$$\underset{\text{Amide}}{R\text{-}CO\text{-}NH_2} + Br_2 + 4\,NaOH \xrightarrow{\Delta} \underset{\text{Amine}}{R\text{-}NH_2} + Na_2CO_3 + 2\,NaBr + 2\,H_2O$$

ii) The IUPAC name is N-methylethanamine.

b) Benzene sulphonyl chloride ($C_6H_5SO_2Cl$) is known as Hinsberg's reagent.

35. Explain the variations of ionization enthalpies in d-block elements. [March 2015]

Ans: The ionization enthalpy of 3d series increase as we move across a period. This is due to the increase in effective nuclear charge which accompanies the filling of the inner d orbitals. The second ionization energies of the 3d series also increases with the increase in atomic number. But this trend is not regular and there are some irregular variations.

1.Second ionization enthalpy of Cr and Cu are sufficiently higher than their neighbours. This is due to their stable electronic configuration (d^5 in Cr and d^{10} in Cu). *(Contd.....)*

ರಾಜ್ಯಪಾಲರ ಅಂಗಳಕ್ಕೆ ಮತ್ತೆ ‘ಒಳ ಮೀಸಲು’

ಎಜಿ ನೀಡಿದ 14 ಪುಟಗಳ ವಿವರಣೆ ಸಹಿತ ಮಸೂದೆಯನ್ನು ಅಂಕಿತಕ್ಕೆ ಕಳುಹಿಸಿದ ರಾಜ್ಯ ಸರ್ಕಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಯೊಳಗೆ ಒಳ ಮೀಸಲಾತಿ ಕಲ್ಪಿಸಲು ರೂಪಿಸಿದ್ದ ಮಸೂದೆ ಕುರಿತು ರಾಜ್ಯಪಾಲರು ಎತ್ತಿದ್ದ ಪ್ರಶ್ನೆಗಳಿಗೆ ವಿವರವಾದ ಸ್ಪಷ್ಟೀಕರಣ ಕೊಟ್ಟಿರುವ ಸರ್ಕಾರ, ಅಂಕಿತಕ್ಕಾಗಿ ಮತ್ತೆ ಮಸೂದೆಯನ್ನು ಲೋಕಭವನಕ್ಕೆ ಕಳುಹಿಸಿದೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ಕಲ್ಪಿಸಲು ಹೊರಡಿಸಿದ್ದ ಆದೇಶಕ್ಕೆ ಕಾನೂನು ಬಲ ನೀಡುವ ಉದ್ದೇಶದಿಂದ ‘ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ಮಸೂದೆ-2025’ ಅನ್ನು ಸರ್ಕಾರ ರೂಪಿಸಿತ್ತು. ಬೆಳಗಾವಿಯಲ್ಲಿ ಈಚೆಗೆ ನಡೆದ ಅಧಿವೇಶನದಲ್ಲಿ ಅನುಮೋದನೆಗೊಂಡಿದ್ದ ಈ ಮಸೂದೆಯನ್ನು ಅಂಕಿತಕ್ಕಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕಳುಹಿಸಲಾಗಿತ್ತು. ಆದರೆ, ಅವರು ಕೆಲವು ಸ್ಪಷ್ಟನೆಗಳನ್ನು ಕೇಳಿ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದರು.

‘ಅಡ್ವೊಕೇಟ್ ಜನರಲ್ (ಎಜಿ) ಶಶಿ ಕಿರಣ್ ಶೆಟ್ಟಿ ಅವರು 14 ಪುಟಗಳ ಸ್ಪಷ್ಟನೆಯನ್ನು ಸಿದ್ಧಪಡಿಸಿದ್ದು, ಅದನ್ನು ಮಸೂದೆಯ ಜೊತೆಗೆ ರಾಜ್ಯಪಾಲರಿಗೆ ಕಳುಹಿಸಲಾಗಿದೆ’ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಥಾವರಚಂದ್ ಗೆಹಲೋತ್

ಎಜಿ ವಿವರಣೆಯಲ್ಲಿ ಏನಿದೆ?: ‘ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಹೆಚ್ಚಿಸಲು ಸಂಸತ್ತಿನ ಅನುಮೋದನೆಯ ಅಗತ್ಯದ ಬಗ್ಗೆ ರಾಜ್ಯಪಾಲರು ಕಳವಳ ವ್ಯಕ್ತಪಡಿಸಿದ್ದರು. ಅಸ್ತಿತ್ವದಲ್ಲಿರುವ ಮೀಸಲಾತಿ ಚೌಕಟ್ಟಿನೊಳಗೆ ಮಸೂದೆ ರೂಪಿಸಲಾಗಿದೆ. ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 17ಕ್ಕೆ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ರೂಪಿಸಿದ್ದ ‘ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಕಾಯ್ದೆ-2022’ಕ್ಕೆ ರಾಷ್ಟ್ರಪತಿ, ಸಂಸತ್ತಿನ ಒಪ್ಪಿಗೆ ಅಥವಾ ರಾಷ್ಟ್ರಪತಿಯ ಯಾವುದೇ ಆಕ್ಷೇಪಣೆ ಇಲ್ಲದೆ ರಾಜ್ಯಪಾಲರೇ ಅಂಕಿತ ಹಾಕಿದ್ದಾರೆ. ಈ ಕಾಯ್ದೆಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರೂ, ಕಾಯ್ದೆಯು ಸಂವಿಧಾನಬಾಹಿರವೆಂದು ಹೈಕೋರ್ಟ್ ರದ್ದುಪಡಿಸಿಲ್ಲ. ಹೀಗಾಗಿ, ಪರಿಶಿಷ್ಟ ಜಾತಿಗೆ ಶೇ 17 ಮೀಸಲಾತಿ ನೀಡಲಾಗುತ್ತಿದ್ದು, ಈ ಜಾತಿಗಳಲ್ಲಿ ಸಮಾನತೆ ತರುವ ಉದ್ದೇಶದಿಂದ ಈ ಮೀಸಲಾತಿಯನ್ನು ಸರ್ಕಾರವು ಮರು ವರ್ಗೀಕರಣ ಮಾಡಿದೆ. ಇದಕ್ಕೆ ವಿಧಾನ ಮಂಡಲವೂ ಅನುಮೋದನೆ ನೀಡಿದೆ’ ಎಂದು ಎಜಿ ವಿವರಿಸಿದ್ದಾರೆ.

‘ಮೀಸಲಾತಿ ಶೇಕಡಾವಾರು ಪ್ರಮಾಣ ನಿರ್ಧರಿಸುವ ಅಧಿಕಾರಕ್ಕಿಂತ ಉಪ-ವರ್ಗೀಕರಣದ ಅಧಿಕಾರವು ಭಿನ್ನವಾಗಿದೆ. ಪಂಜಾಬ್ ಸರ್ಕಾರ ಹಾಗೂ ದೇವಿಂದರ್ ಸಿಂಗ್ ನಡುವಿನ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಸಂವಿಧಾನದ ವಿಧಿ 14, 15(4), ಮತ್ತು 16 (4)ರ ಅಡಿ ಒಳ ಮೀಸಲಾತಿ ಜಾರಿಗೊಳಿಸುವ ರಾಜ್ಯದ ಅಧಿಕಾರವನ್ನು ಎತ್ತಿಹಿಡಿದಿದೆ. ರಾಜ್ಯ ಅಥವಾ ಕೇಂದ್ರ ಸರ್ಕಾರ ಅಂಗೀಕರಿಸಿದ ಯಾವುದೇ ಶಾಸನ ಜಾರಿಗೊಂಡ ಬಳಿಕ ನ್ಯಾಯಾಂಗದ ಪರಿಶೀಲನೆಗೆ ಒಳಪಟ್ಟಿರುತ್ತದೆ. ಆದ್ದರಿಂದ, ಶಾಸಕಾಂಗದ ಕ್ರಮವನ್ನು ಲೆಕ್ಕಿಸದೆ ನ್ಯಾಯಾಂಗ ಮೇಲ್ವಿಚಾರಣಾ ಕಾರ್ಯವಿಧಾನವು ಹಾಗೆಯೇ ಉಳಿದಿದೆ. ಆದಾಗ್ಯೂ, ನ್ಯಾಯಾಂಗ ಪರಿಶೀಲನೆಯ ನಿರೀಕ್ಷೆಯು ರಾಜ್ಯದ ಶಾಸಕಾಂಗ ಸಾಮರ್ಥ್ಯವನ್ನು ಕಸಿದುಕೊಳ್ಳುವುದಿಲ್ಲ. ನ್ಯಾಯಾಂಗ ಪರಿಶೀಲನೆಯ ಪರಿಹಾರವು ಒಂದು ರಕ್ಷಣೆಯಾಗಿದೆ ಮತ್ತು ಶಾಸಕಾಂಗ ಪ್ರಕ್ರಿಯೆಗೆ ಅಡ್ಡಿಯಲ್ಲ’ ಎಂದೂ ಅವರು ಹೇಳಿದ್ದಾರೆ.

ಈ ಮಸೂದೆಗೆ ಸಂಬಂಧಿಸಿದಂತೆ ಅಖಿಲ ಕರ್ನಾಟಕ ಬಂಜಾರ, ಭೋವಿ, ಕೊರಚ, ಕೊರಮ ಸಮಾಜಗಳ ಕಲ್ಯಾಣ ಸಂಘ ಮತ್ತು ಇತರ ಕೆಲವು ಸಂಘಟನೆಗಳು ಎತ್ತಿದ 14 ಆಕ್ಷೇಪಣೆಗಳಿಗೆ ರಾಜ್ಯಪಾಲರು ಸರ್ಕಾರದಿಂದ ಸ್ಪಷ್ಟೀಕರಣ ಕೋರಿದ್ದರು. ಈ ಎಲ್ಲ ಆಕ್ಷೇಪಣೆಗಳನ್ನು ಉಲ್ಲೇಖಿಸಿ, ಪ್ರತಿಯೊಂದಕ್ಕೂ ವಿವರವಾದ ಸ್ಪಷ್ಟೀಕರಣವನ್ನೂ ಎಜಿ ನೀಡಿದ್ದಾರೆ.

ಪ್ರಮುಖ ಸ್ಪಷ್ಟೀಕರಣಗಳೇನು?

- ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ ಕೆಲವು ಜಾತಿಗಳ ಪ್ರಾತಿನಿಧ್ಯದ ಕೊರತೆ ಮನಗಂಡು, ಸುಪ್ರೀಂಕೋರ್ಟ್‌ನ ತೀರ್ಪಿನಂತೆ ಮರು ವರ್ಗೀಕರಣ ಮಾಡಲಾಗಿದೆ
- ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಏಕ ಸದಸ್ಯ ಆಯೋಗವು ಪರಿಶಿಷ್ಟ ಜಾತಿಗಳ ಸಮೀಕ್ಷೆಯಡಿ ಸಂಗ್ರಹಿಸಲಾದ ದತ್ತಾಂಶಗಳನ್ನು ಪರಿಶೀಲಿಸಿ, ತಜ್ಞರ ನೆರವು ಪಡೆದು ವರದಿ ಸಲ್ಲಿಸಿದೆ. ವರದಿಯು ಯಾವುದೇ ಒಂದು ಸಮುದಾಯದ ವಿರುದ್ಧವಾಗಿಲ್ಲ
- ಆಯೋಗದ ವರದಿಯ ಕುರಿತು ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ಚರ್ಚಿಸಿ, ವರದಿಯಲ್ಲಿನ ಕೆಲವು ಗೊಂದಲಗಳನ್ನು ಪರಿಹರಿಸಲು ನಿರ್ಧರಿಸಿತು. ಸಂಪುಟವು ತನ್ನದೇ ವಿವೇಚನೆಯಿಂದ 101 ಪರಿಶಿಷ್ಟ ಜಾತಿಗಳ ಹಿತಾಸಕ್ತಿ ಗಮನದಲ್ಲಿಟ್ಟು ಮೂರು ಗುಂಪುಗಳಾಗಿ ವರ್ಗೀಕರಿಸಿ, ಮೀಸಲಾತಿ ಹಂಚಿಕೆಯ, ನ್ಯಾಯಯುತ ನಿರ್ಧಾರ ತೆಗೆದುಕೊಂಡಿದೆ
- ಸಂಪುಟದ ನಿರ್ಧಾರದಂತೆ ಎ, ಬಿ, ಸಿ ಗುಂಪುಗಳಿಗೆ ರೋಸ್ಟರ್ ಬಿಂದು ನಿಗದಿಪಡಿಸಲಾಗಿದೆ. 100 ಬಿಂದುಗಳ ರೋಸ್ಟರ್‌ನಲ್ಲಿ ಎಲ್ಲಾ ಸಮುದಾಯಗಳಿಗೆ ಅವಕಾಶ ನೀಡಲಾಗಿದ್ದು, ಯಾವುದೇ ಜಾತಿ, ಗುಂಪನ್ನು ಹೊರಗಿಟ್ಟಿಲ್ಲ
- ‘ಸಿ’ ಗುಂಪಿನಲ್ಲಿರುವ 59 ಸಮುದಾಯಗಳಿಗೆ ಸರಿಯಾದ ಪ್ರಾತಿನಿಧ್ಯವನ್ನು ಖಚಿತಪಡಿಸಲು ಒಳ ಮೀಸಲಾತಿಯಲ್ಲಿ ಒಳ ಮೀಸಲು ನೀಡಲಾಗಿದೆ. ಅಲ್ಲದೆ, ಈ 59 ಜಾತಿಗಳ ಅಡಿಯಲ್ಲಿ ಯಾವುದೇ ಅರ್ಹ ಅಭ್ಯರ್ಥಿ ಲಭ್ಯ ಇಲ್ಲದಿದ್ದರೆ ಅಂತಹ ಹುದ್ದೆಗಳು ಅಥವಾ ಸ್ಥಾನಗಳನ್ನು ಗುಂಪು ‘ಸಿ’ ಯಲ್ಲಿರುವ ಇತರ 4 ಜಾತಿಗಳಿಂದ ಭರ್ತಿ ಮಾಡಬೇಕೆಂದು ಮಸೂದೆಯಲ್ಲಿದೆ

ರಾಜ್ಯಪಾಲರಿಂದ ಪತ್ರ

43 ಶಾಸಕರಿಗೆ ಅಧ್ಯಕ್ಷಗಿರಿ: ವರದಿಗೆ ಸರ್ಕಾರಕ್ಕೆ ಸೂಚನೆ

ಬೆಂಗಳೂರು: ನಿಗಮ– ಮಂಡಳಿಗಳ ಅಧ್ಯಕ್ಷರಾಗಿ ಶಾಸಕರ ನೇಮಕದಲ್ಲಿ ಸಂವಿಧಾನ ಹಾಗೂ ಕಾನೂನು ಉಲ್ಲಂಘನೆಯಾಗಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ವಾಸ್ತವ ವರದಿಯನ್ನು ಸಲ್ಲಿಸುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

‘ಸರ್ಕಾರವು ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ 43 ಶಾಸಕರನ್ನು ಹಲವು ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಈ ಎಲ್ಲ ನೇಮಕಗಳು ಸಂವಿಧಾನದ ಪರಿಚ್ಛೇದ 164(5) ಮತ್ತು 195ರ ಉಲ್ಲಂಘನೆಯಾಗಿದ್ದು, ಕಾನೂನಿಗೂ ವಿರುದ್ಧವಾಗಿವೆ. ನೇಮಕವಾಗಿರುವ ಎಲ್ಲರೂ ಕಾಯ್ದೆ ಪ್ರಕಾರ ಅನರ್ಹತೆ ವ್ಯಾಪ್ತಿಗೆ ಬರುತ್ತಾರೆ ಎಂದು ಸೂರಿ ಪಾಯಲ್ ವಿವರವಾದ ಮನವಿಯನ್ನು ನೀಡಿದ್ದಾರೆ’ ಎಂದು ರಾಜ್ಯಪಾಲರ ಪತ್ರ ಉಲ್ಲೇಖಿಸಿದೆ.

‘ಸಂವಿಧಾನದ ಪರಿಚ್ಛೇದ 192 (1) ಪ್ರಕಾರ, ಶಾಸಕರನ್ನು ಅನರ್ಹಗೊಳಿಸುವ ಬಗ್ಗೆ ಭಾರತೀಯ ಚುನಾವಣಾ ಆಯೋಗಕ್ಕೆ ಉಲ್ಲೇಖಿಸಬೇಕು. ಅಲ್ಲದೆ, ಸಂವಿಧಾನದ ಪರಿಚ್ಛೇದ 191 (1)(ಎ) ಪ್ರಕಾರ ಶಾಸಕರ ಅನರ್ಹತೆ ಬಗ್ಗೆ ಚುನಾವಣಾ ಆಯೋಗದ ಅಭಿಪ್ರಾಯ ಪಡೆಯಬೇಕು ಎಂದು ಸೂರಿ ಅವರು ಮನವಿ ಮಾಡಿದ್ದಾರೆ. ಹೀಗಾಗಿ, ಈ ಎಲ್ಲ ವಿಚಾರವನ್ನು ಪರಿಗಣಿಸಿ ರಾಜ್ಯ ಸರ್ಕಾರದಿಂದ ವಾಸ್ತವ ವರದಿಯನ್ನು ನೀಡಬೇಕು. ಅದರೊಂದಿಗೆ ಎಲ್ಲ ಅಗತ್ಯ ದಾಖಲೆಗಳನ್ನೂ ಒದಗಿಸಬೇಕು’ ಎಂದು ರಾಜ್ಯಪಾಲರು ಸರ್ಕಾರಕ್ಕೆ ಸೂಚಿಸಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಂಪುಟದಲ್ಲಿ ಅಧಿಕೃತವಾಗಿ 32 ಸಚಿವರಿದ್ದರೆ, ‘ಸಚಿವ ಸ್ಥಾನಮಾನ’ ಪಡೆದಿರುವವರ ಸಂಖ್ಯೆ ದುಪ್ಪಟ್ಟಾಗಿದೆ. ನಿಗಮ ಮಂಡಳಿಗಳ ಅಧ್ಯಕ್ಷರು–ಉಪಾಧ್ಯಕ್ಷರು ಸೇರಿದಂತೆ ಒಟ್ಟು 76 ಮಂದಿಗೆ ‘ಸಚಿವರ ಸ್ಥಾನಮಾನ’ದ ‘ಗ್ಯಾರಂಟಿ’ಯನ್ನು ಕಾಂಗ್ರೆಸ್ ಸರ್ಕಾರ ದಯಪಾಲಿಸಿದೆ’ ಎಂಬ ವಿವರಿಗಳಿದ್ದ, ‘ಸಂಪುಟ’ಕ್ಕಿಂತ ಸಚಿವ ದರ್ಜೆ ಭಾರ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯ 2025ರ ಅಕ್ಟೋಬರ್ 16ರಂದು ವಿಶೇಷ ವರದಿ ಪ್ರಕಟಿಸಿತ್ತು.

ಮಹಾ ರಥೋತ್ಸವ

ಪ್ರಜಾವಾಣಿ ಚಿತ್ರ

ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಉಳವಿಯಲ್ಲಿ ಚನ್ನಬಸವೇಶ್ವರ ಜಾತ್ರೆಯ ಮಹಾ ರಥೋತ್ಸವ ಭಕ್ತರ ಜಯಘೋಷದೊಂದಿಗೆ ಸಂಭ್ರಮದಿಂದ ಮಂಗಳವಾರ ನಡೆಯಿತು

ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು: ಪ್ರಥಮ ಎಂ-ಫಾರ್ಮಾ ಮತ್ತು ಫಾರ್ಮಾ-ಡಿ ಕೋರ್ಸ್‌ಗಳ- 2025ನೇ ಸಾಲಿನ ಪ್ರವೇಶಕ್ಕೆ ಅರ್ಹತಾ ಪಟ್ಟಿ ಮತ್ತು ಸೀಟು ಲಭ್ಯತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಫೆ.7ರಿಂದ ಫೆ.10ರ ಬೆಳಿಗ್ಗೆ 11ರವರೆಗೆ ಇಚ್ಛೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸಲು ಅವಕಾಶ ನೀಡಲಾಗಿದೆ.

ಫೆ.5ರಿಂದ ಫೆ.9ರವರೆಗೆ ಪರಿಶೀಲನಾ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಣಕು ಸೀಟು ಹಂಚಿಕೆ ಫಲಿತಾಂಶ ಫೆ.10ರಂದು ಪ್ರಕಟವಾಗಲಿದೆ. ಫೆ.10ರಿಂದ ಫೆ.11ರ ಮಧ್ಯಾಹ್ನದವರೆಗೆ ಆಯ್ಕೆಗಳನ್ನು ಬದಲಿಸಲು ಅವಕಾಶ ನೀಡಲಾಗುತ್ತದೆ. ಫೆ.11ರ ಸಂಜೆ ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಗೊಳ್ಳಲಿದೆ. ಅಭ್ಯರ್ಥಿಗಳು ಫೆ.12ರಿಂದ ಫೆ.16ರ ಒಳಗೆ ಪ್ರವೇಶ ಪಡೆಯಬೇಕು ಎಂದು ಪರೀಕ್ಷಾ ಪ್ರಾಧಿಕಾರ ಸೂಚಿಸಿದೆ.

ಬಿಡ್ ಬಿಟ್ಟುಕೊಡಲು ಕಮಿಷನ್: ಗೌರವಾಧ್ಯಕ್ಷ ಅಮಾನತು

ಬೆಂಗಳೂರು: ಗುತ್ತಿಗೆ ಬಿಡ್‌ಗೆ ಸಂಬಂಧಿಸಿದಂತೆ ಶೇ 3ರಷ್ಟು ಕಮಿಷನ್‌ಗೆ ಬೇಡಿಕೆ ಇಟ್ಟ ರಾಜ್ಯ ಗುತ್ತಿಗೆದಾರರ ಸಂಘದ ಗೌರವಾಧ್ಯಕ್ಷ ಜಗನ್ನಾಥ್ ಬಿ. ಶೇಗಜಿ ಹಾಗೂ ಸಂಘಟನಾ ಕಾರ್ಯದರ್ಶಿ ಹಣಮಂತ ರಾಯಪ್ಪ ಚಿಂಚಲಿ ಅವರನ್ನು ಸಂಘದಿಂದ ಅಮಾನತು ಮಾಡಲಾಗಿದೆ.

ಜಗನ್ನಾಥ್ ಮತ್ತು ಹಣಮಂತ ಅವರು ಗುತ್ತಿಗೆ ಬಿಡ್‌ಗೆ ಸಂಬಂಧಿಸಿದಂತೆ ಗುತ್ತಿಗೆದಾರರ ಜೊತೆ ಶೇ 3ರಷ್ಟು ಕಮಿಷನ್ ಪಡೆಯುವ ಬಗೆಗಿನ ಮಾತುಕತೆಯ ಆಡಿಯೊ ಮತ್ತು ವಿಡಿಯೊ ಮಂಗಳವಾರ ಬೆಳಿಗ್ಗೆ ಬಹಿರಂಗವಾಗಿತ್ತು. ಮಾಧ್ಯಮಗಳಲ್ಲಿ ಇದು ಪ್ರಸಾರವಾಗಿದ್ದನ್ನು ಗಂಭೀರವಾಗಿ ಪರಿಗಣಿಸಿದ ಸಂಘ ಅವರನ್ನು ಅಮಾನತು ಮಾಡಿ, ವಿಚಾರಣೆಗೆ ಆರು ಹಿರಿಯ ಸದಸ್ಯರ ಸಮಿತಿಯನ್ನು ನೇಮಿಸಿದೆ.

‘ಪ್ರಕರಣದ ಬಗ್ಗೆ ಸಂಘದಲ್ಲಿ ಮಂಗಳವಾರ ಮಧ್ಯಾಹ್ನ ಸಭೆ ನಡೆಸಲಾಯಿತು. ಸಂಘದ ಧ್ಯೇಯೋದ್ದೇಶ ಮತ್ತು ಗೌರವಕ್ಕೆ ಧಕ್ಕೆ ತರುವಂತೆ ವರ್ತಿಸಿರುವ ಜಗನ್ನಾಥ್ ಹಾಗೂ ಹಣಮಂತ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಮಾಡಲಾಗಿದೆ. ಅವರ ನಿರ್ದೇಶಕ ಸ್ಥಾನದ ವಿಚಾರಣೆಯನ್ನು ಕಾಯ್ದಿರಿಸಿ ಸಂಘದಿಂದ ಅವರನ್ನು ಬಿಡುಗಡೆ ಮಾಡಲಾಗಿದೆ. ಎಲ್ಲ 32 ಆಡಳಿತ ಮಂಡಳಿ ಸದಸ್ಯರ ಜೊತೆ, ದೂರವಾಣಿ ಮೂಲಕ ಅಭಿಪ್ರಾಯ ಸಂಗ್ರಹಿಸಲಾಯಿತು. ಸತ್ಯಾಸತ್ಯತೆಯನ್ನು ಅರಿಯಲು ಹಾಗೂ ವಿಚಾರಣೆ ನಡೆಸಲು ಸಂಘದ ಆರು ಹಿರಿಯ ಸದಸ್ಯರ ಸಮಿತಿ ರಚಿಸಲಾಗಿದೆ’ ಎಂದು ಸಂಘದ ಅಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು.

‘ಸರ್ಕಾರದಿಂದ ಗುತ್ತಿಗೆದಾರರಿಗೆ ಬಾಕಿ ಇರುವ ₹37 ಸಾವಿರ ಕೋಟಿ ಹಣವನ್ನು ಬಿಡುಗಡೆ ಮಾಡಿಸಲು ಸಂಘ ಹೋರಾಡುತ್ತಿರುವ ಸಮಯದಲ್ಲಿ, ನಮ್ಮ ಸಂಘದ ಸದಸ್ಯರೇ ಇಂತಹ ಮಾತುಗಳನ್ನಾಡಿರುವುದು ನಮಗೆ ಆಘಾತಕಾರಿಯಾಗಿದೆ. ಸಂಘದ ಗುತ್ತಿಗೆದಾರರ ಹಿತ ಕಾಪಾಡಲು ನಾವು ಎಂದಿಗೂ ಹೋರಾಟ ಮಾಡುತ್ತೇವೆ. ಇಂತಹ ವಿಷಯವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ’ ಎಂದರು.

‘ನನ್ನ ವಿರುದ್ಧ ಹಿರಿಯ ಅಧಿಕಾರಿಗಳೇ ಷಡ್ಯಂತ ರಚಿಸಿದಂತಿದೆ. ಈ ಘಟನೆ ಕುರಿತು ಕೂಲಂಕಷ ತನಿಖೆ ನಡೆಸಿದರೆ, ಸತ್ಯಾಸತ್ಯತೆ ಹೊರಬರಲಿದೆ’ ಎಂದು ಜಗನ್ನಾಥ್ ಶೇಗಜಿ ಪ್ರತಿಕ್ರಿಯಿಸಿದರು.

‘ಒಳರೋಗಿ ಚಿಕಿತ್ಸೆ ನಿರ್ಬಂಧದಿಂದ ಸೇವೆ ವ್ಯತ್ಯಯ’

ಬೆಂಗಳೂರು: ‘ಸರ್ಕಾರಿ ವೈದ್ಯರು ಕರ್ತವ್ಯದ ಬಳಿಕ ಖಾಸಗಿ ವ್ಯವಸ್ಥೆಯಡಿ ನೀಡುತ್ತಿದ್ದ ಒಳರೋಗಿಗಳ ಚಿಕಿತ್ಸೆಗೆ ನಿರ್ಬಂಧ ವಿಧಿಸಿರುವುದರಿಂದ, ಗ್ರಾಮೀಣ ಭಾಗದ ರೋಗಿಗಳ ಆರೋಗ್ಯ ಸೇವೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ನುರಿತ ಶಸ್ತ್ರಚಿಕಿತ್ಸಕರ ಸೇವೆಯಿಂದ ಜನರು ವಂಚಿತರಾಗುತ್ತಾರೆ’ ಎಂದು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹೇಳಿದೆ.

‘ಹಾಗೆಂದ ಮಾತ್ರಕ್ಕೆ, ಸರ್ಕಾರಿ ಆಸ್ಪತ್ರೆಯ ಕರ್ತವ್ಯದ ಅವಧಿಯಲ್ಲಿ ಖಾಸಗಿ ಸೇವೆ ನೀಡುವಂತಹ ವೈದ್ಯರಿಗೆ ಸಂಘ ಯಾವುದೇ ಬೆಂಬಲ ವ್ಯಕ್ತಪಡಿಸುವುದಿಲ್ಲ’ ಎಂದು ಸಂಘ ತಿಳಿಸಿದೆ.

‘ಸರ್ಕಾರಿ ವೈದ್ಯರನ್ನು ಗುರಿಯಾಗಿಸಿಕೊಂಡು ಸರ್ಕಾರವು ಮನಸೋ ಇಚ್ಛೆ ಆದೇಶಗಳನ್ನು ಹೊರಡಿಸುತ್ತಿರುವ ಪರಿಣಾಮ, ವೈದ್ಯರ ಆತ್ಮಸ್ಥೈರ್ಯ ಕುಗ್ಗುವ ಜತೆಗೆ ಸರ್ಕಾರಿ ಕರ್ತವ್ಯದ ಮೇಲೆ ದುಷ್ಪರಿಣಾಮಗಳು ಬೀರುತ್ತಿವೆ’ ಎಂದು ಸಂಘದ ಅಧ್ಯಕ್ಷ ಡಾ. ರವೀಂದ್ರನಾಥ್ ಮೇಟಿ ಬೇಸರ ವ್ಯಕ್ತಪಡಿಸಿದ್ದಾರೆ.

‘ವೈದ್ಯರ ಜ್ಯೇಷ್ಠತಾಪಟ್ಟಿಯನ್ನು ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಪರಿಷ್ಕರಿಸ ಬೇಕೆಂಬ ನಿಯಮವಿದ್ದರೂ, 13 ವರ್ಷಗಳಿಂದ ಪರಿಷ್ಕರಿಸಿಲ್ಲ. ಇದರಿಂದ ವೈದ್ಯರು ಮುಂಬಡ್ತಿಯಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರಿ ವೈದ್ಯರಿಗೆ ಆಗುತ್ತಿರುವ ಅನ್ಯಾಯಗಳಿಗೆ ಸಂಬಂಧಿಸಿದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಮನಹರಿಸದಿದ್ದರೆ, ಸಂಘವು ಹೋರಾಟದ ಹಾದಿ ಹಿಡಿಯುತ್ತದೆ’ ಎಂದುಎಚ್ಚರಿಸಿದ್ದಾರೆ.

ವಿದೇಶಿಗರ ಅಕ್ರಮ ವಾಸ: ಸರ್ಕಾರದ ಲೋಪ

ಒಂದನೇ ಪುಟದಿಂದ...

‘ಕೇಂದ್ರದ ವಿದೇಶಿಯರ ಪ್ರಾದೇಶಿಕ ನೋಂದಣೆ ಅಧಿಕಾರಿ (ಎಫ್‌ಆರ್‌ಆರ್‌ಒ) ಕಚೇರಿಯಲ್ಲಿ ನೋಂದಣಿ ಮಾಡಿಸದೆ ಬೆಂಗಳೂರು ಮಹಾನಗರದಲ್ಲಿ ವಿದೇಶಗಳ ಹಲವು ಪ್ರಜೆಗಳು ಠಿಕಾಣಿ ಹೂಡಿದ್ದಾರೆ ಎಂದರೆ ಹೇಗೆ? ಇಂತಹುದನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರ ಕರ್ತವ್ಯ ಲೋಪ ಎಸಗಿದಂತಲ್ಲವೇ’ ಎಂದು ಪ್ರಶ್ನಿಸಿತು.

‘ಬೆಂಗಳೂರಿನಲ್ಲಿ ಅವಧಿ ಮೀರಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಲು ಕೈಗೊಂಡಿರುವ ಅಗತ್ಯ ಕ್ರಮಗಳನ್ನು ಮುಂದಿನ ವಿಚಾರಣೆಯಲ್ಲಿ ತಿಳಿಸಿ’ ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.

ನ್ಯಾಯಾಲಯದ ನಿರ್ದೇಶನದಂತೆ ಪ್ರಕರಣದಲ್ಲಿ ಸೇರ್ಪಡೆಯಾಗಿರುವ ಎಫ್‌ಆರ್‌ಆರ್‌ಒ ಪರ ಹಾಜರಾಗಿದ್ದ, ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, ‘ಅರ್ಜಿದಾರರು 2015ರಲ್ಲಿ ಭಾರತಕ್ಕೆ ವ್ಯಾಪಾರ ವೀಸಾದಲ್ಲಿ ಬಂದಿದ್ದಾರೆ ಮತ್ತು ವಿಭಿನ್ನ ವೀಸಾಗಳಲ್ಲಿ ಉಳಿದುಕೊಂಡಿದ್ದಾರೆ. ಇಮೆಕಾ ಜೇಮ್ಸ್, ಸೋಗು ಹಾಕಿಕೊಂಡು ಮತ್ತೊಬ್ಬರ ಹೆಸರಿನಲ್ಲಿ ಅನುಮತಿ ಸಲಾದ ವೀಸಾ ಹೊಂದಿ ಗಡುವನ್ನು ಮೀರಿ ನಗರದಲ್ಲಿ ಉಳಿದುಕೊಂಡಿದ್ದಾರೆ’ ಎಂದು ನ್ಯಾಯಪೀಠಕ್ಕೆ ವಿವರ ಸಲ್ಲಿಸಿದರು.

ಅಷ್ಟಕ್ಕೂ, ‘ಅರ್ಜಿದಾರರ ವಿರುದ್ಧ ಈಗಾಗಲೇ ಮಾದಕ ದ್ರವ್ಯ ನಿಗ್ರಹ ಕಾಯ್ದೆ-1985ರ (ಎನ್‌ಡಿಪಿಎಸ್) ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಇಬ್ಬರ ವಿರುದ್ಧ 400 ಗ್ರಾಂ ಎಂಡಿಎಂಎ ಮತ್ತು ಕೊಕೇನ್ ಮಾರಾಟ ಮಾಡಿದ ಆರೋಪವಿದೆ. ಆದರೆ, ಅವರು ಭಾರತದ ಸಂವಿಧಾನದ ಅಡಿಯಲ್ಲಿ ನೈಜೀರಿಯನ ಪ್ರಜೆಗಳಾಗಿ ನಮ್ಮ ಹಕ್ಕನ್ನು ಉಲ್ಲಂಘಿಸಿ ಲಾಗಿದೆ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ’ ಎಂದರು.

‘ಅರ್ಜಿದಾರರು ಮಾತ್ರವಲ್ಲದೆ ಇನ್ನೂ ಬಹಳ ಮಂದಿ ವಿದೇಶಿಯರು ಅಧಿಕೃತ ವೀಸಾ ಇಲ್ಲದೆ ನಗರದಲ್ಲಿ ಉಳಿದುಕೊಂಡಿದ್ದಾರೆ ಮತ್ತು ತನಿಖೆಗೆ ಅಗತ್ಯವಿರುವ ಅವಧಿಯನ್ನು ಮೀರಿದ್ದಾರೆ. ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ನಿಯಮಗಳ ಪ್ರಕಾರ, ದೇಶದೊಳಗೆ ಪ್ರವೇಶಿಸುವ ವಿದೇಶಿ ಪ್ರಜೆ 14 ದಿನಗಳ ಒಳಗಾಗಿ ಎಫ್‌ಆರ್‌ಆರ್‌ಒ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಆದರೆ, ಈ ಅರ್ಜಿದಾರರು ಇವತ್ತಿಗೂ ತಮ್ಮನ್ನು ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಂಡಿಲ್ಲ. ಎಫ್‌ಆರ್‌ಆರ್‌ಒ ನೋಂದಣಿ ಇಲ್ಲದೆ ನಗರದಲ್ಲಿ ಉಳಿದುಕೊಂಡಿರುವ ಈ ವಿದೇಶಿ ಪ್ರಜೆಗಳನ್ನು ನಿಭಾಯಿಸುವಲ್ಲಿ ರಾಜ್ಯದ ಕಡೆಯಿಂದಲೂ ಕರ್ತವ್ಯ ಲೋಪವಾಗಿದೆ’ ಎಂದರು.

22ನೇ ವಿಧಿಯ ಪರಾಮರ್ಶೆ

‘ಸುಪ್ರಿಂ ಕೋರ್ಟ್ ಗಮನಿಸಿರುವಂತೆ ಅರ್ಜಿದಾರರು, ಭಾರತದ ಸಂವಿಧಾನದ 22ನೇ ವಿಧಿಯ ಅಡಿಯಲ್ಲಿ ರಕ್ಷಣೆ ಪಡೆಯಲು ಅರ್ಹರು ಹೌದೇ ಅಲ್ಲವೇ ಎಂಬುದು ಜಿಜ್ಞಾಸೆಯ ಸಂಗತಿಯಾಗಿದ್ದು ಈ ಕುರಿತಾಗಿ ನ್ಯಾಯಾಲಯ ಸೂಕ್ತ ಉತ್ತರ ನೀಡುವ ಅಗತ್ಯವಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಯಾವುದೇ ವಿದೇಶಿ ವ್ಯಕ್ತಿಯು ಮಾನ್ಯತೆ ಹೊಂದಿದ ವೀಸಾ ಇಲ್ಲದೆ ಅಥವಾ ಎಫ್‌ಆರ್‌ಆರ್‌ಒ ಕಚೇರಿಯಲ್ಲಿ ನೋಂದಾಯಿಸದೆ ಅವಧಿ ಮೀರಿ ತಂಗಿದ್ದರೆ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ದಾಖಲಾಗಿರುವ ವಿದೇಶಿ ಪ್ರಜೆಗಳು ಸಂವಿಧಾನದ 22ನೇ ವಿಧಿಯ ಅಡಿಯಲ್ಲಿ ಬಂಧನಕ್ಕೆ ಸಂಬಂಧಿಸಿದಂತೆ ರಕ್ಷಣೆ ಪಡೆಯಬಹುದೇ ಎಂಬುದನ್ನು ಪರಾಮರ್ಶಿಸಿ ಸೂಕ್ತ ಆದೇಶ ಹೊರಡಿಸಲಾಗುವುದು’ ಎಂದು ತಿಳಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 5ಕ್ಕೆ ಮುಂದೂಡಿತು.

22ನೇ ವಿಧಿ ಏನನ್ನು ಹೇಳುತ್ತದೆ?

ಭಾರತೀಯ ಸಂವಿಧಾನದ 22ನೇ ವಿಧಿಯು ಬಂಧನ ಮತ್ತು ಬಂಧನವನ್ನು ತಡೆಗಟ್ಟುವ ಸಂದರ್ಭಗಳಲ್ಲಿ ವ್ಯಕ್ತಿಗಳಿಗೆ ರಕ್ಷಣೆ ನೀಡುತ್ತದೆ. ಇದು ಬಂಧನದ ಕಾರಣಗಳನ್ನು ತಿಳಿಯುವ ಹಕ್ಕು, ವಕೀಲರನ್ನು ನೇಮಿಸಿಕೊಳ್ಳುವ ಹಕ್ಕು (22(1)) ಮತ್ತು 24 ಗಂಟೆಗಳ ಒಳಗಾಗಿ ಬಂಧಿಸಿದ ವ್ಯಕ್ತಿಯನ್ನು ಸ್ಥಳೀಯ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸುವ ಹಕ್ಕನ್ನು (22(2)) ಖಾತರಿಪಡಿಸುತ್ತದೆ. ಇದು ಶೋಷಣೆಯ ವಿರುದ್ಧದ ಹಕ್ಕಿನ ಭಾಗವೂ ಆಗಿದೆ.

> ರಾಜ್ಯಕ್ಕೆ ಬರುವ ವಿದೇಶಿಯರು ಎಫ್‌ಆರ್‌ಆರ್‌ಒ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳದೇ ಇರುವ ಬಗ್ಗೆ ರಾಜ್ಯ ಸರ್ಕಾರ ದಿಗ್ಭ್ರಮೆಗೊಳಿಸುವಷ್ಟು ಮೌನ ಪ್ರದರ್ಶಿಸುತ್ತಿರುವುದು ಸೋಜಿಗದ ವಿಚಾರ
>
> **ನ್ಯಾಯಮೂರ್ತಿ ಎಂ.ನಾಗಪ್ರಸನ್ನ**

ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹೇಳಿಕೆ

ಐವರಿಗೆ ‘ಗಡಿನಾಡು ಚೇತನ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ನೀಡುವ ಗಡಿನಾಡು ಚೇತನ ಪ್ರಶಸ್ತಿಗೆ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಮೋಹನ್ ಕಾತರಕಿ ಸೇರಿದಂತೆ ಐವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯದೇವಿ ತಾಯಿ ಲಿಗಾಡೆ ಪ್ರಶಸ್ತಿಗೆ ಮೋಹನ್ ಕಾತರಕಿ, ಚನ್ನಬಸವ ಪಟ್ಟದ್ದೇವರ ಪ್ರಶಸ್ತಿಗೆ ರಾಯಚೂರಿನ ಹೋರಾಟಗಾರ ಮಲ್ಲನಗೌಡ ಇಂದುಪುರ, ಫ.ಗು.ಹಳಕಟ್ಟಿ ಪ್ರಶಸ್ತಿಗೆ ವಿಜಯಪುರದ ನಾಗೇಶ ಕುಲಕರ್ಣಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಕಯ್ಯಾರ ಕಿಞ್ಞಣ್ಣ ರೈ ಪ್ರಶಸ್ತಿಗೆ ಕಾಸರಗೋಡಿನ ನಿವೃತ್ತ ಶಿಕ್ಷಕ ಎನ್.ಚನಿಯಪ್ಪ ನಾಯ್ಕ್, ಬೆಳವಡಿ ಮಲ್ಲಮ್ಮ ಪ್ರಶಸ್ತಿಗೆ ಮಸ್ಕತ್‌ನಲ್ಲಿ ಕನ್ನಡ ಸಂಘ ನಡೆಸುತ್ತಿರುವ ಶಾಲೆಯಲ್ಲಿ ಕನ್ನಡ ಪಾಠ ಮಾಡುತ್ತಿರುವ ಶಿಕ್ಷಕಿಯರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹1 ಲಕ್ಷ, ಫಲಕ ಒಳಗೊಂಡಿದೆ ಎಂದು ತಿಳಿಸಿದರು.

ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿರುವ ಮಲಯಾಳ ಭಾಷಾ ಮಸೂದೆಯನ್ನು ಕೇರಳ ವಿಧಾನಸಭೆಯಲ್ಲಿ ಈಚೆಗೆ ಅಂಗೀಕರಿಸಲಾಗಿದೆ. ಆದರೆ, ಇದಕ್ಕೆ ಒಪ್ಪಿಗೆ ನೀಡದಂತೆ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಮಾಡಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೋಹನ್ ಕಾತರಕಿ

ನಾಗೇಶ ಕುಲಕರ್ಣಿ

ಮಲ್ಲನಗೌಡ ಇಂದುಪುರ

ಎನ್.ಚನಿಯಪ್ಪ ನಾಯ್ಕ

ಕನ್ನಡ ಶಿಕ್ಷಕರ ನೇಮಕಕ್ಕೆ ಒಪ್ಪಿಗೆ

ಗಡಿ ಭಾಗದಲ್ಲಿ ಇರುವ ಕನ್ನಡ ಶಾಲೆಗಳಿಗೆ 135 ಮಂದಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಮಹಾರಾಷ್ಟ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದು ಒಳ್ಳೆಯ ಬೆಳವಣಿಗೆ ಎಂದು ಸೋಮಣ್ಣ ಬೇವಿನಮರದ ತಿಳಿಸಿದರು.

ಗೋವಾದಲ್ಲಿ 12 ಸಾವಿರ ಚದರ ಅಡಿ ಭಾಗದಲ್ಲಿ ಕನ್ನಡ ಭವನ ನಿರ್ಮಾಣ ಮಾಡಲಾಗುವುದು. ಅಕ್ಕಲಕೋಟೆಯಲ್ಲಿ ಜಯದೇವಿ ತಾಯಿ ಲಿಗಾಡೆ ಹೆಸರಿನಲ್ಲಿ ಹಾಗೂ ಕೇರಳದಲ್ಲಿ ಕಯ್ಯಾರ ಕಿಞ್ಞಣ್ಣ ರೈ ಹೆಸರಿನಲ್ಲಿ ಕನ್ನಡ ಭವನ ನಿರ್ಮಿಸಲಾಗಿದೆ. ಸದ್ಯದಲ್ಲೇ ಲೋಕಾರ್ಪಣೆ ಮಾಡಲಾಗುವುದು ಎಂದರು. ಕಳೆದ ವರ್ಷ ಪ್ರಾಧಿಕಾರಕ್ಕೆ ಬಜೆಟ್‌ನಲ್ಲಿ ₹15 ಕೋಟಿ ಅನುದಾನ ನೀಡಲಾಗಿತ್ತು. ಈ ಬಾರಿ ₹100 ಕೋಟಿ ನೀಡುವಂತೆ ಕೇಳಿದ್ದೇವೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ. ಭಾರತ.

ಸಂಖ್ಯೆ : ವಿ.ತಾ.ವಿ./ಬೆ/ಎಸ್.ಎ.ಪಿ./ಸಿ.ಡಬ್ಲ್ಯೂ–1/38/ಟಿ–738/2025–26/5751
ದಿನಾಂಕ : 03–02–2026

ಟೆಂಡರ್ ಪ್ರಕಟಣೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟಂಡರ್ ಮೂಲಕ ಮೊಹರು ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು : **Tender for Printing and Supply of Internal Assessment Books to VTU Post Graduate Centres at Belagavi, Muddenahalli, Kalaburgi, Mysuru, Chinatamani and Talkal.** ಟೆಂಡರಿಗಿಟ್ಟ ಮೊತ್ತ : ರೂ. 25,00,000/–, ಮುಂಗಡ ಠೇವಣಿ : ರೂ. 50,000/–, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17–02–2026 ರ ಅಪರಾಹ್ನ 2.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ : 18–02–2026 ರ ಸಂಜೆ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.

ಸಹಿ/– ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ಡಿಐಪಿಆರ್/ ಬೆಳಗಾವಿ/1755/ಮಣಿಪಾಲ್/2025–26

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ದೂರವಾಣಿ ಸಂಖ್ಯೆ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/5018 ದಿ: 31–01–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಯ ಟೆಂಡರ್ ಕಾಮಗಾರಿಗಾಗಿ ವಿಶೇಶ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 18 ಕಾಮಗಾರಿಗಳ ದ್ವಿ ಲಕೋಟೆ ಪದ್ದತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ **ರೂ.10.00 ಲಕ್ಷಗಳಿಂದ 65.00 ಲಕ್ಷಗಳಿರುತ್ತದೆ.** ಟೆಂಡರ್‌ಗಳನ್ನು **ದಿನಾಂಕ: 04–02–2026** ರಿಂದ **ದಿನಾಂಕ: 17–02–2026 ಸಂಜೆ. 17.30 ಗಂಟೆ** ಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ **ದಿನಾಂಕ: 09–02–2026 ರಂದು ಬೆಳ್ಳಿಗ್ಗೆ 11.00 ಗಂಟೆಗೆ** ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್‌ನ್ನು **ದಿನಾಂಕ: 19–02–2026 ರಂದು ಬೆಳಗ್ಗೆ 11.00 ಗಂಟೆಗೆ** ತೆರೆಯಲಾಗುವುದು, ಆರ್ಥಿಕ ಬಿಡ್‌ನ್ನು **ದಿನಾಂಕ: 21–02–2026 ರಂದು ಬೆಳಗ್ಗೆ 11.00 ಗಂಟೆಗೆ** ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು “ಕೆ.ಪಿ.ಪಿ” ವೆಬ್‌ಸೈಟ್ Karnataka Public Procurement Portal ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ವಾ.ಸಾ.ಇ/ಕೊಪ್ಪಳ/652/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, ‘ಬಿ’ ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630
ಇಮೇಲ್ : dultbangalore@gmail.com, dult@karnataka.gov.in ಜಾಲತಾಣ: https://dult.karnataka.gov.in

ಸಂಖ್ಯೆ: DULT-TECH/59/2025 ದಿನಾಂಕ: 03.02.2026

ಬಿಡ್ ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಗಾಗಿ ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯವು ಕರ್ನಾಟಕದಲ್ಲಿನ ಏಳು (07) ಜಿಲ್ಲಾ ಕೇಂದ್ರಗಳ ಸಂಚಾರ ನಿರ್ವಹಣಾ ಯೋಜನೆಯ (TMP) ನುರಿತ ಸೇವಾ ಪೂರೈಕೆದಾರರಿಂದ ಸಿದ್ಧಪಡಿಸುವ ಸಲುವಾಗಿ ದಿನಾಂಕ: 31.12.2025 ರ ಅಧಿಸೂಚನೆಯಲ್ಲಿ ಪ್ರಕಟಣೆ ಮಾಡಲಾಗಿದ್ದು, ಈ ಕೆಳಕಂಡ ಟೆಂಡರ್‌ನಲ್ಲಿ ಇ–ಬಿಡ್‌ಗಳನ್ನು ಆಹ್ವಾನಿಸಲು ಕೊನೆಯ ದಿನಾಂಕ: **27.02.2026, ಸಂಜೆ 5.30 ವರೆಗೂ** ವಿಸ್ತರಿಸಲಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ಬಿಡ್ಡುದಾರರು ಕರ್ನಾಟಕ ಸರ್ಕಾರದ ವೆಬ್‌ಸೈಟ್ **https://kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಪ್ಯಾಕೇಟ್ ಸಂಖ್ಯೆ	ಜಿಲ್ಲಾ ಕೇಂದ್ರ	ಟೆಂಡರ್ ಸಂಖ್ಯೆ.
1	ಮಡಿಕೇರಿ	DULT/2025-26/SE0032
	ಚಾಮರಾಜನಗರ	
	ಚಿಕ್ಕಬಳ್ಳಾಪುರ	
2	ಹಾವೇರಿ	DULT/2025-26/SE0033
	ಕಾರವಾರ	
3	ಕೊಪ್ಪಳ	DULT/2025-26/SE0034
	ಯಾದಗಿರಿ	

ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ

ವಾಸಾಸಂಇ/ವಾಪ್ರ/5385/ಶಿರಡಿ ಸಾಯಿ/2025–26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ಮರು ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಸಂಖ್ಯೆ: ಕಾಯೋಮೋಶಿ /ಎ2/ಮೋಜಣಿ/ ಇ–ಟೆಂಡರ್/ಸಿಆರ್–12/2025–26 E-1815780 ದಿ: 03.02.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ಶಿವಮೊಗ್ಗ, ಮಂಗಳೂರು, ಕುಂದಾಪುರ ಮತ್ತು ಕುದುರೆಮುಖ ವನ್ಯಜೀವಿ ವಿಭಾಗಗಳ ವಿವಿಧ ವಲಯಗಳಲ್ಲಿನ ಅಧಿಸೂಚಿತ ಅರಣ್ಯ ಪ್ರದೇಶಗಳ ಮರುಮೋಜಣಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ. 112.212 ಲಕ್ಷಗಳ ಒಟ್ಟು 27 ಕಾಮಗಾರಿಗಳಿಗೆ ಅಲ್ಪಾವಧಿ ಮರು ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರಣ್ಯ ಗುತ್ತಿಗೆದಾರರು ದಿನಾಂಕ: 11.02.2026 ರ ಸಂಜೆಯೊಳಗೆ as per KPPP-Portal ಟೆಂಡರನ್ನು ಸಲ್ಲಿಸಬಹುದಾಗಿದೆ.

ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785 ಅಥವಾ ಖುದ್ದಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–(ಜ್ಞಾನಾನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25–26/24/02/1755

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಯಲಹಂಕ ವಿಭಾಗ, ಬೆಂಗಳೂರು – 560064.

ಸಂಖ್ಯೆ: ಬೆಂಉನಪಾ/ಕಾಅ/ಯ–ವಿ/ಕೆಪಿಪಿಪಿ/05/2025–26 ದಿನಾಂಕ: 03–02–2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–04**)

ಕ್ರ. ಸಂ.	ಕಾಮಗಾರಿಯ ಹೆಸರು
1	ಯಲಹಂಕ ವಿಧಾನಸಭಾ ಮತಕ್ಷೇತ್ರದ ಚೌಡೇಶ್ವರಿ ವಾರ್ಡ್ ಸಂಖ್ಯೆ. 02 ರ ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ 208 ಎಸ್‌ಎಫ್‌ಎಸ್ ಇಲ್ಲಿನ ಸೈನಿಕ್ ಥೀಮ್ ಉದ್ಯಾನವನದಲ್ಲಿ ಹೆಚ್ಚುವರಿ ಕೆಲಸಗಳ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,50,000.00**
2	ಯಲಹಂಕದ ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಿಂದ ಕಾವೇರಿ ಲೇಔಟ್ ವರೆಗೆ 30 ಮೀಟರ್ ಅಗಲದ ಹೊಸ ಲಿಂಕ್ ರಸ್ತೆ (ಗ್ಯಾಸ್ ಪೈಪ್‌ಲೈನ್ ರಸ್ತೆ) ರಚನೆ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,50,000.00**
3	ಯಲಹಂಕ ನ್ಯೂ ಟೌನ್ ಇಲ್ಲಿನ ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಲ್ಲಿರುವ ಮೇಲ್ಸೇತುವೆ (ಫ್ಲೇಓವರ್) ನಿರ್ವಹಣೆ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,00,000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **09–02–2026 ರಂದು 15.00 ಗಂಟೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **21–02–2026 ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23–02–2026 ರಂದು 16.00 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬೆಂಉನಪಾ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/TFS/3ನೇ ಕರೆ ಟೆಂಡರ್ ಪ್ರಕಟಣೆ ಸಂಖ್ಯೆ : 12/2025–26 ದಿನಾಂಕ : 28.01.2026
ಉಲ್ಲೇಖ : 1) ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/TFS/ ಟೆಂಡರ್ ಪ್ರಕಟಣೆ ಸಂಖ್ಯೆ : 12/2025–26 ದಿನಾಂಕ : 14.10.2025
2) ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/TFS/2ನೇ ಕರೆ ಟೆಂಡರ್ ಪ್ರಕಟಣೆ ಸಂಖ್ಯೆ : 12/2025–26 ದಿನಾಂಕ : 25.11.2025

ಟೆಂಡರ್ ಪ್ರಕಟಣೆ–3ನೇ ಕರೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ TFS ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 02.02.2026 ರಿಂದ 18.02.2026 ರವರೆಗೆ ಸಂಜೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 13.02.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.02.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **After obtaining approval of technical bid from competent authority** 5) ಕಾಲಾವಧಿ : 12 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 523.46 ಲಕ್ಷಗಳು. 7) ಇಎಂಡಿ ಮೊತ್ತ : ರೂ. 7.86 ಲಕ್ಷಗಳು.
ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/–
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.02–02/ ಝೇಂಕಾರ್/2025–26

‘ಅಬಕಾರಿ: ₹6000 ಕೋಟಿ ಲಂಚ ಸಂಗ್ರಹ’

ಭ್ರಷ್ಟಾಚಾರ ಪ್ರಸ್ತಾಪ: ವಿಧಾನಸಭೆಯಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರದ ಪ್ರಸ್ತಾಪ ವಿಧಾನಸಭೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಭಾರಿ ಗದ್ದಲಕ್ಕೆ ಕಾರಣವಾಯಿತು.

ವಿರೋಧ ಪಕ್ಷಗಳಿಗೆ ಅಗತ್ಯಕ್ಕಿಂತ ಹೆಚ್ಚು ಚರ್ಚೆಗೆ ಅವಕಾಶ ನೀಡಿದ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭಾಧ್ಯಕ್ಷ ಯು.ಟಿ.ಖಾದರ್ ವಿರುದ್ಧವೇ ಹರಿಹಾಯ್ದ ಘಟನೆಯೂ ನಡೆಯಿತು.

ವಿಷಯ ಪ್ರಸ್ತಾಪಿಸಿದ ಅಶೋಕ ಅವರು, ಅಬಕಾರಿ ಇಲಾಖೆಯಲ್ಲಿ ವರ್ಷಕ್ಕೆ ₹6,000 ಕೋಟಿಯಷ್ಟು ಲಂಚ ವಸೂಲಿಯಾಗುತ್ತಿದೆ. ಅದು ಇಲಾಖೆ ಸಚಿವರು ಮತ್ತು ಅವರ ಮಗನ ಜೇಬಿಗೆ ಹೋಗುತ್ತಿದೆ. ಲೈಸೆನ್ಸ್ ನೀಡಲು, ಅಧಿಕಾರಿಗಳ ವರ್ಗಾವಣೆ, ಮದ್ಯದಂಗಡಿಗಳ ಹೆಸರು ಬದಲಾಯಿಸಲು ದರ ನಿಗದಿ ಮಾಡಲಾಗಿದೆ ಎಂದು ಆರೋಪಿಸಿದರು.

‘ಇಲಾಖೆಯಲ್ಲಿ ಪ್ರತಿ ವರ್ಷ ಟಾರ್ಗೆಟ್ ನೀಡಿ ಹಣ ವಸೂಲಿ ಮಾಡಲಾಗುತ್ತಿದೆ. ಎಲ್ಲ ಹಂತದಲ್ಲೂ ಕೈ ಬಿಸಿ ಮಾಡಬೇಕು. ಮದ್ಯದಂಗಡಿ ಲೈಸೆನ್ಸ್‌ಗೆ ಕೆಲವಕ್ಕೆ ₹50 ಲಕ್ಷ , ಇನ್ನು ಕೆಲವಕ್ಕೆ ₹1 ಕೋಟಿ ನಿಗದಿ ಮಾಡಲಾಗಿದೆ. ಪ್ರತಿ ತಿಂಗಳ ಮೊದಲ ವಾರ ಮಾಮೂಲಿ ನೀಡದೇ ಇದ್ದರೆ ಮಾಲೀಕರಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ನಿಮ್ಮ(ಸಿಎಂ) ಒಂದು ಕಾಲದ ಆಪ್ತ ಗುರುಸ್ವಾಮಿಯೇ ಹೇಳಿದ್ದಾರೆ’ ಎಂದು ಅಶೋಕ ಚಾಟಿ ಬೀಸಿದರು.

> ಮನೆ ಮನೆಗೆ ಮದ್ಯ ಪೂರೈಕೆಯೇ ನಿಮ್ಮ ಸರ್ಕಾರದ ಕಲ್ಯಾಣ ಕಾರ್ಯಕ್ರಮ. ಈ ಹಗರಣ ಸರ್ಕಾರಕ್ಕೆ ದೊಡ್ಡ ಕಪ್ಪು ಚುಕ್ಕೆಯಾಗಿದೆ
> **ಆರಗ ಜ್ಞಾನೇಂದ್ರ,** ಬಿಜೆಪಿ

> ಈ ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದಿದ್ದರೆ ಸಚಿವರು ರಾಜೀನಾಮೆ ಕೊಟ್ಟು ಹೋಗಬೇಕಿತ್ತು. ಇಷ್ಟೆಲ್ಲ ದಾಖಲೆಗಳನ್ನು ಕೊಡುತ್ತಿದ್ದರೂ ಕೇಳಿಸಿಕೊಂಡು ಕುಳಿತಿದ್ದಾರೆ
> **ವಿ.ಸುನಿಲ್‌ಕುಮಾರ್,** ಬಿಜೆಪಿ

> ಕೆಲಸಕ್ಕೆ ಬಾರದ್ದನ್ನು ಇಲ್ಲಿಗೆ ತಂದು ಸಾಕ್ಷ್ಯ ಎಂದರೆ ಒಪ್ಪಲು ಸಾಧ್ಯವಿಲ್ಲ. ನಿಮ್ಮ ಬಳಿ ದಾಖಲೆಗಳಿದ್ದರೆ ಲೋಕಾಯುಕ್ತಕ್ಕೆ ಕೊಡಿ
> **ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಸಚಿವ

ವಿಧಾನಸಭೆಯಲ್ಲಿ ಆರ್‌.ಅಶೋಕ ಮಾತನಾಡಿದರು.

> ಯಾವುದೋ ಬಾರಲ್ಲಿ ನಡೆದ ಕಥೆಯನ್ನು ಇಲ್ಲಿ ಹೇಳುತ್ತಿದ್ದಾರೆ. ಇಂತಹ ಕಥೆಗಳು ಬೇಕಾದಷ್ಟಿವೆ. ಅವುಗಳನ್ನೆಲ್ಲ ಇಲ್ಲಿ ಚರ್ಚೆ ಮಾಡಲು ಅವಕಾಶ ನೀಡಬಾರದು
> **ಕೆ.ಎಂ. ಶಿವಲಿಂಗೇಗೌಡ,** ಕಾಂಗ್ರೆಸ್

> ನಮ್ಮ ಮುಖ್ಯಮಂತ್ರಿ ಕಳಂಕರಹಿತರು, ಭ್ರಷ್ಟಾಚಾರದ ಒಂದೂ ಕಪ್ಪು ಚುಕ್ಕೆ ಅವರ ಮೇಲಿಲ್ಲ. ಅವರ ವಿರುದ್ಧ ಬಿಜೆಪಿಯವರು ವೃಥಾ ಆರೋಪ ಹೊರಿಸಿದ್ದಾರೆ
> **ಅಲ್ಲಮಪ್ರಭು ಪಾಟೀಲ,** ಕಾಂಗ್ರೆಸ್

ವರ್ಗಾವಣೆಯಲ್ಲೂ ಭಾರಿ ದಂಧೆ ನಡೆದಿದೆ. ಉಪ ಆಯುಕ್ತರಿಗೆ ₹2.50 ಕೋಟಿಯಿಂದ ₹3.50 ಕೋಟಿ, ಸೂಪರಿಂಟೆಂಡೆಂಟ್ ₹25 ಲಕ್ಷದಿಂದ ₹30 ಲಕ್ಷ, ಡೆಪ್ಯೂಟಿ ಸೂಪರಿಂಟೆಂಡೆಂಟ್ ₹30 ಲಕ್ಷದಿಂದ ₹40 ಲಕ್ಷ, ಅಬಕಾರಿ ವೀಕ್ಷಕರಿಗೆ ₹ 40 ಲಕ್ಷದಿಂದ ₹50 ಲಕ್ಷ , ಪೇದೆಗಳಿಗೆ ₹5 ಲಕ್ಷದಿಂದ ₹8 ಲಕ್ಷ ನೀಡಬೇಕಾಗುತ್ತದೆ ಎಂದು ಹೇಳಿದರು.

ರಾಜ್ಯದಲ್ಲಿ ಒಟ್ಟು 14,229 ಮದ್ಯ ಪೂರೈಸುವ ಮಳಿಗೆಗಳಿವೆ. ಅಚ್ಚರಿ ಎಂದರೆ ರಾಜ್ಯದಲ್ಲಿ ಇಷ್ಟು ಸಂಖ್ಯೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ. ಪ್ರತಿ ತಿಂಗಳು ಒಂದು ಮಳಿಗೆಯಿಂದ ₹15 ಸಾವಿರದಿಂದ ₹20 ಸಾವಿರದವರೆಗೆ ಲಂಚ ವಸೂಲಿ ಮಾಡಲಾಗುತ್ತಿದೆ. ಈ ರೀತಿ ಕನಿಷ್ಠ ₹21 ಕೋಟಿ ಸಂಗ್ರಹಿಸಲಾಗುತ್ತಿದೆ. ವರ್ಷಕ್ಕೆ ₹252 ಕೋಟಿ ಲಂಚ ಸಂಗ್ರಹ ಆಗುತ್ತಿದೆ ಎಂದು ದೂರಿದರು.

‘ಒಕ್ಕಲಿಗರಾ, ಕುರುಬರಾ?.. ದೊಡ್ಡವರ ಬಳಿ ಹೋಗಿ’

‘ಲೈಸೆನ್ಸ್ ನೀಡುವಾಗ ಜಾತಿ ಮತ್ತು ಪಕ್ಷವನ್ನು ಕೇಳುತ್ತಾರೆ. ಜೆಡಿಎಸ್ ಎಂದರೆ, ಒಕ್ಕಲಿಗ ಎಂದರೆ ಲೈಸೆನ್ಸ್ ಕೊಡಲು ಅಧಿಕಾರಿಗಳು ಒಪ್ಪುವುದಿಲ್ಲ’ ಎಂದು ಜೆಡಿಎಸ್‌ನ ಸಮೃದ್ಧಿ ಮಂಜುನಾಥ್ ದೂರಿದರು.

‘ಕೆ.ಆರ್.ಪೇಟೆ ಕ್ಷೇತ್ರದ ವ್ಯಾಪ್ತಿಯಲ್ಲಿ ಸಿಎಲ್ 7 ಗೆ ಒಬ್ಬರು ಅರ್ಜಿ ಹಾಕಿದ್ದರು. ಲೈಸೆನ್ಸ್ ಪಡೆಯಲು ಎಲ್ಲ ರೀತಿಯಿಂದ ಅರ್ಹರಿದ್ದರೂ, ಅವರಿಗೆ ಲೈಸೆನ್ಸ್ ಸಿಗಲಿಲ್ಲ ಎಂದು ಹೇಳಿದರು.

ಅಬಕಾರಿ ಇಲಾಖೆ ಅಧಿಕಾರಿ ನಾಗಶಯನ ಅವರು ಅರ್ಜಿದಾರರಿಗೆ, ‘ನೀವು ಜೆಡಿಎಸ್ ಕಾರ್ಯಕರ್ತರೇ, ಒಕ್ಕಲಿಗರೇ ಎಂದು ಪ್ರಶ್ನಿಸಿದ್ದರು. ಜೆಡಿಎಸ್ ಕಾರ್ಯಕರ್ತ ಅಲ್ಲ, ಆ ಪಕ್ಷಕ್ಕೆ ಮತ ಹಾಕಿದ್ದೇನೆ, ಒಕ್ಕಲಿಗ ಎಂದು ಅವರು ಉತ್ತರಿಸುತ್ತಾರೆ. ನಿಮ್ಮಲ್ಲಿ ಕುರುಬ ಮುಖಂಡರು ಇದ್ದರೆ ಅವರ ಜತೆ ದೊಡ್ಡವರು(ಸಿದ್ದರಾಮಯ್ಯ) ಅಥವಾ ಚಿಕ್ಕವರ (ಯತೀಂದ್ರ) ಬಳಿ ಹೋಗಿ ಹೇಳಿಸಿ ಕೆಲಸ ಆಗುತ್ತದೆ ಎಂದು ಅಧಿಕಾರಿ ಹೇಳುತ್ತಾನೆ. ಇದರ ಆಡಿಯೊ ಇದೆ. ವಿಡಿಯೊವನ್ನು ಕಿತ್ತುಕೊಂಡಿದ್ದಾರೆ. ಸಾಲ ಮಾಡಿಕೊಂಡಿದ್ದ ಅರ್ಜಿದಾರ ಲೈಸೆನ್ಸ್ ಸಿಗದೇ ನಿದ್ದೆ ಮಾತ್ರೆ ಸೇವಿಸಿ ಆತ್ಮಹತ್ಯೆ ಪ್ರಯತ್ನ ಮಾಡಿದ್ದ’ ಎಂದು ವಿವರಿಸಿದರು.

ಪೆನ್‌ಡ್ರೈವ್‌ಪ್ರದರ್ಶಿಸಿದ ಅಶೋಕ, ಕಡತ ತಂದ ಮುನಿರತ್ನ!

‘ಅಬಕಾರಿ ಇಲಾಖೆ ಭ್ರಷ್ಟಾಚಾರದ ಕುರಿತು ಅಧಿಕಾರಿಗಳು ಮಾತನಾಡಿರುವ ಮೂರು ಆಡಿಯೊಗಳು ನನ್ನ ಬಳಿ ಇವೆ’ ಎಂದ ಆರ್. ಅಶೋಕ ಅವರು ಪೆನ್‌ಡ್ರೈವ್‌ಗಳನ್ನು ಪ್ರದರ್ಶಿಸಿದರು.

‘ಇದೇ ವಿಷಯದ ಕುರಿತಂತೆ ಕಡತಗಳ ಎರಡು ದೊಡ್ಡ ಕಟ್ಟುಗಳನ್ನು ಹೊತ್ತು ತಂದಿದ್ದ ಬಿಜೆಪಿಯ ಮುನಿರತ್ನ ಅವರು ತಮ್ಮ ಬಳಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕಡತಗಳಿವೆ ಮಾತನಾಡಲು ಅವಕಾಶ ನೀಡಿ’ ಎಂದು ಅವರು ಸಭಾಧ್ಯಕ್ಷರನ್ನು ಕೋರಿದರು. ಸಚಿವರು ಉತ್ತರ ನೀಡುವಾಗ ಅವಕಾಶ ನೀಡುವುದಾಗಿ ಭರವಸೆ ನೀಡಿದರು.

‘ವಸತಿ ಹಂಚಿಕೆ: ಕುಡಿತಕ್ಕೆ ಸರ್ಕಾರವೇ ಪ್ರಚೋದನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹುಬ್ಬಳ್ಳಿಯಲ್ಲಿ ವಸತಿ ಹಂಚಿಕೆ ಕಾರ್ಯಕ್ರಮದಲ್ಲಿ ಸುಮಾರು ಎರಡು ಲಕ್ಷ ಜನ ಸೇರುವುದರಿಂದ ಮದ್ಯದ ಲೈಸೆನ್ಸ್ ಹೊಂದಿರುವ ಎಲ್ಲ ಅಂಗಡಿ–ಮಳಿಗೆಯವರು ಹೆಚ್ಚು ಪ್ರಮಾಣದಲ್ಲಿ ಮದ್ಯ ಮಾರಾಟ ಮಾಡಬೇಕು ಎಂದು ಅಬಕಾರಿ ಇಲಾಖೆ ಅಧಿಕಾರಿ ಪ್ರಕಾಶ್ ಪಾಟೀಲ ವಾಟ್ಸ್‌ಆ್ಯಪ್ ಮೂಲಕ ಸಂದೇಶ ಕಳುಹಿಸಿದ್ದರು’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ವಿಧಾನಸಭೆಯ ಗಮನಕ್ಕೆ ತಂದರು.

‘ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಸಚಿವರು ಭಾಗವಹಿಸುತ್ತಿದ್ದಾರೆ. ಭಾರಿ ಪ್ರಮಾಣದಲ್ಲಿ ಜನರ ಸೇರುವ ಸಾಧ್ಯತೆ ಇದೆ. ಹೀಗಾಗಿ ನಿಮ್ಮ ಮಾರಾಟ ಮಳಿಗೆಗಳಲ್ಲಿ ಸಾಕಷ್ಟು ಮದ್ಯ ಮತ್ತು ಬಿಯರ್ ಅನ್ನು ಕೆಎಸ್‌ಬಿಸಿಎಲ್ ಡಿಪೊದಿಂದ ತಂದು ಸಂಗ್ರಹಿಸಿ ಇಟ್ಟುಕೊಳ್ಳಬೇಕು ಎಂದು ಹೇಳಿದ್ದಾರೆ. ಇದು ಸರ್ಕಾರದ ನಿರ್ದೇಶನದ ಮೇರೆಗೆ ಅವರು ಸಂದೇಶ ಕಳುಹಿಸಿರಬಹುದು’ ಎಂದು ಅವರು ತರಾಟೆಗೆ ತೆಗೆದುಕೊಂಡರು.

‘ಈ ಅಧಿಕಾರಿ ಪ್ರಾಯಶಃ ಹೆಚ್ಚು ಲಂಚ ಕೊಟ್ಟು ಆ ಸ್ಥಾನಕ್ಕೆ ಬಂದಿರಬೇಕು. ಒಟ್ಟಿನಲ್ಲಿ ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಹೆಚ್ಚು ಕುಡಿಸಿ ಹಣ ಲೂಟಿ ಮಾಡಬೇಕು ಎಂಬುದೇ ಇವರ ಉದ್ದೇಶ’ ಎಂದು ವ್ಯಂಗ್ಯವಾಡಿದರು.

‘ಆಧುನಿಕ ಗುಲಾಮಗಿರಿಗೆ ತಳ್ಳುವ ಕಾಯ್ದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೂದ್ರರಿಗೆ ಆರ್ಥಿಕವಾಗಿ ಶಕ್ತಿ ಬಂದರೆ ಅವರು ಸೇವಕರಾಗಿ ಉಳಿಯುವುದಿಲ್ಲ ಎಂದು ಮನುಸ್ಮೃತಿ ಹೇಳುತ್ತದೆ. ಮನುಸ್ಮೃತಿ ಪ್ರಕಾರ ನಡೆಯುವ ಬಿಜೆಪಿಯವರು ಇದೇ ಕಾರಣಕ್ಕೆ ‘ವಿಬಿ ಜಿ ರಾಮ್ ಜಿ’ ಕಾಯ್ದೆ ಜಾರಿ ಮಾಡಿದ್ದು, ಕಾರ್ಮಿಕರನ್ನು ಆಧುನಿಕ ಗುಲಾಮಗಿರಿಗೆ ತಳ್ಳುವ ಈ ಕಾಯ್ದೆ ರದ್ದುಪಡಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ವಿಧಾನಸಭೆಯಲ್ಲಿ ವಿಬಿ ಜಿ ರಾಮ್ ಜಿ ಕಾಯ್ದೆಯ ವಿರುದ್ಧ ನಿರ್ಣಯ ಮಂಡಿಸಿ ಅವರು ಮಾತನಾಡಿದರು. ಬಿಜೆಪಿ–ಜೆಡಿಎಸ್ ಸದಸ್ಯರು ಮುಖ್ಯಮಂತ್ರಿಯವರ ಮಾತಿಗೆ ಪದೇ ಪದೇ ಅಡ್ಡಿಪಡಿಸುತ್ತಲೇ ಇದ್ದರು.

‘ಮನುಸ್ಮೃತಿ ಪ್ರಕಾರ ನಡೆಯುವುದು ಆರ್‌ಎಸ್‌ಎಸ್. ಆರ್‌ಎಸ್‌ಎಸ್‌ನ ಮಾರ್ಗದರ್ಶನದಂತೆ ನಡೆಯುವವರು ಬಿಜೆಪಿಯವರು.ಮೇಲಿನವರನ್ನು ತೃಪ್ತಿ ಮಾಡಲು ಬಿಜೆಪಿಯವರು ಈ ನಿರ್ಣಯ ವಿರೋಧಿಸುತ್ತಿದ್ದಾರೆ. ದೆಹಲಿಯವರು ಹೇಳಿದಂತೆ ನಡೆದುಕೊಳ್ಳುತ್ತಿದ್ದಾರೆ. ಆರ್‌ಎಸ್‌ಎಸ್‌ನವರು ಬರೆದುಕೊಟ್ಟಿದ್ದನ್ನು ತಂದು ಮಾತನಾಡುತ್ತಾರೆ’ ಎಂದು ಲೇವಡಿ ಮಾಡಿದರು.

ಬಿಜೆಪಿ ನಡವಳಿಕೆ ವಿರುದ್ಧ ರೊಚ್ಚಿಗೆದ್ದ ಸಿದ್ದರಾಮಯ್ಯ

‘ಏಳ್ರಿ ಎಲ್ಲ... ಎದ್ದು ಗಲಾಟೆ ಮಾಡ್ರಿ...’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಏಳ್ರಿ ಎಲ್ಲ ಎದ್ದು ಗಲಾಟೆ ಮಾಡ್ರಿ... ಏಯ್ ರಾಯರಡ್ಡಿ ಯಾಕೆ ಕೂತಿದ್ದೀಯಾ ಏಳು....’

ಹೀಗೆಂದು ಅವುಡುಗಚ್ಚಿ ತಮ್ಮ ಪಕ್ಷದ ಸದಸ್ಯರನ್ನು ಎಬ್ಬಿಸಿ, ವಿರೋಧ ಪಕ್ಷಗಳ ವಿರುದ್ಧ ಛೂಬಿಟ್ಟಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ.

ವಿಬಿ ಜಿ ರಾಮ್ ಜಿ ವಿರುದ್ಧ ನಿರ್ಣಯ ಮಂಡಿಸುವ ವೇಳೆ ವಿರೋಧ ಪಕ್ಷಗಳು ಅಡ್ಡಿಪಡಿಸಿದ್ದರಿಂದ ಸಿದ್ದರಾಮಯ್ಯ ರೊಚ್ಚಿಗೆದ್ದಿದ್ದರು.

ಅಬಕಾರಿ ಇಲಾಖೆ ಭ್ರಷ್ಟಾಚಾರದ ಕುರಿತ ಚರ್ಚೆ ಆರಂಭವಾಗುವ ವೇಳೆ ಸದನದಲ್ಲಿ ಇದ್ದ ಸಿದ್ದರಾಮಯ್ಯ ಹೊರ ಹೋಗಿ ವಾಪಸ್ ಬರುವ ವೇಳೆಗೆ ಇನ್ನೂ ಅಶೋಕ ಮಾತನಾಡುತ್ತಿದ್ದದ್ದು ಅವರ ಸಿಟ್ಟಿಗೆ ಕಾರಣವಾಯಿತು. ಬಳಿಕ ಜೆಡಿಎಸ್‌ನ ಸಮೃದ್ಧಿ ಮಂಜುನಾಥ್ ಅವರಿಗೆ ಅವಕಾಶ ನೀಡಲು ಸಭಾಧ್ಯಕ್ಷರು ಮುಂದಾದಾಗ ಈ ಬಗ್ಗೆ ಸಿದ್ದರಾಮಯ್ಯ ಅವರು ಆಕ್ಷೇಪ ಎತ್ತಿದರು.

‘ನಿಮ್ಮ ಚೇಂಬರ್‌ನಲ್ಲಿ ಹೇಳಿದ್ದೇನು? ಕಲಾಪ ಅಜೆಂಡಾ ಪ್ರಕಾರ ನಡೆಯಲಿ. ನರೇಗಾ ಬಗ್ಗೆ ಚರ್ಚೆ ಆಗಲಿ ಎಂದೇ ಸದನ ಮೂರು ದಿನಗಳ ವಿಸ್ತರಣೆ ಮಾಡಿದ್ದು? ಅಶೋಕ, ಸುನಿಲ್ ಅವರೂ ಇದ್ದರಲ್ವಾ’ ಎಂದು ಸಿದ್ದರಾಮಯ್ಯ ಸಿಡಿಮಿಡಿಗೊಂಡರು.

ಮಧ್ಯ ಪ್ರವೇಶಿಸಿದ ಬಿಜೆಪಿ ವಿ.ಸುನಿಲ್ ಕುಮಾರ್, ‘ನರೇಗಾ ಬಗ್ಗೆ ಚರ್ಚೆಗೆ ಸಿದ್ಧರಿದ್ದೇವೆ. ಆದರೆ ಅಬಕಾರಿ ಇಲಾಖೆ ಭ್ರಷ್ಟಾಚಾರದ ಕುರಿತು ಚರ್ಚೆ ನಡೆಸಲು ನೀವು ಸಿದ್ಧರಿಲ್ಲ. ನರೇಗಾದಲ್ಲಿ ಲೂಟಿ ಹೊಡೆಯಲು ಆಗುವುದಿಲ್ಲ ಎಂಬುದೇ ನಿಮ್ಮ ಸಂಕಟ. ರಾತ್ರಿ 12 ಗಂಟೆಯವರೆಗೆ ಚರ್ಚೆಗೆ ನಾವು ಸಿದ್ಧರಿದ್ದೇವೆ. ತಾಳ್ಮೆ ಕಳೆದುಕೊಳ್ಳಬೇಡಿ’ ಎಂದು ಕಾಲೆಳೆದರು.

ನಿರ್ಣಯ ಓದುವಾಗ ಬಿಜೆಪಿ ಸದಸ್ಯರು ಪದೇ ಪದೇ ಅಡ್ಡಿಪಡಿಸಿದ್ದರಿಂದ, ‘ಮಾತು ಕೇಳದವರನ್ನು ಹೊರಗೆ ಹಾಕ್ರಿ’ ಎಂದು ಸಿದ್ದರಾಮಯ್ಯ ಗುಡುಗಿದರು.

ಬಿಜೆಪಿ– ಜೆಡಿಎಸ್ ಸದಸ್ಯರ ಘೋಷಣೆ ಮತ್ತೆ ಹೆಚ್ಚಾದಾಗ, ‘ಇನ್ನು ನೀವು (ಸಭಾಧ್ಯಕ್ಷರು) ಕರೆದರೆ ನಾವು ಸಭೆಗೆ ಬರುವುದಿಲ್ಲ. ಸಭೆಯಲ್ಲಿ ಬಿಜೆಪಿ ನಾಯಕರು ಕೊಟ್ಟ ಮಾತೇನು? ಒಂದು ಗಂಟೆ ಮಾತಾಡ್ತೇವೆ ಎಂದು ಅಶೋಕನೇ ಎರಡು ಗಂಟೆ ಮಾತಾಡಿದ್ದಾರೆ. ಅವರಿಗೆ (ಬಿಜೆಪಿ) ಮಾನ ಮರ್ಯಾದೆ ಇಲ್ಲ’ ಎಂದು ಕಿಡಿಕಾರಿದರು. ಈ ಮಧ್ಯೆ ನರೇಗಾದಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ಸಿಎಜಿ ವರದಿಯನ್ನು ಅರವಿಂದ ಬೆಲ್ಲದ ಗಟ್ಟಿಯಾಗಿ ಓದಿದರು. ವಿರೋಧ ಪಕ್ಷಗಳ ಸದಸ್ಯರ ಒಂದೇ ಸಮನೆ ಧಿಕ್ಕಾರ ಕೂಗುತ್ತಿದ್ದರು.

ಆ ವೇಳೆಗಾಗಲೇ ಸಿದ್ದರಾಮಯ್ಯ ಅವರ ತಾಳ್ಮೆಯ ಕಟ್ಟೆ ಒಡೆದಿತ್ತು. ತಮ್ಮ ಪಕ್ಷದ ಸದಸ್ಯರೂ ಸುಮ್ಮನೆ ಕೂತಿದ್ದನ್ನು ಕಂಡು ಮತ್ತಷ್ಟು ಕೆರಳಿದರು. ಎಲ್ಲರತ್ತ ಕೈ ಮಾಡಿ ‘ಏಳ್ರಿ ಗಲಾಟೆ ಮಾಡ್ರಿ... ನಿಮಗೆ ಮಾತ್ರ ಅಲ್ಲ, ನಮಗೂ ಗಲಾಟೆ ಮಾಡಲು ಬರಲ್ವಾ’ ಎಂದು ಏರಿದ ಧ್ವನಿಯಲ್ಲಿ ಹೇಳಿದರು. ಆಗ ಕಾಂಗ್ರೆಸ್‌ನ ಎಲ್ಲ ಸದಸ್ಯರೂ ಎದ್ದು ಬಿಜೆಪಿ ವಿರುದ್ಧ ಧಿಕ್ಕಾರ ಕೂಗಲಾರಂಭಿಸಿದರು. ಸಿದ್ದರಾಮಯ್ಯ ಅವರೂ ಮುಷ್ಟಿ ಕಟ್ಟಿ ಕೈ ಮೇಲೆತ್ತಿ ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿದರು.

ವಿರೋಧ ಪಕ್ಷಗಳ ಸದಸ್ಯರು ‘ಕಾಂಗ್ರೆಸ್ ಲೂಟಿ ಲೂಟಿ’ ಎಂದು ಕೂಗಿದರೆ, ಆಡಳಿತ ಸದಸ್ಯರು ಬಿಜೆಪಿ ಲೂಟಿ ಲೂಟಿ’ ಎಂದು ಘೋಷಣೆ ಕೂಗುತ್ತಲೇ ಇದ್ದರು.

ಮಾತು ಕೆಡಿಸಿದ ‘ನಾಲಗೆ’: ಕಲಾಪ ವ್ಯರ್ಥ

ವಿಧಾನಪರಿಷತ್: ಕಾಂಗ್ರೆಸ್–ಬಿಜೆಪಿ ಸದಸ್ಯರ ವಾಗ್ವಾದ– ಗದ್ದಲದಲ್ಲೇ ಮುಗಿದ ಇಡೀ ದಿನದ ಕಲಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ನಸೀರ್ ಅಹಮದ್, ಬಿಜೆಪಿಯ ಸಿ.ಟಿ.ರವಿ ಅವರು ಆಡಿದ ಮಾತುಗಳು ವಿಧಾನ ಪರಿಷತ್‌ನ ಇಡೀ ದಿನದ ಕಲಾಪವನ್ನು ವ್ಯರ್ಥ ಮಾಡಿದವು.

ಸೋಮವಾರದ ಕಲಾಪದಲ್ಲಿ ನಸೀರ್ ಅಹಮದ್ ಅವರು ಪ್ರಧಾನಿ ಕುರಿತು ಬಳಸಿದ ಪದಗಳು ಬಿಜೆಪಿಯವರ ಸಿಟ್ಟಿಗೆ ಕಾರಣವಾಗಿತ್ತು. ಮಂಗಳವಾರ ಕಲಾಪ ಆರಂಭವಾದಾಗ, ನಸೀರ್ ಅವರು ತಮ್ಮ ಮಾತಿಗೆ ವಿಷಾದ ವ್ಯಕ್ತಪಡಿಸಿದರು. ಚರ್ಚೆಯ ವೇಳೆ ಸಿ.ಟಿ.ರವಿ ಅವರು ತಾವು ಆಡಿದ ಮಾತಿಗೆ ಕ್ಷಮೆ ಕೇಳಲು ನಿರಾಕರಿಸಿದ ಕಾರಣ ಕಾಂಗ್ರೆಸ್–ಬಿಜೆಪಿ ಸದಸ್ಯರ ನಡುವೆ ವಾಗ್ವಾದ ತಾರಕಕ್ಕೇರಿತು. ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಬಿಜೆಪಿ ಸದಸ್ಯರು ರವಿ ಬೆಂಬಲಕ್ಕೆ ನಿಂತರು. ಕ್ಷಮೆಯಾಚನೆಗೆ ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದರು. ಸಭಾಪತಿ ಪೀಠದಲ್ಲಿದ್ದ ಎಂ.ಕೆ.ಪ್ರಾಣೇಶ್ ಅವರ ಮಾತಿಗೂ ಸಿ.ಟಿ. ರವಿ ಜಗ್ಗಲಿಲ್ಲ. ಕೊನೆಗೆ ಕಲಾಪವನ್ನು ಬುಧವಾರಕ್ಕೆ ಮುಂದೂಡಲಾಯಿತು.

‘ನಸೀರ್ ಅಹಮದ್ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಟೀಕಿಸಿದ್ದರು. ಹೀಗೆ ಹೇಳುವ ನಾಲಗೆ ಭಾರತದ ನಾಲಗೆಯಂತೂ ಅಲ್ಲ ಎಂದಿದ್ದೇನೆ. ಅವರ ಹೆಸರನ್ನೂ ಉಲ್ಲೇಖಿಸಿಲ್ಲ. ಯಾವ ತಪ್ಪು ಮಾಡದೆ ಒತ್ತಡಕ್ಕೆ ವಿಷಾದ ವ್ಯಕ್ತಪಡಿಸುವುದು ಆತ್ಮವಂಚನೆಯಾಗುತ್ತದೆ. ಹಾಗಾಗಿ, ಕ್ಷಮೆ ಕೇಳುವುದಿಲ್ಲ’ ಎಂದು ಸಿ.ಟಿ.ರವಿ ತಮ್ಮ ಮಾತನ್ನು ಸಮರ್ಥಿಸಿಕೊಂಡರು.

ನಸೀರ್ ವಿರುದ್ಧ ಬಿಜೆಪಿ ಧರಣಿ: ಕಲಾಪ ಆರಂಭವಾಗುತ್ತಲೇ ಬಿಜೆಪಿ, ಜೆಡಿಎಸ್ ಸದಸ್ಯರು ಸಭಾಪತಿ ಅವರ ಪೀಠದ ಎದುರು ಬಂದು ಧರಣಿ ನಡೆಸಿದರು.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಪದ ಬಳಸಿದ ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ವಿಧಾನಪರಿಷತ್ ಸಭಾಪತಿ ಪೀಠದ ಮುಂದೆ ಮಂಗಳವಾರ ಪ್ರತಿಭಟನೆ ನಡೆಸಿದರು

‘ಪ್ರಧಾನಿ ವಿರುದ್ಧ ಟೀಕೆ ಮಾಡಿರುವ ನಸೀರ್ ಅಹಮದ್ ಅವರನ್ನು ಅಮಾನತು ಮಾಡಬೇಕು’ ಎಂದು ಆಗ್ರಹಿಸಿದರು.

ಈ ವೇಳೆ ಸಿ.ಟಿ.ರವಿ ಅವರು, ‘ಪ್ರಧಾನಿ ಕುರಿತಾಗಿ ಯಾವ ಭಾರತೀಯ ನಾಲಗೆಯೂ ಹೀಗೆ ಹೇಳುವುದಿಲ್ಲ. ಆ ನಾಲಗೆ ಯಾವುದು ಎಂಬುದನ್ನು ಪತ್ತೆ ಮಾಡಿ, ಅದು ನೆರೆಯ ದೇಶದ (ದೇಶದ ಹೆಸರನ್ನು ಕಡತದಿಂದ ತೆಗೆದುಹಾಕಲಾಯಿತು) ನಾಲಗೆ ಇರಬಹುದು’ ಎಂದು ಸಭಾಪತಿ ಅವರನ್ನು ಆಗ್ರಹಿಸಿದರು.

ಆಗ ಸಭಾಪತಿ ಹೊರಟ್ಟಿ ಅವರು, ಮಂಗಳವಾರ ನಸೀರ್ ಅವರು ಆಡಿದ್ದ ಮಾತನ್ನು ತರಿಸಿ ಓದಿದರು. ‘ಪ್ರಧಾನಿ ಕುರಿತಾಗಿ ಈ ರೀತಿಯ ಮಾತು ಆಡುವುದು ತರವಲ್ಲ. ಬೇಷರತ್ ಕ್ಷಮೆ ಕೇಳಿ’ ಎಂದು ಸೂಚಿಸಿದರು. ಈ ಬಗ್ಗೆ ವಿವರಣೆ ನೀಡಲು ನಸೀರ್ ಅವರು ಎದ್ದು ನಿಂತು, ‘ಪ್ರಚೋದನೆ ಮಾಡಿದ್ದರಿಂದಲೇ’ ಎನ್ನುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪ ಎತ್ತಿದರು.

‘ಬೇಷರತ್ ಕ್ಷಮೆ ಕೇಳಬೇಕು. ವಿವರಣೆಗೆ ಅವಕಾಶ ನೀಡಬಾರದು’ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು. ವಿರೋಧ ಪಕ್ಷಗಳ ಸದಸ್ಯರು ದನಿಗೂಡಿಸಿದರು.

> ಸಿ.ಟಿ.ರವಿ ಅವರು ಯಾರನ್ನು ಉದ್ದೇಶಿಸಿ ಆ ಮಾತು ಹೇಳಿದ್ದಾರೆ ಎನ್ನುವುದು ನನಗೆ, ಸದನಕ್ಕೆ ಅರ್ಥವಾಗಿದೆ. ಅಂತಹ ಮಾತು ಆಡಬಾರದು. ಸದನದ ಕ್ಷಮೆ ಕೇಳಿದರೆ ಯಾರೂ ಸಣ್ಣವರಾಗುವುದಿಲ್ಲ
> **ಬಸವರಾಜ ಹೊರಟ್ಟಿ,** ವಿಧಾನ ಪರಿಷತ್ ಸಭಾಪತಿ

ಈ ಮಧ್ಯೆ ಮತ್ತೆ ಎದ್ದುನಿಂತ ನಸೀರ್, ‘ಸಿ.ಟಿ.ರವಿ ಅವರು ನೆರೆಯ ದೇಶದ ನಾಲಗೆ ಎಂದು ಹೇಳಿದ್ದಾರೆ. ನಾವೂ ಭಾರತೀಯರು. ಇಲ್ಲೇ ಹುಟ್ಟಿದ್ದೇವೆ, ಇಲ್ಲೇ ಸಾಯುತ್ತೇವೆ. ನಮ್ಮ ಮನೆಯವರೂ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಜೈಲಿಗೆ ಹೋಗಿದ್ದಾರೆ. ರವಿ ಅವರ ಮಾತಿನಿಂದ ನೋವಾಗಿದೆ. ಅವರು ಕ್ಷಮೆ ಕೇಳಲಿ’ ಎಂದು ಹೊಸಪಟ್ಟು ಹಾಕಿದರು.

ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ‘ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ನಮ್ಮ ದೇಶಭಕ್ತಿಯನ್ನು ಪ್ರಶ್ನಿಸಲಾಗುತ್ತಿದೆ’ ಎಂದು ಪಟ್ಟು ಬಿಗಿಗೊಳಿಸಿದರು. ಕಾಂಗ್ರೆಸ್ ಸದಸ್ಯೆ ಬಲ್ಕಿಸ್ ಬಾನು, ‘ಪದೇ–ಪದೇ ಪಾಕಿಸ್ತಾನದ ಹೆಸರು ಉಲ್ಲೇಖಿಸಿ ನಮ್ಮನ್ನು ಗುರಿ ಮಾಡುವುದು ಬಿಜೆಪಿಗೆ ಚಾಳಿಯಾಗಿಬಿಟ್ಟಿದೆ. ಅವರು ಕ್ಷಮೆ ಕೇಳಲೇಬೇಕು’ ಎಂದು ದನಿಗೂಡಿಸಿದರು.

ಈ ಹೊತ್ತಿಗೆ ಸದನದಲ್ಲಿ ಗದ್ದಲ ಹೆಚ್ಚಾಯಿತು. ಹೊರಟ್ಟಿ ಅವರು ಸದನವನ್ನು ಐದು ನಿಮಿಷ ಮುಂದೂಡಿ, ಸಭಾನಾಯಕ, ಸರ್ಕಾರದ ಮುಖ್ಯ ಸಚೇತಕ, ವಿರೋಧ ಪಕ್ಷದ ನಾಯಕ, ಸಚಿವ ಎಚ್‌.ಕೆ.ಪಾಟೀಲ, ನಸೀರ್ ಅಹಮದ್, ಕಾಂಗ್ರೆಸ್‌ನ ಪುಟ್ಟಣ್ಣ ಅವರನ್ನು ಕರೆದು ತಮ್ಮ ಕೊಠಡಿಯಲ್ಲಿ ಸಭೆ ನಡೆಸಿದರು. ಸುಮಾರು ಒಂದೂವರೆ ತಾಸಿನವರೆಗೂ ನಡೆದ ಸಭೆಯ ನಂತರ ಕಲಾಪ ಆರಂಭವಾಯಿತು. ಹೊರಟ್ಟಿ ಅವರ ಸೂಚನೆ ಮೇರೆಗೆ ನಸೀರ್ ಅವರು, ‘ನನ್ನ ಮಾತಿನಿಂದ ನೋವಾಗಿದ್ದರೆ ವಿಷಾದಿಸುತ್ತೇನೆ’ ಎಂದರು. ಸಭಾಪತಿ ಸೂಚಿಸಿದರೂ ಸಿ.ಟಿ.ರವಿ ಅವರು ಕ್ಷಮೆ ಕೇಳಲು ನಿರಾಕರಿಸಿದರು.

ಇಸ್ರೇಲ್‌ನಲ್ಲಿ ಕುಣಿದವರು ಯಾರು?

‘ನಾಲಗೆ’ ಎಂಬ ಪದ ಬಳಕೆಯ ವಿರುದ್ಧ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ನಡುವೆ ವಾಗ್ವಾದ ನಡೆಯುತ್ತಿರುವಾಗ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಅವರ ಮಾತು ಪರಿಸ್ಥಿತಿಯನ್ನು ಮತ್ತಷ್ಟು ವಿಕೋಪಕ್ಕೆ ತಿರುಗಿಸಿತು.

‘ನೀವು ಪ್ರಧಾನ ಮಂತ್ರಿ, ಬಿಜೆಪಿ ಟೀಕೆ ಮಾಡಿದವರನ್ನು ಪಾಕಿಸ್ತಾನದ ನಾಲಗೆ ಎನ್ನುತ್ತೀರಿ. ಪಾಕಿಸ್ತಾನಕ್ಕೆ ಹೋಗಿ ಬಿರಿಯಾನಿ ತಿಂದು ಬಂದ ನಾಲಗೆ ಯಾವುದು? ಸರಣಿ ಅತ್ಯಾಚಾರಿ ಮೆಚ್ಚಿಸಲು ಇಸ್ರೇಲ್‌ನಲ್ಲಿ ಕುಣಿದು, ಕುಪ್ಪಳಿಸಿ ಬಂದ ನಾಲಗೆ ಯಾರದು ಎಂದು ಹರಿಪ್ರಸಾದ್ ಏರಿದ ಧ್ವನಿಯಲ್ಲಿ ಪ್ರಶ್ನಿಸಿದರು. ಅವರ ಮಾತಿಗೆ ಬಿಜೆಪಿ ಸದಸ್ಯರು ಭಾರಿ ಆಕ್ರೋಶ ವ್ಯಕ್ತಪಡಿಸಿದರು.

ನೆಹರೂ, ಸಿಂಗ್ ದೇಶದ ಪ್ರಧಾನಿ ಆಗಿರಲಿಲ್ಲವೇ: ಸಂತೋಷ್ ಲಾಡ್

‘ಪ್ರಧಾನಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಅವರನ್ನು ಬಾಯಿಗೆ ಬಂದಂತೆ ಟೀಕೆ ಮಾಡುವಾಗ ನರೇಂದ್ರ ಮೋದಿ ಹಾಗೂ ಬಿಜೆಪಿ ನಾಯಕರಿಗೆ ದೇಶ ಪ್ರೇಮ ನೆನಪಾಗಲಿಲ್ಲವೇ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರಶ್ನಿಸಿದರು.

ಮನಮೋಹನ್ ಸಿಂಗ್ ಅವರನ್ನು ಮೋದಿ ಅವರು ‘ಟೆರರಿಸ್ಟ್’ ಎಂದಿದ್ದರು. ನೆಹರೂ, ಇಂದಿರಾ, ರಾಜೀವ್ ಗಾಂಧಿ ಈ ದೇಶದ ಪ್ರಧಾನಿಗಳಾಗಿರಲಿಲ್ಲವೇ? ಅವರನ್ನು ಅಂದು, ಇಂದೂ ಟೀಕಿಸುತ್ತಲೇ ಇದ್ದಾರೆ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ವಿರುದ್ಧ ಬಿಜೆಪಿಗರು ಬಳಸುವ ಪದಗಳಿಗೆ ಕ್ಷಮೆಯೇ ಇಲ್ಲ. ಮೋದಿ ವಿರುದ್ಧದ ಟೀಕೆಗಳನ್ನು ಮಾತ್ರ ದೇಶದ್ರೋಹ ಎನ್ನುತ್ತಾರೆ ಎಂದು ದೂರಿದರು.

24 ಅಂಶಗಳ ಪಟ್ಟಿಸಹಿತ ಸರ್ಕಾರಕ್ಕೆ ಮಸೂದೆ ವಾಪಸ್

ದ್ವೇಷ ಭಾಷಣ ತಡೆ: ಕಾಯ್ದಿರಿಸಿದ ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂವಿಧಾನಿಕವಾಗಿ ಸಂರಕ್ಷಿತ ಪ್ರಜಾಪ್ರಭುತ್ವದ ಚರ್ಚೆಯ ಮೇಲೆ ತೀವ್ರ ನಕಾರಾತ್ಮಕ ಪರಿಣಾಮ ಉಂಟು ಮಾಡುವ ಸಾಧ್ಯತೆಯೂ ಸೇರಿದಂತೆ ಹಲವು ಕಾರಣಗಳನ್ನು ಉಲ್ಲೇಖಿಸಿ, ದ್ವೇಷ ಭಾಷಣ ತಡೆ ಮಸೂದೆಗೆ ಅಂಕಿತ ಹಾಕದ ರಾಜ್ಯಪಾಲರು, ಮಸೂದೆಯನ್ನು ರಾಷ್ಟ್ರಪತಿಯ ವಿವೇಚನೆಗೆ ಕಾಯ್ದಿರಿಸಿ ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ.

ಥಾವರಚಂದ್ ಗೆಹ್ಲೋತ್

‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ -2025’ ಕ್ಕೆ ಅಂಕಿತ ಹಾಕುವಂತೆ ಕೋರಿ, ರಾಜ್ಯ ಸರ್ಕಾರ ಮಸೂದೆಯನ್ನು ಲೋಕಭವನಕ್ಕೆ ಕಳುಹಿಸಿತ್ತು.

‘25ಕ್ಕೂ ಅಂಶಗಳನ್ನು ಪಟ್ಟಿ ಮಾಡಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತಮ್ಮ ಅಭಿಪ್ರಾಯಗಳ ಸಹಿತ ಮಸೂದೆಯನ್ನು ವಾಪಸ್ ಮಾಡಿದ್ದಾರೆ. ಕಾನೂನು ಇಲಾಖೆಯ ಪರಿಶೀಲನೆಯ ಬಳಿಕ ರಾಷ್ಟ್ರಪತಿಗೆ ಕಳುಹಿಸುವ ಬಗ್ಗೆ ಸರ್ಕಾರ ನಿರ್ಧರಿಸಲಿದೆ’ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ದ್ವೇಷ ಭಾಷಣ ವ್ಯಾಖ್ಯಾನಕ್ಕೆ ಆಕ್ಷೇಪ

‘ಮಸೂದೆಯಲ್ಲಿ ದ್ವೇಷ ಭಾಷಣದ ವ್ಯಾಖ್ಯಾನದಲ್ಲಿ ಪೂರ್ವಗ್ರಹದಿಂದ ಧರ್ಮ, ಜಾತಿ, ಜನಾಂಗ, ಲಿಂಗ, ಜನ್ಮಸ್ಥಳ ಅಥವಾ ಅಂಗವಿಕಲತೆಗೆ ಸಂಬಂಧಿಸಿದಂತೆ ವ್ಯಕ್ತಿ ಅಥವಾ ಗುಂಪಿನ ವಿರುದ್ಧ ಹಾನಿ ಅಥವಾ ಸಾಮರಸ್ಯಕ್ಕೆ ಧಕ್ಕೆ ತರುವ ಅಭಿವ್ಯಕ್ತಿಯನ್ನು ದ್ವೇಷ ಭಾಷಣ ಎಂದು ವ್ಯಾಖ್ಯಾನಿಸಲಾಗಿದೆ. ದ್ವೇಷ ಭಾಷಣ ಮಾಡಿದ ವ್ಯಕ್ತಿಯು ಯಾವುದೇ ಸಂಸ್ಥೆಯ ಜವಾಬ್ದಾರಿಯುತ ಸ್ಥಾನದಲ್ಲಿದ್ದರೆ ಅವನ ಹೇಳಿಕೆ ಆಧರಿಸಿ ಇಡೀ ಸಂಸ್ಥೆಯನ್ನು ಹೊಣೆ ಮಾಡುವ ಅಂಶವೂ ಮಸೂದೆಯಲ್ಲಿದೆ’ ಎಂದೂ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗಳು ನೀಡಿರುವ ತೀರ್ಪುಗಳನ್ನು ಉಲ್ಲೇಖಿಸಿ ರಾಜ್ಯಪಾಲರು ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ.

‘ಮಸೂದೆಯಲ್ಲಿ ದ್ವೇಷ ಭಾಷಣದ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಮಸೂದೆ ರೂಪಿಸುವ ಮೊದಲು ಸಮಾಜದ, ಸಾರ್ವಜನಿಕರ ಜೊತೆ ಚರ್ಚೆ ನಡೆಸಿಲ್ಲ. ಯಾವುದೇ ಇಲಾಖೆಯ ಜೊತೆ ಚರ್ಚೆ ನಡೆಸಿರುವುದೂ ಕಂಡುಬಂದಿಲ್ಲ. ವಿಧಾನಸಭೆಯಲ್ಲೂ ಚರ್ಚೆ ನಡೆದಿಲ್ಲ. ಅಲ್ಲದೆ, ಈ ಮಸೂದೆಗೆ ಒಪ್ಪಿಗೆ ನೀಡದಂತೆ 40ಕ್ಕೂ ಹೆಚ್ಚು ಮನವಿಗಳು ಬಂದಿವೆ’ ಎಂದೂ ರಾಜ್ಯಪಾಲರು ಉಲ್ಲೇಖಿಸಿದ್ದಾರೆ.

‘ದ್ವೇಷ ಭಾಷಣ ಎಂದು ಗುರುತಿಸಲು ಈಗಾಗಲೇ ಭಾರತೀಯ ದಂಡ ಸಂಹಿತೆಯಲ್ಲಿ ಹಲವು ಸೆಕ್ಷನ್‌ಗಳಿವೆ. ಆದರೆ, ಈ ಮಸೂದೆಯಲ್ಲಿ ಅವುಗಳಲ್ಲಿನ ಶಿಕ್ಷೆ ಮತ್ತು ದಂಡವನ್ನು ಸರ್ಕಾರ ವಿಸ್ತರಿಸಿದೆ. ದ್ವೇಷ ಭಾಷಣ ನಿಯಂತ್ರಿಸಲು ಇಂಟರ್‌ನೆಟ್ ಮೇಲೆ ನಿಯಂತ್ರಣ ಹೊಂದುವ ಅಧಿಕಾರ ಪಡೆಯಲು ಸರ್ಕಾರಕ್ಕೆ ಈ ಮಸೂದೆ ಅವಕಾಶ ಕಲ್ಪಿಸಲಿದೆ’ ಎಂದು ಅವರು ಹೇಳಿದ್ದಾರೆ.

‘ಮಸೂದೆಯಲ್ಲಿ ಪೊಲೀಸ್ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಈ ಅಪರಾಧಗಳು ವ್ಯಕ್ತಿಗಳಿಗೆ ಮಾತ್ರವಲ್ಲದೆ ಸಂಸ್ಥೆಗಳಿಗೂ ಅನ್ವಯಿಸುತ್ತವೆ ಮತ್ತು ಯಾವುದೇ ನೋಂದಾಯಿತ, ನೋಂದಾಯಿತವಲ್ಲದ ಸಂಸ್ಥೆಯು ಆಯೋಜಿಸುವ ರ್‍ಯಾಲಿ ಅಥವಾ ಕಾರ್ಯಕ್ರಮದಲ್ಲಿ ಅಂತಹ ಅಪರಾಧ ನಡೆದರೆ, ಅಂತಹ ಸಂಸ್ಥೆಗಳ ನಾಯಕರಿಗೂ ಶಿಕ್ಷೆಯಾಗುತ್ತದೆ. ಆದ್ದರಿಂದ, ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಈ ಕಾಯ್ದೆಯನ್ನು ದುರುಪಯೋಗಪಡಿಸಿಕೊಳ್ಳಬಹುದೆಂಬ ಆತಂಕವಿದೆ’ ಎಂದೂ ಉಲ್ಲೇಖಿಸಿದ್ದಾರೆ.

ಸಂಸತ್‌ನಲ್ಲಿ ಮತ್ತೆ ಗದ್ದಲ...

ಒಂದನೇ ಪುಟದಿಂದ....

ಕಾಂಗ್ರೆಸ್‌ನ ಮಾಣಿಕ್ಯಂ ಠಾಗೋರ್, ಹಿಬಿ ಈಡನ್, ಡೀನ್ ಕುರಿಯಾಕೋಸ್, ಅಮರಿಂದರ್ ಸಿಂಗ್ ರಾಜಾ, ಪ್ರಶಾಂತ್ ಪಡೋಲೆ, ಸಿ.ಕಿರಣ್ ಕುಮಾರ್ ರೆಡ್ಡಿ, ಗುರ್ಜೀತ್ ಸಿಂಗ್ ಔಜಲಾ ಮತ್ತು ಸಿಪಿಎಂನ ಸು. ವೆಂಕಟೇಶನ್ ಅಮಾನತುಗೊಂಡವರು. ಇವರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸುವ ನಿರ್ಣಯವನ್ನು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಓದಿದರು. ನಂತರ ಸದನವು ಧ್ವನಿಮತದ ಮೂಲಕ ಅಂಗೀಕರಿಸಿತು. ಈ ಬೆಳವಣಿಗೆಯ ನಂತರ, ದಿನದ ಮಟ್ಟಿಗೆ ಕಲಾಪವನ್ನು ಮುಂದೂಡಲಾಯಿತು. ಬಜೆಟ್ ಅಧಿವೇಶನವು ಏಪ್ರಿಲ್ 2ರವರೆಗೆ ನಡೆಯಲಿದ್ದು, ಅಲ್ಲಿಯ ತನಕ ಈ ಸಂಸದರನ್ನು ಅಮಾನತುಗೊಳಿಸಲಾಗಿದೆ.

ರಾಹುಲ್ ನೇತೃತ್ವದಲ್ಲಿ ಪ್ರತಿಭಟನೆ: ಸಂಸದರನ್ನು ಅಮಾನತುಗೊಳಿಸಿದ್ದನ್ನು ಖಂಡಿಸಿ ರಾಹುಲ್ ಗಾಂಧಿ ಅವರು ಸಂಸತ್‌ನ ಹೊರಭಾಗದಲ್ಲಿ ಪ್ರತಿಭಟನೆ ನಡೆಸಿದರು.

‘ನರವಣೆ, ಎಪ್‌ಸ್ಟೈನ್ ಕಡತಗಳು ಮತ್ತು ಸುಂಕಕ್ಕೆ ಮೋದಿ ಶರಣಾಗಿದ್ದು ಹೇಗೆ ಎಂಬ ಬಗ್ಗೆ ಸಂಸತ್ತಿನಲ್ಲಿ ನನಗೆ ಮಾತನಾಡಲು ಅವಕಾಶ ನೀಡಲು ಪ್ರಧಾನಿ ನರೇಂದ್ರ ಮೋದಿ ಹೆದರುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ರಾಷ್ಟ್ರಪತಿಗಳ ವಂದನಾ ನಿರ್ಣಯದ ಮೇಲೆ ಮಾತನಾಡಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ನೀಡಿಲ್ಲ. ಇತಿಹಾಸದಲ್ಲಿಯೇ ಇದೇ ಮೊದಲು ಇಂಥ ಬೆಳವಣಿಗೆ ನಡೆದಿದೆ’ ಎಂದು ದೂರಿದರು.

ತೊಗರಿ ದರ 3ಂಗಳಲ್ಲಿ ₹1,300 ಜಿಗಿತ

ಜನವರಿಯಿಂದಲೇ ದರ ಏರುಮುಖ; ಬೆಳೆಗಾರರಲ್ಲಿ ಮಂದಹಾಸ

• ಬಷೀರಅಹ್ಮದ್ ನಗಾರಿ

ಕಲಬುರಗಿ: ಪ್ರತಿ ಕ್ವಿಂಟಲ್ ತೊಗರಿ ದರ ಒಂದು ತಿಂಗಳಲ್ಲಿ ₹1,300ದಷ್ಟು ಜಿಗಿತ ಕಂಡಿದೆ. ಇದು ಬೆಳೆಗಾರರಲ್ಲಿ ಮಂದಹಾಸ ಮೂಡಿಸಿದೆ.

ಜನವರಿ 3ರಂದು ಕಲಬುರಗಿ ಎಪಿಎಂಸಿಯಲ್ಲಿ ಪ್ರತಿ ಕ್ವಿಂಟಲ್ ತೊಗರಿಯು ಗರಿಷ್ಠ ₹7,800ರಂತೆ ಮಾರಾಟವಾಗಿತ್ತು. ಮಂಗಳವಾರ (ಫೆ.3) ಕ್ವಿಂಟಲ್‌ಗೆ ₹9,113ರಂತೆ ಬಿಕರಿಯಾಗಿದೆ.

ಜಿಲ್ಲೆಯಲ್ಲಿ 2025–26ನೇ ಸಾಲಿನಲ್ಲಿ 5.91 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ ಬಿತ್ತನೆಯಾಗಿತ್ತು. ಅತಿವೃಷ್ಟಿಯಿಂದ ಭಾಗಶಃ ಬೆಳೆ ಹಾಳಾಗಿದ್ದು, ದರ ಏರಿಕೆ ನಿರೀಕ್ಷಿಸಲಾಗಿತ್ತು.

ಈ ಹಂಗಾಮಿನ ಕಟಾವು ಬಹುತೇಕ ಅಂತಿಮ ಹಂತಕ್ಕೆ ತಲುಪಿದ್ದು, ಮಾರುಕಟ್ಟೆಗೆ ಡಿಸೆಂಬರ್‌ನಿಂದಲೇ

ಆವಕ ಶುರುವಾಗಿತ್ತು. ಡಿಸೆಂಬರ್‌ನಲ್ಲಿ ಕಲಬುರಗಿ ಎಪಿಎಂಸಿಗೆ 52 ಸಾವಿರ ಕ್ವಿಂಟಲ್ ತೊಗರಿ ಆವಕವಾಗಿ ಗರಿಷ್ಠ ₹7,829 ದರವಿತ್ತು. ಜನವರಿಯಲ್ಲಿ 54 ಸಾವಿರ ಕ್ವಿಂಟಲ್ ಆವಕವಾಗಿದ್ದು, ಗರಿಷ್ಠ ₹9,169 ದರ ದೊರೆತಿತ್ತು.

ಖರೀದಿ ಕೇಂದ್ರ ಭಣಭಣ: ಕ್ವಿಂಟಲ್ ತೊಗರಿಗೆ ಕೇಂದ್ರ ಈ ಸಾಲಿನಲ್ಲಿ ₹8 ಸಾವಿರ ಎಂಎಸ್‌ಪಿ ನಿಗದಿಗೊಳಿಸಿದೆ. ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್ ₹9 ಸಾವಿರಕ್ಕೂ ಅಧಿಕ ದರವಿದ್ದು, ಹೆಚ್ಚಿನ ರೈತರು ಖರೀದಿ ಕೇಂದ್ರಗಳತ್ತ ಸುಳಿದಿಲ್ಲ.

‘ಜಿಲ್ಲೆಯಲ್ಲಿ 195 ತೊಗರಿ ಖರೀದಿ ಕೇಂದ್ರ ತೆರೆಯಲಾಗಿದೆ. ಡಿಸೆಂಬರ್ 18ರಿಂದ ಈವರೆಗೆ 20,270 ರೈತರು ಹೆಸರು ನೋಂದಾಯಿಸಿಕೊಂಡಿದ್ದರು. ಆದರೆ, ಬರೀ 343 ಕ್ವಿಂಟಲ್ ತೊಗರಿ ಆವಕವಾಗಿದೆ’ ಎಂದು ಕೃಷಿ ಮಾರಾಟ ಇಲಾಖೆ ಕಲಬುರಗಿ ಸಹಾಯಕ ನಿರ್ದೇಶಕ ಸಂತೋಷ ಬುಡಗೆ ಮಾಹಿತಿ ನೀಡಿದ್ದಾರೆ.

> ಎಂಎಸ್‌ಪಿ ಕೇವಲ ರೈತರ ಕಣ್ಣೊರೆಸುವ ತಂತ್ರವಾಗಿದೆ. ತೊಗರಿಗೆ ಕ್ವಿಂಟಲ್‌ಗೆ ಕನಿಷ್ಠ ₹12,500 ಎಂಎಸ್‌ಪಿ ನೀಡಬೇಕು
> **ಶರಣಬಸಪ್ಪ ಮಮಶೆಟ್ಟಿ,** ರೈತ ಹೋರಾಟಗಾರ

‘ಕಳೆದ ವರ್ಷದ ಜಿಲ್ಲೆಯಲ್ಲಿ 40 ಸಾವಿರದಷ್ಟು ರೈತರು ತೊಗರಿ ಖರೀದಿಗೆ ಹೆಸರು ನೋಂದಾಯಿಸಿದ್ದರು. ಒಟ್ಟು 6.67 ಲಕ್ಷ ಕ್ವಿಂಟಲ್ ತೊಗರಿ ಆವಕವಾಗಿತ್ತು’ ಎಂದು ಹೇಳಿದ್ದಾರೆ.

ಧರ್ಮರಾಯಸ್ವಾಮಿ ದೇವಾಲಯ ಹುಂಡಿಯಲ್ಲಿದ್ದ ಚಿನ್ನದ ನೆಕ್ಲೆಸ್; ಮೂರು ದಿನದ ನಂತರ ವಾಪಸ್

ಹರಕೆ ನೆಕ್ಲೆಸ್ ಕದ್ದ ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ತಿಗಳರಪೇಟೆಯಲ್ಲಿರುವ ಧರ್ಮರಾಯಸ್ವಾಮಿ ದೇವಾಲಯಕ್ಕೆ ಹರಕೆಯಾಗಿ ಬಂದಿದ್ದ ನೆಕ್ಲೆಸ್ ಅನ್ನು ಕೊಂಡೊಯ್ದಿದ್ದ ಅಧಿಕಾರಿಯನ್ನು ಅಮಾನತುಗೊಳಿಸಿ ಹಿಂದೂ ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಶ್ರೀ ರಾಯ ರಾಯ ಸಮೂಹ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿ (ಇಒ) ಕೆ. ನಾಗರಾಜು ಅವರ ಆಡಳಿತ ವ್ಯಾಪ್ತಿಯಲ್ಲಿ ಧರ್ಮರಾಯಸ್ವಾಮಿ ದೇವಾಲಯ ಇದೆ. 2025ರ ಜುಲೈ 9ರಿಂದ ನಾಗರಾಜು ಕಾರ್ಯನಿರ್ವಹಿಸುತ್ತಿದ್ದಾರೆ. ದೇವಾಲಯಕ್ಕೆ ಹರಕೆಯಾಗಿ


ಧರ್ಮರಾಯಸ್ವಾಮಿ ದೇವಸ್ಥಾನದ ಹುಂಡಿಗೆ ವಾಪಸ್ ಹಾಕಿದ 68 ಗ್ರಾಂನ ಚಿನ್ನದ ನೆಕ್ಲೆಸ್

ಬಂದಿರುವ ಚಿನ್ನದ ನೆಕ್ಲೆಸ್ ಕಳವಾಗಿತ್ತು. ಕೆಲ ದಿನಗಳ ನಂತರ ಅದನ್ನು ಹುಂಡಿಯಲ್ಲಿ ಹಾಕಿರುವುದು, ಮೂಲ ನೆಕ್ಲೆಸ್‌ಗಿಂತಲೂ ವ್ಯತ್ಯಾಸ ಇರುವುದು ಗೊತ್ತಾಗಿತ್ತು. ಇದಕ್ಕೆ, ನಾಗರಾಜು ಅವರೇ ಕಾರಣ ಎಂಬ ಆರೋಪ ಎದುರಾಗಿತ್ತು.

‘ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ನಾಗರಾಜು ಅವರ ಕರ್ತವ್ಯ ಲೋಪ ಕಂಡು ಬಂದಿದೆ. ಈ ಬಗ್ಗೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರಕರಣ ಏನು?: ‘ವಿಶ್ವವಿಖ್ಯಾತ ಬೆಂಗಳೂರು ಕರಗ ನಡೆಯುವ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ, 2025ರ ಅಕ್ಟೋಬರ್ 6ರಂದು ಹುಂಡಿ ಎಣಿಕೆ ಸಂದರ್ಭದಲ್ಲಿ ಚಿನ್ನದ ನೆಕ್ಲೆಸ್ ಪತ್ತೆಯಾಗಿತ್ತು. ಅದನ್ನು ಇಒ ನಾಗಾರಾಜು ಅವರು ಯಾವುದೇ ಅನುಮತಿ ಪಡೆಯದೆ ತಮ್ಮ ಜೇಬಿಗೆ ಹಾಕಿಕೊಂಡು ಹೋಗಿದ್ದಾರೆ ಎಂದು ಮುಜರಾಯಿ ಇಲಾಖೆಯ ಅಧಿಕಾರಿಗಳೇ ನನಗೆ ಮಾಹಿತಿ ನೀಡಿದ್ದರು’ ಎಂದು ಧರ್ಮರಾಯಸ್ವಾಮಿ ದೇವಾಲಯದ ನಿಕಟಪೂರ್ವ ಆಡಳಿತ ಮಂಡಳಿಯ ಅಧ್ಯಕ್ಷ ಕೆ. ಸತೀಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಬೆಳಿಗ್ಗೆ ಮಾಹಿತಿ ನೀಡಿದರು.

‘ಈ ಬಗ್ಗೆ ಅನುಮಾನ ಬಂದಾಗ, ಮಾಹಿತಿ ಹಕ್ಕು ಕಾಯ್ದೆಯಡಿ ಸಿಸಿ ಟಿವಿ ದೃಶ್ಯಾವಳಿಗಳನ್ನು ಪಡೆಯಲು ಪ್ರಯತ್ನಿಸಲಾಯಿತು. ಫೆ.2ರಂದು ಈ ದೃಶ್ಯ ಹಾಗೂ ಮಾಹಿತಿಗಳನ್ನು ನೀಡಲಾಯಿತು. ಅವುಗಳನ್ನು ಪರಿಶೀಲಿಸಿದಾಗ ನೆಕ್ಲೆಸ್ ಕೊಂಡೊಯ್ದಿರುವುದು ಬಹಿರಂಗವಾಯಿತು. ಅ.6ರಂದು ಕೊಂಡೊಯ್ದು, ಮೂರು ದಿನದ ನಂತರ, ಅ.10ರಂದು ನೆಕ್ಲೆಸ್ ಅನ್ನು ಹುಂಡಿಗೆ ಹಾಕಿರುವ ದೃಶ್ಯಾವಳಿಗಳೂ ಲಭ್ಯವಾದವು. 122 ಗ್ರಾಂ ನೆಕ್ಲೆಸ್ ಬದಲಿಗೆ, ಅದೇ ವಿನ್ಯಾಸದಲ್ಲಿ 68 ಗ್ರಾಂ ನೆಕ್ಲೆಸ್ ಅನ್ನು ವಾಪಸ್ ಹುಂಡಿಗೆ ಹಾಕಲಾಗಿದೆ’ ಎಂದು ದೂರಿದರು.

‘ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ 36 ಸಾವಿರ ದೇವಸ್ಥಾನಗಳಿದ್ದು, ಯಾವುದೇ ದೇವಾಲಯದ ಹೊರಗೆ ಅದರ ಆಸ್ತಿಯನ್ನು ಕೊಂಡೊಯ್ಯಬೇಕಾದರೆ ಅದಕ್ಕೆ ಅಗತ್ಯ, ನಿಗದಿತ ಪ್ರಕ್ರಿಯೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಆದರೆ ನಿಯಮ ಪಾಲಿಸದೆ ಚಿನ್ನವನ್ನು ಜೇಬಿಗೆ ಹಾಕಿಕೊಂಡು ಹೋಗಿದ್ದಾರೆ’ ಎಂದು ಹೇಳಿದರು. ಈ ಬೆಳವಣಿಗೆ ಬೆನ್ನಲ್ಲೇ, ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ಶರತ್ ಬಿ. ಅವರು ಕೆ. ನಾಗರಾಜು ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಧರ್ಮಸ್ಥಳ ಅಸಹಜ ಸಾವು ಪ್ರಕರಣ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದಲ್ಲಿ 1990ರಿಂದ 2021ರ ಮಧ್ಯದ ಅವಧಿಯಲ್ಲಿ ಸಂಭವಿಸಿವೆ ಎನ್ನಲಾದ 74 ಅಸಹಜ ಸಾವು ಪ್ರಕರಣಗಳ ಈಗಿನ ವಸ್ತುಸ್ಥಿತಿ, ಈ ಸಂಬಂಧ ಈವರೆವಿಗೂ ಕೈಗೊಳ್ಳಲಾದ ಕ್ರಮಗಳು ಹಾಗೂ ಮುಂದೆ ಕೈಗೊಳ್ಳಬೇಕೆಂದಿರುವ ಕ್ರಮಗಳ ಕುರಿತು ಎರಡು ವಾರಗಳಲ್ಲಿ ವಿವರಣೆ ನೀಡಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಧರ್ಮಸ್ಥಳದಲ್ಲಿ 2012ರಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಈಡಾಗಿ ಕೊಲೆಯಾಗಿದ್ದಾರೆ’ ಎನ್ನಲಾದ ವಿದ್ಯಾರ್ಥಿನಿ ಸೌಜನ್ಯಾ ತಾಯಿ ಕುಸುಮಾವತಿ (48) ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಅರ್ಜಿಯಲ್ಲಿ 74 ಪ್ರಕರಣಗಳ ವಿಚಾರ ಪ್ರಸ್ತಾಪಿಸಲಾಗಿದೆ. ಯಾವ ಪ್ರಕರಣ ಯಾವ ಹಂತದಲ್ಲಿದೆ, ಈವರೆಗೆ ಏನಾಗಿದೆ ಎಂಬುದರ ಮಾಹಿತಿ ಪಡೆದು ಒಂದು ವಾರದಲ್ಲಿ ನ್ಯಾಯಾಲಯಕ್ಕೆ ಸಂಪೂರ್ಣ ವಿವರಗಳನ್ನು ಒದಗಿಸಲಾಗುವುದು’ ಎಂದು ತಿಳಿಸಿದರು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಬಾಲನ್, ‘ಎಲ್ಲಾ 74 ಪ್ರಕರಣಗಳೂ ತನಿಖೆಗೆ ಒಳಪಡಿಸಬೇಕಾದ ಪ್ರಕರಣಗಳಾಗಿವೆ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಮೊದಲು ಸರ್ಕಾರದಿಂದ ಮಾಹಿತಿ ಬರಲಿ’ ಎಂದು ಹೇಳಿತು. ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು.

ಹತ್ಯೆ ಪ್ರಕರಣ: ಜೋತಿಷಿ ಸೇರಿ 7 ಬಂಧನ

ಅನೈತಿಕ ಸಂಬಂಧ ವಿಚಾರವಾಗಿ ಕಲಹ: ರಕ್ಷಣೆಗೆ ಬಂದವನ ಹತ್ಯೆ

ಪ್ರಜಾವಾಣಿ ವಾರ್ತೆ

ಕಾರವಾರ/ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): ಸಿದ್ದಾಪುರ ತಾಲ್ಲೂಕಿನ ಅವರಗೊಪ್ಪದಲ್ಲಿ ಕೌಟುಂಬಿಕ ಕಲಹದಿಂದ ನಡೆದ ವಸಂತ ನಾಯ್ಕ (43) ಹತ್ಯೆ ಸಂಬಂಧ, ಜೋತಿಷಿ ಕಮಲಾಕರ ಹೆಗಡೆ, ಸುಚಿತ್ರಾ ನಾಯ್ಕ ಸೇರಿದಂತೆ ಏಳು ಮಂದಿಯನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಕಮಲಾಕರ ಹೆಗಡೆ (48) ಟಿ.ವಿ.ಗಳಲ್ಲಿ ಜೋತಿಷ್ಯ ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ಸಿದ್ದಾಪುರ ತಾಲ್ಲೂಕು ಹೆಮ್ಮನಬೈಲ್ ಗ್ರಾಮದ ಆತ ಸದ್ಯ ಶಿವಮೊಗ್ಗದಲ್ಲಿ ವಾಸವಿದ್ದ. ಆತನ ಮನೆಯಲ್ಲಿ ವಾಸವಿದ್ದ ಸುಚಿತ್ರಾ ನಾಯ್ಕ (36), ಆಕೆಯ ತಂದೆ ಲೋಕನಾಥ ನಾಯ್ಕ (69), ಶಿವಮೊಗ್ಗದ ಆಕಾಶ ಎಂ. (23), ಮಹಮ್ಮದ್ ಮೈಫೂಜ್ (28), ಫೈಸಲ್ ಜಾನ್ (27), ಇಫ್ರಾನ್ ಅಮಾನುಲ್ಲಾ (29) ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ.

ಜೋತಿಷಿ ಸೇರಿ ಮೂವರನ್ನು ಸಿದ್ದಾಪುರದಲ್ಲಿ, ನಾಲ್ವರು ಯುವಕರನ್ನು ಶಿವಮೊಗ್ಗದಲ್ಲಿ ಬಂಧಿಸಲಾಗಿದೆ. ಆರೋಪಿಗಳು ತಂದಿದ್ದ, ಜೋತಿಷಿಯ ಕಾರನ್ನು ಗ್ರಾಮಸ್ಥರು ಅಡ್ಡಗಟ್ಟಿದ್ದು, ಪುಡಿಗಟ್ಟಿದ್ದಾರೆ. ಅಲ್ಲದೆ, ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ ಸಿದ್ದಾಪುರ ಪೊಲೀಸ್ ಠಾಣೆ ಎದುರು ಮಂಗಳವಾರ ತಡರಾತ್ರಿವರೆಗೂ ಪ್ರತಿಭಟನೆ ನಡೆಸಿದ್ದಾರೆ.

ಹತ್ಯೆಯಾದ ವಸಂತ ನಾಯ್ಕ

'ಜೋತಿಷಿ ಜೊತೆಗೆ ಸುಚಿತ್ರಾಗೆ ಅನೈತಿಕ ಸಂಬಂಧವಿತ್ತು. ಇದರಿಂದ ಬೇಸರಗೊಂಡಿದ್ದ ಮಹೇಶ ನಾಯ್ಕ ಮತ್ತು ಸುಚಿತ್ರಾ ದಂಪತಿ ಪುತ್ರಿ ಅವರಗುಪ್ಪದಲ್ಲಿದ್ದ ತಂದೆ ಮನೆಗೆ ಬಂದಿದ್ದರು. ಮಗಳು ತಮ್ಮ ಬಗ್ಗೆ ತಿಳಿಸಬಹುದು ಎಂಬ ಭಯದಿಂದ ಮತ್ತೆ ಕರೆದೊಯ್ಯಲು ಜೋತಿಷಿ ಮತ್ತು ಸುಚಿತ್ರಾ ಯುವಕರ ಜೊತೆ ಬಂದಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಅವರಗುಪ್ಪದಲ್ಲಿ ಮಹೇಶ ಮೇಲೆ ಹಲ್ಲೆಗೆ ಆರೋಪಿಗಳು ಮುಂದಾಗಿದ್ದರು. ಆಗ ಸಹೋದರನ ರಕ್ಷಣೆಗೆ ವಸಂತ ನಾಯ್ಕ ಬಂದಿದ್ದು, ಅವರಿಗೆ ಮಾರಕಾಸ್ತ್ರದಿಂದ ಚುಚ್ಚಿ ಹತ್ಯೆ ಮಾಡಲಾಗಿದೆ. ಮಹೇಶ್ ಮತ್ತು ಆತನ ನೆರೆ ಮನೆಯ ಕುಮಾರ ನಾಯ್ಕ ಮೇಲೂ ಹಲ್ಲೆ ನಡೆದಿದೆ' ಎಂದು ಎಸ್‌ಪಿ ದೀಪನ್ ಎಂ.ಎನ್ ತಿಳಿಸಿದ್ದಾರೆ.

'ಜೋತಿಷಿ–ಸುಚಿತ್ರಾ ಸಂಬಂಧ ಬಹಿರಂಗವಾಗುವ ಭೀತಿ ಕಾರಣ?'

ಸುಚಿತ್ರಾ ನಾಯ್ಕ

ಕಮಲಾಕರ ಹೆಗಡೆ

'ಸುಚಿತ್ರಾ ತನ್ನ ಇಬ್ಬರು ಮಕ್ಕಳೊಂದಿಗೆ ಜೋತಿಷಿ ಕಮಲಾಕರ ಹೆಗಡೆ ಅವರ ಶಿವಮೊಗ್ಗದ ಮನೆಯಲ್ಲಿ ಉಳಿದಿದ್ದರು. ಜೋತಿಷಿ ಜೊತೆ ಸಲುಗೆ ಹೊಂದಿದ್ದ ಸುಚಿತ್ರಾ ವರ್ತನೆ ಬಗ್ಗೆ ಹಿರಿಯ ಪುತ್ರಿಗೆ ಬೇಸರವಿತ್ತು.

'ಜೋತಿಷಿ ಮತ್ತು ತಾಯಿಯಿಂದ ಕಿರುಕುಳ ಆಗುತ್ತಿದೆ ಎಂದು ಹಿರಿಯ ಪುತ್ರಿ ತಂದೆಗೆ ತಿಳಿಸಿದ್ದರು. ಈ ಬಗ್ಗೆ ಪುತ್ರಿ ಜೊತೆಗೂಡಿ ಸಿದ್ದಾಪುರ ಠಾಣೆ ಪೊಲೀಸರಿಗೆ, ಶಿರಸಿಯ ಮಕ್ಕಳ ಕಲ್ಯಾಣಾಧಿಕಾರಿ ಅವರಿಗೂ ದೂರು ನೀಡಿದ್ದರು.

ಮನೆಗೆ ಮರಳುತ್ತಿದ್ದಂತೆಯೆ ಸುಚಿತ್ರಾ, ಆಕೆಯ ತಂದೆ ಲೋಕನಾಥ, ಜೋತಿಷಿ ಕಮಲಾಕರ ಹೆಗಡೆ ನಾಲ್ವರು ಯುವಕರ ತಂಡದೊಂದಿಗೆ ಅವರಗುಪ್ಪಕ್ಕೆ ಬಂದು ಗಲಾಟೆ ನಡೆಸಿದ್ದರು' ಎಂದು ಎಸ್‌ಪಿ ವಿವರಿಸಿದ್ದಾರೆ.

'ಎಸ್‌ಐಆರ್ ರಕ್ತರಹಿತ ರಾಜಕೀಯ ನರಮೇಧ'

ಪ್ರಜಾವಾಣಿ ವಾರ್ತೆ

ಬೀದರ್: 'ಕೇಂದ್ರ ಚುನಾವಣಾ ಆಯೋಗವು ನಡೆಸುತ್ತಿರುವ ಮತದಾರರ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಈಗ ದೇಶದಲ್ಲಿ ನಡೆಯುತ್ತಿರುವ ರಕ್ತರಹಿತ ರಾಜಕೀಯ ನರಮೇಧವಾಗಿದೆ' ಎಂದು ಆರ್ಥಿಕ ತಜ್ಞ ಪರಕಾಲ ಪ್ರಭಾಕರ್ ಅವರು ಮಂಗಳವಾರ ಇಲ್ಲಿ ವ್ಯಾಖ್ಯಾನಿಸಿದರು.



ಪರಕಾಲ ಪ್ರಭಾಕರ್

ಎಸ್‌ಐಆರ್ ವಿರೋಧಿ ಜನಾಂದೋಲನ ಸಮಿತಿ ಬೀದರ್ ಘಟಕವು ಏರ್ಪಡಿಸಿದ್ದ ಚಿಂತನ ಮಂಥನ ಸಮಾವೇಶದಲ್ಲಿ ಅವರು ಮಾತನಾಡಿದರು.

'ಎಸ್‌ಐಆರ್ ಮೂಲಕ ರಾಜಕೀಯ ಮತ್ತು ಸಾಮಾಜಿಕ ಅಸ್ಮಿತೆಯನ್ನು ಗುರಿ ಮಾಡಲಾಗುತ್ತಿದೆ. ಇದರ ಮೂಲಕ ಭಾರತವನ್ನು ಇಸ್ರೇಲೀಕರಣ ಮಾಡುವ ಹುನ್ನಾರ ನಡೆಸಲಾಗುತ್ತಿದೆ' ಎಂದು ಆರೋಪಿಸಿದರು.

'ಆಳುವ ಪಕ್ಷವೇ ಎಸ್‌ಐಆರ್ ಹೆಸರಿನಲ್ಲಿ ರಕ್ತರಹಿತ ರಾಜಕೀಯ ನರಮೇಧಕ್ಕೆ ಮುಂದಾಗಿದೆ. ಎಸ್‌ಐಆರ್‌ನಿಂದ ಜನ ಸಾಯುವುದಿಲ್ಲ. ಆದರೆ, ಅವರ ನಾಗರಿಕತ್ವ ಸಾಯಲಿದೆ. ಎಸ್‌ಐಆರ್ 2ನೇ ಹಂತದ ಪ್ರಕ್ರಿಯೆ ನಂತರ ದೇಶದಲ್ಲಿ 6.20 ಕೋಟಿ ಮತದಾರರು ಮತದಾನದ ಹಕ್ಕು ಕಳೆದುಕೊಳ್ಳಲಿದ್ದಾರೆ' ಎಂದು ಎಚ್ಚರಿಸಿದರು.

'ಜಗತ್ತಿನ 85 ರಾಷ್ಟ್ರಗಳಲ್ಲಿ ಇದಕ್ಕಿಂತ ಕಡಿಮೆ ಜನಸಂಖ್ಯೆ ಇದೆ. ಎಸ್‌ಐಆರ್ ಬಳಿಕ ಒಟ್ಟು 16.50 ಕೋಟಿ ಜನ ಮತದಾನದಿಂದ ವಂಚಿತರಾಗಲಿದ್ದು, ನಾಗರಿಕತ್ವ ಕಳೆದುಕೊಳ್ಳಲಿದ್ದಾರೆ. ಇದರಲ್ಲಿ ಹೆಚ್ಚಿನವರು ಮುಸ್ಲಿಮರು. ಇದಕ್ಕಾಗಿ ದೇಶದಲ್ಲಿ ಒಂದು ಹನಿ ಕೂಡಾ ರಕ್ತ ಹರಿಯುವುದಿಲ್ಲ' ಎಂದರು.

ಚಿಟಿಕೆ ಸುದ್ದಿ

ಗೋಡೆ ಕುಸಿದು ಇಬ್ಬರ ಸಾವು

ನರಗುಂದ (ಗದಗ ಜಿಲ್ಲೆ): ತಾಲ್ಲೂಕಿನ ಕಲಕೇರಿಯಲ್ಲಿ ಮಂಗಳವಾರ ಹಳೇ ಮನೆ ಗೋಡೆ ಕುಸಿದು ಇಬ್ಬರು ಮೃತಪಟ್ಟಿದ್ದಾರೆ. ಶೇಖಪ್ಪ ಪರಸಪ್ಪ ಪರಸನ್ನವರ (50), ನಾಗಪ್ಪ ಫಕೀರಪ್ಪ ಮಾದರ (58) ಮೃತರು.

ಇಬ್ಬರು ಗಾಯಗೊಂಡಿದ್ದಾರೆ. ಹಳೇ ಮನೆ ಗೋಡೆ ಕೆಡುವುತ್ತಿದ್ದಾಗ ಅವಘಡ ಸಂಭವಿಸಿದೆ. ನರಗುಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಶಯ; ಪತ್ನಿಯ ತಲೆ ಬೋಳಿಸಿದ ಪತಿ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಪತ್ನಿಯ ನಡತೆ ಬಗ್ಗೆ ಶಂಕೆ ಹೊಂದಿದ್ದ ಪತಿ, ಆಕೆಗೆ ಅಪಮಾನ ಮಾಡಲು ತಲೆ ಬೋಳಿಸಿರುವ ಘಟನೆ ತಡವಾಗಿ ಬಯಲಾಗಿದೆ.

ತಾಲ್ಲೂಕಿನ ತೊದಲಬಾಗಿ ಗ್ರಾಮದ ಉಮೇಶ ಕಾಳಿಂಗ ಕೊಟ್ಟಲಗಿ, ಪತ್ನಿಯ ಶೀಲ ಶಂಕಿಸಿ ಶನಿವಾರ ರಾತ್ರಿ ಎಲೆಕ್ಟ್ರಿಕಲ್ ಟ್ರಿಮ್ಮರ್‌ನಿಂದ ಪತ್ನಿ ತಲೆ ಬೋಳಿಸಿದ್ದು, ಜೀವ ಬೆದರಿಕೆ ಹಾಕಿದ್ದಾನೆ ಎಂದು ಆರೋಪಿಸಲಾಗಿದೆ.

ವಸತಿ ಶಾಲೆ: ಅರ್ಜಿ ಸಲ್ಲಿಸಲು ಫೆ.7ರ ಗಡುವು

ಬೆಂಗಳೂರು: ವಸತಿ ಶಾಲೆಗಳಿಗೆ 2026ನೇ ಸಾಲಿನ 6ನೇ ತರಗತಿ ಪ್ರವೇಶಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಫೆ.7ರವರೆಗೆ ಅವಕಾಶ ನೀಡಲಾಗಿದೆ.

ಪರಿಶಿಷ್ಟ ಜಾತಿಗೆ ಸೇರಿದವರು ಒಳಮೀಸಲಾತಿ ವಿವರಗಳನ್ನು ಹಾಗೂ ಜಾತಿ ಪ್ರಮಾಣಪತ್ರದಲ್ಲಿ ಮುದ್ರಿತ-ಗೊಂಡಿರುವ ಆರ್‌ಡಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.

'ಲ್ಯಾಂಡ್‌ಲಾರ್ಡ್'ಗೆ ತೆರಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ 'ದುನಿಯಾ' ವಿಜಯ್ ನಟನೆಯ, ಜಡೇಶ್ ಕೆ.ಹಂಪಿ ನಿರ್ದೇಶನದ 'ಲ್ಯಾಂಡ್‌ಲಾರ್ಡ್' ಸಿನಿಮಾಗೆ ರಾಜ್ಯ ಸರ್ಕಾರ ತೆರಿಗೆ ವಿನಾಯಿತಿ ನೀಡಿದೆ.

ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಸಾಮಾಜಿಕ ಅಸಮಾನತೆ ಮತ್ತು ಜಾತಿಯಾಧಾರಿತ ಶೋಷಣೆ ವಿಷಯಾಧಾರಿತ 'ಲ್ಯಾಂಡ್ ಲಾರ್ಡ್' ಚಲನಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಮೌಲ್ಯಯುತ ಸಂದೇಶವನ್ನು ಜನರಿಗೆ ತಲುಪಿಸಿ, ಸಾರ್ವತ್ರಿಕ ಅಭಿಪ್ರಾಯ ರೂಪಿಸಲು ಹಾಗೂ ಸಾಮಾಜಿಕ ಪರಿವರ್ತನೆಯನ್ನು ಸಾಧಿಸಲು ಸಿನಿಮಾಗಳು ಅತ್ಯಂತ ಪರಿಣಾಮಕಾರಿ ಮಾಧ್ಯಮ ಎನ್ನುವುದು ನನ್ನ ಭಾವನೆ. ಸಾಮಾಜಿಕ ಕಳಕಳಿಯ ಸಿನಿಮಾವನ್ನು ಮಾಡಿದಾಗ ಅಂಥವರ ಜೊತೆ ನಿಂತು ಬೆನ್ನು ತಟ್ಟಬೇಕಿರುವುದು ಸರ್ಕಾರವಾಗಿ ನಮ್ಮ ನೈತಿಕ ಹೊಣೆ. ಮುಂದಿನ ದಿನಗಳಲ್ಲಿ ಸಾಮಾಜಿಕ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ 'ಲ್ಯಾಂಡ್‌ಲಾರ್ಡ್'ನಂತಹ ಇನ್ನಷ್ಟು ಚಿತ್ರಗಳು ಮೂಡಿಬರಲು ನಮ್ಮ ಈ ನಿರ್ಧಾರ ಸ್ಫೂರ್ತಿಯಾಗಲಿದೆ ಎಂದು ನಂಬಿದ್ದೇನೆ' ಎಂದು ಉಲ್ಲೇಖಿಸಿದ್ದಾರೆ.

ದುನಿಯಾ ವಿಜಯ್

ಕೃತಜ್ಞತೆ ಸಲ್ಲಿಸಿದ ವಿಜಯ್: ಸರ್ಕಾರದ ನಿರ್ಧಾರಕ್ಕೆ ಪ್ರತಿಕ್ರಿಯೆ ನೀಡಿರುವ 'ದುನಿಯಾ' ವಿಜಯ್, 'ಸರ್ಕಾರದ ಈ ನಡೆ ತಳಸಮುದಾಯಗಳ ಹಕ್ಕು ಮತ್ತು ಹೋರಾಟಗಳ ಕುರಿತು ಇನ್ನಷ್ಟು ಅರ್ಥಪೂರ್ಣ ಚಿತ್ರಗಳನ್ನು ಮಾಡಲು ನಮಗೆ ಹೊಸ ಹುರುಪು ನೀಡಿದೆ' ಎಂದಿದ್ದಾರೆ.

ಎಚ್ಚರಿಕೆ: ನೊಂದು ವಿದ್ಯಾರ್ಥಿ ಆತ್ಮಹತ್ಯೆ

ಕೆಜಿಎಫ್: ಶಾಲೆಯಲ್ಲಿ ಚೇಷ್ಟೆ ಮಾಡಿದ್ದಕ್ಕೆ ಪೋಷಕರು, ಶಿಕ್ಷಕರು ಗದರಿಸಿದ್ದರಿಂದ ನೊಂದ 14 ವರ್ಷದ ವಿದ್ಯಾರ್ಥಿ ಊರಿಗಾಂ ರೈಲ್ವೆ ನಿಲ್ದಾಣದ ಬಳಿ ಹಳಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಗೌತಮ್

ರಾಬರ್ಟಸನ್‌ಪೇಟೆ ಖಾಸಗಿ ಶಾಲೆಯ 9ನೇ ತರಗತಿಯ ಗೌತಮ್ (14) ಮೃತ ವಿದ್ಯಾರ್ಥಿ. ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶಾಲೆಯಲ್ಲಿ ವಿದ್ಯುತ್ ಪರಿಕರಗಳಿದ್ದ ಕಡೆ ವಿದ್ಯಾರ್ಥಿ ಚೇಷ್ಟೆ ಮಾಡುತ್ತಿದ್ದ. ಪೋಷಕರನ್ನು ಕರೆಸಿದ್ದ ಪ್ರಾಂಶುಪಾಲರು ಅವರ ಮುಂದೆ ಸೋಮವಾರ ಗೌತಮ್‌ನಿಗೆ ಗದರಿದ್ದರು ಎನ್ನಲಾಗಿದೆ.

ಆಸ್ತಿ ಮಾರಾಟ ಆರೋಪ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹಾವೇರಿ: 'ಮಠದ ಆಸ್ತಿಯನ್ನು ಮಾರಾಟ ಮಾಡಿದ ಆರೋಪದಡಿ ಜಿಲ್ಲೆಯ ಹಾನಗಲ್ ಪಟ್ಟಣದಲ್ಲಿರುವ ಕುಮಾರೇಶ್ವರ ವಿರಕ್ತಮಠದ ಪೀಠಾಧಿಪತಿ ವಿರುದ್ಧ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ (66) ವಿರುದ್ಧ ಹಾನಗಲ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ.

ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ

ಹುಬ್ಬಳ್ಳಿ ಮೂರುಸಾವಿರ ಮಠದ ಸ್ವಾಮೀಜಿಯೂ ಆದ ಪೀಠಾಧಿಪತಿ ಅವರು ಮಠದ ಹೆಸರಿನಲ್ಲಿದ್ದ ಆಸ್ತಿಯನ್ನು ಅಕ್ರಮ ಮಾರಿ, ಬಂದ ಹಣವನ್ನು ಸ್ವಂತಕ್ಕೆ ಬಳಸಿಕೊಂಡು ನಂಬಿಕೆದ್ರೋಹ ಎಸಗಿದ್ದಾರೆ' ಎಂಬ ದೂರು ನೀಡಲಾಗಿತ್ತು.

ಮಠದ ಆಸ್ತಿ ರಕ್ಷಣೆಗಾಗಿ ಹೋರಾಟ ನಡೆಸುತ್ತಿರುವ ಭಕ್ತರ ಪರವಾಗಿ ಹಾನಗಲ್ ತಾಲ್ಲೂಕಿನ ಹೊಸಳ್ಳಿಯ ರವೀಂದ್ರ ಶಿವಮೂರ್ತೆಪ್ಪ ಚಿಕ್ಕೇರಿ (50) ಅವರು ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು.

ವಿಚಾರಣೆ ನಡೆಸಿದ್ದ ನ್ಯಾಯಾಲಯ, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಪೊಲೀಸರಿಗೆ ನಿರ್ದೇಶನ ನೀಡಿತ್ತು. ಅದರಂತೆ, ಕುಮಾರ ಸ್ವಾಮಿ ಉರುಫ್ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದಾರೆ.

ಜಿಲ್ಲಾಧಿಕಾರಿ ಕೋಲಾಟ

ಚನ್ನರಾಯಪಟ್ಟಣ (ಹಾಸನ ಜಿಲ್ಲೆ): ಇಲ್ಲಿನ ಕೋಟೆಯಲ್ಲಿ ಮಂಗಳವಾರ ಚಂದ್ರಮೌಳೇಶ್ವರ ಸ್ವಾಮಿ ರಥೋತ್ಸವದ ವೇಳೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಕೋಲಾಟವಾಡಿ ಜನರಲ್ಲಿ ಹುರುಪು ತುಂಬಿದರು.

ರಥೋತ್ಸವದಲ್ಲಿ ಭಾರತೀಶ್ ಜನಪದ ತಂಡದ ಕಲಾವಿದರು ಕೋಲಾಟ ಪ್ರದರ್ಶಿಸಿದರು. ಕಲಾವಿದರೊಂದಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮಾ ಬಾಲಕೃಷ್ಣ ಅವರೂ ಹೆಜ್ಜೆ ಹಾಕಿದರು.

ಜಿಲ್ಲಾಧಿಕಾರಿ ಲತಾಕುಮಾರಿ, ಜಿ.ಪಂ. ಮಾಜಿ ಸದಸ್ಯೆ ಕುಸುಮಾ ರಥೋತ್ಸವದಲ್ಲಿ ಹೆಜ್ಜೆ ಹಾಕಿದರು

ಲೈಂಗಿಕ ಕಿರುಕುಳ: ಶಿಕ್ಷಕನ ಸೆರೆ

ಸಿರಿಗೆರೆ (ಚಿತ್ರದುರ್ಗ): ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಖಾಸಗಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದ್ದು, ಭರಮಸಾಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಶಿಕ್ಷಕ ನಮ್ಮನ್ನು ಕೊಠಡಿಗೆ ಕರೆಸಿಕೊಂಡು ಮೈ ಮುಟ್ಟುವುದು, ಮುತ್ತು ಕೊಡುವುದು ಮಾಡುತ್ತಾರೆ' ಎಂದು ವಿದ್ಯಾರ್ಥಿನಿಯರು ಮುಖ್ಯ ಶಿಕ್ಷಕರಿಗೆ ದೂರು ನೀಡಿದ್ದರು. ಇದನ್ನು ಅವರು ಆಡಳಿತ ಮಂಡಳಿ ಗಮನಕ್ಕೆ ತಂದಿದ್ದರು. ಶಿಕ್ಷಕನನ್ನು ಅಮಾನತು ಮಾಡಿದ್ದ ಆಡಳಿತ ಮಂಡಳಿ ಪೊಲೀಸ್ ಠಾಣೆಗೆ ದೂರು ನೀಡಿತ್ತು.

'ಬಿತ್ತಿ ಬೆಳೆದ ಕೈ ಬಂಗಾರದ ಖಡ್ಗ ತೋಟ್ಟಿತಲೇ ಪರಾಕ್'

ಪ್ರಜಾವಾಣಿ ವಾರ್ತೆ

ಗುತ್ತಲ (ಹಾವೇರಿ ಜಿಲ್ಲೆ): ಸಮೀಪದ ಹಾವನೂರ ಗ್ರಾಮದ ಮೈಲಾರಲಿಂಗೇಶ್ವರನ ಕಾರಣಿಕೋತ್ಸವ ಮಂಗಳವಾರ ನಡೆಯಿತು. ಗೋರವಯ್ಯ ಆನಂದ ಬಿಲ್ಲರ ಬಿಲ್ಲನ್ನೇರಿ, 'ಬಿತ್ತಿ ಬೆಳೆದ ಕೈ ಬಂಗಾರದ ಖಡ್ಗ ತೋಟ್ಟಿತಲೇ ಪರಾಕ್' ಎಂದು ನುಡಿದರು.

ಬಿಲ್ಲನ್ನೇರುವಾಗ ಅವಸರ ಮಾಡಿದ ಕಾರಣ ಕಾಲು ಜಾರುವ ಭಯದಲ್ಲಿ ಗೋರವಯ್ಯ ಬಿಲ್ಲನ್ನು ಅರ್ಧಕ್ಕೆ ಮಾತ್ರ ಏರಿ ಕಾರಣಿಕ ನುಡಿದರು.

'ರೈತರು ಬೆಳೆದ ಬೆಳೆಗೆ ಉತ್ತಮ ದರ ಸಿಗಬಹುದು. ಉತ್ತಮ ಮಳೆ ಆಗಬಹುದು' ಎಂದು ಭಕ್ತರು ಹರ್ಷ ವ್ಯಕ್ತಪಡಿಸಿದರು. ಕಾರಣಿಕ ನುಡಿಯಲ್ಲಿ ಉತ್ತಮ ಸಂದೇಶ ಅಡಗಿದೆ ಎಂದರು.

ಹಾವನೂರಿನಲ್ಲಿ ಮೈಲಾರಲಿಂಗೇಶ್ವರನ ಕಾರಣಿಕೋತ್ಸವ ನಡೆಯಿತು

ಮೈಲಾರಲಿಂಗೇಶ್ವರ ಕಾರಣಿಕ ಇಂದು: ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಸುಕ್ಷೇತ್ರದಲ್ಲಿ ಬುಧವಾರ (ಫೆ.4) ಸಂಜೆ 5.30ಕ್ಕೆ ಮೈಲಾರಲಿಂಗೇಶ್ವರ ಸ್ವಾಮಿ ಕಾರಣಿಕೋತ್ಸವ ಜರುಗಲಿದೆ. ಸ್ವಾಮಿಯ ಭವಿಷ್ಯವಾಣಿ ಆಲಿಸಲು ಲಕ್ಷಾಂತರ ಭಕ್ತರು ಕಾತರರಾಗಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಗಳು ಅಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನಕೊಳ್ಳಪಟ್ಟಿದೆ)
ನಂ.2, 2/1 & 2/3, ಕಾಳಿದಾಸ ಮಾರ್ಗ್, 1ನೇ ಮುಖ್ಯರಸ್ತೆ, ಗಾಂಧಿನಗರ,
ಬೆಂಗಳೂರು – 560009. ದೂರವಾಣಿ ಸಂ. 080–22265383 website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–26/1621/2025–26 ದಿನಾಂಕ: 03.02.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯಿದೆ 1999 ಮತ್ತು ನಿಯಮ 2000ಗಳಂತೆ ಅವಶ್ಯಕ ಆರ್ಥಿಕ ಸಂಪನ್ಮೂಲಗಳು ಮತ್ತು ಸಾಕಷ್ಟು ಅಪಾರ ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿನಲ್ಲಿ ನೋಂದಾಯಿತವಾಗಿರುವ ಅರ್ಹ ಗುತ್ತಿಗೆದಾರರಿಂದ ವಿದ್ಯುನ್ಮಾನ ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು: ಯಾದಗಿರಿ ಜಿಲ್ಲೆ, ಕಡೆಚೂರು ಬಡಿಯಾಳ ಕೈಗಾರಿಕೆ ಪ್ರದೇಶದ ವಿವಿಧ ಪ್ರದೇಶಗಳಲ್ಲಿ ಓವರ್‌ಹೆಡ್ ಹೈಟ್ ಬ್ಯಾರಿಯರ್‌ಗಳನ್ನು ಒದಗಿಸುವ ಕಾಮಗಾರಿ. (2ನೇ ಕರೆ)

- ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.02.2026ರ ಸಂಜೆ 4:00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಡಿಪಿಆರ್–04/1622/2025–26 ದಿನಾಂಕ: 03.02.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಬೆಂಗಳೂರಿನಲ್ಲಿ ಕಚೇರಿ ಹೊಂದಿರುವ ಹಾಗೂ ಇದೇ ರೀತಿಯ ಕೆಲಸದ ಅನುಭವ ಹೊಂದಿರುವ ಅರ್ಹ ಸಲಹೆಗಾರರು/ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಡಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು: 1) ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ, ಬೇಲೂರು ಕೈಗಾರಿಕಾ ಪ್ರದೇಶದ ಪ್ಲಾಟ್ ಸಂಖ್ಯೆ 311 ರಿಂದ 314ರವರೆಗೆ ಸಮೀಕ್ಷೆ ಮೌಲ್ಯಮಾಪನ, ಗುಣಮಟ್ಟ & ಪ್ರಮಾಣ ಅಧ್ಯಯನ, ಎಂಆರ್‌ಎಫ್ & ಎಆರ್‌ಎಫ್ ಸೌಲಭ್ಯಗಳು ಇತ್ಯಾದಿಗಳ ವಿನ್ಯಾಸ ಒಳಗೊಂಡಂತೆ ಏಕೀಕೃತ ಸಾಮಗ್ರಿ ಮರುಪಡೆಯುವಿಕೆ ಸೌಲಭ್ಯ [ಎಂಆರ್‌ಎಫ್] ಮತ್ತು ಪರ್ಯಾಯ ಇಂಧನ ಕಚ್ಚಾ ಸಾಮಗ್ರಿ ಸೌಲಭ್ಯ [ಎಎಫ್‌ಆರ್] ನೊಂದಿಗೆ ಕೈಗಾರಿಕೆ ಘನ ತ್ಯಾಜ್ಯವನ್ನು ವೈಜ್ಞಾನಿಕ ವಿಲೇವಾರಿ ಮಾಡುವ ಕಾಮಗಾರಿಗಾಗಿ ವಿಸ್ತೃತ ಯೋಜನಾ ವರದಿ [ಡಿಪಿಆರ್] ಸಿದ್ಧಪಡಿಸಲು ಸಮಾಲೋಚಕ ಸೇವೆಗಳನ್ನು ಒದಗಿಸುವುದು. [2ನೇ ಕರೆ] 2) ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆಯ ಇಟ್ಟಂಗಿಹಾಳ, ಅರೆಕೆರೆ, ತಿಡುಗುಂಡಿ ಕೈಗಾರಿಕೆ ಪ್ರದೇಶಗಳಿಗೆ ಉದ್ದೇಶಿತ ಬಾಹ್ಯ ನೀರು ಸರಬರಾಜು ಯೋಜನೆ ಮತ್ತು ಉದ್ದೇಶಿತ ತಿಡಗುಂಡಿ ಗ್ರಾಮದಲ್ಲಿ ಕೈಗಾರಿಕೆ ಬಡಾವಣೆ ರಚನೆ ಕಾಮಗಾರಿಯ ಸಮೀಕ್ಷೆ, ಚಕ್ಕುಬಂದಿ ಡೆಮಾರ್ಕ್ರೇಷನ್ ಕಾಮಗಾರಿಗಾಗಿ ವಿಸ್ತೃತ ಯೋಜನಾ ವರದಿ [ಡಿಪಿಆರ್] ಸಿದ್ಧಪಡಿಸಲು ಸಮಾಲೋಚಕ ಸೇವೆಗಳನ್ನು ಒದಗಿಸುವುದು. [ವಿಸ್ತೀರ್ಣ 1023ಎ.06.ಗುಂ]

- ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.02.2026ರ ಸಂಜೆ 4:00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2,
ಕೆ.ಐ.ಎ.ಡಿ.ಬಿ, ಬೆಂಗಳೂರು

ಡಿಐಪಿಆರ್/ಸಿಪಿ/5404/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಶಾಂತಿನಿಲಯ, ಕಾನ್ವೆಂಟ್ ಜಂಕ್ಷನ್ ಮಡಿಕೇರಿ, ಕೊಡಗು ಜಿಲ್ಲೆ–571201
email: dcpokodagu@gmail.com ದೂರವಾಣಿ : 08272–228800

ಸಂ:ಡಿಸಿಪಿಕೊ/ಪೋ.ಪ/ಪ.ಪ್ರಕಟಣೆ/2025–26 ದಿನಾಂಕ: 03–02–2026

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಮಂದಿರಗಳಲ್ಲಿ ಹಾಗೂ ಮಡಿಲು ಸರ್ಕಾರಿ ವಿಶೇಷ ದತ್ತು ಸಂಸ್ಥೆಯಲ್ಲಿ ಪ್ರಸ್ತುತ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ **ನವಜಾತ ಗಂಡು ಶಿಶು, ಕು॥ ಅಯ್ಯಪ್ಪ, ಕು॥ ಜ್ಯೋತಿ ಹಾಗೂ ಕು॥ ಮಹಾಲಕ್ಷ್ಮಿ** ಈ ಮಕ್ಕಳ ಪೋಷಕರು ಹಾಗೂ ಸಂಬಂಧಿಕರು ಇದುವರೆಗೂ ಪತ್ತೆಯಾಗಿರುವುದಿಲ್ಲ. ಈ ಮಗುವಿನ ಪೋಷಕರು ಅಥವಾ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿ, ಶಾಂತಿನಿಲಯ ಕಾನ್ವೆಂಟ್ ಜಂಕ್ಷನ್, ಮಡಿಕೇರಿ ಹಾಗೂ ದೂರವಾಣಿ: 08272–228800ಯನ್ನು ಸಂಪರ್ಕಿಸಲು ತಿಳಿಯಪಡಿಸಲಾಗಿದೆ. ಮಗುವಿನ ಪೋಷಕರು ಯಾರೂ ಬಾರದಿದ್ದಲ್ಲಿ ಈ ಮಕ್ಕಳನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮ ಕೈಗೊಳ್ಳಲಾಗುವುದು.

ನವಜಾತ ಶಿಶು
ದಿನಾಂಕ:10–12–2025 ರಂದು ವಿರಾಜಪೇಟೆ ತಾಲ್ಲೂಕಿನ ಬಿಟ್ಟಂಗಾಲ ಗ್ರಾಮದ ಪೆಗ್ಗರಿಕಾಡು ಕಾಲೋನಿಯ ನಿವಾಸಿಯಾದ ಶ್ರೀ. ತಮ್ಮಯ್ಯ ಹಾಗೂ ಶ್ರೀಮತಿ ಸುಂದರಿ ಇವರ ಮನೆಯ ಅಂಗಳದಲ್ಲಿ ನವಜಾತ ಗಂಡು ಶಿಶು ಪತ್ತೆಯಾಗಿದ್ದು, ದಿನಾಂಕ:10–12–2025 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಮಡಿಲು ಸರ್ಕಾರಿ ವಿಶೇಷ ದತ್ತು ಸಂಸ್ಥೆಗೆ ದಾಖಲಾಗಿರುತ್ತದೆ.



ಕು ॥ ಅಯ್ಯಪ್ಪ
ಅಂದಾಜು ವಯಸ್ಸು 8 ವರ್ಷ, ತಂದೆಯ ಹೆಸರು: ಅಣ್ಣು ತಾಯಿಯ ಹೆಸರು: ತಂಗಿ, ದಿನಾಂಕ: 15–10–2024ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾನೆ. ಬಾಲಕನಿಗೆ ಮಾತು ಬರುವುದಿಲ್ಲ ಕನ್ನಡ ಮತ್ತು ಎರವ ಭಾಷೆ ಅರ್ಥವಾಗುತ್ತದೆ. ಮಾನಸಿಕ ಭಿನ್ನ ಸಾಮಾರ್ಥ್ಯ ಹೊಂದಿರುವ ಮಗುವಾಗಿರುತ್ತಾನೆ. ಈ ಹಿಂದೆ ವಾಸವಿದ್ದ ವಿಳಾಸ: C/o ರಫೀಕ್ ಎ.ಎಂ.ನಡಿಕೇರಿ ಗ್ರಾಮ, ಪೊನ್ನಂಪೇಟೆ ತಾ॥, ಪ್ರಸ್ತುತ 08 ವರ್ಷದ ಕಪ್ಪು, ದುಂಡು ಮುಖ, ಬಲ ಮೊಣಕೈಯಲ್ಲಿ ಕಪ್ಪು ಮಚ್ಚೆ ಇರುತ್ತದೆ.



ಕು ॥ ಜ್ಯೋತಿ
ವಯಸ್ಸು ಅಂದಾಜು 11 ವರ್ಷ, ತಂದೆಯ ಹೆಸರು:–ಅಣ್ಣು, ತಾಯಿಯ ಹೆಸರು: ತಂಗಿ, ದಿನಾಂಕ: 15–10–2024 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾರೆ. ಮಾತನಾಡುವ ಭಾಷೆ: ಕನ್ನಡ, ಯರವ. ಈ ಹಿಂದೆ ವಾಸವಿದ್ದ ವಿಳಾಸ: C/o ರಫೀಕ್ ಎ.ಎಂ. ನಡಿಕೇರಿ ಗ್ರಾಮ, ಪೊನ್ನಂಪೇಟೆ ತಾ। ಕೊಡಗು ಜಿಲ್ಲೆ. ಪ್ರಸ್ತುತ 12 ವರ್ಷದ ಕಪ್ಪು ದುಂಡು ಮುಖ, ಗುಂಗುರು ಕೂದಲು ಹೊಂದಿರುತ್ತಾರೆ.

ಕು॥ ಮಹಾಲಕ್ಷ್ಮಿ
ಸರ್ಕಾರಿ ಹುಟ್ಟಿದ ದಿನಾಂಕ: 01–03–2012 ಸಂಸ್ಥೆಗೆ ಬಂದಾಗ: 13 ವರ್ಷ 08 ತಿಂಗಳು, ತಂದೆಯ ಹೆಸರು ಗೋವಿಂದ, ತಾಯಿಯ ಹೆಸರು: ರತ್ನ, ದಿನಾಂಕ: 29–03–2025 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾರೆ. ಮಾತನಾಡುವ ಭಾಷೆ: ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಮಹಾದೇವ, ಮಟಾಣಿ ನಗರ, ಮಡಿಕೇರಿ ತಾ॥ ಕೊಡಗು ಜಿಲ್ಲೆ. ಪ್ರಸ್ತುತ 13 ವರ್ಷದ ಕಪ್ಪು ಮೈ ಬಣ್ಣ, ಕೋಲು ಮುಖ, ನಯವಾದ ಕೂದಲು ಹೊಂದಿರುತ್ತಾರೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಡಿಕೇರಿ, ಕೊಡಗು ಜಿಲ್ಲೆ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾವೇರಿ ವಿಭಾಗ, ಹಾವೇರಿ
ಸಂ:ವಾಕರಸಾ/ಹಾವಿ/ಸಂ/ವಾ/ಟೆಂಡರ್/2554ದಿನಾಂಕ:02/02/2026

ಇ–ಟೆಂಡರ್ ಪ್ರಕಟಣೆ ಸಂಖ್ಯೆ:01/2026.
(ಕೆಪಿಪಿಪಿ–ಪೋರ್ಟಲ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾವೇರಿ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣದಲ್ಲಿ ಖಾಲಿ ಇರುವ ಹಾಗೂ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ, ಸ್ವಚ್ಛತೆ ಹಾಗೂ ಶೌಚಾಲಯ ಗುತ್ತಿಗೆ ನಿರ್ವಹಣೆಗೆ (ಕೊಟೇಶನ್) ಕೆಪಿಪಿಪಿ–ಪೋರ್ಟಲ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜಗಳನ್ನು ಕೆಪಿಪಿಪಿ–ಪೋರ್ಟಲ್ ವೆಬ್‌ಸೈಟ್ ವಿಳಾಸ "https://kppp.karnataka.gov.in" ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು ದಿನಾಂಕ : **23–02–2026** ರಂದು 16.00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿದ್ದು ಕೆಪಿಪಿಪಿ–ಪೋರ್ಟಲ್ ಸೆಲ್ ನಿಂದ DSC(Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ ಸಹಾಯವಾಣಿ ಸಂಖ್ಯೆ **080–25201227, 080–25501216** ಅಥವಾ ವಿಭಾಗಿಯ ಕಛೇರಿ ವಾಕರಸಾ ಸಂಸ್ಥೆ ಹಾವೇರಿ ವಿಭಾಗ ಹಾವೇರಿ ಇವರಲ್ಲಿ ಸಂಪರ್ಕಿಸಲು ಕೊರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ–**7760991902**

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿಗಳು,
ವಾ.ಕ.ರ.ಸಾ.ಸಂಸ್ಥೆ, ಹಾವೇರಿ ವಿಭಾಗ ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/674/2025–26

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560041
registrar@rguhs.ac.in +91–80–29601928

No. RGUHSB/PROC/GEN/11/2026(134775) ದಿನಾಂಕ: 03/02/2026

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 28ನೇ ಘಟಿಕೋತ್ಸವ ಸಮಾರಂಭಕ್ಕೆ Gold Medals ಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

ಟೆಂಡರ್ ಸಂಖ್ಯೆ. RGUHSK/2025-26/IND0024

1	ಡೌನ್‌ಲೋಡ್‌ಗಾಗಿ ಟೆಂಡರ್ ಡಾಕ್ಯೂಮೆಂಟ್‌ಗಳ ಲಭ್ಯತೆ	02/02/2026, 18:10 ಗಂಟೆ
2	ಬಿಡ್ ಪೂರ್ವ–ಭಾವಿ ಸಭೆ	06/02/2026, 11:00 ಗಂಟೆ
3	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	13/02/2026, 17:30 ಗಂಟೆ
4	ಮಾದರಿಯನ್ನು ಸಲ್ಲಿಸಲು ಕೊನೆಯ ದಿನಾಂಕ	16/02/2026, 17:30 ಗಂಟೆ
5	ತಾಂತ್ರಿಕ ಬಿಡ್ ತೆರೆಯುವುದು	18/02/2026, 11:00 ಗಂಟೆ
6	ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/–
ಕುಲಸಚಿವರು

ವಾ.ಸಾ.ಸಂ.ಇ/ವಾಪ್ರ/5392/ಆಕಾರ್/2025–26

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
(ಲೋಕೋಪಯೋಗಿ ಇಲಾಖೆ)
ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
ಕೆ.ಆರ್.ವೃತ್ತ, ಬೆಂಗಳೂರು – 560001
KSHIP

ಸಂಖ್ಯೆ: KSHIP-III/Pkg-2/ENV/2025-26/16 ದಿನಾಂಕ: 04.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ಕಛೇರಿಗೆ ಕೆಳಕಂಡ ಸೇವೆಗೆ ಏಕ ಹಂತ–ಎರಡು ಕವರ್ ವ್ಯವಸ್ಥೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಆಸ್ತಕ ಅರ್ಜಿದಾರರು RFP ಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ (https://kppp.karnataka.gov.in) ವೀಕ್ಷಣೆ ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕೆಲಸದ ಹೆಸರು: ಮಾಗಡಿಯಿಂದ ಸೋಮವಾರಪೇಟೆ ಹತ್ತಿರಕ್ಕೆ ಪ್ಯಾಕೇಜ್–2 ರಂತೆ KSHIP–IIIಕ್ಕೆ 3 ವರ್ಷದ ಅವಧಿಗೆ ಪರಿಸರ ಮಾನದಂಡಗಳನ್ನು (ಎನ್ವಿರಾನ್ಮೆಂಟಲ್ ಪ್ಯಾರಾಮೀಟರ್‌ಗಳನ್ನು) ಉಸ್ತುವಾರಿ ಮಾಡಲು ಸೇವೆಗಳ ಖರೀದಿ. (2ನೇ ಕರೆ)	
ಕೆಲಸದ ವ್ಯಾಪ್ತಿ: ಸಮಾಲೋಚಕರು KSHIP-III, ಪ್ಯಾಕೇಜ್–2, ಮಾಗಡಿಯಿಂದ ಸೋಮವಾರಪೇಟೆ ಹತ್ತಿರಕ್ಕೆ 3 ವರ್ಷಗಳ ಕಾಲ ನಿರ್ದಿಷ್ಟ ಸ್ಥಳಗಳಲ್ಲಿ ಋತುಮಾನ ಪರಿಸರ ಪರೀಕ್ಷೆಯನ್ನು (ಗಾಳಿ, ನೀರು, ಶಬ್ದ, ಮಣ್ಣು) ನಡೆಸಿ ಮಾದರಿಗಳನ್ನು ವಿಶ್ಲೇಷಿಸಬೇಕು ಮತ್ತು ಕಾಲಾನುಕ್ರಮವಾಗಿ ಮತ್ತು ಅಂತಿಮ ವರದಿಗಳನ್ನು ಸಲ್ಲಿಸಬೇಕು. ಎಲ್ಲಾ ಚಟುವಟಿಕೆಗಳು ಸಂಬಂಧಿತ ಪರಿಸರ ಮಾನದಂಡಗಳನ್ನು ಅನುಸರಿಸಬೇಕು.	
ಆರ್‌ಎಫ್‌ಪಿ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯವಿರುವ ದಿನಾಂಕ	ದಿನಾಂಕ: 04.02.2026 ಸಮಯ 15:00 ಗಂಟೆವರೆಗೆ
ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಪ್ರಶ್ನೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	ದಿನಾಂಕ: 07.02.2026 ಸಮಯ 11:30 ಗಂಟೆವರೆಗೆ
ಪೂರ್ವ ಬಿಡ್ ಸಭೆಯ ಸಮಯ ಮತ್ತು ದಿನಾಂಕ	ದಿನಾಂಕ: 07.02.2026 ಸಮಯ 11:30 ಗಂಟೆಗಳು (ಯೋಜನಾ ನಿರ್ದೇಶಕರ ಕಛೇರಿ, ಕೆಶಿಪ್ ಬೆಂಗಳೂರು)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 16.02.2026 ಸಮಯ 15:00 ಗಂಟೆವರೆಗೆ
ಬಿಡ್‌ಗಳನ್ನು ತೆರೆಯುವ ಸಮಯ ಮತ್ತು ದಿನಾಂಕ	ದಿನಾಂಕ: 17.02.2026 ಸಮಯ 16:30 ಗಂಟೆಗೆ
ಇಎಂಡಿ (ಕೆಪಿಪಿ ಪೋರ್ಟಲ್‌ನಲ್ಲಿ)	ರೂ.35,000/– (ಮೂವತ್ತೈದು ಸಾವಿರ ಮಾತ್ರ)

ದಯವಿಟ್ಟು ಗಮನಿಸಿ:– ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರದ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ. ಮುಂದುವರೆದು, ಬಿಡ್ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಯಾವುದೇ ಸೇರ್ಪಡೆ/ವಿಶ್ಲೇಷಣೆಗಳು/ವೇಳಾಪಟ್ಟಿಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.inನಲ್ಲಿ ಮಾತ್ರ ಅಪ್‌ಲೋಡ್/ಪ್ರಕಟಿಸಲಾಗುತ್ತದೆ.

* ದಯವಿಟ್ಟು ಗಮನಿಸಿ, ಮುಂದಿನ ನಿಯಮಾವಳಿಗಳ ಪ್ರಕಾರ, ವೇಳಾಪಟ್ಟಿಯಲ್ಲಿ ಆಗುವ ಯಾವುದೇ ಬದಲಾವಣೆಗಳನ್ನು ಸುದ್ದಿಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಮತ್ತು ಹೆಚ್ಚಿನ ಬದಲಾವಣೆಗಳು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್/ KSHIP ವೆಬ್‌ಸೈಟ್‌ನಲ್ಲಿ ಮಾತ್ರ ಅಪ್ಡೇಟ್ ಮಾಡಲಾಗುತ್ತವೆ.

ಸಹಿ/–
ಯೋಜನಾ ನಿರ್ದೇಶಕರು, ಯೋ.ಅ.ಘ, ಕ.ರಾ.ಹೆ.ಅ.ಯೋ.
ಬೆಂಗಳೂರು

ಡಿಐಪಿಆರ್/ಸಿಪಿ/5396/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯಿತಿ ಕಾರ್ಯಾಲಯ, ಶ್ರೀರಾಂಪುರ
ಮೈಸೂರು ಜಿಲ್ಲೆ–0821–2330109 ದೂ:0821–2330109, ಇ–ಮೇಲ್: itstaff_ulb_srirampur@yahoo.com

ಶ್ರೀ.ಪ.ಪಂ.ಕಾ/ಜೆ.ಇ/ಟೆಂ.ಪ್ರ.21/2025–26 ದಿನಾಂಕ: 03.02.2026

ಟೆಂಡರ್ ಪ್ರಕಟಣೆ
ಈ ಪ್ರಕಟಣೆ ಕೆ.ಪಿ.ಪಿ–ಪೋರ್ಟಲ್ ಮುಖಾಂತರ ಮಾತ್ರ

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಕೆಡಬ್ಲ್ಯೂ–1, ಕೆಡಬ್ಲ್ಯೂ–2, ಮತ್ತು ಕೆಡಬ್ಲ್ಯೂ–3 ನಿಯಮದನ್ವಯ ಕೆ.ಪಿ.ಪಿ.–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2025–26 ನೇ ಸಾಲಿನ ಪಂಚಾಯಿತಿ ನಿಧಿ ಯೋಜನೆಯಡಿ ಕೆಳಗಿನ ಕಾಮಗಾರಿಗಳಿಗೆ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ–ವೆಬ್‌ಸೈಟ್ https://kppp.karnataka.gov.in ಮೂಲಕ ಇಎಂಡಿ, ಗುತ್ತಿಗೆ ಮತ್ತು ಇತರೆ ಶರತ್ತುಗಳನ್ನು ಗಮನಿಸಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ www.srirampuratown.mrc.gov.in ನಿಂದ ಪಡೆದುಕೊಳ್ಳಬಹುದು.

ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: **17.02.2026** ಸಂಜೆ **5.30** ಗಂಟಗೆ . ತಾಂತ್ರಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ:19.02.2026 ಪೂರ್ವಾಹ್ನ 11.00 ಗಂಟೆಗೆ ಸ್ವೀಕೃತವಾದ ದರ ಟೆಂಡರ್ ತೆರೆಯುವ ದಿನಾಂಕ: **26.01.2026** ಪೂರ್ವಾಹ್ನ **11.00**ಗಂಟೆಗೆ.

ಕ್ರ ಸಂ	ವಿವರ	ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಇ.ಎಮ್.ಡಿ ಮೊತ್ತ (ಲಕ್ಷಗಳಲ್ಲಿ)	ಮೀಸಲಾತಿ
01	DMA/2025-26/RD/WORK _INDENT53923	84.72	1.70	Other
02	DMA/2025-26/RD/WORK _INDENT53936	83.75	1.68	Other
03	DMA/2025-26/RD/WORK _INDENT54388	62.33	1.25	Other
04	DMA/2025-26/RD/WORK _INDENT54396	56.79	1.14	Other
05	DMA/2025-26/RD/WORK _INDENT54398	55.68	1.11	Other
06	DMA/2025-26/RD/WORK _INDENT54420	54.47	1.09	Other
07	DMA/2025-26/RD/WORK _INDENT54426	84.5	1.69	Other
08	DMA/2025-26/RD/WORK_INDENT54427	75.35	1.50	Other
09	DMA/2025-26/RD/WORK _INDENT54429	82.67	1.65	Other
10	DMA/2025-26/OW/WORK _INDENT54446	83.11	1.66	Other
11	DMA/2025-26/RD/WORK_ INDENT53935	43.76	0.88	Other
12	DMA/2025-26/RD/WORK _INDENT53922	29.33	0.59	Other
13	DMA/2025-26/RD/WORK _INDENT54379	36.1	0.72	Other
14	DMA/2025-26/OW/WORK_INDENT54452	19.71	0.5	Other
15	DMA/2025-26/RD/WORK INDENT53921	61.85	0.62	SC
16	DMA/2025-26/RD/WORK INDENT53934	68.2	0.68	SC
17	DMA/2025-26/RD/WORK_INDENT54430	82.22	0.82	SC
18	DMA/2025-26/RD/WORK INDENT54455	75.1	0.75	SC
19	DMA/2025-26/BD/WORK INDENT54447	29.73	0.3	SC
20	DMA/2025-26/RD/WORK INDENT54392	83.97	0.84	ST
21	KDMA/2025-26/RD/WORK_INDENT54421	80.98	0.81	ST
22	DMA/2025-26/FP/WORK_INDENT54440	84.32	0.84	ST
23	DMA/2025-26/RD/WORK_INDENT53924	69.33	0.69	CAT-11(A)
24	DMA/2025-26/RD/WORK_INDENT53925	84.56	0.85	CAT-11(A)
25	DMA/2025-26/RD/WORK_INDENT54424	79.81	0.8	CAT-11(A)
26	DMA/2025-26/RD/WORK_INDENT54443	82.42	0.82	CAT-11(A)
27	DMA/2025-26/RD/WORK_INDENT54442	41.53	0.42	CAT-1

ಸೂಚನೆ: ಹೆಚ್ಚಿನ ವಿವರ ಹಾಗೂ ಮಾಹಿತಿಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–
(ಮಹೇಶ್‌ಕುಮಾರ್.ಕೆ.ಎಮ್)
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ಸಹಿ/–
(ಹೆಚ್.ಎಮ್.ಸುರೇಶ)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ವಾಸಾಸಂಇ/ಮೈಸೂರು/1597/ಎಸ್‌ಎಸ್‌ಸಿ/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸತ್ಯದ ಜತೆ ಬದುಕುವವನು ಯಾರಿಗೂ ಹೆದರಬೇಕಾಗಿಲ್ಲ.

–ಸಾಕ್ರಟೀಸ್

ಸಂಪಾದಕೀಯ

ಅಕ್ರಮ ಮರಳು ಗಣಿಗಾರಿಕೆ ದಂಧೆ ರಾಜ್ಯ ಸರ್ಕಾರಕ್ಕಿಂತಲೂ ಬಲಿಷ್ಠವೆ?

ರಾಜ್ಯದಲ್ಲಿನ ಅಕ್ರಮ ಮರಳು ಗಣಿಗಾರಿಕೆ ದಂಧೆಯ ಬಗ್ಗೆ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿರುವ ಕರ್ನಾಟಕ ಹೈಕೋರ್ಟ್, ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸಿಬಿಐ ಅಥವಾ ಎಸ್‌ಐಟಿ ತನಿಖೆ ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿರುವುದು ಪ್ರಕರಣದ ಗಂಭೀರತೆ ಹಾಗೂ ಅದನ್ನು ನಿರ್ವಹಿಸುವಲ್ಲಿ ಸರ್ಕಾರ ವಿಫಲವಾಗಿರುವುದನ್ನು ಸೂಚಿಸುವಂತಿದೆ; ಆಡಳಿತ ವ್ಯವಸ್ಥೆ ವಿಫಲವಾಗಿರುವುದರಿಂದಲೇ ನ್ಯಾಯಾಂಗದ ಮಧ್ಯಪ್ರವೇಶ ಅನಿವಾರ್ಯವಾಗಿದೆ ಎಂದೂ ಹೇಳುವಂತಿದೆ. ಮರಳು ಗಣಿಗಾರಿಕೆಗೆ ಸಂಬಂಧಿಸಿದ ಅಪರಾಧದ ಪ್ರಮಾಣವಷ್ಟೇ ಕಳವಳ ಹುಟ್ಟಿಸುವಂತಿಲ್ಲ, ಅಕ್ರಮಗಳನ್ನು ಹತ್ತಿಕ್ಕುವಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರು ವ್ಯಕ್ತಪಡಿಸಿರುವ ಅಸಹಾಯಕತೆ ಆತಂಕವನ್ನು ಮತ್ತಷ್ಟು ಹೆಚ್ಚಿಸುವಂತಿದೆ. ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಯ ಹೊಣೆ ಹೊತ್ತಿರುವ ಸಚಿವರೇ ಮರಳು ಮಾಫಿಯಾ ಎದುರಿಸಲು ಅಸಹಾಯಕತೆ ವ್ಯಕ್ತಪಡಿಸಿರುವಾಗ, ಈ ವಿಷಯವು ಅಕ್ರಮ ಮರಳು ಗಣಿಗಾರಿಕೆಗಷ್ಟೇ ಸಂಬಂಧಿಸಿದ್ದಾಗಿ ಉಳಿಯುವುದಿಲ್ಲ. ಇದು, ರಾಜ್ಯವನ್ನು ನಿಜವಾಗಿ ಆಳುತ್ತಿರುವವರು ಯಾರು ಎನ್ನುವ ಪ್ರಶ್ನೆಗೂ ಕಾರಣವಾಗುವಂತಿದೆ. ಗೃಹ ಸಚಿವರು ತಮ್ಮನ್ನು ಶಕ್ತಿಹೀನರು ಎಂದು ಭಾವಿಸಿದಾಗ ಪೊಲೀಸ್ ಅಥವಾ ಜಿಲ್ಲಾಡಳಿತ ದಿಟ್ಟತನದಿಂದ ಕಾರ್ಯ ನಿರ್ವಹಿಸಬೇಕೆಂದು ನಿರೀಕ್ಷಿಸಲು ಸಾಧ್ಯವಿಲ್ಲ. ಕಾನೂನು ಅನುಷ್ಠಾನವು ಅಧಿಕಾರ, ಸಾಂಸ್ಥಿಕ ಬೆಂಬಲ ಹಾಗೂ ರಾಜಕೀಯ ಇಚ್ಛಾಶಕ್ತಿಯನ್ನು ಅವಲಂಬಿಸಿರುತ್ತದೆ. ಇದು ಸಾಧ್ಯವಾಗದೆ ಹೋದಾಗ, ಕಾಗದದ ಮೇಲಷ್ಟೇ ಉಳಿದಿರುವ ರಾಜ್ಯದ ಮರಳು ಗಣಿಗಾರಿಕೆಯ ವಿಶೇಷ ಕಾರ್ಯಪಡೆಯಂತೆ, ಕಾನೂನು ಮತ್ತು ಸುವ್ಯವಸ್ಥೆಯೂ ಆಲಂಕಾರಿಕವಾಗಿಯಷ್ಟೇ ಉಳಿಯುತ್ತದೆ. ಎಲ್ಲ ಪಕ್ಷಗಳಿಗೂ ಸಂಬಂಧಿಸಿದ ಪ್ರಭಾವಿ ವ್ಯಕ್ತಿಗಳು ಮರಳು ದಂಧೆಯಲ್ಲಿ ಭಾಗಿಯಾಗಿದ್ದಾರೆ ಎನ್ನುವ ಪರಮೇಶ್ವರ ಅವರ ಹೇಳಿಕೆಯ ಹಿನ್ನೆಲೆಯಲ್ಲಿ ಕೇಳಲೇಬೇಕಾದ ಪ್ರಶ್ನೆಯೊಂದಿದೆ: ಅಕ್ರಮದಲ್ಲಿ ಭಾಗಿ ಆದವರ ಹೆಸರುಗಳನ್ನು ಬಹಿರಂಗಪಡಿಸುವುದು ಹಾಗೂ ಅವರ ವಿರುದ್ಧ ಕ್ರಮ ಕೈಗೊಳ್ಳುವುದು ಸಾಧ್ಯವಿಲ್ಲದೆ ಹೋದರೆ, ಆ ದಂಧೆಗೆ ಉನ್ನತ ವಲಯದ ಶ್ರೀರಕ್ಷೆ ಇದೆಯೆಂದೇ ಅರ್ಥವಲ್ಲವೆ?



ರಾಜ್ಯದ ಮರಳು ಗಣಿಗಾರಿಕೆ ಅಕ್ರಮಗಳ ತನಿಖೆಗೆ ಸಂಬಂಧಿಸಿದಂತೆ ಹೈಕೋರ್ಟ್ ಮಧ್ಯಪ್ರವೇಶ, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರದ ವೈಫಲ್ಯವನ್ನು ಸಂಕೇತಿಸುವಂತಿದೆ.

ಅಕ್ರಮ ಮರಳು ಗಣಿಗಾರಿಕೆ ಸಣ್ಣ ಅಪರಾಧವೇನಲ್ಲ. ಇದು, ಪರಿಸರ ಹಾಗೂ ಆರ್ಥಿಕತೆಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದ ಅಪರಾಧವಾಗಿದೆ. ಈ ದಂಧೆಯಿಂದ ಕೃಷ್ಣಾ, ಕಾವೇರಿ ಮತ್ತು ತುಂಗಭದ್ರಾ ನದಿಗಳಿಗೆ ಗಾಸಿಯಾಗುತ್ತಿದೆ, ಅಂತರ್ಜಲ ಮಟ್ಟ ಕುಸಿಯುತ್ತಿದೆ, ದೂಳಿನಿಂದ ಬೆಳೆಗಳಿಗೆ ಹಾನಿಯಾಗುತ್ತಿದೆ, ಸೇತುವೆಗಳು ದುರ್ಬಲಗೊಳ್ಳುತ್ತಿವೆ ಹಾಗೂ ಮರಳು ಸಾಗಿಸುವ ಟ್ರಕ್‌ಗಳು ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿವೆ. ಇದೆಲ್ಲದರ ಪರಿಣಾಮವಾಗಿ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ; ಅದೇ ಕಾಲದಲ್ಲಿ ಮರಳು ದಂಧೆ ಸೃಷ್ಟಿಸಿರುವ ಸಮಾನಾಂತರ ಆರ್ಥಿಕತೆಯು ಹಿಂಸೆ, ಕಪ್ಪುಹಣ ಮತ್ತು ಭಯೋತ್ಪಾದನೆಯಿಂದ ಬಲಗೊಳ್ಳುತ್ತಿದೆ. ಮರಳು ಮಾಫಿಯಾದ ಭಯದಿಂದ ಶಾಸಕರೂ ಮುಕ್ತರಾಗಿ ಇರುವಂತೆ ಕಾಣಿಸುತ್ತಿಲ್ಲ. ಅಕ್ರಮ ಮರಳು ಗಣಿಗಾರಿಕೆಯ ವಿರುದ್ಧ ಧ್ವನಿ ಎತ್ತಿರುವ ರಾಯಚೂರು ಜಿಲ್ಲೆಯ ಶಾಸಕಿಯೊಬ್ಬರು ಜೀವ ಬೆದರಿಕೆ ಎದುರಿಸುತ್ತಿರುವ ಬಗ್ಗೆ ದೂರು ದಾಖಲಾಗಿದೆ. ಜನಪ್ರತಿನಿಧಿಗಳೇ ಪ್ರತೀಕಾರದ ಆತಂಕವನ್ನು ಎದುರಿಸುತ್ತಿರಬೇಕಾದರೆ, ಜನಸಾಮಾನ್ಯರ ಸ್ಥಿತಿಯನ್ನು ಸುಲಭವಾಗಿ ಊಹಿಸಬಹುದು.

ರಾಜ್ಯದ ಸಂಪನ್ಮೂಲಗಳ ರಕ್ಷಣೆ, ಕಾನೂನು ಜಾರಿಗೊಳಿಸುವಿಕೆ ಹಾಗೂ ಮಾಹಿತಿದಾರರ ರಕ್ಷಣೆ ಸಾಧ್ಯವಿಲ್ಲ ಎಂದು ಒಪ್ಪಿಕೊಳ್ಳುವ ಮೂಲಕ ಸಚಿವರು ತಮ್ಮ ಹುದ್ದೆಯ ಸಾಮರ್ಥ್ಯವನ್ನು ಕುಗ್ಗಿಸಿದ್ದಾರೆ. ಮರಳು ಮಾಫಿಯಾದ ಎದುರು ಗೃಹಸಚಿವರೇ ಬಹಿರಂಗವಾಗಿ ಶರಣಾಗಿರುವಾಗ, ಪೊಲೀಸರು ಇಲ್ಲವೇ ಜಿಲ್ಲೆಗಳ ಅಧಿಕಾರಿಗಳು ಧೈರ್ಯದಿಂದ ಕ್ರಮ ಜರುಗಿಸುತ್ತಾರೆಂದು ಹೇಗೆ ನಿರೀಕ್ಷಿಸುವುದು? ಕಾನೂನು ಮತ್ತು ಸುವ್ಯವಸ್ಥೆ ಜಾರಿಗೊಳಿಸಬೇಕಾದ ಸಂಸ್ಥೆಯನ್ನು ನಿರ್ವಹಿಸುವ ನಾಯಕ ಕೈಚೆಲ್ಲಿದಾಗಲೇ ರಾಜ್ಯವೂ ಅಸಹಾಯಕ ಆದಂತಾಗಿದೆ. ಹಾಗಾಗಿಯೇ ಹೈಕೋರ್ಟ್ ಮಧ್ಯಪ್ರವೇಶಿಸಿದೆ. ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ, ವಿಶೇಷ ತನಿಖಾ ತಂಡದಿಂದ ತನಿಖೆ ನಡೆಯುವುದು ಅನಿವಾರ್ಯವಾಗಿದೆ. ಇದು ಸಾಧ್ಯವಾಗದೆ ಹೋದಲ್ಲಿ, ಮರಳು ಮಾಫಿಯಾ ರಾಜ್ಯ ಸರ್ಕಾರಕ್ಕಿಂತಲೂ ಬಲಿಷ್ಠ ಎಂದು ಸಾಬೀತಾಗುತ್ತದೆ.

ಜಾಲತಾಣ

ಪ್ರಧಾನಿ ಯಾರು?



ಭಾರತ ಏನು ಖರೀದಿಸಬೇಕು ಹಾಗೂ ಎಲ್ಲಿ ಖರೀದಿಸಬೇಕು ಎಂಬುದನ್ನು ಟ್ರಂಪ್ ನಿರ್ಧರಿಸುತ್ತಿದ್ದಾರೆ. ತಮಗಿಷ್ಟ ಬಂದಂತೆ ಮೋದಿಯವರನ್ನು ಕುಣಿಸುತ್ತಿದ್ದಾರೆ. ನಮ್ಮನ್ನು ಕಾಡುತ್ತಿರುವ ಕಟ್ಟಕಡೆಯ ಪ್ರಶ್ನೆ- ಭಾರತ ದೇಶದ ಪ್ರಧಾನ ಮಂತ್ರಿ ಯಾರು?

ಪುಷ್ಪಾ ಮಂಜುನಾಥ್ ರೆಡ್ಡಿ, 'ಎಕ್ಸ್'ನಿಂದ

ಕಿಡಿನುಡಿ



ಸಂಸತ್ತಿನಲ್ಲಿ ಸತ್ಯ ಎದುರಿಸಲು ಎದೆಗಾರಿಕೆ ಬೇಕೇ ಹೊರತು, ಸುಳ್ಳಿನ ಪರದೆಯ ಹಿಂದೆ ಬಚ್ಚಿಟ್ಟುಕೊಳ್ಳುವ ಹೇಡಿತನದ '56' ಇಂಚಿನ ಎದೆಯಲ್ಲ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

---

25 ವರ್ಷಗಳ ಹಿಂದೆ

ಭಾನುವಾರ, 4-2-2001

- **ದಂಡುಪಾಳ್ಯದ ಐವರು ಕುಖ್ಯಾತ ಕೊಲೆಗಡುಕರ ಬಂಧನ**

ಬೆಂಗಳೂರು, ಫೆ. 3– ರಾಜಧಾನಿ ಮತ್ತು ರಾಜ್ಯದ ಪ್ರಮುಖ ನಗರಗಳಲ್ಲಿ ಒಂದು ವರ್ಷದ ಅಂತರದಲ್ಲಿ ಕೊಲೆ, ದರೋಡೆ ನಡೆಸಿ ಸಾರ್ವಜನಿಕರನ್ನು ತಲ್ಲಣಗೊಳಿಸಿದ್ದ ಕುಖ್ಯಾತರನ್ನು ಬಂಧಿಸುವಲ್ಲಿ ಪಶ್ಚಿಮ ವಿಭಾಗದ ಪೊಲೀಸರು ಯಶಸ್ವಿಯಾಗಿದ್ದಾರೆ.

ಸಿಕ್ಕಿಬಿದ್ದವರು ಹೊಸಕೋಟೆಯ ದಂಡುಪಾಳ್ಯದವರು. ರಾಜ್ಯದ ವಿವಿಧ ಕಡೆಗಳಲ್ಲಿ ನಡೆದ 25 ಕೊಲೆ ಪ್ರಕರಣಗಳ ರಹಸ್ಯವನ್ನು ಬಯಲುಗೊಳಿಸಿದ್ದಾರೆ. ಆರೋಪಿಗಳಿಂದ 8 ಲಕ್ಷ ರೂಪಾಯಿ ಮೌಲ್ಯದ ಆಭರಣ ವಶಪಡಿಸಿಕೊಂಡಿದ್ದಾರೆ.

ದಂಡುಪಾಳ್ಯದ ದೊಡ್ಡಹನುಮ ಉರುಫ್ ಹನುಮ (36), ಆತನ ಪತ್ನಿ ಲಕ್ಷ್ಮಮ್ಮ ಉರುಫ್ ಲಕ್ಕಿ (30), ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಾಡುಗೋಡಿ ಸಮೀಪದ ದಿನ್ನೂರು ಕಾಲೊನಿಯ ವೆಂಕಟೇಶ ಉರುಫ್ ಚಂದ್ರ (33), ಮುನಿಕೃಷ್ಣ ಉರುಫ್ ಕೃಷ್ಣ (28) ಹಾಗೂ ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ನಲ್ಲತಿಮ್ಮ (28) ಬಂಧಿತರು.

- **ವಿಕೋಪ ನಿರ್ವಹಣೆಗೆ ಎರಡು ಸಮಿತಿಗಳ ರಚನೆಗೆ ನಿರ್ಧಾರ**

ನವದೆಹಲಿ, ಫೆ. 3 (ಪಿಟಿಐ)– ಭೂಕಂಪಪೀಡಿತ ಗುಜರಾತ್‌ನಲ್ಲಿ ಪರಿಹಾರ ಮತ್ತು ಪುನರ್‌ನಿರ್ಮಾಣ ಕಾರ್ಯಗಳಿಗೆ ನೆರವು ನೀಡಲು ರಾಜಕೀಯ ಪಕ್ಷಗಳ ರಾಷ್ಟ್ರೀಯ ನಿರ್ವಹಣಾ ಸಮಿತಿ ಹಾಗೂ ನೈಸರ್ಗಿಕ ವಿಕೋಪಗಳನ್ನು ನಿಭಾಯಿಸಲು ಶಾಶ್ವತವಾಗಿ ತಜ್ಞರನ್ನೊಳಗೊಂಡ ರಾಷ್ಟ್ರೀಯ ದುರಂತ ನಿರ್ವಹಣಾ ಸಮಿತಿ ರಚಿಸಲು ಕೇಂದ್ರ ನಿರ್ಧರಿಸಿದೆ.

75 ವರ್ಷಗಳ ಹಿಂದೆ

ಭಾನುವಾರ, 4-2-1951

- **ಅಮೆರಿಕದಲ್ಲಿ ನೀಗ್ರೊಗಳಿಗೆ ಗಲ್ಲು ಖಾಯಂ ಆಯಿತು**

ವಾಷಿಂಗ್‌ಟನ್, ಫೆ. 2– ಒಬ್ಬ ಶ್ವೇತ ಜನಾಂಗದ ಸ್ತ್ರೀ ಮಾನಭಂಗ ಮಾಡಿದ ಕಾರಣಕ್ಕಾಗಿ ಮರಣದಂಡನೆಗೆ ಗುರಿ ಮಾಡಲ್ಪಟ್ಟಿದ್ದ ನೀಗ್ರೊಗಳು ಆ ಆಜ್ಞೆ ತಡೆಯಲು ಹಾಕಿದ್ದ ಅಪೀಲ್ ಅರ್ಜಿಯನ್ನು ಅಮೆರಿಕದ ಸುಪ್ರೀಂ ಕೋರ್ಟ್ ಇಂದು ನಿರಾಕರಿಸಿತು. ಇವರಲ್ಲಿ ನಾಲ್ಕು ಮಂದಿ ಇನ್ನು ಆರು ಗಂಟೆಗಳಲ್ಲಿ ಮರಣದಂಡನೆಗೆ ಗುರಿಯಾಗಲಿದ್ದಾರೆ.

ವರ್ಜೀನಿಯದ ಮಾರ್ಟಿನ್ಸ್ ವಿಲ್‌ನಲ್ಲಿನ ಈ ನೀಗ್ರೊಗಳಿಗೆ ನಿನ್ನೆ ರಾತ್ರಿ ಮರಣದಂಡನೆ ತಡ ಮಾಡಲು ವಾಷಿಂಗ್‌ಟನ್ನಿನಲ್ಲಿ ನೀಗ್ರೊ ವಕೀಲರು ಮಧ್ಯರಾತ್ರಿ ವಾದಿಸಿದುದನ್ನು ಕೇಳಿದ ನಂತರವೂ ಇಂದು ಶ್ರೇಷ್ಠ ನ್ಯಾಯಾಧೀಶ ಫ್ರೆಡ್ ಎಂ. ವಿನ್‌ಸನ್ ಅವರು ಮನವಿಯನ್ನು ತಿರಸ್ಕರಿಸಿದರು.

ರಷ್ಯ ಮತ್ತು ಕಮ್ಯುನಿಸ್ಟ್ ಚೀಣಾದಿಂದ ಸಹಾ ಈ ಆಜ್ಞೆಯನ್ನು ಪ್ರತಿಭಟಿಸಿ ಕೆಲವು ತಂತಿಗಳು ಬಂದಿದ್ದವು.

ಸ್ನೇಹಕ್ಕೆ ಅಮೆರಿಕ ಅರ್ಹವೆ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಎರಡನೇ ಅವಧಿಯಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಚ್ಚು ಅಪಾಯಕಾರಿಯಾಗಿ ಕಾಣಿಸುತ್ತಿದ್ದಾರೆ. ಮಿತ್ರರಾಷ್ಟ್ರಗಳನ್ನೂ ಅವರು ವಿಶ್ವಾಸದಿಂದ ನಡೆಸಿಕೊಳ್ಳುತ್ತಿಲ್ಲ. ಟ್ರಂಪ್ ಅವರ ಅಹಂ, ಮಹತ್ವಾಕಾಂಕ್ಷೆ ಹಾಗೂ ಮನ್ನಣೆಯ ದಾಹ, ವಿಶ್ವದ ಕಣ್ಣಲ್ಲಿ ಅಮೆರಿಕದ ವಿಶ್ವಾಸಾರ್ಹತೆ ಕುಗ್ಗಲು ಕಾರಣವಾಗಿವೆ.

ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿದ್ದ ಹೆನ್ರಿ ಕಿಸಿಂಜರ್ ವಿಯೆಟ್ನಾಂ ಯುದ್ಧದ ಸಂದರ್ಭದಲ್ಲಿ, 'ಅಮೆರಿಕದ ಶತ್ರುವಾಗುವುದು ಅಪಾಯಕಾರಿ. ಆದರೆ, ಅಮೆರಿಕದ ಸ್ನೇಹಿತನಾಗಿರುವುದು ಮಾರಕ' ಎಂಬ ಮಾತನ್ನು ಆಡಿದ್ದರು. ಅಮೆರಿಕದ ಜೊತೆಗಿನ ಸ್ನೇಹಕ್ಕೂ ಬೆಲೆ ತೆರಬೇಕಾಗುತ್ತದೆ ಎನ್ನುವುದು ಆ ಮಾತಿನ ಅರ್ಥವಾಗಿತ್ತು. ಇದೀಗ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಮಾತು ಹಾಗೂ ಕೃತಿಯ ಮೂಲಕ ಅದನ್ನು ನೆನಪಿಸುತ್ತಿದ್ದಾರೆ. ಅಮೆರಿಕದ ಅಧ್ಯಕ್ಷರಾಗಿ ಎರಡನೇ ಅವಧಿಯ ಮೊದಲ ವರ್ಷ ಪೂರೈಸಿರುವ ಟ್ರಂಪ್, ಈಗ ಹೆಚ್ಚು ಆಕ್ರಮಣಕಾರಿಯಾಗಿ ಕಾಣುತ್ತಿದ್ದಾರೆ. ಅಮೆರಿಕವನ್ನು ಮಿತ್ರರಾಷ್ಟ್ರ ಎಂದು ಪರಿಗಣಿಸಿದ್ದ, ವಿವಿಧ ಒಕ್ಕೂಟಗಳ ಮೂಲಕ ಹಿರಿಯಣ್ಣನೊಂದಿಗೆ ಹೆಣೆದುಕೊಂಡಿದ್ದ ದೇಶಗಳು, ಇದೀಗ ಮೈಚಿವುಟಿಕೊಂಡು ಅಮೆರಿಕ ಜೊತೆಗಿನ ಮಿತ್ರತ್ವ ನಿಜವೇ ಎಂದು ಕೇಳಿಕೊಳ್ಳಬೇಕಾದ ಪರಿಸ್ಥಿತಿಯನ್ನು ಟ್ರಂಪ್ ಸೃಷ್ಟಿಸುತ್ತಿದ್ದಾರೆ.

ಟ್ರಂಪ್ ಭಾಷಣಗಳನ್ನು ಗಮನಿಸಿದರೆ ಅವರು ನೇರವಾಗಿ ಅಥವಾ ಪರೋಕ್ಷವಾಗಿ ಎರಡು ಅಂಶಗಳನ್ನು ಹೇಳುತ್ತಾರೆ. ಮೊದಲನೆಯದಾಗಿ, ತಮ್ಮನ್ನು ಅಮೆರಿಕದ ಶ್ರೇಷ್ಠ ಅಧ್ಯಕ್ಷ ಎಂದು ಕರೆದುಕೊಂಡು ಬೆನ್ನು ತಟ್ಟಿಕೊಳ್ಳುತ್ತಾರೆ. ಎರಡನೆಯದಾಗಿ, ಕಡಿಮೆ ಅವಧಿಯಲ್ಲಿ ತಾವು ಸಾಧಿಸಿದ ಕೆಲಸಗಳಿಗೆ ಸಾಕಷ್ಟು ಮನ್ನಣೆ ಸಿಕ್ಕಿಲ್ಲ ಎನ್ನುತ್ತಾ ಅನುಕಂಪ ಮತ್ತು ಶ್ಲಾಘನೆಯನ್ನು ಬಯಸುತ್ತಾರೆ.

ಶ್ರೇಷ್ಠ ಅಧ್ಯಕ್ಷ ಎನ್ನಿಸಿಕೊಳ್ಳಬೇಕಾದರೆ ತಾನು ಕಠಿಣ ನಿಲುವುಗಳನ್ನು ತಳೆಯಬೇಕು; ಇತರ ರಾಷ್ಟ್ರಗಳನ್ನು ಅಂಕೆಯಲ್ಲಿ ಇರಿಸಿಕೊಳ್ಳಬೇಕು; ಜಾಗತಿಕ ರಾಜಕಾರಣದ ಮೇಲೆ ಹಿಡಿತ ಸಾಧಿಸಬೇಕು ಎಂದು ಟ್ರಂಪ್ ಅಂದುಕೊಂಡಂತಿದೆ. 1991ರ ಸೋವಿಯತ್ ಪತನದ ಬಳಿಕ ಏಕೈಕ ಸೂಪರ್‌ಪವರ್ ಎಂದು ಬೀಗುತ್ತಿದ್ದ ಅಮೆರಿಕಕ್ಕೆ ಇದೀಗ ಚೀನಾ ಸಡ್ಡುಹೊಡೆದು ನಿಂತಿದೆ. ಅಮೆರಿಕವನ್ನು ಹಿಂಬಾಲಿಸಿ ಹೆಜ್ಜೆಯಿರಿಸುತ್ತಿದ್ದ ಪಶ್ಚಿಮ ದೇಶಗಳು ಚೀನಾದ ಕೈಕುಲುಕಲು ಸರತಿಯಲ್ಲಿ ನಿಂತಿವೆ. ಅಮೆರಿಕದ ಹಿತ್ತಿಲು ಎನಿಸಿಕೊಳ್ಳುವ ಲ್ಯಾಟಿನ್ ಅಮೆರಿಕಕ್ಕೂ ಚೀನಾ ಕಾಲಿಟ್ಟಿದೆ. ಪಶ್ಚಿಮ ಏಷ್ಯಾ ರಾಷ್ಟ್ರಗಳು ಅಮೆರಿಕಕ್ಕೆ ಪ್ರತಿಯಾಗಿ ಚೀನಾದತ್ತ ನೋಡುತ್ತಿವೆ. ಅಮೆರಿಕದ ಪ್ರಭಾವಲಯ ಕಿರಿದಾಗಿ, ಚೀನಾದ ಹಿಡಿತ ಬಿಗಿಯಾಗುತ್ತಿದೆ. ವೆನೆಜುವೆಲಾ, ಗ್ರೀನ್‌ಲ್ಯಾಂಡ್ ಮತ್ತು ಇರಾನ್ ಕುರಿತ ಟ್ರಂಪ್ ಅವರ ಕಠಿಣ ನಿಲುವು, ಪ್ರಸ್ತಾಪ ಮತ್ತು ಧಮಕಿಯನ್ನು ಈ ಹಿನ್ನೆಲೆಯಲ್ಲಿಯೇ ನೋಡಬೇಕು.

ಈ ಹಿಂದೆ ಅಮೆರಿಕ ತನ್ನ ಸೇನಾಬಲ ಹಾಗೂ ಮಾರುಕಟ್ಟೆ ಸಾಮರ್ಥ್ಯವನ್ನು ಬಳಸಿ ಇತರ ದೇಶಗಳ ಮೇಲೆ ಹಿಡಿತ ಸಾಧಿಸುವ ಕೆಲಸ ಮಾಡುತ್ತಿತ್ತು. ಸೋವಿಯತ್ ಪ್ರಾಬಲ್ಯದಿಂದಾಗಿ ಕಂಗಾಲಾಗಿದ್ದ ಯುರೋಪಿಗೆ ನ್ಯಾಟೊ ಮೂಲಕ 'ನಾನಿದ್ದೇನೆ' ಎಂಬ ಅಭಯ ನೀಡಿತು. ತೈಲ ಸಂಪನ್ನ ರಾಷ್ಟ್ರಗಳಿಗೆ ಭದ್ರತೆಯ ಭರವಸೆ ನೀಡಿ ತೈಲದ ಥೈಲಿಗೆ ಕೈ ಹಾಕಿತು. ಅಮೆರಿಕದ ಅಪೇಕ್ಷೆಗೆ ತಕ್ಕಂತೆ ವಿಶ್ವಸಂಸ್ಥೆಯೂ ಸೇರಿದಂತೆ ಜಾಗತಿಕ ಸಂಸ್ಥೆಗಳನ್ನು ಸಂಯೋಜಿಸಿತು. ಸೋವಿಯತ್ ತನ್ನ ಸೇನೆಯ ಶಕ್ತಿ ವೃದ್ಧಿಸುವ, ಬತ್ತಳಿಕೆಗೆ ಅಣ್ವಸ್ತ್ರಗಳನ್ನು ತುಂಬುವ ಕೆಲಸ ಮಾಡಿತು ನಿಜ, ಆದರೆ ಅಮೆರಿಕದ ಆರ್ಥಿಕ ಸಾಮರ್ಥ್ಯಕ್ಕೆ ಪೆಟ್ಟು ನೀಡುವ ಅಥವಾ ತನ್ನದೇ ಅರ್ಥ ವ್ಯವಸ್ಥೆಯನ್ನು ವಿಸ್ತರಿಸುವ ಕೆಲಸ ಮಾಡಲಿಲ್ಲ. ವಿಘಟನೆ ಅನಿವಾರ್ಯವಾಯಿತು.

ಚೀನಾ ಭಿನ್ನಮಾರ್ಗ ಆಯ್ದುಕೊಂಡಿತು. ಸೇನಾ ಪ್ರಾಬಲ್ಯದ ಮೂಲಕ ಅಮೆರಿಕವನ್ನು ಹಿಂದಿಕ್ಕುವ ತಂತ್ರ ಅನುಸರಿಸುವ ಸಾಹಸಕ್ಕೆ ಚೀನಾ ಮುಂದಾಗಲಿಲ್ಲ. ಉತ್ಪಾದನಾ ಸಾಮರ್ಥ್ಯದ ಹೆಚ್ಚಳ ಮತ್ತು ಆ ಮೂಲಕ ಗಳಿಸಿಕೊಂಡ ಆರ್ಥಿಕ ಬಲವನ್ನು ಬಂಡವಾಳವಾಗಿಸಿಕೊಂಡು ತನ್ನ ಪ್ರಭಾವ ವಿಸ್ತರಿಸುವ ಕೆಲಸ ಮಾಡಿತು. ಚೀನಾ ಉತ್ಪನ್ನಗಳ ಮೇಲಿನ ಅವಲಂಬನೆ ಮತ್ತು ಆರ್ಥಿಕ ನೆರವು, ಹಲವು ದೇಶಗಳನ್ನು ಅದರ ಮರ್ಜಿಗೆ ಬೀಳುವಂತೆ ಮಾಡಿತು. ಕಳೆದ ನಾಲ್ಕು ದಶಕಗಳಲ್ಲಿ ಚೀನಾದ ತಾಂತ್ರಿಕ–ಕೈಗಾರಿಕಾ ಪ್ರಗತಿ ಮತ್ತು ಪಶ್ಚಿಮ ದೇಶಗಳ ತಾಂತ್ರಿಕ ಹಾಗೂ ಕೈಗಾರಿಕಾ ಮಂದಗತಿ ಚೀನಾದ ಓಘಕ್ಕೆ ಪುಷ್ಟಿ ನೀಡಿತು. ಅಮೆರಿಕಕ್ಕೆ ನೈಜ ಪ್ರತಿಸ್ಪರ್ಧಿಯಾಗಿ ಚೀನಾ ಹೊರಹೊಮ್ಮಿತು. ಹಾಗಾಗಿಯೇ ಟ್ರಂಪ್ ಅವರ 'ಮೇಕ್ ಅಮೆರಿಕ ಗ್ರೇಟ್ ಎಗ್ರೈನ್' ಕಾರ್ಯನೀತಿಯ ಪ್ರಮುಖ ಭಾಗ ಚೀನಾದ ಓಘವನ್ನು ತಡೆಯುವುದಾಗಿದೆ.

'ಅಮೆರಿಕ ಪರವಾಗಿ ಇರದಿದ್ದರೆ ಅಮೆರಿಕದ ವಿರುದ್ಧ ಎಂದೇ ಭಾವಿಸಲಾಗುವುದು'- ಇದು ಶೀತಲ ಸಮರದ ಅವಧಿಯಲ್ಲಿ ಅಮೆರಿಕ ಅನುಸರಿಸುತ್ತಿದ್ದ ನೀತಿ. ಟ್ರಂಪ್ ಅವಧಿಯಲ್ಲಿ ಆ ನೀತಿ 'ಅಮೆರಿಕದ ಪರವಾಗಿ ಇಲ್ಲ ಎಂದಾದರೆ ಚೀನಾದ ಪರ ಎಂದೇ ಅರ್ಥ' ಎಂದು ಬದಲಾಗಿದೆ. ವೆನೆಜುವೆಲಾ ಅಧ್ಯಕ್ಷ ನಿಕೋಲಸ್ ಮಡೊರೊ ಅವರನ್ನು ಬಂಧಿಸಿ ಅಮೆರಿಕಕ್ಕೆ ಕರೆತಂದಾಗ, ಮಾದಕವಸ್ತು ಕಳ್ಳಸಾಗಾಣಿಕೆ, ಹುಚ್ಚರು ಮತ್ತು ಅಪರಾಧಿಗಳ ನುಸುಳುವಿಕೆ, ಮಡೊರೊ ಅವರ ಜನವಿರೋಧಿ ಆಡಳಿತದ ಕಾರಣಕ್ಕೆ ಕಾರ್ಯಾಚರಣೆ ಅನಿವಾರ್ಯವಾಯಿತು ಎನ್ನಲಾಯಿತು. ಆದರೆ, ಇತ್ತೀಚಿನ ವರ್ಷಗಳಲ್ಲಿ ವೆನೆಜುವೆಲಾ ಚೀನಾಕ್ಕೆ ಅಗ್ಗದ ದರಕ್ಕೆ ತೈಲ ಪೂರೈಕೆ ಮಾಡುತ್ತಿತ್ತು. ಉತ್ತರ ಅಮೆರಿಕದಲ್ಲಿ ಚೀನಾದ ಪ್ರಭಾವ ಹೆಚ್ಚಲು ವೆನೆಜುವೆಲಾ ಕಾರಣವಾಗಿತ್ತು.

ಇದೀಗ ಗ್ರೀನ್‌ಲ್ಯಾಂಡ್ ಕುರಿತು ಚರ್ಚೆ ನಡೆಯುತ್ತಿದೆ. ಅಮೆರಿಕ, ಯುರೋಪ್, ಚೀನಾ ಮತ್ತು ರಷ್ಯಾದ ನೌಕಾ ಕಾರ್ಯಾಚರಣೆಗಳಿಗೆ ಗ್ರೀನ್‌ಲ್ಯಾಂಡ್ ವ್ಯೂಹಾತ್ಮಕ ದೃಷ್ಟಿಯಿಂದ ನಿರ್ಣಾಯಕ ಪ್ರದೇಶ. ವಿರಳ ಖನಿಜಗಳ ನಿಕ್ಷೇಪಗಳನ್ನೂ ಅದು ಹೊಂದಿದೆ. ನ್ಯಾನೊ ತಂತ್ರಜ್ಞಾನ ಮತ್ತು ಎಐ ಕೇಂದ್ರಿತ ಜಗತ್ತಿನಲ್ಲಿ ಯಾವುದೇ ರಾಷ್ಟ್ರದ ಪಾರಮ್ಯವನ್ನು ನಿರ್ಣಯಿಸುವುದು ಈ ವಿರಳ ಹಾಗೂ ನಿರ್ಣಾಯಕ ಖನಿಜಗಳು. ಆ ಕಾರಣದಿಂದಲೇ ಗ್ರೀನ್‌ಲ್ಯಾಂಡ್ ಮೇಲೆ ಅಮೆರಿಕ ಹಾಗೂ ಚೀನಾ ಕಣ್ಣಿಟ್ಟಿವೆ. ಗ್ರೀನ್‌ಲ್ಯಾಂಡ್ ಬಿಕರಿಗೆ ಇಲ್ಲ, ನಾವು ಅಮೆರಿಕದ ಭಾಗವಾಗಲು ಇಚ್ಛಿಸುವುದಿಲ್ಲ ಎಂದು ಅಲ್ಲಿನ ನಾಗರಿಕರು ಹೇಳುತ್ತಿದ್ದಾರೆ. ಟ್ರಂಪ್ ಮಾತ್ರ ಗ್ರೀನ್‌ಲ್ಯಾಂಡ್ ಅನ್ನು ಅಮೆರಿಕ ಪಡೆದುಕೊಳ್ಳದಿದ್ದರೆ ಅಲ್ಲಿ ಇತರರು ಬಂದು ಕುಳಿತುಕೊಳ್ಳುತ್ತಾರೆ ಎಂದು ಹೇಳುತ್ತಿದ್ದಾರೆ.

ಚೀನಾ ಸುಮ್ಮನೆ ಕುಳಿತಿಲ್ಲ. ಅದು ಕೆನಡಾ ಮತ್ತು ಐರೋಪ್ಯ ರಾಷ್ಟ್ರಗಳನ್ನು ತನ್ನತ್ತ ಸೆಳೆದುಕೊಳ್ಳುವ ಕೆಲಸ ಮಾಡುತ್ತಿದೆ. ಮೊದಲಿಗೆ, ಕೆನಡಾದ ಜೊತೆಗೆ ಸಂಬಂಧ ವೃದ್ಧಿಸಿಕೊಳ್ಳುವ ಕೆಲಸ ಮಾಡಿತು. ಟ್ರಂಪ್ ಕೆನಡಾದ ಮೇಲೆ ಹೆಚ್ಚಿನ ಸುಂಕ ವಿಧಿಸಿ ಅದು ಕುಸಿಯುವಂತೆ ಮಾಡುತ್ತೇವೆ ಎಂದು ಬೆದರಿಸಿದರು. ಆದರೆ, ಕೆನಡಾ ತನ್ನ ಮಾರುಕಟ್ಟೆಯನ್ನು ಚೀನಾದ ವಿದ್ಯುತ್ ವಾಹನಗಳಿಗೆ ತೆರೆಯುವ ಒಪ್ಪಂದಕ್ಕೆ ಸಹಿ ಹಾಕಿತು. ಬಳಿಕ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಚೀನಾಕ್ಕೆ ಭೇಟಿಯಿತ್ತರು. ಬಳಿಕ ಷಿ ಜಿನ್‌ಪಿಂಗ್ ಅವರನ್ನು ಭೇಟಿಯಾಗಲು ಇಂಗ್ಲೆಂಡ್ ಸೇರಿದಂತೆ, ಯುರೋಪಿನ ಹಲವು ರಾಷ್ಟ್ರಗಳು ಸರತಿಯಲ್ಲಿ ನಿಂತವು. ನ್ಯಾಟೊ ಕುರಿತು ಟ್ರಂಪ್ ಅವರ ಅಸಮಾಧಾನಕ್ಕೆ ಮೂಲ ಇದು.

ಟ್ರಂಪ್ ತಮ್ಮ ಮೊದಲ ಅವಧಿಯಲ್ಲಿ ನ್ಯಾಟೊ ಕುರಿತು ಮಾತನಾಡಿದ್ದರು. ನ್ಯಾಟೊಕ್ಕಾಗಿ ಅಮೆರಿಕ ಹೆಚ್ಚಿನ ಹಣ ವ್ಯಯಿಸುತ್ತಿದೆ. ನ್ಯಾಟೊ ಮೂಲಕ ಭದ್ರತೆ ಅಪೇಕ್ಷಿಸುವ ಇತರ ದೇಶಗಳು ಕೂಡ ಸಮಪ್ರಮಾಣದಲ್ಲಿ ವೆಚ್ಚ ಭರಿಸಬೇಕು ಎಂಬುದು ಅವರ ವಾದವಾಗಿತ್ತು. ಅಮೆರಿಕ ತನಗೆ ಸಂಬಂಧಿಸದ ಯುದ್ಧಗಳಲ್ಲಿ ತೊಡಗಬಾರದು ಎಂಬುದು ಅವರ ನಿಲುವಾಗಿತ್ತು. ಆ ಮಾತಿನ ಹಿಂದೆ ಇದ್ದದ್ದು ಕೇವಲ ಆರ್ಥಿಕ ಆಯಾಮ. ಇದೀಗ ನ್ಯಾಟೊ ಸದಸ್ಯ ರಾಷ್ಟ್ರವಾದ ಡೆನ್ಮಾರ್ಕ್ ಅಧೀನದಲ್ಲಿರುವ ಗ್ರೀನ್‌ಲ್ಯಾಂಡ್ ಮೇಲೆ ಒಡೆತನ ಸಾಧಿಸಲು ಬಯಸುತ್ತಿರುವ ಅಮೆರಿಕ, ತನ್ನ ಆಕಾಂಕ್ಷೆಗೆ ಅಡ್ಡವಾಗುವುದಾದರೆ ನ್ಯಾಟೊದ ಉಸಾಬರಿಯೇ ಬೇಕಿಲ್ಲ ಎನ್ನುತ್ತಿದೆ. ನ್ಯಾಟೊಗೆ ಅಮೆರಿಕದ ನೆರವು ಬೇಕೆ ಹೊರತು, ಅಮೆರಿಕಕ್ಕೆ ನ್ಯಾಟೊ ಅಗತ್ಯವಿಲ್ಲ ಎಂಬರ್ಥದಲ್ಲಿ ಟ್ರಂಪ್ ಮಾತನಾಡುತ್ತಿದ್ದಾರೆ. ಈ ಮಾತನ್ನು ಅಲ್ಲಗಳೆಯುವ ಚೈತನ್ಯವನ್ನು ಯುರೋಪ್ ಉಳಿಸಿಕೊಂಡಿಲ್ಲ.

ಹಲವು ಜಾಗತಿಕ ಸಂಸ್ಥೆಗಳಿಂದ ಹೊರಬರುವ ಮಾತನ್ನೂ ಟ್ರಂಪ್ ಆಡಿದ್ದಾರೆ. ಅಮೆರಿಕ ಈಗಾಗಲೇ ಯುನೆಸ್ಕೊ, ವಿಶ್ವ ಆರೋಗ್ಯ ಸಂಸ್ಥೆ, ಮತ್ತು ವಿಶ್ವಸಂಸ್ಥೆಯ ಮಾನವಹಕ್ಕು ಮಂಡಳಿಗಳಿಂದ ಹೊರಬಂದಿದೆ. ಗಾಜಾ ಬಿಕ್ಕಟ್ಟಿಗೆ ಶಾಂತಿಯುತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಹುಟ್ಟುಹಾಕಿದ್ದ ಶಾಂತಿ ಮಂಡಳಿಯ ವ್ಯಾಪ್ತಿ ವಿಸ್ತರಿಸಲು ಟ್ರಂಪ್ ಮುಂದಡಿಯಿಟ್ಟಿದ್ದಾರೆ. ಹಾಗಾಗಿ, ವಿಶ್ವಸಂಸ್ಥೆಗೆ ಪರ್ಯಾಯವಾಗಿ ನೂತನ ಜಾಗತಿಕ ಸಂಸ್ಥೆಯನ್ನು ಹುಟ್ಟುಹಾಕಲು ಟ್ರಂಪ್ ಬಯಸುತ್ತಿದ್ದಾರೆಯೇ ಎಂಬ ಪ್ರಶ್ನೆ ಎದ್ದಿದೆ.

ಭಾರತದ ವಿಷಯದಲ್ಲಿ ಟ್ರಂಪ್ ಅವರು ತಳೆಯುತ್ತಿರುವ ನಿಲುವು ಅವರ ಅಹಂಗೆ ತಾಕಿಕೊಂಡಂತಿದೆ. 'ಆಪರೇಷನ್ ಸಿಂಧೂರ'ದ ಬಳಿಕ ಏರ್ಪಟ್ಟ ಕದನ ವಿರಾಮದಲ್ಲಿ ಟ್ರಂಪ್ ಅವರ ಪಾತ್ರವನ್ನು ಭಾರತ ನಿರಾಕರಿಸಿದ್ದು, ನೊಬೆಲ್ ಶಾಂತಿ ಪುರಸ್ಕಾರಕ್ಕೆ ಶಿಫಾರಸು ಮಾಡದಿದ್ದುದು, ರಷ್ಯಾದ ತೈಲ ಖರೀದಿಯನ್ನು ಮುಂದುವರಿಸಿದ್ದು, ವಾಣಿಜ್ಯಿಕ ಮಾತುಕತೆಗೆ ಸಂಬಂಧಿಸಿದಂತೆ ಟ್ರಂಪ್ ಅವರ ಅಪೇಕ್ಷೆಗೆ ಪೂರಕವಾಗಿ ಪ್ರಧಾನಿ ಮೋದಿ ಅವರು ಕರೆ ಮಾಡದೇ ಉಳಿದದ್ದು, ಇವೆಲ್ಲ ಸಂಗತಿಗಳು ಟ್ರಂಪ್ ಅವರ ಭಾರತ ಕುರಿತ ಅಸಹನೆಯನ್ನು ಹೆಚ್ಚಿಸಿವೆ.

ಒಂದಂತೂ ಖರೆ, ಅಮೆರಿಕದ ಶ್ರೇಷ್ಠ ಅಧ್ಯಕ್ಷನಾಗಬೇಕು ಎಂಬ ಟ್ರಂಪ್ ಅವರ ಆಕಾಂಕ್ಷೆ, ಅಹಂ ಮತ್ತು ಮನ್ನಣೆಯ ದಾಹ, ಅಮೆರಿಕದ ವಿಶ್ವಾಸಾರ್ಹತೆಯನ್ನು ಕೆಳಕ್ಕೆ ಜಗ್ಗುತ್ತಿದೆ.

ವಾಚಕರ ವಾಣಿ

'ಉದಯರವಿ' ಔದಾರ್ಯ ಮುಂದುವರಿಸಿ

ಕುವೆಂಪು ಅವರ ಮಗಳು ತಾರಿಣಿ ಚಿದಾನಂದ, ಅಳಿಯ ಪ್ರೊ.ಕೆ. ಚಿದಾನಂದಗೌಡ ಮೈಸೂರಿನಲ್ಲಿರುವ 'ಉದಯರವಿ' ನಿವಾಸದ ಹಸ್ತಾಂತರಕ್ಕೆ ಮೊದಲು ₹5 ಕೋಟಿ, ನಂತರ ₹10 ಕೋಟಿ, ₹15 ಕೋಟಿಯ ಜೊತೆಗೆ ಮನೆ, ನಿವೇಶನ ಸೇರಿ ಉದ್ದುದ್ದದ ಬೇಡಿಕೆ ಇರಿಸಿದ್ದಾರೆಂದು ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದ್ದಾರೆ (ಪ್ರ.ವಾ., ಜ. 31). ಆದರೆ, 'ಪರಿಸ್ಥಿತಿಯ ಲಾಭ' ಬಯಸುವ ಮಾರ್ಗವೂ ನ್ಯಾಯೋಚಿತವಾಗಿರಲಿ. ಭೌತಿಕ ಮನೆಯೊಂದನ್ನು ಕಟ್ಟಿ ನಿನ್ನೆಲ್ಲ ಶಕ್ತಿಯನ್ನು ಅದರಲ್ಲಿ ಇರಿಸಬೇಡ. ಜಗತ್ತಿನಾದ್ಯಂತ ನಿನ್ನಲ್ಲಿನ ಚೇತನವನ್ನು ಪಸರಿಸು ಎಂದು ಹೇಳುವುದಕ್ಕಾಗಿಯೇ ಕುವೆಂಪು 'ಓ ನನ್ನ ಚೇತನ' ಕವನದಲ್ಲಿ ಪ್ರಸ್ತಾಪಿಸಿರುವ 'ಮನೆಯನೆಂದು ಕಟ್ಟದಿರು' ಎಂಬ ಪದಪುಂಜವು ಕುಟುಂಬದವರ ಹೃದಯವನ್ನೇ ತಟ್ಟುತ್ತಿಲ್ಲ ಎನಿಸುತ್ತವೆ.

'ಉದಯರವಿ' ನಿವಾಸದಲ್ಲಿ ಕುವೆಂಪುರವರು ಗೇಯ್ದ ಕನ್ನಡ-ಕಾಯಕ-ಕೈಂಕರ್ಯದ ಚೆಂಬೆಳಕನ್ನು ಸ್ಮಾರಕ ರೂಪದಲ್ಲಿ ಜತನದಿಂದ ಕಾಪಿಡುವ, ಚಿಂತನೆಗಳನ್ನು ವಿಸ್ತರಿಸಲು ಕುಟುಂಬದ ಬೇಡಿಕೆಗಳು ಅಡ್ಡಿಯಾದರೆ ಅದೊಂದು ನಾಡಿನ ದುರಂತ. ಸ್ವತಃ ಕುವೆಂಪು ಕಟ್ಟಿದ ಮನೆಯನ್ನು ಸ್ಮಾರಕವಾಗಿಸುವ ನಿಟ್ಟಿನಲ್ಲಿ ಕುಟುಂಬದವರ 'ಔಚಿತ್ಯಪೂರ್ಣ ಔದಾರ್ಯ'ವು 'ಹಣದ ಮುಂದೆ ಗೌಣ'ವಾಗುತ್ತಿರುವುದಕ್ಕೆ ನಾಡಿನ ಪ್ರಜ್ಞಾವಂತರು ಚಿಂತಿಸುವಂತಾಗಿದೆ. 'ಕುವೆಂಪು ನುಡಿತೋರಣ'ದಲ್ಲಿ ಬಡವರ ಮತ್ತು ಶ್ರೀಮಂತರ ನಡುವಣ ಅಂತರ ಖಂಡಿತ ಕಡಿಮೆಯಾಗಬೇಕೆಂದು ಹೇಳಿದ ಕುವೆಂಪು ಅವರನ್ನೇ ಅಣಕಿಸುವಂತೆ ಕುಟುಂಬದವರ ಬೇಡಿಕೆಗಳು ಇರಬಾರದು.

ಸಿದ್ಧಗಂಗಯ್ಯ ಹೊಲತಾಳು, ಪ್ರೊ. ಎಲ್. ಮಣೆಗಯ್ಯ, ತುಮಕೂರು; **ಸಿದ್ಧಲಿಂಗಸ್ವಾಮಿ ಹಿರೇಮಠ,** ಮೈಸೂರು

ಹೈಸ್ಪೀಡ್ ರೈಲ್ವೆ: ಲಾಭಕ್ಕಿಂತ ನಷ್ಟ ಹೆಚ್ಚು

ಕೇಂದ್ರ ಬಜೆಟ್‌ನಲ್ಲಿ ಬೆಂಗಳೂರು–ಚೆನ್ನೈ, ಬೆಂಗಳೂರು–ಹೈದರಾಬಾದ್ ನಡುವೆ ಹೈಸ್ಪೀಡ್ ರೈಲ್ವೆ ಕಾರಿಡಾರ್ ಕುರಿತು ಪ್ರಸ್ತಾಪಿಸಲಾಗಿದೆ. ಇದರಿಂದ ಕರ್ನಾಟಕಕ್ಕೆ ಯಾವುದೇ ಪ್ರಯೋಜನವಿಲ್ಲ. ಬದಲಾಗಿ ನಷ್ಟವೇ ಹೆಚ್ಚು; ಬೆಂಗಳೂರಿನ ಉದ್ದಿಮೆ, ಮಾನವ ಸಂಪನ್ಮೂಲವನ್ನು ಹೈದರಾಬಾದ್, ಚೆನ್ನೈಗೆ ಆಕರ್ಷಿಸಲು ನೆರವಾಗುತ್ತದಷ್ಟೆ. ಈಗಾಗಲೇ, ಬೆಂಗಳೂರು ಪಕ್ಕದ ರಾಜ್ಯಗಳ ಪ್ರಮುಖ ನಗರಗಳಿಗೆ ರೈಲು, ಎಕ್ಸ್‌ಪ್ರೆಸ್ ವೇ ಮೂಲಕ ಉತ್ತಮ ಸಂಪರ್ಕ ಹೊಂದಿದೆ. ಮುಂಬೈ ಮತ್ತು ಬೆಂಗಳೂರು ನಡುವೆ ಬುಲೆಟ್ ರೈಲು ಮಾರ್ಗ ನಿರ್ಮಾಣವಾದರಷ್ಟೆ ಕರ್ನಾಟಕಕ್ಕೆ ಹೆಚ್ಚಿನ ಅನುಕೂಲವಾಗಲಿದೆ.

ದೇವಿದಾಸ ಪ್ರಭು, ಭಟ್ಕಳ

ಪ್ರತಿದಿನವೂ ಮೊಳಗಲಿ 'ನೀರಿನ ಗಂಟೆ'

ಮಕ್ಕಳಿಗೆ ನೀರು ಕುಡಿಯುವಂತೆ ಜ್ಞಾಪಿಸಲು ಶಾಲೆಯಲ್ಲಿ ನೀರಿನ ಗಂಟೆ ಕಡ್ಡಾಯಗೊಳಿಸಿರುವ ಆದೇಶ ಕಾಗದದಲ್ಲಷ್ಟೆ ಇದೆ. ವಾಸ್ತವದಲ್ಲಿ ಇನ್ನೂ ಹಲವು ಶಾಲೆಗಳ ಹೊಸ್ತಿಲು ತುಳಿದಿಲ್ಲ. ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಇದು ಕಡ್ಡಾಯವಾಗಿ ಜಾರಿಯಾಗಬೇಕು. ಏಕೆಂದರೆ ನೀರು ಕುಡಿಯದ ಮಕ್ಕಳು ಬೇಗ ಸುಸ್ತಾಗುತ್ತಾರೆ. ಕಿಡ್ನಿಯಲ್ಲಿ ಕಲ್ಲು, ನಿರ್ಜಲೀಕರಣ, ಕಣ್ಣಿನ ಉರಿ, ಮೂತ್ರದ ಸೋಂಕಿನಂತಹ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಶಿಕ್ಷಕರು ಇದರ ಬಗ್ಗೆ ಕಾಳಜಿ ತೋರಿಸಬೇಕಿದೆ.

ಸಂಧ್ಯಾ ಎಚ್.ಎಸ್., ಹಂಪಿ

ಐಟಿಐ ಸಿಬ್ಬಂದಿ ಸಂಕಟ: ಸರ್ಕಾರ ಕಿವುಡು

'ತಮ್ಮದು ನುಡಿದಂತೆ ನಡೆಯುವ ಸರ್ಕಾರ'ವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಾರೆ. ಆದರೆ, ಖಾಸಗಿ ಐಟಿಐಗಳ ವಿಷಯದಲ್ಲಿ ನುಡಿದಂತೆ ನಡೆಯುತ್ತಿಲ್ಲ. ಏಳು ವರ್ಷ ಪೂರೈಸಿರುವ ಅನುದಾನರಹಿತ ಐಟಿಐ ಕಾಲೇಜುಗಳಿಗೆ ವೇತನ ಅನುದಾನ ನೀಡುವಂತೆ 1997ರ ಆದೇಶ ನೆನಪಿಸಿದರೆ ಉತ್ತರ ಕೊಡದೆ ಜಾರಿಕೊಳ್ಳುತ್ತಾರೆ. ಹಾಗಾದರೆ ಹಿಂದಿನ ಸರ್ಕಾರದ ಆದೇಶಗಳಿಗೆ ಯಾವುದೇ ಬೆಲೆ ಇಲ್ಲವೇ? ಕಳೆದ ಹದಿನೆಂಟು ವರ್ಷಗಳಿಂದ ವೇತನಾನುದಾನವಿಲ್ಲದೇ ಐಟಿಐಗಳ ತಂತ್ರಜ್ಞರು ಹಾಗೂ ಸಿಬ್ಬಂದಿ ಸಂಕಷ್ಟ ಎದುರಿಸುತ್ತಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಆದರೂ ಸರ್ಕಾರ ಅವರ ನೋವಿಗೆ ಕಿವಿಯಾಗುವುದೇ?

ಎಸ್.ಎಂ. ನೆರಬೆಂಚಿ, ಹುಬ್ಬಳ್ಳಿ

ರಾಷ್ಟ್ರೀಯ ಹಲಸಿನ ಮಂಡಳಿ ಸ್ಥಾಪಿಸಿ

ದೇಶದಲ್ಲಿ ಕಾಫಿ, ಚಹ ಮತ್ತು ಸಂಬಾರ ಪದಾರ್ಥಗಳ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿಗಳಿವೆ. ಇದೇ ಮಾದರಿಯಲ್ಲೇ ಹಲಸಿನ ಹಣ್ಣಿನ ಮಂಡಳಿ ಸ್ಥಾಪಿಸಬೇಕಿದೆ. ವಿಶ್ವದಲ್ಲೇ ಅತಿಹೆಚ್ಚು ಹಲಸು ಬೆಳೆಯುವ ದೇಶ ಭಾರತ. ಕರ್ನಾಟಕವೊಂದರಲ್ಲೇ ವಾರ್ಷಿಕ ಸುಮಾರು 4 ಲಕ್ಷ ಟನ್ ಉತ್ಪಾದನೆಯಾಗುತ್ತಿದೆ. ಆದರೆ, ಸರಿಯಾದ ಮಾರುಕಟ್ಟೆ, ಶೇಖರಣಾ ವ್ಯವಸ್ಥೆಯಿಲ್ಲದೆ ಶೇ 40ರಿಂದ ಶೇ 50ರಷ್ಟು ಹಣ್ಣುಗಳು ಪ್ರತಿವರ್ಷ ವ್ಯರ್ಥವಾಗುತ್ತಿವೆ. ಹಲಸನ್ನು ಮೌಲ್ಯವರ್ಧಿತ ಉತ್ಪನ್ನವಾಗಿ ಪರಿವರ್ತಿಸಿದರೆ ಗ್ರಾಮೀಣರ ಆದಾಯ ದ್ವಿಗುಣಗೊಳ್ಳಲಿದೆ.

ವಿಜಯಕುಮಾರ ಎಚ್.ಕೆ., ರಾಯಚೂರು

ಖಾದಿ ಬಟ್ಟೆ ಪೂರೈಕೆ: ಸಂಘಗಳಿಗೆ ಮನವಿ

'ಖಾದಿ: ಅರಿವಿಲ್ಲದ ದಾರಿ, ದುಡುಕು ನಡೆ' ಲೇಖನದಲ್ಲಿ (ಲೇ: ಸಂತೋಷ ಕೌಲಗಿ, ಪ್ರ.ವಾ., ಜ. 31) ರಾಜ್ಯ ಸರ್ಕಾರಿ ನೌಕರರು ಖಾದಿ ಬಟ್ಟೆ ಧರಿಸುವ ಕುರಿತಂತೆ ಸರ್ಕಾರ ಹೊರಡಿಸಿರುವ ಸುತ್ತೋಲೆಯನ್ನು ಪ್ರಶಂಸಿಸಲಾಗಿದೆ. ಮತ್ತೊಂದೆಡೆ ಖಾದಿ ಪರಿಸ್ಥಿತಿಯ ಅರಿವು ಇದ್ದಂತಿಲ್ಲವೆಂದು ಹೇಳಲಾಗಿದೆ. ಆದರೆ, ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳಿಗೆ ಅವರವರ ಜಿಲ್ಲೆಯಲ್ಲಿರುವ ಖಾದಿ ರೇಷ್ಮೆ, ಉಣ್ಣೆ, ಖಾದಿ ಸಂಘ–ಸಂಸ್ಥೆಗಳು ಉತ್ಪಾದಿಸುವ ಉತ್ಪನ್ನಗಳ ದಾಸ್ತಾನು ವಿವರ ಪಡೆದು ಸಲ್ಲಿಸಲು ಸೂಚಿಸಲಾಗಿದೆ. ಸಂಘ–ಸಂಸ್ಥೆಗಳಿಗೆ ಭೇಟಿ ನೀಡಿ ಆದೇಶದ ಬಗ್ಗೆ ಮನವರಿಕೆ ಮಾಡಿಕೊಡುವಂತೆಯೂ ನಿರ್ದೇಶಿಸಲಾಗಿದೆ. ಈ ಕುರಿತಂತೆ ಚರ್ಚಿಸಲು ಶೀಘ್ರವೇ ಖಾದಿ ಸಂಘ–ಸಂಸ್ಥೆಗಳ ಸಭೆ ಕರೆಯಲು ನಿರ್ಧರಿಸಲಾಗಿದೆ.

ಉಪ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಅಭಿವೃದ್ಧಿ), ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು

ಚುರುಮುರಿ



ಗಾಂಧಿ ಗಮ್ಮತ್ತು

• ಮಣ್ಣೆ ರಾಜು

ವಿಧಾನಸೌಧದ ಆವರಣದಲ್ಲಿ ಗಾಂಧೀಜಿ ವಾಯುವಿಹಾರ ಮಾಡುತ್ತಿದ್ದರು. ಹಸ್ತಪ್ಪ, ಸಂಘಪ್ಪ ಎದುರಾದರು.

'ನಮಸ್ಕಾರ ಗಾಂಧಿ ತಾತಾ, ನೀವು ನಮ್ಮ ಮನೆಯ ದೇವರು!' ಎಂದ ಹಸ್ತಪ್ಪ.

'ನಮಗೆ ನೀವು... ಮೆರವಣಿಗೆ ದೇವರು' ಸಂಘಪ್ಪ ಹೇಳಿದ.

'ಮನ್ರೇಗಾ ಯೋಜನೆಯಲ್ಲಿ ಇವರು ನಿಮ್ಮ ಹೆಸರನ್ನು ಕೈಬಿಟ್ಟಿದ್ದಾರೆ. ನಾವು ನಿಮ್ಮನ್ನು ಬಿಡೋದಿಲ್ಲ. ಗ್ರಾಮ ಪಂಚಾಯಿತಿ ಕಚೇರಿಗಳಿಗೆ ನಿಮ್ಮ ಹೆಸರಿಟ್ಟು ನಿಮ್ಮ ಕನಸಿನ ಗ್ರಾಮ ರಾಜ್ಯ ಮಾಡುತ್ತೇವೆ' ಅಭಿಮಾನದಿಂದ ಹೇಳಿದ ಹಸ್ತಪ್ಪ.

'ನಾವೂ ನಿಮ್ಮನ್ನು ನಿರ್ಲಕ್ಷ್ಯ ಮಾಡಿಲ್ಲ. ಬಜೆಟ್‌ನಲ್ಲಿ ನಿಮ್ಮ ಹೆಸರಿನಲ್ಲಿ ಗಾಂಧಿ ಸ್ವರಾಜ್ಯ ಯೋಜನೆ ತರ್ತೀವಿ. ಮನ್ರೇಗಾದಂತೆ ಔಟ್‌ಡೋರ್ ಯೋಜನೆಯಲ್ಲ- ಖಾದಿ, ಕೈಮಗ್ಗ, ಕರಕುಶಲ ಕಸುಬುಗಳನ್ನು ಪ್ರೋತ್ಸಾಹಿಸುವ ಇಂಡೋರ್ ಯೋಜನೆ' ಎಂದ ಸಂಘಪ್ಪ.

'ಗಾಂಧೀಜಿ ಚರಕದಿಂದ ನೂಲು ತೆಗೆದು ನೇಯುವಂತಹ ಗುಡಿಕೈಗಾರಿಕೆನಾ?'

'ಹೌದು. ಸ್ವದೇಶಿ ಉತ್ಪನ್ನಗಳನ್ನು ಪ್ರೋತ್ಸಾಹಿಸಿ ಜಾಗತಿಕ ಮಾರುಕಟ್ಟೆ ಸಂಪರ್ಕದ ವ್ಯವಸ್ಥೆ ಮಾಡುತ್ತೇವೆ'.

'ನಾವು ರಾಜ್ಯ ಸರ್ಕಾರಿ ನೌಕರರಿಗೆ ತಿಂಗಳಿಗೊಮ್ಮೆ ಖಾದಿ ಉಡುಪು ಕಡ್ಡಾಯ ಮಾಡ್ತೀವಿ, ನೀವು ಕೇಂದ್ರ ಸರ್ಕಾರದ ನೌಕರರಿಗೆ ಖಾದಿ ಕಡ್ಡಾಯ ಮಾಡ್ತೀರಾ?'

'ಚಿಂತನೆ ಮಾಡ್ತೀವಿ. ನೀವು ಶಾಲಾ ಮಕ್ಕಳಿಗೆ ಖಾದಿ ಸಮವಸ್ತ್ರ ಜಾರಿ ಮಾಡ್ತೀರೇನು?' ಸಂಘಪ್ಪ ಕೇಳಿದ.

'ಅದರ ಬಗ್ಗೆ ನಾವೂ ಚಿಂತನೆ ಮಾಡ್ತೀವಿ'.

'ನನ್ನನ್ನು ಬಿಟ್ಟು ನೀವು ರಾಜಕಾರಣ ಮಾಡಲು ಸಾಧ್ಯವಿಲ್ಲವೆ?' ಗಾಂಧೀಜಿ ಕೇಳಿದರು.

'ಇಲ್ಲ ತಾತ... ರೂಪಾಯಿ ನೋಟಿನಲ್ಲಿ ಇರುವಂತೆ ರಾಜಕಾರಣದಲ್ಲಿಯೂ ನೀವು ಚಲಾವಣೆಯಲ್ಲಿದ್ದೀರಿ!' ಹಸ್ತಪ್ಪ ಹೇಳಿದ.

ಗಾಂಧಿ ಮತ್ತೊಮ್ಮೆ ನಕ್ಕರು.

'ಅದ್ಸರಿ, ವಿಧಾನಸೌಧದ ಎದುರು ಪ್ರತಿಮೆಯಾಗಿದ್ದ ನೀವು ಹೇಗೆ ಹೊರಗೆ ಬಂದ್ರಿ?' ಸಂಘಪ್ಪ ಕೇಳಿದ.

ಇನ್ನೊಮ್ಮೆ ನಕ್ಕ ಗಾಂಧೀಜಿ, 'ನಾನು ಒರಿಜಿನಲ್ ಅಲ್ಲ, ಗಾಂಧಿಯ ವೇಷಧಾರಿ!' ಎಂದು ಹೇಳಿ ಹೋದರು.

ಸಂಗತ

ಪ್ರವಾಸಿಗರೇ, ಕೃಷಿಕರ ಹೊಲಗಳಿಗೆ ಬನ್ನಿ!

ರೈತರು ಎದುರಿಸುವ ಸವಾಲು, ಸಂಕಷ್ಟಗಳ ಅರಿವು ಬಹುತೇಕರಿಗೆ ಇರುವುದಿಲ್ಲ. ರೈತ ಹಾಗೂ ಸಮುದಾಯದ ಒಡನಾಟಕ್ಕೆ 'ಕೃಷಿ ಪ್ರವಾಸ' ಅವಕಾಶ ಕಲ್ಪಿಸುತ್ತದೆ.

• ಆನಂದತೀರ್ಥ ಪ್ಯಾಟಿ

ಥಾಯ್ಲೆಂಡಿನ ಮೆ ಥಾ ಹಳ್ಳಿಯ ಯುವ ರೈತ ಆನ್ ತರಕಾರಿ ಹಾಗೂ ಭತ್ತ ಬೆಳೆಯುತ್ತಾನೆ. ಅಮೆರಿಕದಲ್ಲಿ ವಿದ್ಯಾಭ್ಯಾಸ ಮುಗಿಸಿ ವಾಪಸು ಊರಿಗೆ ಬಂದಿರುವ ಆತ, ನಾಲ್ಕು ಎಕರೆ ತೋಟದಲ್ಲಿ ಸಾವಯವ ಕೃಷಿ ಮಾಡುತ್ತಾನೆ. ವಾರಾಂತ್ಯದಲ್ಲಿ ಕೃಷಿ ಆಸಕ್ತರು ಆತನ ತೋಟಕ್ಕೆ ಬಂದು, ಬೇಸಾಯದ ಬಗ್ಗೆ ತಿಳಿಯುತ್ತಾರೆ. ನಿತ್ಯದ ಕೃಷಿ ಕೆಲಸಗಳಿಗೆ ಕೈಲಾದಷ್ಟು ಸಹಾಯ ಮಾಡುತ್ತಾರೆ. ಕಳೆ ನಿರ್ಮೂಲನೆ, ಔಷಧ ಸಿಂಪಡಣೆ, ತರಕಾರಿ ಕಟಾವು, ಕೊಟ್ಟಿಗೆ ಶುಚಿಗೊಳಿಸುವುದು ಇತರ ಕೆಲಸಗಳಲ್ಲಿ ಕೈಜೋಡಿಸುತ್ತಾರೆ. ಅವರ ವಾಸ್ತವ್ಯಕ್ಕೆ ಸರಳ ಕೊಠಡಿ ಹಾಗೂ ಸಾವಯವ ಪದಾರ್ಥಗಳದ್ದೇ ರುಚಿಕರ ಭೋಜನ ಇರುತ್ತದೆ. ವಾಪಸು ತೆರಳುವಾಗ, ಆ ರೈತ ಹಾಗೂ ಇತರ ಕೃಷಿಕರಿಂದ ಉತ್ಪನ್ನಗಳನ್ನು ನೇರವಾಗಿ ಖರೀದಿಸುತ್ತಾರೆ. ಇಂಥ ಹಲವು ಕೃಷಿಕರು ಮೆ ಥಾ ಹಳ್ಳಿಯಲ್ಲಿ ಇದ್ದಾರೆ. ವರ್ಷವಿಡೀ ಆಸಕ್ತರು ಅಲ್ಲಿಗೆ ಬರುತ್ತಲೇ ಇರುತ್ತಾರೆ.

ಬರೀ ಮೋಜು ಮಸ್ತಿಯಷ್ಟೇ ಇದೆ ಎಂದು ಭಾವಿಸಿರುವ ಥಾಯ್ಲೆಂಡಿನಲ್ಲಿ ಕೃಷಿ ಪ್ರವಾಸೋದ್ಯಮ ಕೂಡ ಛಾಪು ಮೂಡಿಸಿದೆ. ರೈತ ಮಾರುಕಟ್ಟೆಯ ಯಶಸ್ವೀ ಪ್ರಯೋಗದ ಜತೆಗೆ, ಕೃಷಿ ಪ್ರವಾಸೋದ್ಯಮವನ್ನು ಸಮರ್ಥವಾಗಿ ಅಳವಡಿಸಿಕೊಂಡ ಥಾಯ್ಲೆಂಡಿನ ಮಾದರಿ ಭಾರತದಂಥ ಕೃಷಿ ಪ್ರಧಾನ ದೇಶಕ್ಕೂ ಹೊಂದಿಕೊಂಡೀತು.

ನಮ್ಮಲ್ಲಿ ಆಹಾರ ಪದಾರ್ಥ ಉತ್ಪಾದಿಸುವ ರೈತನಿಗೂ ಅದನ್ನು ಸೇವಿಸುವ ಗ್ರಾಹಕನಿಗೂ ಸಂಬಂಧವೇ ಇಲ್ಲ. ಮಾರುಕಟ್ಟೆಗಳು, ದಲ್ಲಾಳಿಗಳು, ಸೂಪರ್ ಮಾರ್ಕೆಟ್‌ಗಳು ಹಾಗೂ ಹೋಟೆಲ್‌ಗಳು ಈ ನಂಟನ್ನು ಯಾವತ್ತೋ ಕತ್ತರಿಸಿ ಹಾಕಿವೆ. ಹೀಗಾಗಿಯೇ, ವರ್ಷದುದ್ದಕ್ಕೂ ಹವಾಮಾನ ವೈಪರೀತ್ಯ, ಕೀಟಬಾಧೆ, ರೋಗದಂಥ ಸಮಸ್ಯೆಗಳೊಂದಿಗೆ ಮಾರುಕಟ್ಟೆ ಕುಸಿತದಂಥ ಅಧ್ವಾನವನ್ನೂ ಅನುಭವಿಸಿ ಬೆಳೆ ಬೆಳೆಯುವ ರೈತನ ಪಡಿಪಾಟಲು, ಆ ಉತ್ಪನ್ನ ಖರೀದಿಸುವ ಗ್ರಾಹಕನ ನೇರ ಅರಿವಿಗೆ ಬರುವುದೇ ಇಲ್ಲ. ಆಗಾಗ್ಗೆ ಮಾಧ್ಯಮಗಳಲ್ಲಿ ಬರುವ ವರದಿ ಬಿಟ್ಟರೆ, ರೈತನ ಕಷ್ಟ–ನಷ್ಟ ಯಾರ ಅನುಭವಕ್ಕೂ ಬಾರದು.

ಅನ್ನ ತಿನ್ನುವ ವ್ಯಕ್ತಿ ಅದನ್ನು ಬೆಳೆದವನ ಜತೆ ಸಂವಾದಿಸಬೇಡವೆ? ಆ ಅವಕಾಶವನ್ನು 'ಕೃಷಿ ಪ್ರವಾಸೋದ್ಯಮ' ಮಾಡಿಕೊಡುತ್ತದೆ. ಪ್ರವಾಸ ಅಂದರೆ ಬರೀ ಮೋಜು ಮಸ್ತಿ ಅಲ್ಲವಲ್ಲ? ಪಾರಂಪರಿಕ, ಐತಿಹಾಸಿಕ, ಮನರಂಜನೆ ತಾಣಕ್ಕೆ ಭೇಟಿ ಕೊಡುವಂತೆಯೇ, ರೈತನ ಹೊಲ–ತೋಟಕ್ಕೆ ತೆರಳಿ, ಆತನ ಕೆಲಸವನ್ನು ಖುದ್ದಾಗಿ ನೋಡಿದರೆ ಬೇಸಾಯದ ನೇರ ಪರಿಚಯ ಆದೀತು.



ಬಹುತೇಕ ನಗರವಾಸಿಗಳಿಗೆ ಅವರ ಆಹಾರದ ಮೂಲ ಯಾವುದು ಎಂಬುದೂ ತಿಳಿದಿರುವುದಿಲ್ಲ. ಇಂದಿನ ಕಾಲಮಾನದಲ್ಲಿ ಅದು ತೀರಾ ಅಗತ್ಯವೂ ಇಲ್ಲ. ಆದರೆ, ಆಹಾರದ ಉತ್ಪಾದನೆಯ ಪ್ರಾಥಮಿಕ ತಿಳಿವಳಿಕೆ ಇದ್ದರೆ ಒಳಿತಲ್ಲವೆ? ಕೃಷಿ ಪ್ರವಾಸೋದ್ಯಮ ಈ ಆಯಾಮಕ್ಕೆ ಹೆಚ್ಚು ಮಹತ್ವ ಕೊಡುತ್ತದೆ. ವಿಹಾರ, ವಿರಾಮಕ್ಕೆಂದು ತೋಟಗಳಲ್ಲಿ ವಸತಿ ವ್ಯವಸ್ಥೆ ಕಲ್ಪಿಸುವ 'ಹೋಂ ಸ್ಟೇ' ಮಾದರಿಗಿಂತ ಇದು ತುಸು ಭಿನ್ನ. ರೈತ ಹಾಗೂ ಆತನ ಬೇಸಾಯದ ಜತೆಗಿನ ಒಡನಾಟವೇ ಇಲ್ಲಿನ ಜೀವಾಳ. 'ಬರೀ ಮನರಂಜನೆಯೇ ಗುರಿ ಅಲ್ಲ. ಸೂರ್ಯೋದಯಕ್ಕಿಂತ ಮೊದಲೇ ಶುರುವಾಗುವ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಕೆಲಸಗಳು ದಿನವಿಡೀ ನಡೆಯುತ್ತಲೇ ಇರುತ್ತವೆ. ಹೀಗಾಗಿ, ರೈತನ ತೋಟಕ್ಕೆ ಬರುವ ಪ್ರವಾಸಿಗರು ಯಾವುದಾದರೊಂದು ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಳ್ಳಬಹುದು. ಇದರಿಂದ ರೈತನ ಬದುಕು ಮತ್ತು ಬೇಸಾಯ ಕುರಿತ ಅರಿವು ಮೂಡುತ್ತದೆ. ಹಲವು ಬಗೆಯ ಆರ್ಥಿಕ ಕಷ್ಟ ಎದುರಿಸುವ ರೈತನಿಗೆ ಕೃಷಿ ಪ್ರವಾಸೋದ್ಯಮ ಚಿಕ್ಕಮಟ್ಟದ ಆದಾಯವನ್ನೂ ತಂದು ಕೊಡಬಲ್ಲದು' ಎನ್ನುತ್ತಾರೆ, ಮಾಗಡಿ ಸಮೀಪ ತಮ್ಮ ತೋಟದಲ್ಲಿ ಕೃಷಿ ಪ್ರವಾಸೋದ್ಯಮ ಅಳವಡಿಸಿರುವ ನೈಸರ್ಗಿಕ ಕೃಷಿಕ ಶ್ರೀವತ್ಸ ಗೋವಿಂದರಾಜು ಅವರು.

ಕೃಷಿ ಪ್ರವಾಸೋದ್ಯಮಕ್ಕೆ ಕನ್ನಡ ನಾಡಿನಲ್ಲಿ ವಿಪುಲ ಅವಕಾಶಗಳಿವೆ. ಆದರೆ, ಸರ್ಕಾರದಿಂದ ಉತ್ತೇಜನವಿಲ್ಲ. ಈ ಅಂಶ ಗಮನಿಸಿ, ಪರಿಸರಪ್ರಿಯ ಕೃಷಿಕರೇ ಒಂದಾಗಿ 'ಕರ್ನಾಟಕ ಕೃಷಿ ಪ್ರವಾಸೋದ್ಯಮ ವೇದಿಕೆ' (ಕೆಎಟಿಎಫ್) ರೂಪಿಸಿ, ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ. ಸರಳ ನಿಯಮಗಳು, ಪ್ರವಾಸೋದ್ಯಮ ಇಲಾಖೆಯ ಸಹಕಾರ ಹಾಗೂ ಮುಖ್ಯವಾಗಿ ಪ್ರವಾಸಿಗರಿಗೆ ಪರಿಚಯಿಸಲು ವಿಭಿನ್ನ ಬೇಸಾಯ ಚಟುವಟಿಕೆ ಇರುವ ಹೊಲ–ಗದ್ದೆ– ತೋಟಗಳನ್ನು ಮಾತ್ರ ಇದರಲ್ಲಿ ಸೇರ್ಪಡೆ ಮಾಡುವುದು 'ಕೆಎಟಿಎಫ್' ಅಜೆಂಡಾದಲ್ಲಿ ಸೇರಿದೆ.

ಮಾನವ ಸಮುದಾಯ ಒಂದೆಡೆ ನೆಲೆ ನಿಂತು ಶುರು ಮಾಡಿದ ಮೊದಲ ಕಸುಬೇ ಕೃಷಿ. ಸಾವಿರಾರು ವರ್ಷಗಳಿಂದ ಈ ಕಸುಬು ಕೌಶಲದೊಂದಿಗೆ ಮಿಳಿತವಾಗುತ್ತ ವ್ಯಾಪ್ತಿ ಹಿರಿದಾಗಿಸಿಕೊಂಡಿದೆ. ಆಹಾರ ಸಂಸ್ಕೃತಿಯನ್ನು ಪರಿಚಯಿಸಿ, ಉಳಿಸುವಲ್ಲಿ ಕೃಷಿ ಪ್ರವಾಸೋದ್ಯಮ ಗಮನಾರ್ಹ ಕೊಡುಗೆ ನೀಡಬಲ್ಲದು. ಶುದ್ಧ ಆಹಾರ, ಆರೋಗ್ಯ, ಸಹಬಾಳ್ವೆ, ಪರಿಸರ, ಶ್ರಮ ಸಂಸ್ಕೃತಿಯ ಕುರಿತು ಮುಂದಿನ ಪೀಳಿಗೆಗೆ ಪರಿಣಾಮಕಾರಿಯಾಗಿ ಅರಿವು ಮೂಡಿಸಲು 'ಕೃಷಿ ಪ್ರವಾಸೋದ್ಯಮ' ನಮ್ಮೆದುರು ಉಳಿದಿರುವ ಸರಳ ಹಾಗೂ ಸುಸ್ಥಿರ ದಾರಿಯಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ ಮತ್ತು ಅಮೆರಿಕದ ನಡುವೆ ಸುಂಕ ಇಳಿಕೆಯ ಒಪ್ಪಂದ

ಹಲವು ಅನುಕೂಲ ಹೆಚ್ಚಿದ ಕುತೂಹಲ

ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲಿನ ಸುಂಕವನ್ನು ಶೇ 50ರಿಂದ ಶೇ 18ಕ್ಕೆ ಇಳಿಸುವ ಘೋಷಣೆಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡಿದ್ದಾರೆ. ಪ್ರಧಾನಿ ಮೋದಿ ಅವರು ಸುಂಕ ಇಳಿಕೆಯ ಕ್ರಮವನ್ನು ಸ್ವಾಗತಿಸಿ, ದೇಶದ 140 ಕೋಟಿ ಜನರ ಪರವಾಗಿ ಟ್ರಂಪ್ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಕೆಲವು ಉದ್ಯಮ ಸಂಸ್ಥೆಗಳೂ ಇದನ್ನು ಸ್ವಾಗತಿಸಿವೆ. ಆದರೆ, ಈ ಬೆಳವಣಿಗೆಯ ಹಿಂದೆಯೇ ಹಲವು ಪ್ರಶ್ನೆಗಳು ಹುಟ್ಟಿಕೊಂಡಿವೆ. ಮೋದಿ-ಟ್ರಂಪ್ ಮಾತುಕತೆಯಲ್ಲಿ ಯಾವ ಸರಕು/ವ್ಯಾಪಾರ ನಿಯಮಗಳ ಬಗ್ಗೆ ಸಮ್ಮತಿ ಮೂಡಿದೆ ಎನ್ನುವುದು ಇನ್ನಷ್ಟೇ ಬಹಿರಂಗವಾಗಬೇಕಿದೆ

ಪ್ರಜಾವಾಣಿ ವಾರ್ತೆ

ಭಾರತದ ಮೇಲೆ ಹೇರಿದ್ದ ಶೇ 50ರ ಸುಂಕವನ್ನು ಶೇ 18ಕ್ಕೆ ಇಳಿಸಿರುವ ಅಮೆರಿಕದ ಕ್ರಮವು ದೇಶದ ಹಲವು ವಲಯಗಳಲ್ಲಿ ಸಂತಸಕ್ಕೆ ಕಾರಣವಾಗಿದೆ. ಭಾರತವು ರಿಯಾಯಿತಿ ದರದಲ್ಲಿ ರಷ್ಯಾದಿಂದ ಇಂಧನ ಖರೀದಿಸುತ್ತಿದೆ ಎಂಬ ನೆಪವೊಡ್ಡಿ ಭಾರತದ ಮೇಲೆ ಕಳೆದ ಆಗಸ್ಟ್‌ನಲ್ಲಿ ದಿಢೀರ್ ಸುಂಕ ಹೆಚ್ಚಳ ಮಾಡಿದ್ದ ಟ್ರಂಪ್ ಅವರು, ಈಗ ಅಷ್ಟೇ ದಿಢೀರ್ ಆಗಿ ಸುಂಕ ಇಳಿಕೆ ಮಾಡಿದ್ದಾರೆ. ಮೋದಿ ಅವರೊಂದಿಗೆ ತಾವು ಮಾತನಾಡಿದ್ದು, ತಮ್ಮ ಮಾತಿಗೆ ಭಾರತ ಸಮ್ಮತಿಸಿದೆ ಎಂದು ಟ್ರಂಪ್ ಅವರು ಸುಂಕ ಇಳಿಕೆಗೆ ಕಾರಣ ನೀಡಿದ್ದಾರೆ. ಮೋದಿ ಅವರು ಟ್ರಂಪ್ ಕ್ರಮವನ್ನು ಸ್ವಾಗತಿಸಿದ್ದಾರೆ.

ಸುಂಕದ ಪ್ರಮಾಣ ಹೆಚ್ಚಿಸಿದ್ದರಿಂದ ಭಾರತವು ಅಮೆರಿಕಕ್ಕೆ ಅತಿ ಹೆಚ್ಚು ತೆರಿಗೆ ಪಾವತಿ ಮಾಡುತ್ತಿದ್ದ ದೇಶವಾಗಿತ್ತು. ಒಟ್ಟಾರೆ ಹೆಚ್ಚುತ್ತಿದ್ದ ವ್ಯಾಪಾರದ ಅಂತರ, ಕುಸಿಯುತ್ತಿದ್ದ ರೂಪಾಯಿ ಮೌಲ್ಯ, ವಿದೇಶಗಳಿಗೆ ಹರಿಯುತ್ತಿದ್ದ ಹೂಡಿಕೆಯಂಥ ಸಮಸ್ಯೆಗಳಿಗೆ ಸುಂಕದ ವಿಚಾರದಲ್ಲಿನ ಅನಿಶ್ಚಿತ ಸ್ಥಿತಿಯೂ ಒಂದು ಕಾರಣವಾಗಿತ್ತು. ಜವಳಿ, ಸಾಗರ ಆಹಾರೋತ್ಪನ್ನಗಳು ಮತ್ತು ಆಭರಣಗಳಂಥ ಕೆಲವು ಉದ್ಯೋಗ ಸೃಷ್ಟಿಸುವ ಪ್ರಮುಖ ವಲಯಗಳಲ್ಲಿ ರಫ್ತು ಕುಸಿದಿತ್ತು. ಏಷ್ಯಾದ ಸಹಸ್ಪರ್ಧಿಗಳಾದ ಬಾಂಗ್ಲಾದೇಶ (ಶೇ 20), ವಿಯೆಟ್ನಾಂ (ಶೇ 20), ಪಾಕಿಸ್ತಾನ (ಶೇ 19) ಮತ್ತು ಚೀನಾ (ಶೇ 34) ದೇಶಗಳ ಮೇಲಿನ ಸುಂಕಕ್ಕಿಂತಲೂ ಭಾರತ ಅಧಿಕ ಸುಂಕ ತೆರುತ್ತಿತ್ತು. ಈ ದಿಸೆಯಲ್ಲಿ ಸುಂಕ ಇಳಿಕೆಯಿಂದ ಭಾರತವು ಕೊಂಚ ಮಟ್ಟಿಗಾದರೂ ಸಮಾಧಾನ ಪಟ್ಟುಕೊಳ್ಳುವಂತಾಗಿದೆ.

ಚೀನಾಕ್ಕೆ ಪರ್ಯಾಯವಾಗಿ ತನ್ನ ಪೂರೈಕೆ ಸರಪಳಿಯನ್ನು ಅಭಿವೃದ್ಧಿಪಡಿಸುವ ಭಾರತದ ಆಶಯಕ್ಕೂ ಇದರಿಂದ ಸಹಾಯವಾಗಲಿದೆ. ಜತೆಗೆ ಉತ್ಪಾದನಾ ವಲಯಕ್ಕೆ ಸುಂಕ ಇಳಿಕೆಯು ಹೆಚ್ಚಿನ ಮಟ್ಟದಲ್ಲಿ ನೆರವಾಗುವ ನಿರೀಕ್ಷೆ ಇದೆ. ಈ ಬಗ್ಗೆ ಜವಳಿ ಉದ್ಯಮಿಗಳು ಭಾರಿ ಸಂತಸ ವ್ಯಕ್ತಪಡಿಸಿದ್ದಾರೆ. ಅಮೆರಿಕದ ಮಾರುಕಟ್ಟೆಯು ಭಾರತದ ಜವಳಿ ರಫ್ತಿಗೆ ಏಕೈಕ ದೊಡ್ಡ ಮಾರುಕಟ್ಟೆಯಾಗಿದ್ದು, ಅಲ್ಲಿನ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸಲು ಇದು ನಮಗೆ ನೆರವಾಗಲಿದೆ' ಎಂದು ಭಾರತದ ಜವಳಿ ಉದ್ದಿಮೆಗಳ ಒಕ್ಕೂಟವು ಹೇಳಿದೆ.

ಆದರೆ, ಮೋದಿ ಅವರು ಸುಂಕ ಇಳಿಕೆಯನ್ನು ಸ್ವಾಗತಿಸಿದ್ದಾರೆಯೇ ವಿನಾ ಟ್ರಂಪ್ ಅವರು ಪ್ರತಿಪಾದಿಸಿದ ಉಳಿದ ಅಂಶಗಳ ಬಗ್ಗೆ ಭಾರತದ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಿಲ್ಲ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಸುದ್ದಿಗೋಷ್ಠಿಯಲ್ಲಿ ಕೃಷಿ ಮತ್ತು ಹೈನುಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ಭಾರತದ ಹಿತಾಸಕ್ತಿಯನ್ನು ರಕ್ಷಿಸಲಾಗಿದೆ ಎಂದು ಹೇಳಿದ್ದಾರೆಯೇ ವಿನಾ, ಒಪ್ಪಂದದ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಿಲ್ಲ.

ಎಚ್ಚರಿಕೆ ಅಗತ್ಯ: ಜಾಗತಿಕ ಚಿಂತಕರ ಚಾವಡಿಯಾದ ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಭಾರತಕ್ಕೆ ಎಚ್ಚರಿಕೆ ನೀಡಿದೆ. 'ಎರಡೂ ದೇಶಗಳು ಜಂಟಿ ಹೇಳಿಕೆ ನೀಡುವವರೆಗೆ, ಮಾತುಕತೆಯ ಕುರಿತ ಲಿಖಿತ ಪ್ರಕಟಣೆ ಹೊರಬೀಳುವವರೆಗೆ, ಇದನ್ನು ರಾಜಕೀಯ ಸೂಚನೆ ಎಂದು ಭಾವಿಸಬೇಕಿದೆಯೇ ವಿನಾ ವ್ಯಾಪಾರ ಒಪ್ಪಂದ ಎಂದಲ್ಲ. ಭಾರತಕ್ಕೆ ಈಗ ಅಗತ್ಯವಾಗಿರುವುದು ಸಂಭ್ರಮಾಚಾರಣೆ ಅಲ್ಲ, ಎಚ್ಚರಿಕೆ' ಎಂದು ಅದು ಹೇಳಿದೆ.

ಇದರ ನಡುವೆಯೇ ಅಮೆರಿಕದ ಕೃಷಿ ಕಾರ್ಯದರ್ಶಿ ಬ್ರೂಕ್ ರಾಲಿನ್ಸ್ ಅವರು, ಮಾತುಕತೆಯ ಕುದುರಿರುವುದರಿಂದ ಅಮೆರಿಕವು ಹೆಚ್ಚು ಕೃಷಿ ಉತ್ಪನ್ನಗಳನ್ನು ಭಾರತದ ಬೃಹತ್ ಮಾರುಕಟ್ಟೆಗೆ ರಫ್ತು ಮಾಡಲಿದ್ದು, ಗ್ರಾಮೀಣ ಅಮೆರಿಕಕ್ಕೆ ಹಣದ ಹೊಳೆಯನ್ನೇ ಹರಿಸಲಿದೆ ಎಂದಿದ್ದಾರೆ. ಅಮೆರಿಕವು ಭಾರತದೊಂದಿಗೆ ಹೊಂದಿರುವ 130 ಕೋಟಿ ಡಾಲರ್‌ನಷ್ಟು ಕೃಷಿ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಲು ಇದರಿಂದ ಸಹಾಯವಾಗುತ್ತದೆ ಎಂದೂ ಹೇಳಿದ್ದಾರೆ.

ಸಿಗಲಿದೆಯೇ ಉತ್ತರ?

ಸಹಜವಾಗಿಯೇ ಅಮೆರಿಕದ ಕೆಲವು ಪ್ರತಿಪಾದನೆಗಳು ಭಾರತದಲ್ಲಿ ಕಳವಳ ಉಂಟುಮಾಡಿವೆ. ಅಮೆರಿಕದ ಕೃಷಿ ಮತ್ತು ಹೈನು ಉತ್ಪನ್ನಗಳಿಗೆ ಭಾರತದಲ್ಲಿ ಸುಂಕ ಕಡಿಮೆ ಮಾಡಬೇಕು ಎನ್ನುವುದು ಅಮೆರಿಕದ ಪ್ರಮುಖ ಬೇಡಿಕೆಯಾಗಿದ್ದು, ಇದೇ ಕಾರಣಕ್ಕೆ ವ್ಯಾಪಾರ ಒಪ್ಪಂದ ಅಂತಿಮಗೊಂಡಿರಲಿಲ್ಲ. ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಕೃಷಿ ಮತ್ತು ಹೈನು ಉತ್ಪನ್ನಗಳು ಒಪ್ಪಂದದಿಂದ ಹೊರಗಿವೆ ಎಂದು ಹೇಳಿದ್ದಾರೆ. ಆದರೂ ಕೆಲವು ಮುಖ್ಯ ಪ್ರಶ್ನೆಗಳು ಉಳಿದಿದ್ದು, ಕುತೂಹಲ ಹೆಚ್ಚಿದೆ.

- ಅಮೆರಿಕದ ಉತ್ಪನ್ನಗಳಿಗೆ ಸುಂಕ ಇಳಿಸುವುಕ್ಕೆ ಭಾರತವು ಸಮ್ಮತಿಸಿದೆಯೇ?
- ರಷ್ಯಾದಿಂದ ರಿಯಾಯಿತಿ ದರದಲ್ಲಿ ಇಂಧನ ಖರೀದಿಸುವುದನ್ನು ನಿಲ್ಲಿಸಲು ಭಾರತ ಸಮ್ಮತಿ ಸೂಚಿಸಿದೆಯೇ?
- ಅಮೆರಿಕದ ಬೆದರಿಕೆಗೆ ಮಣಿದು ಭಾರತವು ರಷ್ಯಾ ಬದಲಿಗೆ ವೆನೆಜುವೆಲಾದಿಂದ ಇಂಧನ ಖರೀದಿ ಹೆಚ್ಚಿಸಲಿದೆಯೇ?
- ಟ್ರಂಪ್ ಅವರು ಹೇಳಿದಂತೆ ಭಾರತವು ಇಂಧನ, ತಂತ್ರಜ್ಞಾನ, ಕೃಷಿ, ಕಲ್ಲಿದ್ದಲು ಮತ್ತು ಇನ್ನೂ ಅನೇಕ ಸರಕುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅಮೆರಿಕದಿಂದ ಖರೀದಿಸಲು ಒಪ್ಪಿಕೊಂಡಿದೆಯೇ?

ಅಮೆರಿಕದೊಂದಿಗೆ ಭಾರತದ ಸರಕು ವ್ಯಾಪಾರ



2025ರಲ್ಲಿ ರಫ್ತು ಶೇ 15.88ರಷ್ಟು ಹೆಚ್ಚಳ

ಟ್ರಂಪ್ ಅವರು ಮೊದಲು ಭಾರತದ ಉತ್ಪನ್ನಗಳ ಮೇಲೆ ಶೇ 25ರಷ್ಟು ಪ್ರತಿ ಸುಂಕ ಘೋಷಿಸಿದ್ದು 2025ರ ಜುಲೈ 31ರಂದು. ಅದು ಜಾರಿಗೆ ಬಂದಿದ್ದು, ಆಗಸ್ಟ್ 7ರಿಂದ. ಭಾರತವು ರಷ್ಯಾದಿಂದ ತೈಲ ಖರೀದಿಸುತ್ತಿರುವುದನ್ನು ಮುಂದಿಟ್ಟುಕೊಂಡು ಆಗಸ್ಟ್ 6ರಂದು ಶೇ 25ರಷ್ಟು ಹೆಚ್ಚು ಸುಂಕ ಘೋಷಣೆ ಮಾಡಿದ್ದರು. ಅದು ಆಗಸ್ಟ್ 27ರಿಂದ ಜಾರಿಗೆ ಬಂದಿತ್ತು.

ಹಾಗಿದ್ದರೂ, 2024 ಮತ್ತು 2025ರ ಜನವರಿ ಮತ್ತು ನವೆಂಬರ್ ಅವಧಿಯಲ್ಲಿ ನಡೆದಿರುವ ವ್ಯಾಪಾರದ ಅಂಕಿ ಅಂಶಗಳನ್ನು ಹೋಲಿಸಿದರೆ, 2025ರಲ್ಲಿ ಭಾರತವು ಮಾಡಿರುವ ರಫ್ತಿನ ಪ್ರಮಾಣದಲ್ಲಿ ಶೇ 15.88ರಷ್ಟು ಹೆಚ್ಚಾಗಿದೆ ಎಂದು ಹಣಕಾಸು ಸಚಿವಾಲಯ ಹೇಳಿದೆ.

2024 ಮತ್ತು 2025ರಲ್ಲಿ ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ಉಭಯ ದೇಶಗಳ ನಡುವೆ ನಡೆದಿರುವ ಸರಕು ವ್ಯಾಪಾರದ ವಿವರಗಳನ್ನು ಇಲ್ಲಿ ನೀಡಲಾಗಿದೆ.

(ಡಾಲರ್‌ಗೆ ಪ್ರತಿಯಾಗಿ ರೂಪಾಯಿ ಮೌಲ್ಯವನ್ನು ಲೆಕ್ಕಹಾಕುವಾಗ ಈಗಿನ ಮೌಲ್ಯವನ್ನು ಪರಿಗಣಿಸಲಾಗಿದೆ) (ಕೋಟಿಗಳಲ್ಲಿ)







ಆಧಾರ: ಪಿಟಿಐ, ರಾಯಿಟರ್ಸ್, ಮಾಧ್ಯಮ ವರದಿಗಳು, ವಾಣಿಜ್ಯ ಸಚಿವಾಲಯ

ಟ್ರಂಪ್ ಪೋಸ್ಟ್‌ನಲ್ಲಿ ಹೇಳಿದ್ದೇನು?

ಇವತ್ತು ಬೆಳಿಗ್ಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತನಾಡಿದೆ. ಅವರು ನನ್ನ ಅತ್ಯುತ್ತಮ ಸ್ನೇಹಿತರಲ್ಲಿ ಒಬ್ಬರು ಮತ್ತು ಅವರ ದೇಶದಲ್ಲಿ ಶಕ್ತಿಶಾಲಿ ಮತ್ತು ಎಲ್ಲರಿಂದಲೂ ಗೌರವ ಪಡೆಯುತ್ತಿರುವ ನಾಯಕ. ವ್ಯಾಪಾರ, ರಷ್ಯಾ–ಉಕ್ರೇನ್ ಯುದ್ಧಕ್ಕೆ ಅಂತ್ಯ ಹಾಡುವುದು ಸೇರಿದಂತೆ ಹಲವು ವಿಚಾರಗಳ ಬಗ್ಗೆ ನಾವು ಮಾತನಾಡಿದೆವು. ರಷ್ಯಾದಿಂದ ತೈಲ ಖರೀದಿಸುವುದನ್ನು ಸ್ಥಗಿತಗೊಳಿಸಿ, ಅಮೆರಿಕದಿಂದ ಹೆಚ್ಚು ಮತ್ತು ವೆನೆಜುವೆಲಾದಿಂದಲೂ ಖರೀದಿಸಲು ಅವರು ಒಪ್ಪಿದ್ದಾರೆ. ಪ್ರತಿ ವಾರವೂ ಸಾವಿರಾರು ಜನರು ಸಾಯುತ್ತಿರುವ ಉಕ್ರೇನ್ ಯುದ್ಧವನ್ನು ನಿಲ್ಲಿಸಲು ಇದು ನೆರವಾಗಲಿದೆ.

ಗೆಳೆತನ ಮತ್ತು ಪ್ರಧಾನಿ ಮೋದಿ ಅವರ ಮೇಲಿನ ಗೌರವದ ಕಾರಣಕ್ಕೆ, ಅವರ ಮನವಿಯ ಮೇರೆಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮೆರಿಕ ಮತ್ತು ಭಾರತದ ನಡುವೆ ವ್ಯಾಪಾರ ಒಪ್ಪಂದ ಜಾರಿಗೆ ತರಲು ನಾವು ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ, ಅಮೆರಿಕವು ಪ್ರತಿಸುಂಕವನ್ನು ಶೇ 25ರಿಂದ ಶೇ 18ಕ್ಕೆ ಇಳಿಸಲಿದೆ. ಅದೇ ರೀತಿ ಅವರು ಕೂಡ, ಅವರ ಸುಂಕವನ್ನು ಕಡಿತಗೊಳಿಸಲಿದ್ದಾರೆ. ಮತ್ತು ಸುಂಕಯೇತರ ಅಡೆತಡೆಗಳನ್ನು ಸಂಪೂರ್ಣವಾಗಿ ನಿವಾರಿಸಲಿದ್ದಾರೆ. ಅಮೆರಿಕದ ಉತ್ಪನ್ನಗಳನ್ನು ಖರೀದಿಸಲು ಅವರು ಬದ್ಧತೆ ತೋರಿದ್ದಾರೆ. 50 ಸಾವಿರ ಕೋಟಿ ಡಾಲರ್‌ಗಿಂತಲೂ ಹೆಚ್ಚು ಮೌಲ್ಯದ ಇಂಧನ, ತಂತ್ರಜ್ಞಾನ, ಕೃಷಿ, ಕಲ್ಲಿದ್ದಲು ಸೇರಿದಂತೆ ಇತರ ಉತ್ಪನ್ನಗಳನ್ನು ಅವರು ಖರೀದಿಸಲಿದ್ದಾರೆ. ಭಾರತೊಂದಿಗಿನ ನಮ್ಮ ಅದ್ಭುತ ಸಂಬಂಧ ಇನ್ನಷ್ಟು ಸದೃಢವಾಗಿ ಮುಂದುವರಿಯಲಿದೆ. ಕೆಲವರಿಗೆ ಹೇಳಲು, ಮಾಡಲು ಸಾಧ್ಯವಾಗದ ವಿಷಯವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ನಾನು ಇಬ್ಬರು ಸೇರಿ ಮಾಡಿದ್ದೇವೆ.

ಮೋದಿ ಪೋಸ್ಟ್‌ನಲ್ಲಿ ಏನಿತ್ತು?

ಇವತ್ತು ನನ್ನ ಸ್ನೇಹಿತ ಅಧ್ಯಕ್ಷ ಟ್ರಂಪ್ ಅವರೊಂದಿಗಿನ ಮಾತುಕತೆ ಚೇತೋಹಾರಿಯಾಗಿತ್ತು. ಭಾರತದಲ್ಲಿ ತಯಾರಾದ ಉತ್ಪನ್ನಗಳ ಮೇಲಿನ ಸುಂಕವನ್ನು ಶೇ 18ಕ್ಕೆ ಇಳಿಸಿರುವುದರಿಂದ ಸಂತಸವಾಗಿದೆ. ಈ ಅದ್ಭುತವಾದ ಘೋಷಣೆಗಾಗಿ ಭಾರತದ 140 ಕೋಟಿ ಜನರ ಪರವಾಗಿ ಅಧ್ಯಕ್ಷ ಟ್ರಂಪ್ ಅವರಿಗೆ ದೊಡ್ಡ ಧನ್ಯವಾದಗಳು. ಜಗತ್ತಿನ ಎರಡು ದೊಡ್ಡ ಆರ್ಥಿಕ ಶಕ್ತಿಗಳು ಮತ್ತು ದೊಡ್ಡ ಪ್ರಜಾಪ್ರಭುತ್ವಗಳು ಒಟ್ಟಾಗಿ ಸೇರಿ ಕೆಲಸ ಮಾಡಿದರೆ ಅದು ನಮ್ಮ ಜನರಿಗೆ ಲಾಭ ತರುತ್ತದೆ ಮತ್ತು ಪರಸ್ಪರ ಅನುಕೂಲಕಾರಿಯಾದಂತಹ ಸಹಕಾರಕ್ಕೆ ವಿಪುಲ ಅವಕಾಶಗಳನ್ನು ತೆರೆಯುತ್ತದೆ

ಜಾಗತಿಕ ಶಾಂತಿ, ಸ್ಥಿರತೆ ಮತ್ತು ಏಳಿಗೆಯಲ್ಲಿ ಅಧ್ಯಕ್ಷ ಟ್ರಂಪ್ ಅವರ ನಾಯಕತ್ವ ನಿರ್ಣಾಯಕವಾಗಿದೆ. ಶಾಂತಿ ಸ್ಥಾಪಿಸುವ ಅವರ ಯತ್ನಗಳನ್ನು ಭಾರತ ಸಂಪೂರ್ಣವಾಗಿ ಬೆಂಬಲಿಸಲಿದೆ. ನಮ್ಮ ಪಾಲುದಾರಿಕೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವುದಕ್ಕಾಗಿ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ.

ಸುಂಕದಿಂದ ಒಪ್ಪಂದದವರೆಗೆ

ಏಪ್ರಿಲ್ 2, 2025
ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳ ಉತ್ಪನ್ನಗಳ ಮೇಲೆ ಪ್ರತಿ ಸುಂಕವನ್ನು ಘೋಷಿಸಿದ ಡೊನಾಲ್ಡ್ ಟ್ರಂಪ್. ಆ ದಿನವನ್ನು ಅವರು 'ವಿಮೋಚನಾ ದಿನ' ಎಂದು ಉಲ್ಲೇಖಿಸಿ ಮಾತು. ಅಮೆರಿಕ ಆಮದು ಮಾಡಿಕೊಳ್ಳುವ ಭಾರತದ ಉತ್ಪನ್ನಗಳ ಮೇಲೆ ಶೇ 26ರಷ್ಟು ಸುಂಕ ನಿಗದಿ. ಇದರಲ್ಲಿ ಶೇ 10 ಮೂಲ ಸುಂಕವಾದರೆ ಶೇ 16ರಷ್ಟು ಪ್ರತಿಸುಂಕ

ಏಪ್ರಿಲ್ 10, 2025
90 ದಿನಗಳಿಗೆ ಪ್ರತಿ ಸುಂಕ ಜಾರಿಯನ್ನು ಅಮಾನತಿನಲ್ಲಿಟ್ಟ ಟ್ರಂಪ್. ಆದರೆ, ಅಮೆರಿಕ ಆಮದು ಮಾಡಿಕೊಳ್ಳುವ ಎಲ್ಲ ಉತ್ಪನ್ನಗಳ ಮೇಲೆ ಕನಿಷ್ಠ ಶೇ 10ರಷ್ಟು ಸುಂಕ ಮುಂದುವರಿಕೆ

ಜುಲೈ 31, 2025
ಭಾರತದ ಸರಕುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸುವುದಾಗಿ ಟ್ರಂಪ್ ಹೇಳಿಕೆ. ಆಗಸ್ಟ್ 7ರಿಂದ ಇದು ಜಾರಿಯ ದಿನ ನಿಗದಿ. ರಷ್ಯಾದಿಂದ ತೈಲ ಖರೀದಿ ಮುಂದುವರಿಸಿದರೆ ಹೆಚ್ಚುವರಿ ಸುಂಕ ವಿಧಿಸುವ ಎಚ್ಚರಿಕೆ

ಆಗಸ್ಟ್ 6, 2025
ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸದೇ ಇದ್ದುದರಿಂದ ಭಾರತದ ಮೇಲೆ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ಘೋಷಿಸಿದ ಟ್ರಂಪ್, ಆಗಸ್ಟ್ 27ರಿಂದ ಇದು ಜಾರಿಗೆ

ಫೆ.2, 2026
ಪ್ರಧಾನಿ ನರೇಂದ್ರ ಮೋದಿ ಅವರಿಗೆ ಟ್ರಂಪ್ ಕರೆ. ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ. ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ಟ್ರಂಪ್ ಒಪ್ಪಂದ ಆಗಿರುವ ಬಗ್ಗೆ ಮತ್ತು ಸುಂಕವನ್ನು ಶೇ 18ಕ್ಕೆ ಇಳಿಸುವ ಘೋಷಣೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿದ್ದ ವಿಮಾನವು ಅಪಘಾತಕ್ಕೀಡಾದ ಸಂದರ್ಭದ ವಿಡಿಯೊ ಎಂದು ಪ್ರತಿಪಾದಿಸುತ್ತಾ ಫೇಸ್‌ಬುಕ್ ಬಳಕೆದಾರರೊಬ್ಬರು ವಿಡಿಯೊ ತುಣುಕನ್ನು ಪೋಸ್ಟ್ ಮಾಡಿದ್ದಾರೆ. ಹಲವರು ಇದನ್ನು ಹಂಚಿಕೊಂಡಿದ್ದಾರೆ ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದಿಂದ ಕೀ ಫ್ರೇಮ್ ಒಂದನ್ನು ಪ್ರತ್ಯೇಕಿಸಿ ಅದನ್ನು ರಿವರ್ಸ್ ಸರ್ಚ್ ವಿಧಾನದ ಮೂಲಕ ಹುಡುಕಾಟ ನಡೆಸಿದಾಗ 2025ರಂದು ಪ್ರಕಟವಾದ ಹಲವು ವರದಿಗಳು ಸಿಕ್ಕಿದವು. ಅದು ವೆನೆಜುವೆಲಾದ ಟಾಚಿರಾದ ಪಾರಾಮಿಲ್ಲೊ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ ವಿಮಾನ ಅಪಘಾತದ ವರದಿಗಳಾಗಿದ್ದವು. ಅವುಗಳ ಪ್ರಕಾರ, ಎರಡು ಎಂಜಿನ್‌ಗಳ ಪೈಪರ್ 3ಎ-321ಟಿ1 ಛೆಯೆನ್ನೆ ವಿಮಾನವು 2025ರ ಅಕ್ಟೋಬರ್ 23ರಂದು ಟೇಕ್ ಆಫ್ ಆದ ಸ್ವಲ್ಪ ಹೊತ್ತಿನಲ್ಲಿ ಪತನಕ್ಕೀಡಾಗಿತ್ತು. ಈಗ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಲಾಗಿರುವ ವಿಡಿಯೊವನ್ನೇ 'ಅಲ್ ಜಝೀರಾ ಇಂಗ್ಲಿಷ್'ನ ಎಕ್ಸ್ ಖಾತೆಯಲ್ಲಿ ಅದೇ ದಿನ ಪೋಸ್ಟ್ ಮಾಡಲಾಗಿತ್ತು. ಜೊತೆಗೆ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಪವಾರ್ ಅವರಿದ್ದ ವಿಮಾನ ಅಪಘಾತದ್ದಲ್ಲ, ವೆನೆಜುವೆಲಾದಲ್ಲಿ ನಡೆದ ಅಪಘಾತದ ವಿಡಿಯೊ ಎಂದು ಮಹಾರಾಷ್ಟ್ರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಹಾ ನಿರ್ದೇಶಕರ ಕಚೇರಿ ಸ್ಪಷ್ಟನೆಯನ್ನೂ ನೀಡಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ವಾಸುದೇವ ನಾಡಿಗ್

ಆದದ್ದೆಲ್ಲಾ..

ಗೋಪಾಲಕೃಷ್ಣ ಅಡಿಗರ ಕವನ 'ಭೂಮಿಗೀತ'ದಲ್ಲಿರುವ ಸಾಲು 'ಕಾಡ ಮೂಲಕವೇ ಪಥ ಆಗಸಕ್ಕೆ'. ಇಡೀ ವಾಕ್ಯ ಅನನುಕೂಲತೆಗಳನ್ನು ದಾಟಿಕೊಂಡು ಹೋದಾಗ ಸಿಗುವ ಬೆಳಕಿನ ಅನುಕೂಲದ ಬಗ್ಗೆ ಆಡಿದ ಮಾತಾಗಿದೆ. ಒಂದು ಕತೆಯಲ್ಲಿ ಒಬ್ಬ ವ್ಯಕ್ತಿ ಇಡೀ ಊರಿನ ಮೆಚ್ಚುಗೆ ಗಳಿಸಿದ ಅದ್ಭುತವಾದ ಕುದುರೆಯನ್ನು ಕಳೆದುಕೊಳ್ಳುತ್ತಾನೆ. ಅಂದರೆ, ಅದು ಅಕ್ಷರಶಃ ತಪ್ಪಿಸಿಕೊಂಡು ಕಾಡಿನೊಳಗೆ ಓಡಿ ಹೋಗುತ್ತದೆ. ಬೇಸತ್ತು ಕೂತ ಆ ವ್ಯಕ್ತಿ ಮತ್ತು ಅವನ ಯುವ ಮಗ ದಟ್ಟ ವಿಷಾದಕ್ಕೆ ಒಳಗಾಗುತ್ತಾರೆ. ಒಂದು ಮುಂಜಾವು ಅಚಾನಕ್ ಆಗಿ ಅದೇ ಕುದುರೆ ತನ್ನ ಜೊತೆಗೆ ಇನ್ನು ಮೂರು ಬಲಿಷ್ಠ ಕಾಡು ಕುದುರೆಗಳನ್ನು ಕರೆದುಕೊಂಡು ಬಂದು ಅಂಗಳದಲ್ಲಿ ನಿಂತುಬಿಡುತ್ತದೆ.

ಮಗ ಮತ್ತು ಆ ತಂದೆಯ ಖುಷಿಗೆ ಮೇರೆಯೇ ಇಲ್ಲದಂತಾಗುತ್ತದೆ. ಆದರೆ ಈ ಸಂತಸವೂ ಕ್ಷಣಿಕ. ಕುದುರೆಯನ್ನು ಪಳಗಿಸಲು ಹೋಗಿ ಇದ್ದೊಬ್ಬ ಮಗ ಕಾಲನ್ನು ಮುರಿದುಕೊಂಡು ಮೂಲೆ ಸೇರುತ್ತಾನೆ. ಮರುದಿನ ಆ ಪ್ರಾಂತ್ಯದ ದೊರೆ ತನ್ನ ಸೇನೆಗೆ ಭರ್ತಿ ಮಾಡಿಕೊಳ್ಳಲು ಯುವಕರನ್ನು ಅರಸುತ್ತಾ ತನ್ನ ಸೇನೆಯ ಜೊತೆಗೆ ಬಂದಾಗ ಇಡೀ ಊರಿನ ಜನಕ್ಕೆ ತಲ್ಲಣ. ಬೆಳೆದ ಮಕ್ಕಳು ಸೇನೆ, ಯುದ್ಧದ ಪಾಲಾಗುವುದರ ಬಗ್ಗೆ ಆತಂಕ. ಕಾಲು ಮುರಿದುಕೊಂಡು ಮಲಗಿದ್ದ ಈ ಕುದುರೆ ಸವಾರನ ಮಗ ಸೇನೆಗೆ ಭರ್ತಿಯಾಗುವ ಭಯದಿಂದ ತಪ್ಪಿಸಿಕೊಳ್ಳುತ್ತಾನೆ. ಆದದ್ದೆಲ್ಲ ಒಳಿತೇ ಆಯಿತು ಎಂದು ಹಾಡಿದ ಪುರಂದರರು ನೆನಪಾಗುತ್ತಾರೆ.

ಧ್ರುವನಿಗೆ ಆದದ್ದೂ ಇದೇ; ಸಿಂಹಾಸನದ ಮೇಲೆ ತಂದೆ ಉತ್ತಾನಪಾದನ ಜೊತೆಗೆ ಕೂಡಲು ಪುಟ್ಟ ಬಾಲಕ ಧ್ರುವ ಹಾತೊರೆದು ಹಂಬಲಿಸಿದಾಗ ಮಲತಾಯಿ ಸುರುಚಿಯಿಂದ ಕೆಳಕ್ಕೆ ತಳ್ಳಲ್ಪಡುತ್ತಾನೆ. ಇದು ಯಾಕೆ ಹೀಗೆ, ಏನು ಕಾರಣ ಎಂಬ ಪ್ರಶ್ನೆಗಳ ಮೂಲಕ ಮತ್ತೆ ಮೇಲೆ ಎದ್ದ ಧ್ರುವ ಕಾಡುಪಾಲಾಗುತ್ತಾನೆ. ಅಲ್ಲಿಂದ ಬರಿ ಬೆಳಕೇ. ಅರಮನೆ ತೊರೆದವರ ಕತೆಗಳೇ ಹೀಗೆ. ಪಿ ಲಂಕೇಶರ 'ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ' ಮತ್ತು ಮಾಸ್ತಿಯವರ 'ಟಾಲ್‌ಸ್ಟಾಯ್ ಮತ್ತು ಬೂರ್ಜ್ವಾ ವೃಕ್ಷಗಳು' ಕಥನಗಳು ಇಂತಹ ಲೋಲುಪತೆಗಳನ್ನು ತ್ಯಜಿಸುವ ಮನಸ್ಸುಗಳ ಕುರಿತೇ ಹೇಳುತ್ತವೆ. ಯಾವುದೂ ಅಕಾರಣವಾಗಿ ಘಟಿಸಲಾರದು. ಬದಲಿಗೆ ಅದು ಮತ್ತೊಂದು ಬದಲಾವಣೆಗೆ ಕಾರಣವಾಗಬಲ್ಲದು. ಧ್ರುವ ಕೇಳಿದ್ದ ಪ್ರಶ್ನೆಗಳು ಅವನನ್ನು ಅಲೌಕಿಕ ಸಾಮ್ರಾಜ್ಯದ ಅಧಿಪತಿಯನ್ನಾಗಿ ಮಾಡಿದ ಹಾಗೆ. ಬ್ರಿಟೀಷರ ವರ್ಣಭೇದ ನೀತಿಯ ಅಪಮಾನದಲ್ಲಿ ನೊಂದಿದ್ದ ಮೋಹನದಾಸರು ಬಾಪೂಜಿ ಆದ ಹಾಗೆ.

ಘಟಿಸುವ ಕಹಿ ಸಂಗತಿಗಳೆಲ್ಲ ನಮ್ಮನ್ನು ಮತ್ತಷ್ಟು ಮಾಗಿಸಿ ಅದನ್ನು ದಾಟಿದ ನಂತರ ದಕ್ಕುವ ಅನಿರ್ವಚನೀಯ ಸುಖದ ಪರಿಚಯ ಮಾಡಿಕೊಡುತ್ತವೆ. ಏಳಬೇಕಷ್ಟೆ; ಬಿದ್ದಲ್ಲೇ ಅದೇ ಜಾಗದಲ್ಲಿ ಮತ್ತಷ್ಟು ಅಗೆದು ರಾಡಿ ಎಬ್ಬಿಸದ ಹಾಗೆ ಜಾಡಿಸಿಕೊಂಡು ಏಳುವಿಕೆ ಇದು. ಅಸುಖವನ್ನೇ ಕಾಣದ ಸಿದ್ಧಾರ್ಥ ಸುಖಕೆ ಬೇರೆ ಅರ್ಥವನ್ನೇ ಕೊಟ್ಟ. ಚೆನ್ನಜ್ಜನ ಮೂಲಕ ದಾರಿ ಹುಡುಕಿಕೊಂಡೇ ಹೊರಟ. ಗುಹನು ರಾಮನನ್ನು ವನವಾಸದ ಕಡೆ ದಾಟಿಸಿದ್ದೂ ಹೀಗೇ. ಯಾರಾದರೂ ಯಾವುದಾದರೂ ಒಂದು ಅಸೌಖ್ಯವನ್ನು ಪರಿಚಯ ಮಾಡಿಸಿದಾಗಲೇ ಎದ್ದು ಬದಲಾಗೋಕೆ ಸಾಧ್ಯ. ಎಷ್ಟೊಂದು ಜೀವಗಳು ಇಂತಹ ಕಾಠಿಣ್ಯಗಳನ್ನು ದಾಟಿ ಬಾಳನ್ನು ಸರಿಪಡಿಸಿಕೊಂಡಿಲ್ಲ? ಅಸಂಖ್ಯಾತ ಉದಾಹರಣೆಗಳಿವೆ. ಆದದ್ದೆಲ್ಲ ಒಳಿತೇ ಆದ ಹಾಗೆ. ❖

ಗುಂಡಣ್ಣ

ಪದಬಂಧ 6305

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಾಲೆ ಧರಿಸಿರುವ ಈತ ಸುತ್ತಾಡುವ ಸ್ವಭಾವದವನು (4)
3.ಹೀಗೆ ವಾಸನೆ ನೋಡು (4)
5.ಬೇಡುವವನು ಇಲ್ಲಿದ್ದಾನೆ (3)
6.ಜನನಿ ನುಡಿದಿರುವ ಸತ್ಯ! (2)
8.ಈತ ತಿರುಪೆ ಬೇಡುವವನು (3)
9.ಹಂತಕನೇರಿದ ಮೆಟ್ಟಿಲು (2)
10.ಜಲಾಶಯದಲ್ಲಿ ಸಂಗ್ರಹಿಸಿದ ನೀರು (2)
11.ಸುರನ ಬಳಿ ನಿಂತಿರುವ ರಾಕ್ಷಸ (3)
13.ಕರ್ತಾರನ ಕೈಯಿದು (2)
15.ಯಮನ ಸೂತ್ರವಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)
16.ಮನುಷ್ಯನ ಆಕಾರ (4)
17.ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ
1.ಸ್ಮರಣ ಶಕ್ತಿ ಚನ್ನಾಗಿರುವವನು (4)
2.ಕನ್ನಡಿಗನು ಪಡೆದುಕೊಂಡ ರಿಬೇಟ್! (4)
3.ಅನಿರೀಕ್ಷಿತ ಘಟನೆ (4)
4.ಚನ್ನಾಗಿ ಕಾಪಾಡಿದುದು (4)
7.ಒಂದಕ್ಕೊಂದು ಹೆಣೆದು ಕೊಂಡಿರುವಂಥದ್ದು (3)
9.ಆತಂಕ ಸೃಷ್ಟಿಸಿದ ಕೊಲೆಗಾರ (3)
10.ದಪ್ಪ ನೂಲಿರುವ ನೆಲ ಹಾಸು (4)
11.ಬುದ್ಧಿ ಇಟ್ಟುಕೊಂಡೇ ನೀಡಿದ ಒಪ್ಪಿಗೆ (4)
12.ರಾತ್ರಿಯ ಒಡೆಯನಿವನು (4)
14.ಸಮುದ್ರವನ್ನು ಹೀಗೂ ಹೇಳುವರು (4)



6304ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಮಾರ್ಗದರ್ಶಕ 5.ಅಶನಿ 6.ಟಮಟೆ 10.ಯಥಾಸ್ಥಿತಿ 11.ಪರಿತಾಪ 12.ನನಸು 15.ಅಂಗುಟ 16.ಮರ್ಮಭೇದಕ

ಮೇಲಿಂದ ಕೆಳಕ್ಕೆ:
1.ಗುಮಾನಿ 2.ಮದನ 3.ಸಂಕಟ 5.ಅಭಯದಾನ 7.ಚಿತ್ತಪಲ್ಲಟ 8.ವಂತಿಗೆ 9.ಕಂಪನ 13.ಸುಮನ 14.ಸೋಂಬೇರಿ 15.ಅಂಕಣ

ಸುಡೊಕು 6689

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9				5		8	4	
			3		9			1
	4			1				7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

6688 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

4 ಫೆಬ್ರುವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ತೃತೀಯ ಗಂ. 24-10 ನಕ್ಷತ್ರ: ಪೂರ್ವಫಲ್ಗುನಿ ಗಂ. 22-13 ಯೋಗ: ಅತಿಗಂಡ ಗಂ. 25-05 ಕರಣ: ವಣಿಜ ಗಂ 12-20 ಮಕರ ಮಾಸದ 21 ನೇ ದಿನ. ಮಳೆ ನಕ್ಷತ್ರ : ಶ್ರವಣ 4 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 - 01-30 **ಸೂರ್ಯೋದಯ :** 07-00 **ಸೂರ್ಯಾಸ್ತ :** 06-28, ಮುಸ್ಲಿಂ ದಿನಾಂಕ : 2 ಶಬನ್, **ದಿನ ವಿಶೇಷ :** ಸಬ್-ಎ-ಬರಾತ್ (ಹಿಂದಿನ ರಾತ್ರಿ), ಅದೃಷ್ಟ ಸಂಖ್ಯೆ : 8, 12

ಮೇಷ: ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ಹುಸಿ ಭರವಸೆಯ ಮಾತುಗಳು ಸಿಗಬಹುದು. ಕೃಷಿಕರಿಗೆ ಫಸಲು ದೊರಕುವ ಲಕ್ಷಣಗಳಿಂದ ಮನಸ್ಸಿಗೆ ಹರ್ಷವಿರುವುದು.

ವೃಷಭ: ರಕ್ಷಣಾ ವಿಭಾಗದಲ್ಲಿ ಕಾರ್ಯನಿರ್ವಹಿಸುವವರಿಂದ ಕರ್ತವ್ಯ ಲೋಪ ಸಂಭವಿಸಬಹುದು. ಜೀವನದ ಎಲ್ಲ ರೀತಿಯ ಕ್ಷಣಗಳನ್ನು ಅನುಭವಿಸಿದ ನಿಮಗೆ ಇತರರಿಗೆ ಜೀವನವನ್ನು ಹೇಳಿಕೊಡುವುದು ಕಷ್ಟವಾಗದು.

ಮಿಥುನ: ತಪ್ಪುಗಳಿಗೆ ಪಶ್ಚಾತಾಪ ಪಟ್ಟು ಸರಿ ಮಾಡಲು ಯತ್ನಿಸುವ ಗುಣ ಬೇಕಾಗುತ್ತದೆ. ಮನೆಯಲ್ಲಿ ಬಾಕಿ ಇರುವ ಗೃಹಕೃತ್ಯಗಳನ್ನು ಪೂರೈಸುವ ಪ್ರಯತ್ನ ಮಾಡುವಿರಿ. ಮಕ್ಕಳ ವಿಷಯವಾಗಿ ಮುಂಗೋಪಿಯಾಗುವಿರಿ.

ಕರ್ಕಾಟಕ: ವಯಸ್ಸಾದವರು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಆಹಾರವನ್ನು ಸ್ವೀಕರಿಸಿ. ಸಾಂಸಾರಿಕವಾಗಿ ಸಂಬಂಧಗಳನ್ನು ಉಳಿಸಿ ಕಾಪಾಡು-ವುದರಲ್ಲಿ ಜಯವಿರುತ್ತದೆ. ಸ್ವಂತ ವ್ಯವಹಾರದಲ್ಲಿ ಅಭಿವೃದ್ಧಿ ಕಾಣುವಿರಿ.

ಸಿಂಹ: ಪ್ರೀತಿ ಪಾತ್ರರಿಗೆ ಏನಾದರೂ ಉಡುಗೊರೆ ಕೊಡುವ ಉದ್ದೇಶದಿಂದ ಪೇಟೆಗೆ ಹೋಗುವಿರಿ. ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ಹಸ್ತ ದೊರಕಲಿದೆ.

ಕನ್ಯಾ: ಮನೆ ಅಥವಾ ಕಟ್ಟಡ ನಿರ್ಮಾಣ ತೊಂದರೆಗಳಿಲ್ಲದೆ ಮುಂದುವರಿಯಲಿದೆ. ವಂಶಕ್ಕೆ ಸಂಬಂಧಿಸಿದ ಆದರೆ ಈವರೆಗೂ ನಿಮಗೆ ದಕ್ಕಿರದ ಆಸ್ತಿಯು ಸಿಗಲಿದೆ. ಸ್ತ್ರೀ ಸಂಬಂಧಿ ವ್ಯಾಜ್ಯಗಳು ಕಾಡಲಿವೆ.

ತುಲಾ: ಪರೋಪಕಾರದ ಫಲವಾಗಿ ಬೆಟ್ಟದಂತೆ ಕಂಡುಬಂದ ಒಂದು ಸಮಸ್ಯೆಯು ಮಂಜಿನಂತೆ ಕರಗಿ ಹೋಗುವುದು. ಆರೋಗ್ಯದಲ್ಲಾಗುವ ಏರುಪೇರುಗಳ ಬಗ್ಗೆ ಎಚ್ಚರಿಕೆ ಮುಖ್ಯ.

ವೃಶ್ಚಿಕ: ಅನಿವಾರ್ಯ ಕಾರಣದಿಂದಾಗಿ ಕುಟುಂಬದವರೊಂದಿಗೆ ಕಳೆಯಬೇ-ಕೆಂದುಕೊಂಡ ಸಮಯವನ್ನು ತಪ್ಪಿಸಿಕೊಳ್ಳುವಿರಿ. ಮನೆಯಲ್ಲಿನ ಅನ್ನಸಂತರ್ಪ-ಣೆ ಕಾರ್ಯಕ್ರಮಕ್ಕೆ ಸಾಮಗ್ರಿ ಖರೀದಿಸುವಿರಿ.

ಧನು: ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನ. ತಂದೆಯ ವಿಪರೀತ ಸ್ಥಿತಿಗಳಿಂದ ಅವರ ಕೆಲಸಗಳೆಲ್ಲವೂ ಹೆಗಲ ಮೇಲೆ ಬೀಳಲಿವೆ.

ಮಕರ: ಮುಂಜಾಗರೂಕತೆ ಇಲ್ಲದೇ ಮಾಡಿದ ಕೆಲಸಗಳು ಅಪಾಯ ತಂದೊಡ್ಡಬಹುದು. ಕಾರ್ಯಕ್ಷೇತ್ರದಲ್ಲಿನ ಉನ್ನತ ವ್ಯಕ್ತಿಯನ್ನು ಭೇಟಿಯಾಗುವಿರಿ. ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ಕುಂಭ: ಗಾಯಕರು, ಹಿನ್ನೆಲೆ ಗಾಯಕರು ಹಾಗೂ ಸಂಗೀತ ನಿರ್ದೇಶಕರಿಗೆ ಹೊಸ ಅವಕಾಶಗಳು ದೊರೆಯಲಿವೆ. ಸಂಗಾತಿಯೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುವುದರಿಂದ ನೋವನ್ನು ಮರೆಯುವುದು.

ಮೀನ: ವೃತ್ತಿರಂಗದಲ್ಲಿ ತಿಳಿವಳಿಕೆಯಂತೆಯೇ ನಡೆಯಿರಿ. ಅನ್ಯರ ಮಾತಿಗೆ ಕಿವಿ ಒಡ್ಡಬೇಡಿ. ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ. ಉನ್ನತ ಅಧಿಕಾರದ ನಿರೀಕ್ಷೆ ಇರುವರಿಗೆ ಅದು ದೊರೆಯುತ್ತದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,088
ಇಂದಿನ ಅಂತ್ಯ:	25,727
ದಿನದ ಕನಿಷ್ಠ:	25,641
	639

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹560
	12 ಕ್ಕೆ	₹80
ಮೈಸೂರು:	100 ಕ್ಕೆ	₹562

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹322-755
ದ್ವಿತಳಿ (ಬಿ.ವಿ)	₹466-915

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹200
ಆರ್‌ಎಸ್‌ಎಸ್-5	₹195
ಗುಡ್ ಲಾಟ್	₹183

ಮುದ್ರೆ-ಮನೆ ಕಾಫಿ (50 ಕೆ.ಜಿಗೆ)

ಎಪಿ	₹25,500
ಎಸಿ	₹14,000
ಆರ್‌ಪಿ	₹18,100
ಆರ್‌ಸಿ	₹10,450

ವ್ಯಾಪಾರ ಒಪ್ಪಂದ: ಸೆನ್ಸೆಕ್ಸ್ ಜಿಗಿತ

ಟ್ರಂಪ್, ಮೋದಿ ಹೇಳಿಕೆಯಿಂದ ಹೂಡಿಕೆದಾರರಲ್ಲಿ ಮೂಡಿದ ಉತ್ಸಾಹ

ಮುಂಬೈ (ಪಿಟಿಐ): ಭಾರತ ಮತ್ತು ಅಮೆರಿಕ ವ್ಯಾಪಾರ ಒಪ್ಪಂದಕ್ಕೆ ಸಮ್ಮತಿ ಸೂಚಿಸಿವೆ ಎಂಬ ಸುದ್ದಿಯು ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ಭರ್ಜರಿ ವಹಿವಾಟು ನಡೆಯುವಂತೆ ಮಾಡಿತು.

ವ್ಯಾಪಾರ ಒಪ್ಪಂದದ ಸುದ್ದಿಯು ಜವಳಿ, ಚರ್ಮೋದ್ಯಮ, ಹವಳ ಮತ್ತು ಆಭರಣ, ವಿಶೇಷ ಬಳಕೆಯ ರಾಸಾಯನಿಕಗಳು, ಸಮುದ್ರ ಉತ್ಪನ್ನಗಳ ರಫ್ತಿನಲ್ಲಿ ತೊಡಗಿರುವ ಕಂಪನಿಗಳ ಷೇರುಗಳ ಮೌಲ್ಯ ಹೆಚ್ಚಳಕ್ಕೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 2,072 ಅಂಶ ಜಿಗಿಯಿತು. ಕಳೆದ ಎಂಟು ತಿಂಗಳಲ್ಲಿ ಸೆನ್ಸೆಕ್ಸ್ ಒಂದು ದಿನದಲ್ಲಿ ದಾಖಲಿಸಿದ ಅತ್ಯುತ್ತಮ ಏರಿಕೆ ಇದು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 639 ಅಂಶ ಏರಿಕೆ ದಾಖಲಿಸಿತು.

ಸೆನ್ಸೆಕ್ಸ್ ಸೂಚ್ಯಂಕದ ಭಾಗವಾಗಿರುವ ಅದಾನಿ ಪೋರ್ಟ್ಸ್, ಬಜಾಜ್ ಫೈನಾನ್ಸ್,



ಇಂಟರ್‌ಗ್ಲೋಬ್ ಏವಿಯೇಷನ್, ಪವರ್ ಗ್ರಿಡ್, ಸನ್ ಫಾರ್ಮಾ, ಬಜಾಜ್ ಫಿನ್‌ಸರ್ವ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ದೊಡ್ಡ ಪ್ರಮಾಣದಲ್ಲಿ ಏರಿಕೆ ಕಂಡವು. ಟೆಕ್ ಮಹೀಂದ್ರ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಇಳಿಕೆ ದಾಖಲಿಸಿದವು.

'ಬಹು ನಿರೀಕ್ಷಿತ ವ್ಯಾಪಾರ ಒಪ್ಪಂದದ ಸುದ್ದಿಯಿಂದಾಗಿ, ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ವರ್ಧನೆಯ ಕಾರಣದಿಂದಾಗಿ, ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಹಣವು ಭಾರತದ ಬಂಡವಾಳ ಮಾರುಕಟ್ಟೆಗಳ ಕಡೆ ಮತ್ತೆ ಹೆಚ್ಚಿನ ಪ್ರಮಾಣದಲ್ಲಿ ಹರಿಯಬಹುದು ಎಂಬ ನಿರೀಕ್ಷೆಯೊಂದಿಗೆ ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ಒಳ್ಳೆಯ ವಹಿವಾಟು ನಡೆಯಿತು' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಒಪ್ಪಂದದ ಬಗ್ಗೆ ಮಾಹಿತಿ ದೊರೆತ ನಂತರದಲ್ಲಿ ಭಾರತದ ಷೇರುಪೇಟೆಗಳಲ್ಲಿ ತೇಜಿ ವಹಿವಾಟು ನಡೆದಿದೆ. ಇದು ಈಚಿನ ದಿನಗಳಲ್ಲಿ ಆಗಿರುವ ಅತ್ಯುತ್ತಮ ವಹಿವಾಟುಗಳಲ್ಲಿ ಒಂದು' ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

ರಫ್ತು ಆಧಾರಿತ ಹಾಗೂ ಸರಕುಗಳಿಗೆ ಸಂಬಂಧಿಸಿದ ವಲಯಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದರು. ಜವಳಿ, ರಾಸಾಯನಿಕ, ವಾಹನಗಳ ಬಿಡಿಭಾಗ, ಹಣಕಾಸು, ರಿಯಾಲ್ಟಿ, ಔಷಧ, ಐ.ಟಿ. ವಲಯದ ಷೇರುಗಳ ಖರೀದಿ ಹೆಚ್ಚಿತ್ತು ಎಂದು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆಯಲ್ಲಿ ಒಟ್ಟು 3,304 ಕಂಪನಿಗಳ ಷೇರುಮೌಲ್ಯ ಏರಿಕೆ ಕಂಡಿದೆ, 981 ಕಂಪನಿಗಳ ಷೇರುಮೌಲ್ಯ ಇಳಿಕೆಯಾಗಿದೆ.

> ಅಮೆರಿಕ–ಭಾರತ ನಡುವಿನ ವ್ಯಾಪಾರ ಒಪ್ಪಂದವು ಬಂಡವಾಳ ಮಾರುಕಟ್ಟೆಗಳ ಮೇಲಿದ್ದ ತೂಗುಕತ್ತಿಯೊಂದನ್ನು ಇನ್ನಿಲ್ಲವಾಗಿಸಿದೆ. ಒಳ್ಳೆಯ ಬಜೆಟ್ ನಂತರದಲ್ಲಿ ಇದು ಘೋಷಣೆ ಆಗಿದೆ. ಇದು ಬಂಡವಾಳದ ಹರಿಯುವಿಕೆಯ ಬಗ್ಗೆ ಸ್ಪಷ್ಟತೆ ನೀಡುತ್ತಿದೆ.
>
> **ಎ. ಬಾಲಸುಬ್ರಮಣಿಯನ್,** ಆದಿತ್ಯ ಬಿರ್ಲಾ ಸನ್‌ಲೈಫ್ ಎಎಂಸಿ ಲಿ. ಕಂಪನಿಯ ಸಿಇಒ

> ಒಪ್ಪಂದದಿಂದಾಗಿ ವಾಹನ ಬಿಡಿಭಾಗ, ರಕ್ಷಣೆ, ಜವಳಿ, ಗ್ರಾಹಕ ಬಳಕೆ ಉಪಕರಣಗಳು, ಇಎಂಎಸ್, ಐ.ಟಿ ಸೇವೆಗಳ ವಲಯಕ್ಕೆ ಅನುಕೂಲ ಆಗಲಿದೆ. ಹಣಕಾಸು ವಲಯ ಕೂಡ ಪ್ರಯೋಜನ ಪಡೆಯಬಹುದು.
>
> **ಸಿದ್ಧಾರ್ಥ ಖೇಮ್ಕ,** ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿ. ಕಂಪನಿಯ ಸಂಪತ್ತು ನಿರ್ವಹಣಾ ವಿಭಾಗದ ಸಂಶೋಧನಾ ಮುಖ್ಯಸ್ಥ

ವಲಯವಾರು ಏರಿಕೆ (%)

ವಲಯ	%
ಸೇವಾ ವಲಯ	4.86
ರಿಯಾಲ್ಟಿ	4.79
ಇಂಧನ	4.79
ಸಾರ್ವಜನಿಕ ಅಗತ್ಯ ಸೇವೆಗಳು (ಯುಟಿಲಿಟೀಸ್)	3.92
ಬಂಡವಾಳ ಸರಕು	3.71
ಔದ್ಯಮಿಕ	3.44
ಲೋಹ	2.85
ಆರೋಗ್ಯಸೇವೆ	2.83
ಹಣಕಾಸು ಸೇವೆಗಳು	2.83

ಸಂಪತ್ತು ₹12.10 ಲಕ್ಷ ಕೋಟಿ ಏರಿಕೆ

ನವದೆಹಲಿ (ಪಿಟಿಐ): ಷೇರುಪೇಟೆ ಸೂಚ್ಯಂಕಗಳ ಜಿಗಿತದ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ಒಂದೇ ದಿನದಲ್ಲಿ ₹12.10 ಲಕ್ಷ ಕೋಟಿಯಷ್ಟು ಹೆಚ್ಚಳ ಆಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹467 ಲಕ್ಷ ಕೋಟಿಗೆ ಹೆಚ್ಚಳ ಕಂಡಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾರಾಯಣ ಗೌಡ, ಟಿ.ದಾಸರಹಳ್ಳಿ, ಬೆಂಗಳೂರು

• **ಪ್ರಶ್ನೆ: ನನ್ನ ಬಳಿ ಸುಮಾರು ₹40 ಲಕ್ಷ ಹಣವಿದೆ. ಈ ಹಣವು ಸಾಲ ವಸೂಲಾತಿ, ಚಿಟ್ ಫಂಡ್ ಸಂಗ್ರಹ ಮತ್ತು ಇತರ ಕೆಲವು ಮೂಲಗಳಿಂದ ಬಂದಿದೆ. ಹೆಚ್ಚಿನ ಆದಾಯ ನೀಡುವ ಷೇರು ಮಾರುಕಟ್ಟೆಯ ಕುರಿತು ನನಗೆ ಯಾವುದೇ ತಿಳಿವಳಿಕೆ ಇಲ್ಲ. ಈಗ ನಾನು ಬ್ಯಾಂಕ್, ಅಂಚೆ ಕಚೇರಿ ಮುಂತಾದ ಸುರಕ್ಷಿತ ಹಾಗೂ ತ್ರೈಮಾಸಿಕವಾಗಿ ಬಡ್ಡಿ ಆದಾಯ ನೀಡುವ ಹೂಡಿಕೆಗಳಲ್ಲಿ ಹಣ ಹೂಡಲು ಇಚ್ಛಿಸುತ್ತಿದ್ದೇನೆ. ದಯವಿಟ್ಟು ಇಂತಹ ಹೂಡಿಕೆಗಳ ಕುರಿತು ಮಾರ್ಗದರ್ಶನ ನೀಡಿ.**

ಉತ್ತರ: ಆರ್ಥಿಕ ಅಪಾಯ ಬೇಡ ಎನ್ನುವ ಹೂಡಿಕೆದಾರರಿಗೆ ತಮ್ಮ ಮೂಲಧನದ ಭದ್ರತೆ ಮತ್ತು ನಿಯಮಿತ ಬಡ್ಡಿ ಆದಾಯ ಯಾವತ್ತೂ ಮುಖ್ಯವಾಗಿರುತ್ತದೆ. ತಮ್ಮ ಇತಿ-ಮಿತಿ ಅರಿತು ಹಾಗೂ ಸೂಕ್ತ ಮಾಹಿತಿ ಇರುವ ಹೂಡಿಕೆಗಳಲ್ಲಷ್ಟೇ ಹಣ ತೊಡಗಿಸುವುದು ಉತ್ತಮ. ಹೀಗಾಗಿ ಅಪಾಯ ಕಡಿಮೆ ಇರುವ, ಬಡ್ಡಿ ಆಧಾರಿತ ಹೂಡಿಕೆಗಳನ್ನು ಆಯ್ಕೆ ಮಾಡುವ ನಿರ್ಧಾರ ಸರಿ. ಷೇರು ಮಾರುಕಟ್ಟೆಯ ಅನುಭವ ಇಲ್ಲದವರು, ಮೊದಲು ಬ್ಯಾಂಕ್ ಮತ್ತು ಸರ್ಕಾರದ ಭದ್ರತೆ ಇರುವ ಯೋಜನೆಗಳತ್ತ ಗಮನ ಹರಿಸುವುದು ಒಳಿತು. ನೀವು 60 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ನಾಗರಿಕರೆಂದು ಊಹಿಸಿ ಉತ್ತರಿಸುತ್ತಿದ್ದೇನೆ. ನಿಮಗೆ ಈ ಕೆಳಗಿನ ಆಯ್ಕೆಗಳಿವೆ;

ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸದೃಢ ಖಾಸಗಿ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಇರಿಸುವುದು ಉತ್ತಮ ಆಯ್ಕೆ. ಇವುಗಳಲ್ಲಿ ಮೂರು ತಿಂಗಳಿಗೊಮ್ಮೆ ಬಡ್ಡಿ ಪಡೆಯುವ ಠೇವಣಿ ಯೋಜನೆ ಇದ್ದು, ಅಗತ್ಯವಿದ್ದಲ್ಲಿ ಠೇವಣಿಯನ್ನು ಅವಧಿಗೆ ಮೊದಲು ಹಿಂಪಡೆಯುವ ಸೌಲಭ್ಯವೂ ಇರುತ್ತದೆ. ಅದೇ ರೀತಿ, ಅಂಚೆ ಕಚೇರಿಯ ಮಾಸಿಕ ಆದಾಯ ಯೋಜನೆ ಮತ್ತು ಅವಧಿ ಠೇವಣಿಗಳು ಸುರಕ್ಷಿತವಾಗಿದ್ದು, ಸರ್ಕಾರದ ಭದ್ರತೆ ಇರುವ ಕಾರಣ ಅಪಾಯ ಬಹಳ ಕಡಿಮೆ.

ಹೂಡಿಕೆ ಮಾಡುವ ಮೊದಲು ಹಣವನ್ನು ಒಂದೇ ಕಡೆಯಲ್ಲಿ ತೊಡಗಿಸದೆ ವಿವಿಧ ಸುರಕ್ಷಿತ ಆಯ್ಕೆಗಳಲ್ಲಿ ಹಂಚಿಕೆ ಮಾಡುವುದು ಉತ್ತಮ. ಅಗತ್ಯವಿದ್ದಲ್ಲಿ ಪ್ರಮಾಣಿತ ಹಣಕಾಸು ಸಲಹೆಗಾರರ ಸಲಹೆ ಪಡೆಯುವುದು ಲಾಭದಾಯಕ ಆಗಬಹುದು. ಹಾಗಿದ್ದಲ್ಲಿ, ಸ್ವಲ್ಪ ಮೊತ್ತವನ್ನು ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳಾದ ಲಿಕ್ವಿಡ್ ಫಂಡ್, ಅಲ್ಟ್ರಾ ಶಾರ್ಟ್ ಟರ್ಮ್ ಫಂಡ್ ಅಥವಾ ಶಾರ್ಟ್ ಡ್ಯುರೇಷನ್ ಫಂಡ್‌ಗಳಲ್ಲಿ ತೊಡಗಿಸುವುದನ್ನೂ ಪರಿಗಣಿಸಬಹುದು. ಈಕ್ವಿಟಿ ಆಧಾರಿತ ಸೇವಿಂಗ್ಸ್ ಫಂಡ್ ಕೂಡ ಉತ್ತಮ ಆಯ್ಕೆ. ಇವು ಬ್ಯಾಂಕ್ ಠೇವಣಿಗಿಂತ ಸ್ವಲ್ಪ ಹೆಚ್ಚಿನ ಲಾಭ ನೀಡುವ ಸಾಧ್ಯತೆ ಇದ್ದರೂ, ಅಲ್ಪ ಪ್ರಮಾಣದಲ್ಲಿ ಮಾರುಕಟ್ಟೆ ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿರುತ್ತವೆ.

ದೇವರಾಜ್, ನೆಲಮಂಗಲ

• **ಪ್ರಶ್ನೆ: ನಾನು ಒಂದು ಬ್ಯಾಂಕ್‌ನಲ್ಲಿ ಉದ್ಯೋಗದಲ್ಲಿದ್ದು, ಕಳೆದ ಹಲವು ವರ್ಷಗಳಿಂದ ವಿವಿಧ ಕಂಪನಿಗಳ ಷೇರುಗಳಲ್ಲಿ ನಿಯಮಿತವಾಗಿ ದೀರ್ಘಾವಧಿಗೆ ಹೂಡಿಕೆ ಮಾಡುತ್ತಿದ್ದೇನೆ. ಈ ಹೂಡಿಕೆಗಳು ನನಗೆ ಉತ್ತಮ ಲಾಭ ನೀಡಿದ್ದು, ಅವುಗಳನ್ನು ನಾನು ಮಾರಾಟದ ಸಂದರ್ಭದಲ್ಲಿ ಸಂಪೂರ್ಣವಾಗಿ ದೀರ್ಘಾವಧಿ ಹೂಡಿಕೆಗಳಾಗಿರುವಂತೆ ನೋಡಿಕೊಂಡಿದ್ದೇನೆ. ಇತ್ತೀಚೆಗೆ ನಾನು ಹೂಡಿಕೆ ಮಾಡಿದ್ದ ಎಫ್‌ಎಂಸಿಜಿ ವಲಯದ ಒಂದು ಕಂಪನಿ ಎರಡಾಗಿ ವಿಭಾಗ ಆಗಿದೆ. ಅದರ ಹೋಟೆಲ್ ವ್ಯವಹಾರವನ್ನು ಪ್ರತ್ಯೇಕ ಕಂಪನಿಯಾಗಿ ಬೇರ್ಪಡಿಸಲಾಗಿದೆ, ಅದರ ಪರಿಣಾಮವಾಗಿ ನನ್ನ ಬಳಿ ಇದ್ದ ಮೂಲ ಕಂಪನಿಯ ಷೇರುಗಳ ಜೊತೆಗೆ ಬೇರೆಯಾದ ಹೊಸ ಕಂಪನಿಯ ಷೇರುಗಳನ್ನೂ ನನಗೆ ಹಂಚಿಕೆ ಮಾಡಲಾಗಿದೆ.**

ಬೇರೆಯಾದ ಈ ಹೊಸ ಕಂಪನಿಯ ಷೇರುಗಳ ಮಾರುಕಟ್ಟೆ ಮೌಲ್ಯವು ನನ್ನ ಮೂಲ ಹೂಡಿಕೆಯ ಹೋಲಿಕೆಯಲ್ಲಿ ಈಗಾಗಲೇ ಉತ್ತಮ ಲಾಭದಲ್ಲಿದೆ. ಇಂತಹ ಸಂದರ್ಭದಲ್ಲಿ, ನಾನು ಬೇರೆಯಾದ ಕಂಪನಿಯ ಷೇರುಗಳನ್ನು ಮಾರಾಟ ಮಾಡಿದರೆ, ದೀರ್ಘಾವಧಿ ಅಥವಾ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ಹೇಗೆ ಅನ್ವಯವಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಬೇಕಾಗಿದೆ. ಕಂಪನಿ ಎರಡಾಗಿದ್ದರ ಮೂಲಕ ನನಗೆ ದೊರೆತ ಷೇರುಗಳ ಖರೀದಿ ವೆಚ್ಚವನ್ನು ಯಾವ ರೀತಿಯಲ್ಲಿ ಲೆಕ್ಕ ಹಾಕಬೇಕು? ಹೂಡಿಕೆಯ ಅವಧಿಯನ್ನು ಮೂಲ ಕಂಪನಿಯ ಷೇರುಗಳನ್ನು ಖರೀದಿಸಿದ ದಿನಾಂಕದಿಂದಲೇ ಪರಿಗಣಿಸಲಾಗುತ್ತದೆಯೇ?

ಉತ್ತರ: ಕಂಪನಿ ಪ್ರತ್ಯೇಕಗೊಳ್ಳುವ ಸಂದರ್ಭದಲ್ಲಿ ನೀಡಲಾದ ಷೇರುಗಳ ಮಾರಾಟದ ವೇಳೆ ಅನ್ವಯಿಸುವ ತೆರಿಗೆಯನ್ನು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 2(19ಎಎ) ಪ್ರಕಾರ ನಿರ್ಧರಿಸಲಾಗುತ್ತದೆ. ಇದರ ಪ್ರಕಾರ ಕೆಲವು ಷರತ್ತುಗಳನ್ನು ಪೂರೈಸಿದಲ್ಲಿ, ಪ್ರತ್ಯೇಕ ಆಗುವ ಸಂದರ್ಭದಲ್ಲೇ ಷೇರುಗಳನ್ನು ಹಂಚಿಕೆ ಮಾಡುವುದು ತೆರಿಗೆ ಪಾವತಿಯ ಉದ್ದೇಶದಿಂದ ವರ್ಗಾವಣೆ ಎಂದು ಪರಿಗಣಿಸಲಾಗುವುದಿಲ್ಲ. ಅಂದರೆ, ಮೂಲ ಕಂಪನಿಯ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಪ್ರತ್ಯೇಕಗೊಂಡ ಕಂಪನಿಯ ಷೇರುಗಳನ್ನು ನೀಡಿದಾಗ, ಆ ಹಂಚಿಕೆಯ ಸಮಯದಲ್ಲಿ ಯಾವುದೇ ಬಂಡವಾಳ ವೃದ್ಧಿ ತೆರಿಗೆ ಇರುವುದಿಲ್ಲ.

ಪ್ರತ್ಯೇಕಗೊಂಡ ಕಂಪನಿಯ ಷೇರುಗಳನ್ನು ನಂತರ ಮಾರಾಟ ಮಾಡುವಾಗ ಮಾತ್ರ ಬಂಡವಾಳ ವೃದ್ಧಿ ತೆರಿಗೆ ಅನ್ವಯವಾಗುತ್ತದೆ. ಈ ಸಂದರ್ಭದಲ್ಲಿ ಖರೀದಿ ವೆಚ್ಚವನ್ನು ಸೆಕ್ಷನ್ 49(2ಸಿ) ಮತ್ತು 49(2ಡಿ) ಪ್ರಕಾರ ಲೆಕ್ಕ ಹಾಕಬೇಕು. ಮೂಲ ಕಂಪನಿಯ ಷೇರುಗಳ ಖರೀದಿ ವೆಚ್ಚವನ್ನು ಕಂಪನಿ ಪ್ರತ್ಯೇಕವಾಗುವ ಮೊದಲು ಇರುವ ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ಮೂಲ ಕಂಪನಿ ಮತ್ತು ಪ್ರತ್ಯೇಕಗೊಂಡ ಕಂಪನಿಯ ನಡುವೆ ಅನುಪಾತದಲ್ಲಿ ಹಂಚಿಕೆ ಮಾಡಬೇಕು. ಪ್ರತ್ಯೇಕಗೊಂಡ ಕಂಪನಿಗೆ ಹಂಚಿಕೆ ಮಾಡಿದ ಮೌಲ್ಯವೇ ಆ ಷೇರುಗಳ ಖರೀದಿ ವೆಚ್ಚ. ಹೂಡಿಕೆಯ ಅವಧಿಯ ದೃಷ್ಟಿಯಿಂದ, ಸೆಕ್ಷನ್ 2(42ಎ) ಪ್ರಕಾರ ಪ್ರತ್ಯೇಕಗೊಂಡ ಕಂಪನಿಯ ಷೇರುಗಳ ಹೂಡಿಕೆಯ ಅವಧಿಯನ್ನು ಮೂಲ ಕಂಪನಿಯ ಷೇರುಗಳನ್ನು ಖರೀದಿಸಿದ ದಿನಾಂಕದಿಂದಲೇ ಲೆಕ್ಕ ಹಾಕಲಾಗುತ್ತದೆ.

ಆದ್ದರಿಂದ, ಮೂಲ ಷೇರುಗಳನ್ನು 12 ತಿಂಗಳಿಗಿಂತ ಹೆಚ್ಚು ಅವಧಿಗೆ ಹೊಂದಿದ್ದರೆ, ಮಾರಾಟದಿಂದ ಸಿಗುವ ಲಾಭವನ್ನು ದೀರ್ಘಾವಧಿ ಬಂಡವಾಳ ವೃದ್ಧಿ ಎಂದು ಪರಿಗಣಿಸಲಾಗುತ್ತದೆ ಮತ್ತು ಸೆಕ್ಷನ್ 112ಎ ಪ್ರಕಾರ ₹1.25 ಲಕ್ಷ ಮೀರಿದ ಲಾಭಕ್ಕೆ ಶೇ 12.5ರಷ್ಟು ತೆರಿಗೆ ವಿಧಿಸಲಾಗುತ್ತದೆ. ತೆರಿಗೆ ಅನ್ವಯಿಸುವ ಆದಾಯ ಲೆಕ್ಕ ಹಾಕುವಾಗ ಅಗತ್ಯ ವಿವರಗಳು, ದಾಖಲೆ ದಿನಾಂಕದ ಮೌಲ್ಯ, ಷೇರು ಹಂಚಿಕೆ ಅನುಪಾತ, ಖರೀದಿ ವೆಚ್ಚ ಹಂಚಿಕೆ ಮತ್ತು ಮಾರಾಟದ ಮೌಲ್ಯಗಳನ್ನು ಸರಿಯಾಗಿ ಉಲ್ಲೇಖಿಸುವುದು ಅಗತ್ಯ. ಇದಕ್ಕಾಗಿ ನಿಖರ ಮಾಹಿತಿಯೊಂದಿಗೆ ಪರಿಣತ ತೆರಿಗೆ ಸಲಹೆಗಾರರನ್ನು ಸಂಪರ್ಕಿಸುವುದು ಸೂಕ್ತ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1770 (1790)
ಸೋಯಾ (ರಿಫೈನ್ಡ್)	₹1395 (1400)
ಸೂರ್ಯಕಾಂತಿ (ರಿಫೈನ್ಡ್)	₹1620 (1620)
ಪಾಮೋಲಿನ್	₹320 (1310)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1200-1600
ಮಧ್ಯಮ	₹600-1200
ಸಣ್ಣ	₹200-600

ಸುಂಕ ಇಳಿಕೆ ಭಾರತಕ್ಕೆ ಒಳಿತು: ಮೂಡೀಸ್

ನವದೆಹಲಿ (ಪಿಟಿಐ): ಭಾರತದಿಂದ ಆಮದಾಗುವ ಬಹುತೇಕ ಉತ್ಪನ್ನಗಳಿಗೆ ಸುಂಕವನ್ನು ಕಡಿಮೆ ಮಾಡಲು ಅಮೆರಿಕದ ನಿರ್ಧರಿಸಿರುವುದರಿಂದ ಭಾರತದ ಹವಳಗಳು, ಆಭರಣ, ಜವಳಿ ಮತ್ತು ಉಡುಪು ಉದ್ಯಮಕ್ಕೆ ಅನುಕೂಲ ಆಗಲಿದೆ ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಮೂಡೀಸ್ ಹೇಳಿದೆ.

ಮೂಡೀಸ್ ಉಲ್ಲೇಖಿಸಿರುವ ವಲಯಗಳಲ್ಲಿ ಕಾರ್ಮಿಕರ ಪಾಲುದಾರಿಕೆ ಹೆಚ್ಚಿನ ಮಟ್ಟದಲ್ಲಿ ಇರುತ್ತದೆ. ಭಾರತದಿಂದ ಆಮದು ಆಗುವ ಉತ್ಪನ್ನಗಳ ಮೇಲಿನ ಪ್ರತಿಸುಂಕ ಶೇ 25ರಷ್ಟು ಇರುವುದನ್ನು ಶೇ 18ಕ್ಕೆ ಇಳಿಕೆ ಮಾಡಲಾಗುತ್ತದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಪ್ರಕಟಿಸಿದ್ದಾರೆ.

ಟ್ರಂಪ್ ಅವರು ಘೋಷಿಸಿರುವ ಒಪ್ಪಂದವು ಭಾರತದ ಸರಕುಗಳು ಅಮೆರಿಕಕ್ಕೆ ರಫ್ತಾಗುವುದನ್ನು ಹೆಚ್ಚು ಮಾಡಲಿದೆ ಎಂದು ಮೂಡೀಸ್ ಹೇಳಿದೆ. ಭಾರತದ ಸರಕುಗಳ ಪಾಲಿಗೆ ಅಮೆರಿಕವು ಈಗಲೂ ಅತಿದೊಡ್ಡ ಮಾರುಕಟ್ಟೆ. 2025ರ ಮೊದಲ 11 ತಿಂಗಳಲ್ಲಿ ಭಾರತದಿಂದ ರಫ್ತಾದ ಸರಕುಗಳ ಪೈಕಿ ಶೇಕಡ 21ರಷ್ಟು ಅಮೆರಿಕದ ಮಾರುಕಟ್ಟೆ ತಲುಪಿವೆ.

ಔಷಧ ಹಾಗೂ ಗ್ರಾಹಕ ಬಳಕೆ ಎಲೆಕ್ಟ್ರಾನಿಕ್ಸ್ ಉಪಕರಣಗಳ ವಲಯವು ಅಮೆರಿಕ ವಿಧಿಸಿದ್ದ ಶೇ 50ರಷ್ಟು ಸುಂಕದ ವ್ಯಾಪ್ತಿಯಿಂದ ಹೊರಗಿದ್ದವು. ಹೀಗಾಗಿ ಈಗಿನ ಸುಂಕ ಇಳಿಕೆ ಕ್ರಮವು ಈ ಎರಡು ವಲಯಗಳ ಮೇಲೆ ಪರಿಣಾಮ ಬೀರದು ಎಂದು ಮೂಡಿಸ್ ಹೇಳಿದೆ.

ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿ ಮಾಡುವುದನ್ನು ಈಚಿನ ದಿನಗಳಲ್ಲಿ ಕಡಿಮೆ ಮಾಡಿದೆಯಾದರೂ, ಅದು ಆ ಖರೀದಿಗಳನ್ನು ಪೂರ್ಣವಾಗಿ ನಿಲ್ಲಿಸಲಿಕ್ಕಿಲ್ಲ ಎಂದು ಕೂಡ ಮೂಡೀಸ್ ಅಂದಾಜು ಮಾಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Engg/ Production Technical

SMITHS & FOUNDERS (INDIA) LTD invites applications
Role: MARKETING ENGINEER, Bengaluru
Qualification: DIPLOMA- Mechanical/Metallurgy
Experience: 2 - 3 years
Preference: Kannada knowledge
Contact: cosec@smithsandfoundersindia.com

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆ ಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ವಯಸ್ಸಾದವರನ್ನು, ಮಕ್ಕಳನ್ನು ನೋಡಿಕೊಳ್ಳುವ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಹಾಗೂ ಸಂಬಳ ಕೊಡುತ್ತೇವೆ. 9845734040, 9845034040, 9187552740.

Hotel

ಪುರುಷ ಸಹಾಯಕರು (45 ವರ್ಷದೊಳಗಿನವರು) ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9945935638

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ,ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Receptionist/ Secretary

ಬೇಕಾಗಿದ್ದಾರೆ: ಕೆ.ಎಚ್. ಡಬಲ್ ರೋಡ್, ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಹೋಟೆಲವೊಂದರಲ್ಲಿ ರಾತ್ರಿ ಕರ್ತವ್ಯಕ್ಕೆ ಪುರುಷ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ. ಸಂಬಳ: 13000/_ ಸಂಪರ್ಕಿಸಿ: 9008488555

Wanted

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597/ 9739320897/ 9743972747/ 9448842717

ವೈಯಕ್ತಿಕ

Change of Name

ಹೆಸರು ಬದಲಾವಣೆ
ನಾನು, ಭುವನ ಎಸ್., ಶ್ರೀ ಶಿವಪ್ರಕಾಶ್ ಬಿ. ರವರ ಪುತ್ರಿ, ನಿವಾಸಿ: ನಂ. 12, ಡೆಲ್ಲಿ ಪಬ್ಲಿಕ್ ಸ್ಕೂಲ್ ಎದುರು, ಕಂಟ್ರಿ ಕ್ಲಬ್ ಹಿಂಭಾಗ, ಸಾತಾನೂರ್, ಬೆಂಗಳೂರು-562149, ನಮ್ಮ ಅಪ್ರಾಪ್ತ ಮಗ **ತನಯ್ ಕೆ ಒಮೇಶ್** @ **ತನಯ್ ಕೆ ಓ** ಎಂಬ ಹೆಸರನ್ನು **ತನಯ್‌ಕೃಷ್ಣ ಬಿ ಎನ್** ಎಂಬುದಾಗಿ ಬದಲಾಯಿಸಿರುತ್ತೇವೆ ಮತ್ತು 27.01.2026 ರಂದು ಬೆಂಗಳೂರಿನ ನೋಟರಿಯಾದ ಎಂ.ಎಸ್. ಬಲ್ಲಾಳ ಇವರ ಸಮ್ಮುಖದಲ್ಲಿ ಪ್ರಾಮಾಣಿಕರಿಸಿದ್ದೇವೆ.

ಹೆಸರು ಬದಲಾವಣೆ
ನಾನು, ಭುವನ ಎಸ್., ಶ್ರೀ ಶಿವಪ್ರಕಾಶ್ ಬಿ. ರವರ ಪುತ್ರಿ, ನಿವಾಸಿ: ನಂ. 12, ಡೆಲ್ಲಿ ಪಬ್ಲಿಕ್ ಸ್ಕೂಲ್ ಎದುರು, ಕಂಟ್ರಿ ಕ್ಲಬ್ ಹಿಂಭಾಗ, ಸಾತಾನೂರ್, ಬೆಂಗಳೂರು-562149, ನಮ್ಮ ಅಪ್ರಾಪ್ತ ಮಗಳ **ರಿಷಿತಾ ಒಮೇಶ್** @ **ರಿಷಿತಾ ಓ** ಎಂಬ ಹೆಸರನ್ನು **ರಿಷಿತಾ ಭುವನ ಎನ್** ಎಂಬುದಾಗಿ ಬದಲಾಯಿಸಿರುತ್ತೇವೆ ಮತ್ತು 27.01.2026 ರಂದು ಬೆಂಗಳೂರಿನ ನೋಟರಿಯಾದ ಎಂ.ಎಸ್. ಬಲ್ಲಾಳ ಇವರ ಸಮ್ಮುಖದಲ್ಲಿ ಪ್ರಾಮಾಣಿಕರಿಸಿದ್ದೇವೆ.

ಪ್ರವಾಸ

Travel Agencies

ರಾಜಸ್ಥಾನ್ ಪ್ರವಾಸ 5/3/2026 9 ದಿನಗಳ, ಕಾಶಿ ಪ್ರವಾಸ 6/2/2026 4 ದಿನಗಳ, ನೇಪಾಳ ಪ್ರವಾಸ 18/2/26 9 ದಿನಗಳ: ಸುವರ್ಣಯಾತ್ರೆ: 6360146483/ 9008381022

ವೈವಾಹಿಕ

Brides Wanted

Kannada

ಬೆಂಗಳೂರಿನಲ್ಲಿರುವ 24 ವರ್ಷ ವಯಸ್ಸಿನ ಉದ್ಯೋಗಸ್ಥ ವರನಿಗೆ ಲಿಂಗಾಯತ ವಧು ಬೇಕಾಗಿದೆ. ಸಂಪರ್ಕಿಸಿ: 8431686838.

ಪಿಎಂಎಫ್‌ಎಂಇ ರಾಜ್ಯ ಮೊದಲು

ಬೆಂಗಳೂರು: ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣ ಉದ್ದಿಮೆ ಉನ್ನತೀಕರಣ ಯೋಜನೆ (ಪಿಎಂಎಫ್‌ಎಂಇ) ಅನುಷ್ಠಾನದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಸಾಲ ವಿತರಣೆಯಲ್ಲಿ ಕರ್ನಾಟಕದ ಜೊತೆಗೆ ತಮಿಳುನಾಡು ಕೂಡ ಮೊದಲ ಸ್ಥಾನ ಹಂಚಿಕೊಂಡಿದೆ.

ಕರ್ನಾಟಕದಲ್ಲಿ ಪಿಎಂಎಫ್‌ಎಂಇ ಯೋಜನೆಯ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ 'ಕರ್ನಾಟಕ ಆಹಾರ ಸಂಸ್ಕರಣೆ ಮತ್ತು ರಫ್ತು ನಿಗಮ'ವು (ಕೆಪೆಕ್) ಈ ಸಾಧನೆ ಮಾಡಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಹೇಳಿದ್ದಾರೆ.

2021-22ರಲ್ಲಿ ಶುರುವಾದ ಈ ಯೋಜನೆಯ ಅಡಿ ನೆರವು ಬಯಸಿ ಕೆಪೆಕ್‌ಗೆ ಜನವರಿ ಅಂತ್ಯಕ್ಕೆ 8,734 ಅರ್ಜಿಗಳು ಬಂದಿದ್ದವು. ಈ ಪೈಕಿ 7,872 ಅರ್ಜಿದಾರರಿಗೆ ಸಾಲ ವಿತರಿಸಲಾಗಿದೆ. 2025-26ರ ಆರ್ಥಿಕ ವರ್ಷದಲ್ಲೇ 8,162 ಅರ್ಜಿಗಳನ್ನು ಸ್ವೀಕರಿಸಿ 2,346 ಅರ್ಜಿಗಳಿಗೆ ಸಾಲ ಮಂಜೂರು ಮಾಡಲಾಗಿದೆ. 2,486 ಅರ್ಜಿಗಳು ಬ್ಯಾಂಕುಗಳಲ್ಲಿ ಪರಿಶೀಲನಾ ಹಂತದಲ್ಲಿವೆ. ಯೋಜನೆ ಪ್ರಾರಂಭವಾದ ಐದು ವರ್ಷಗಳಲ್ಲಿ ಇದು ಗರಿಷ್ಠ ಸಾಧನೆ ಎಂದು ಪ್ರಕಟಣೆ ತಿಳಿಸಿದೆ.

4,894 ಟನ್ ಸಾಬೂನು ಉತ್ಪಾದನೆ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವರಿ ತಿಂಗಳೊಂದರಲ್ಲೇ 4,894 ಟನ್ ಸಾಬೂನು ಮತ್ತು ಮಾರ್ಜಕಗಳನ್ನು ಉತ್ಪಾದಿಸಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮವು (ಕೆಎಸ್‌ಡಿಎಲ್) ತನ್ನ ಹಿಂದಿನ ದಾಖಲೆಗಳನ್ನು ಮುರಿದಿದೆ ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಮಂಗಳವಾರ ಮಾಧ್ಯಮ ಪ್ರಕಟಣೆ ನೀಡಿರುವ ಅವರು, 'ಕೆಎಸ್‌ಡಿಎಲ್ 2023ರ ನವೆಂಬರ್‌ನಲ್ಲಿ 4,144 ಟನ್, 2025ರ ಮಾರ್ಚ್‌ನಲ್ಲಿ 4,486 ಟನ್, 2025ರ ಡಿಸೆಂಬರ್‌ನಲ್ಲಿ 4,735 ಟನ್ ಸಾಬೂನು ಮತ್ತು ಮಾರ್ಜಕ ಉತ್ಪಾದಿಸಿದ್ದು ಈವರೆಗಿನ ಗರಿಷ್ಠವಾಗಿತ್ತು. ಈ ವರ್ಷದ ಜನವರಿಯಲ್ಲಿ 3,798 ಟನ್ ಸಾಬೂನು, 941 ಟನ್ ಮಾರ್ಜಕ ಮತ್ತು 155 ಟನ್‌ಗಳಷ್ಟು ಪ್ರಸಾದನ ಸಾಮಗ್ರಿಗಳನ್ನು ಉತ್ಪಾದಿಸಿದೆ' ಎಂದು ವಿವರಿಸಿದ್ದಾರೆ.

'ಉತ್ತರಭಾರತ ಮತ್ತು ವಿದೇಶಗಳಲ್ಲಿ ಮಾರುಕಟ್ಟೆ ವಿಸ್ತರಣೆ ಹಾಗೂ ಬ್ರ್ಯಾಂಡಿಂಗ್ ಬಲವರ್ಧನೆಗೆ ಕ್ರಮ ತೆಗೆದುಕೊಂಡ ಪರಿಣಾಮ ಕೆಎಸ್‌ಡಿಎಲ್ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿದೆ. ಇದರಿಂದಲೇ ಉತ್ಪಾದನೆ ಏರಿಕೆಯಾಗುತ್ತಿದೆ' ಎಂದಿದ್ದಾರೆ.

ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್. ನಾಡಗೌಡ, 'ನಮ್ಮ ನಿಗಮದ 45ಕ್ಕೂ ಹೆಚ್ಚು ಉತ್ಪನ್ನಗಳು ಮಾರುಕಟ್ಟೆಯಲ್ಲಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೊಸ ಉತ್ಪನ್ನಗಳನ್ನು ಪರಿಚಯಿಸಲಾಗುವುದು. 2030ರ ವೇಳೆಗೆ ವಾರ್ಷಿಕ ವಹಿವಾಟನ್ನು ₹5,000 ಕೋಟಿಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಪಿ.ಕೆ.ಎಂ., 'ಹಳೆಯ ಯಂತ್ರಗಳನ್ನೇ ಗರಿಷ್ಠ ಮಟ್ಟದಲ್ಲಿ ಬಳಕೆ ಮಾಡಿಕೊಂಡು ದಾಖಲೆ ಪ್ರಮಾಣದ ಉತ್ಪಾದನೆ ಮಾಡಲಾಗಿದೆ' ಎಂದಿದ್ದಾರೆ.

'ಆರ್‌ಎಸ್‌ಎಸ್ ಏಕತೆ ಬಯಸುತ್ತದೆ'

ಮುಂಬೈ (ಪಿಟಿಐ): ವಿಶ್ವವಿದ್ಯಾಲಯದ ಅನುದಾನ ಆಯೋಗದ(ಯುಜಿಸಿ) ಹೊಸ ನಿಯಮಗಳಿಗೆ ಸುಪ್ರೀಂ ಕೋರ್ಟ್ ತಡೆ ನೀಡಿರುವ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಆರ್‌ಎಸ್‌ಎಸ್ ಹಿರಿಯ ನಾಯಕರೊಬ್ಬರು, 'ಸಮಾಜದಲ್ಲಿ ಏಕತೆ ಇರಬೇಕೆಂದು ಸಂಘ ಬಯಸುತ್ತದೆ. ಅದನ್ನು ಕಾಪಾಡಲು ಸಂಘ ಸದಾ ಬದ್ಧವಾಗಿಯೇ ಹೆಜ್ಜೆ ಇಡುತ್ತದೆ' ಎಂದರು. ಸ್ವಾತಂತ್ರ್ಯ ಹೋರಾಟದಲ್ಲಿ ಆರ್‌ಎಸ್‌ಎಸ್ ಪಾತ್ರದ ಕುರಿತ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ವಿಭಾಗದ ಮುಖ್ಯಸ್ಥ ಸುನೀಲ್ ಅಂಬೇಕರ್, 'ದೇಶದ ಸಾರ್ವಭೌಮತೆ ಏಕತೆಗಾಗಿ ಆರ್‌ಎಸ್‌ಎಸ್ ಏನು ಮಾಡಿದೆ ಎಂಬುದನ್ನು ನೂರು ವರ್ಷದ ಬಳಿಕವೂ ವಿವರಿಸುವ ಅಗತ್ಯವಿಲ್ಲ ಎಂದರು.

ಅಡಿಕೆ ಧಾರಣೆ

ಶಿರಸಿ					
ಬೆಟ್ಟೆ	38218-51699	ಚಾಲಿ	43389-49739	ಹೊಸತು	26000-46000
ಬಿಳಿಗೋಟು	21399-41023	ಕೋಕ	22689-34109	**ಶಿವಮೊಗ್ಗ**	
ಚಾಲಿ	40119-46899	ಹೊಸಚಾಲಿ	38689-45699	ಸರಕು/ಹಸ	50159-97999
ಕೆಂಪುಗೋಟು	21000-38223	ಕೆಂಪುಗೋಟು	31900-37489	ಬೆಟ್ಟೆ	49000-66899
ರಾಶಿ	51219-56261	ರಾಶಿ	48459-55099	ರಾಶಿಇಡಿ	42009-56659
		ತಟ್ಟಿಬೆಟ್ಟೆ	40000-50499	ಗೊರಬಲು	19030-42301
ಸಿದ್ದಾಪುರ		**ಪುತ್ತೂರು**			
ಬಿಳಿಗೋಟು	27619-40869	ಕೋಕ	28000-36500		

ಮುಂಬೈ ಧಾರಣೆ (ಶೇಂಗಾ)

03-02-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1780 (1800)
ಒಂದು ವಾರದ ಡೆಲಿವರಿ	1775 (1795)
ಪಾಮ್ ವಾರದ ಡೆಲಿವರಿ	1318 (1308)
ಸೂರ್ಯಕಾಂತಿ ಎಣ್ಣೆ ಕಚ್ಚಾ	1525 (1520)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,52,000 (1,47,000)
ಬೆಳ್ಳಿ ಕೆ.ಜಿಗೆ	2,67,000 (2,54,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಅಮೆರಿಕದ ಕೃಷಿ ಉತ್ಪನ್ನ ರಫ್ತು ಹೆಚ್ಚಳ'

ನ್ಯೂಯಾರ್ಕ್ (ಪಿಟಿಐ): ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಬಹುದು. ಈ ಒಪ್ಪಂದವು ರಷ್ಯಾದ ಆಕ್ರಮಣವನ್ನು ಎದುರಿಸಲು ಸಹ ನೆರವಾಗುತ್ತದೆ ಎಂದು ಅಮೆರಿಕದ ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

'ವಿಶ್ವದ ಅತ್ಯಂತ ಹಳೆಯ ಮತ್ತು ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವು ಅಮೆರಿಕದೊಂದಿಗಿನ ವ್ಯಾಪಾರದ ತೊಡಕುಗಳನ್ನು ನಿವಾರಿಸಲು ಒಪ್ಪಿಕೊಂಡಿರುವುದು ಸಂತೋಷದ ವಿಷಯ' ಎಂದು ಸೆನೆಟ್ ವಿದೇಶಾಂಗ ಸಂಬಂಧಗಳ ಸಮಿತಿ ಅಧ್ಯಕ್ಷ ಸೆನೆಟರ್ ಜಿಮ್ ರಿಶ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಭಾರತವು ಅಮೆರಿಕದ ನಿಕಟ ಪಾಲುದಾರ. ಇಂಡೋ–ಪೆಸಿಫಿಕ್ ವಲಯದಲ್ಲಿ ಚೀನಾದ ದುರುದ್ದೇಶಪೂರಿತ ಪ್ರಭಾವವನ್ನು ಎದುರಿಸಲು ಭಾರತ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಹೊಸ ಒಪ್ಪಂದದಡಿ ಅಮೆರಿಕದ ವಸ್ತುಗಳನ್ನು ಖರೀದಿಸುವುದಾಗಿ ಭಾರತವು ಹೇಳಿದೆ. ಇದು ರಷ್ಯಾದ ಆಕ್ರಮಣವನ್ನು ಎದುರಿಸಲು ಮತ್ತು ಆ ದೇಶದಿಂದ ತೈಲ ಖರೀದಿಯನ್ನು ಕಡಿತಗೊಳಿಸುವ ಮೂಲಕ ಉಕ್ರೇನ್–ರಷ್ಯಾ ಯುದ್ಧ ಕೊನೆಗೊಳಿಸಲು ಸಹಾಯ ಮಾಡುತ್ತದೆ' ಎಂದಿದ್ದಾರೆ.

'ಕೃಷಿ ಉತ್ಪನ್ನಗಳನ್ನು ಭಾರತದ ಬೃಹತ್ ಮಾರುಕಟ್ಟೆಗೆ ರಫ್ತು ಮಾಡಬಹುದು. ಇದರಿಂದ ಉತ್ಪನ್ನಗಳ ಬೆಲೆ ಹೆಚ್ಚಲಿದೆ. ಗ್ರಾಮೀಣ ಅಮೆರಿಕಕ್ಕೆ ಹಣದ ಹರಿವನ್ನು ಹೆಚ್ಚಿಸುತ್ತದೆ' ಎಂದು ಅಮೆರಿಕದ ಕೃಷಿ ಕಾರ್ಯದರ್ಶಿ ಬ್ರೂಕ್ ರೋಲಿನ್ಸ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಸಮಗ್ರ ಒಪ್ಪಂದದತ್ತ ಇಟ್ಟಿರುವ ಮೊದಲ ಹೆಜ್ಜೆ'

ನ್ಯೂಯಾರ್ಕ್ (ಪಿಟಿಐ): 'ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದವು ಸಮಗ್ರ ದ್ವಿಪಕ್ಷೀಯ ಒಪ್ಪಂದದತ್ತ ಇಟ್ಟಿರುವ ಮೊದಲ ಹೆಜ್ಜೆ' ಎಂದು ಪ್ರಮುಖ ವಾಣಿಜ್ಯ ಸಂಸ್ಥೆಗಳು ಮತ್ತು ಚಿಂತಕರ ಚಾವಡಿ ಅಭಿಪ್ರಾಯಪಟ್ಟಿವೆ.

'ಈ ಒಪ್ಪಂದವು ಖಾಸಗಿ ವಲಯದ ಸಹಭಾಗಿತ್ವವನ್ನು ಹೆಚ್ಚಿಸಲು ಪೂರಕವಾದ ಮಾರ್ಗವನ್ನು ಸುಗಮಗೊಳಿಸುತ್ತದೆ' ಎಂದು ಹೇಳಿವೆ.

ಸುಜೇನ್ ಕ್ಲಾರ್ಕ್

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಯತ್ನಗಳು ಹಾಗೂ ರಾಯಭಾರಿಗಳಾದ ವಿನಯ್ ಕ್ವಾತ್ರಾ, ಸೆರ್ಜಿಯೊ ಗೊರ್ ಅವರ ಶ್ರಮ ಶ್ಲಾಘನೀಯ' ಎಂದು ಅಮೆರಿಕದ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷೆ ಸುಜೇನ್ ಕ್ಲಾರ್ಕ್ ಅವರು ತಿಳಿಸಿದ್ದಾರೆ.

'ಕಾಂಗ್ರೆಸ್ ಭಾರತದ ಪರವೋ, ವಿರುದ್ಧವೋ?'

'ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಭಾರತದ ಹಿತಾಸಕ್ತಿ ಪರವಾಗಿವೆಯೇ ಅಥವಾ ವಿರುದ್ಧವಾಗಿವೆಯೇ' ಎಂದು ಬಿಜೆಪಿ ಸಂಸದ ಅನುರಾಗ್ ಠಾಕೂರ್ ಅವರು ಪ್ರಶ್ನಿಸಿದರು.

ರಾಹುಲ್ ಗಾಂಧಿ ಹೇಳಿಕೆ ನೀಡಿದ ಬೆನ್ನಲ್ಲೇ ಸಂಸತ್ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಮೆರಿಕವು ಭಾರತದ ಮೇಲೆ ಸುಂಕ ವಿಧಿಸಿದಾಗ ಹಲವು ವಿರೋಧ ಪಕ್ಷಗಳು ಸಂಭ್ರಮಿಸಿದ್ದವು. ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟದೊಂದಿಗೆ ಒಪ್ಪಂದ ಮಾಡಿಕೊಂಡಾಗಲೂ ಪ್ರಶ್ನಿಸಿದ್ದವು. ಹೀಗಾಗಿ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಭಾರತದ ಹಿತಾಸಕ್ತಿ ಪರವಾಗಿವೆಯೇ ಅಥವಾ ವಿರುದ್ಧವಾಗಿವೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ' ಎಂದು ಹೇಳಿದರು.

ಇಂಥ ಭಾರತ ವಿರೋಧಿ ಮನಃಸ್ಥಿತಿಯು ರಾಹುಲ್ ಗಾಂಧಿ, ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಅವರು ಸಂಸತ್ ಸರಿಯಾಗಿ ಕಾರ್ಯನಿರ್ವಹಿಸಲೂ ಬಿಡುವುದಿಲ್ಲ ಎಂದು ಹೇಳಿದರು.

'ಕೃಷಿ, ಹೈನುಗಾರಿಕೆ ರಕ್ಷಣೆಗೆ ಬದ್ಧ'

ಒಂದನೇ ಪುಟದಿಂದ...

ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿರುವ ಕಾರಣಕ್ಕೆ ಭಾರತದ ಸರಕುಗಳ ಮೇಲೆ ವಿಧಿಸಿರುವ ಶೇ 25ರಷ್ಟು ಹೆಚ್ಚುವರಿ ಸುಂಕವನ್ನು ಕೈಬಿಡಲು ಅಮೆರಿಕ ಒಪ್ಪಿದೆ ಎಂದು ಮೂಲಗಳು ಹೇಳಿವೆ. ಅಲ್ಲದೆ, ಪ್ರತಿಸುಂಕದ ರೂಪದಲ್ಲಿ ವಿಧಿಸಿದ್ದ ಶೇ 25ರಷ್ಟು ಸುಂಕವನ್ನು ಶೇ 18ಕ್ಕೆ ತಗ್ಗಿಸಲು ಒಪ್ಪಿದೆ ಎಂದು ಗೊತ್ತಾಗಿದೆ.

'ಹೀಗಾಗಿ ಭಾರತದ ಸರಕುಗಳ ಮೇಲಿನ ಸುಂಕದ ಒಟ್ಟು ಪ್ರಮಾಣ ಶೇ 18ರಷ್ಟಾಗಲಿದೆ' ಎಂದು ಮೂಲವೊಂದು ಮಾಹಿತಿ ನೀಡಿದೆ.

ಚರ್ಮದ ಉತ್ಪನ್ನಗಳು ಮತ್ತು ಪಾದರಕ್ಷೆ, ಸಿಗಡಿ ಸೇರಿದಂತೆ ವಿವಿಧ ಸಮುದ್ರ ಉತ್ಪನ್ನಗಳು, ರಾಸಾಯನಿಕ, ಪ್ಲಾಸ್ಟಿಕ್, ರಬ್ಬರ್, ಗೃಹ ಅಲಂಕಾರ ಉತ್ಪನ್ನಗಳು ಹಾಗೂ ನೆಲಹಾಸುಗಳು, ಯಂತ್ರೋಪಕರಣಗಳು, ಆಯ್ದ ಕೃಷಿ ಉತ್ಪನ್ನಗಳು ಅಮೆರಿಕದ ಮಾರುಕಟ್ಟೆಯನ್ನು ಶೇ 18ರಷ್ಟು ಸುಂಕದೊಂದಿಗೆ ಪ್ರವೇಶಿಸಬಹುದು. 'ಈ ಉತ್ಪನ್ನಗಳು ನಮ್ಮ ಪ್ರತಿಸ್ಪರ್ಧಿ ದೇಶಗಳ ಉತ್ಪನ್ನಗಳಿಗಿಂತ ಕಡಿಮೆ ಸುಂಕದೊಂದಿಗೆ ಅಮೆರಿಕದ ಮಾರುಕಟ್ಟೆ ಪ್ರವೇಶಿಸುತ್ತವೆ. ಇದರಿಂದಾಗಿ ತಿರುಪ್ಪೂರು (ಉಡುಪು), ಸೂರತ್‌ನಂತಹ (ಹವಳ ಮತ್ತು ಆಭರಣ) ಕ್ಲಸ್ಟರ್‌ಗಳು ಮತ್ತೆ ಲಾಭ ಮಾಡಿಕೊಳ್ಳಬಹುದು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸುಂಕ ಕಡಿತ ಸ್ವಾಗತ: ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕವನ್ನು ಶೇ 18ಕ್ಕೆ ಇಳಿಸುವ ಅಮೆರಿಕದ ನಿರ್ಧಾರವನ್ನು ಸಾಗರ ಆಹಾರೋತ್ಪನ್ನ ಮತ್ತು ಅಕ್ಕಿ ರಫ್ತುದಾರರು ಸ್ವಾಗತಿಸಿದ್ದಾರೆ.

'ಈಗ ಸುಂಕ ಇಳಿಕೆಯಿಂದಾಗಿ ಸಾಗರ ಆಹಾರೋತ್ಪನ್ನಗಳ ರಫ್ತು ಚೇತರಿಸಿಕೊಳ್ಳುವ ನಿರೀಕ್ಷೆಯಿದೆ' ಎಂದು ಭಾರತೀಯ ಸಾಗರ ಆಹಾರೋತ್ಪನ್ನ ರಫ್ತುದಾರರ ಸಂಘ (ಎಸ್‌ಇಎಐ) ಮಂಗಳವಾರ ತಿಳಿಸಿದೆ.

> **ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದವು ಭಾರತದ ಪಾಲಿಗೆ ಒಳ್ಳೆಯ ಸಂಗತಿ. ನಮಗೆ ಅಮೆರಿಕದ ವಿಸ್ತೃತ ಮಾರುಕಟ್ಟೆಯ ಅಗತ್ಯವಿದೆ. ಆದರೆ ಸಂಭ್ರಮಕ್ಕೂ ಮೊದಲು ಒಪ್ಪಂದದ ಕುರಿತ ಎಲ್ಲ ಮಾಹಿತಿ ಬಹಿರಂಗವಾಗಬೇಕು**
>
> **ಶಶಿ ತರೂರ್,** ಕಾಂಗ್ರೆಸ್ ಸಂಸದ

ರಾಜ್ಯಸಭೆ: ವಿಪಕ್ಷಗಳಿಂದ ಸಭಾತ್ಯಾಗ

ನವದೆಹಲಿ (ಪಿಟಿಐ): ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಮತ್ತು ಈ ಕುರಿತ ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷಗಳ ಹಲವು ಸದಸ್ಯರು ಮಂಗಳವಾರ ರಾಜ್ಯಸಭೆಯ ಕಲಾಪವನ್ನು ಬಹಿಷ್ಕರಿಸಿ ಹೊರನಡೆದರು.

ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ಬಗ್ಗೆ ಪ್ರಸ್ತಾಪಿಸಿದರು. 'ಒಪ್ಪಂದದ ಕುರಿತ ಮಾಹಿತಿಯನ್ನು ಅಮೆರಿಕದಿಂದ ತಿಳಿದುಕೊಳ್ಳಬೇಕಾಯಿತು' ಎಂದರು. ವಿಪಕ್ಷಗಳ ಸದಸ್ಯರು ಪ್ರತಿಭಟನೆ ಆರಂಭಿಸುತ್ತಿದ್ದಂತೆಯೇ, ಸದನದ ನಾಯಕ ಜೆ.ಪಿ.ನಡ್ಡಾ ಅವರು, 'ಭಾರತದ ಸರಕುಗಳ ಮೇಲಿನ ಸುಂಕ ಇಳಿಕೆ ಬಗ್ಗೆ ಅಮೆರಿಕ ಅಧ್ಯಕ್ಷರು ಸಾಮಾಜಿಕ ಮಾಧ್ಯಮದ ಮೂಲಕ ಘೋಷಿಸಿದ್ದಾರೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ' ಎಂದರು.

'ವಿರೋಧ ಪಕ್ಷಗಳ ಹತಾಶೆಯ ಕಟ್ಟೆ ಒಡೆದಿದೆ. ಒಳ್ಳೆಯ ಸಂಗತಿಗಳಲ್ಲೂ ಅವುಗಳಿಗೆ ಕೆಟ್ಟದ್ದು ಕಾಣುತ್ತಿದೆ' ಎಂದು ದೂರಿದರು.

'ಭಾರತ–ಅಮೆರಿಕ ಒಪ್ಪಂದದ ಬಗ್ಗೆ ಚರ್ಚಿಸಲು ಸರ್ಕಾರ ಸಿದ್ಧವಿದೆ. ಈ ಕುರಿತ ಎಲ್ಲ ಮಾಹಿತಿಯನ್ನೂ ನೀಡಲಿದೆ ಎಂದು ಭರವಸೆ ನೀಡುತ್ತೇನೆ. ಸರ್ಕಾರ ಈ ಒಪ್ಪಂದದ ಬಗ್ಗೆ ಸ್ವಯಂ ಪ್ರೇರಿತ ಹೇಳಿಕೆಯನ್ನು ಬಿಡುಗಡೆ ಮಾಡಲಿದೆ' ಎಂದು ತಿಳಿಸಿದರು.

ಈ ಮಧ್ಯೆ, ವಿರೋಧ ಪಕ್ಷಗಳ ಸದಸ್ಯರು, ಭಾರತದ ಹಿತಾಸಕ್ತಿಯನ್ನು ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿ, ಘೋಷಣೆ ಕೂಗುತ್ತಾ ಸದನದಿಂದ ಹೊರನಡೆದರು.

ಒತ್ತಡಕ್ಕೆ ಮಣಿದ ಮೋದಿ: ರಾಹುಲ್

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಒತ್ತಡಕ್ಕೆ ಮಣಿದು ಭಾರತ–ಅಮೆರಿಕ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಿದ್ದಾರೆ. ಈ ಮೂಲಕ ಭಾರತೀಯ ರೈತರ ಪರಿಶ್ರಮವನ್ನು 'ಮಾರಾಟ' ಮಾಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

'ನಾಲ್ಕು ತಿಂಗಳು ನನೆಗುದಿಗೆ ಬಿದ್ದಿದ್ದ ವ್ಯಾಪಾರ ಒಪ್ಪಂದವು ಕಳೆದ ರಾತ್ರಿ ಅಂತಿಮಗೊಂಡಿದ್ದು ಏಕೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ತೀವ್ರ ಒತ್ತಡವಿದೆ' ಎಂದು ಅವರು ಹೇಳಿದರು.

ಟ್ರಂಪ್‌ಗೆ ಮೋದಿ ಶರಣು: ಕಾಂಗ್ರೆಸ್

ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ಜೊತೆಗಿನ ಒಪ್ಪಂದಗಳ ವಿಚಾರವಾಗಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್ತು ಮತ್ತು ದೇಶದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್ ಮಂಗಳವಾರ ಆಗ್ರಹಿಸಿದೆ.

ಇದೇ ಸಂದರ್ಭದಲ್ಲಿ, 'ನರೇಂದ್ರ ಮೋದಿ ಅವರು ಭಾರತದ ರೈತರ ಹಿತಾಸಕ್ತಿಯನ್ನು ಬಲಿಕೊಟ್ಟು ಡೊನಾಲ್ಡ್ ಟ್ರಂಪ್ ಅವರಿಗೆ ಸಂಪೂರ್ಣವಾಗಿ ಶರಣಾಗಿದ್ದಾರೆ' ಎಂದು ಆರೋಪಿಸಿದೆ. 'ಭಾರತವು ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸಿ, ಅಮೆರಿಕ ಮತ್ತು ವೆನೆಜುವೆಲಾದಿಂದ ಖರೀದಿಸಲಿದೆ ಎಂದೂ ಹೇಳಲಾಗಿದೆ. ನಿಜಕ್ಕೂ ಭಾರತ ಈ ಷರತ್ತಿಗೆ ಒಪ್ಪಿಗೆ ನೀಡಿದೆಯೇ' ಎಂದು ಪ್ರಶ್ನಿಸಿದೆ.

ಮಾರ್ಚ್ 19ಕ್ಕೇ ‘ಧುರಂಧರ್: ದಿ ರಿವೇಂಜ್’

ರಣ್‌ವೀರ್ ಸಿಂಗ್

ಯಶ್ ನಟನೆಯ ‘ಟಾಕ್ಸಿಕ್’ ಬಿಡುಗಡೆ ದಿನದಂದೇ ರಣ್‌ವೀರ್ ಸಿಂಗ್ ನಟನೆಯ ‘ಧುರಂಧರ್’ ಸಿನಿಮಾದ ಸೀಕ್ವೆಲ್ ‘ಧುರಂಧರ್: ದಿ ರಿವೇಂಜ್’ ಬಿಡುಗಡೆಯಾಗುವುದು ಖಚಿತವಾಗಿದೆ.

ಮಂಗಳವಾರ (ಫೆ.3) ಚಿತ್ರದ ಫಸ್ಟ್‌ಲುಕ್ ಹಾಗೂ ಟೀಸರ್ ಬಿಡುಗಡೆ ಮಾಡಿರುವ ಚಿತ್ರತಂಡ ಬಿಡುಗಡೆ ದಿನಾಂಕವನ್ನೂ ಘೋಷಿಸಿದೆ. ‘ಉರಿ’ ಸಿನಿಮಾ ಖ್ಯಾತಿಯ ನಿರ್ದೇಶಕ ಆದಿತ್ಯ ಧರ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸಿನಿಮಾದ ಮೊದಲ ಭಾಗ 2025ರ ಡಿಸೆಂಬರ್ 5ರಂದು ತೆರೆಕಂಡಿತ್ತು. ವಿಶ್ವದಾದ್ಯಂತ ₹1300 ಕೋಟಿಗೂ ಅಧಿಕ ಗಳಿಕೆ ಮಾಡಿರುವ ಈ ಸಿನಿಮಾ ಇತ್ತೀಚೆಗಷ್ಟೇ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಿತ್ತು. ಅಕ್ಷಯ್ ಖನ್ನಾ, ಅರ್ಜುನ್ ರಾಂಪಾಲ್, ಆರ್.ಮಾಧವನ್ ಮತ್ತು ರಾಕೇಶ್ ಬೇಡಿ ನಟಿಸಿರುವ ಈ ಸಿನಿಮಾದ ಮೊದಲ ಭಾಗವು ಅಕ್ಷಯ್ ಖನ್ನಾ ಅವರು ನಿಭಾಯಿಸಿದ ‘ರೆಹಮಾನ್ ಡಕೈತ್’ ಪಾತ್ರದ ಸಾವಿನಿಂದ ಕೊನೆಗೊಂಡಿತ್ತು.

ಕರಾಚಿಯ ಲಿಯಾರಿ ನಗರದಲ್ಲಿ ನಡೆಯುವ ಘಟನೆಗಳ ಸುತ್ತ ಈ ಸಿನಿಮಾದ ಕಥೆ ಹೆಣೆಯಲಾಗಿದೆ. ಕಂದಹಾರ್ ವಿಮಾನ ಹೈಜಾಕ್, 2001ರ ಸಂಸತ್ ಭವನದ ಮೇಲಿನ ಉಗ್ರರ ದಾಳಿ ಬೆನ್ನಲ್ಲೇ ಭಾರತ ಕೈಗೊಂಡ ರಹಸ್ಯ ಕಾರ್ಯಾಚರಣೆಯಂತೆ ಸಿನಿಮಾದ ಕಥೆಯಿದ್ದು, ‘ಹಮ್ಜ ಅಲಿ ಮಜಾರಿ’ ಎಂಬ ಪಾತ್ರದಲ್ಲಿ ರಣ್‌ವೀರ್ ಸಿಂಗ್ ನಟಿಸಿದ್ದಾರೆ. ಸೀಕ್ವೆಲ್ ಹಿಂದಿ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಾಣಲಿದೆ. ಆದಿತ್ಯ ಧರ್ ಹಾಗೂ ಅವರ ಅಣ್ಣ ಲೋಕೇಶ್ ಧರ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಜ್ಯೋತಿ ದೇಶಪಾಂಡೆ ಹಾಗೂ ಜಿಯೊ ಸ್ಟುಡಿಯೊಸ್ ಕೈಜೋಡಿಸಿದೆ.

ಕನ್ನಡಕ್ಕೆ ಬಂದ ಐಶ್ವರ್ಯಾ ಶರ್ಮಾ

ಐಶ್ವರ್ಯಾ ಶರ್ಮಾ

ಬೇರೆ ಭಾಷೆ ಸಿನಿಮಾಗಳಲ್ಲಿ ಜನಪ್ರಿಯರಾದ ನಟಿಯರನ್ನು ಸ್ಯಾಂಡಲ್‌ವುಡ್‌ಗೆ ಕರೆತರುವ ರೂಢಿ ಮೊದಲಿನಿಂದಲೂ ಇದೆ. ಆ ರೀತಿ ಬಂದು ಕನ್ನಡದಲ್ಲಿ ಯಶಸ್ವಿಯಾದ ನಟಿಯರು ಸಾಕಷ್ಟಿದ್ದಾರೆ. ಇದೀಗ ತಮಿಳು ನಟಿ ಐಶ್ವರ್ಯಾ ಶರ್ಮಾ ಕೂಡ ಸ್ಯಾಂಡಲ್‌ವುಡ್‌ನಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ಕಳೆದ ವರ್ಷ ತೆರೆಕಂಡ ತಮಿಳಿನ ‘ಡ್ಯೂಡ್’ ಚಿತ್ರದ ಮೂಲಕ ಗುರುತಿಸಿಕೊಂಡಿರುವ ಐಶ್ವರ್ಯಾ ಶರ್ಮಾ ಕನ್ನಡದಲ್ಲಿ ಇನ್ನೂ ಹೆಸರಿಡದ ಸಿನಿಮಾವೊಂದರಲ್ಲಿ ನಟಿಸಲಿದ್ದಾರೆ. ಶಾನ್ವಿ ಎಂಟರ್‌ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಸಿನಿಮಾಕ್ಕೆ ಲಿಯೋ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

‘ಶಾನ್ವಿ ಎಂಟರ್‌ಟೈನ್ಮೆಂಟ್ ಈ ಹಿಂದೆ ಪ್ರಜ್ವಲ್ ದೇವರಾಜ್ ಅಭಿನಯದ ‘ರಾಕ್ಷಸ’ ಸೇರಿದಂತೆ ಕೆಲ ಸಿನಿಮಾಗಳನ್ನು ನಿರ್ಮಿಸಿತ್ತು. ನಿರ್ಮಾಣ ಸಂಸ್ಥೆಯ ನಾಲ್ಕನೆ ಚಿತ್ರದಲ್ಲಿ ಐಶ್ವರ್ಯಾ ನಾಯಕಿಯಾಗಿದ್ದು, ಉಳಿದ ಪಾತ್ರವರ್ಗವನ್ನು ಶೀಘ್ರದಲ್ಲಿಯೇ ಘೋಷಿಸುತ್ತೇವೆ. ಈ ತಿಂಗಳಿನಿಂದಲೇ ಚಿತ್ರೀಕರಣ ಪ್ರಾರಂಭವಾಗಲಿದೆ’ ಎಂದು ನಿರ್ಮಾಪಕ ದೀಪು ಬಿ.ಎಸ್ ಹೇಳಿದ್ದಾರೆ.

ಚಿತ್ರಕ್ಕೆ ರವೀಶ್ ಆರ್.ಸಿ ಅವರ ಕಥೆ, ಚಿತ್ರಕಥೆ ಇದೆ.

‘ಲೋ ನವೀನ’ ಹಾಡು ಬಿಡುಗಡೆ ಮಾಡಿದ ಸೋನಲ್

ವರ್ಷ, ನವೀನ್ ಸಜ್ಜು

ಗಾಯಕ ನವೀನ್ ಸಜ್ಜು ನಾಯಕರಾಗಿ ನಟಿಸಿರುವ ಮೊದಲ ಸಿನಿಮಾ ‘ಲೋ ನವೀನ’ದ ಎರಡನೇ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ.

ಜನಪದ ಶೈಲಿಯಲ್ಲಿರುವ ಚಿತ್ರದ ‘ಕೋಣಾಣೆ’ ಎಂಬ ಹಾಡನ್ನು ಚಿತ್ರತಂಡ ಕಳೆದ ಡಿಸೆಂಬರ್‌ನಲ್ಲಿ ಬಿಡುಗಡೆಗೊಳಿಸಿತ್ತು. ಇದೀಗ ‘ಕೈ ತೊಳ್ಕೊಂಡ್ ಮುಟ್ಟಂಗವ್ಳೆ ನನ್ ಹುಡ್ಗಿ..’ ಎಂಬ ಹಾಡನ್ನು ನಟಿ ಸೋನಲ್ ಮೊಂತೆರೋ ಬಿಡುಗಡೆ ಮಾಡಿದ್ದಾರೆ.

‘ನಾನು ಹಳ್ಳಿ ಪರಿಸರದಲ್ಲೇ ಬೆಳೆದವನು. ಗಾಯಕನಾಗಿದ್ದ ನಾನು ಈ ಚಿತ್ರದ ಮೂಲಕ ನಾಯಕನಾಗಿದ್ದೇನೆ. ಗ್ರಾಮೀಣ ಸೊಗಡಿನ ಕಥೆ ಕೇಳಿ ಇಷ್ಟಪಟ್ಟ ಬೆನ್ ಚಿಕ್ಕಸ್ವಾಮಿ ಹಾಗೂ ಕೀರ್ತಿಸ್ವಾಮಿ ಈ ಸಿನಿಮಾ ನಿರ್ಮಾಣಕ್ಕೆ ಮುಂದಾದರು. ಚಿತ್ರಕ್ಕೆ ನಾನೇ ಸಂಗೀತ ನೀಡಿದ್ದೇನೆ. ಈಗ ಬಿಡುಗಡೆಯಾಗಿರುವ ಹಾಡು ನಾಯಕಿಯನ್ನು ಪರಿಚಯಿಸುವ ಗೀತೆಯಾಗಿದೆ. ಉಳಿದ ಹಾಡುಗಳು ಸದ್ಯದಲ್ಲೇ ಬಿಡುಗಡೆಯಾಗಲಿದೆ’ ಎಂದಿದ್ದಾರೆ ನವೀನ್ ಸಜ್ಜು.

ಸಿನಿಮಾವನ್ನು ಧನುರ್ಧಾರಿ ಪವನ್ ನಿರ್ದೇಶಿಸಿದ್ದಾರೆ. ಚಿತ್ರಕ್ಕೆ ರಿಷಿಕೇಶ್ ಛಾಯಾಚಿತ್ರಗ್ರಹಣ, ವಿನಾಯಕ್ ಆಚಾರ್ಯ ನೃತ್ಯ ನಿರ್ದೇಶನವಿದೆ.

ಚಿಟಿಕೆ ಸುದ್ದಿ

ಕಲಬೆರಕೆ ತುಪ್ಪ ತನಿಖಾ ಆಯೋಗಕ್ಕೆ ಸಂಪುಟ ಒಪ್ಪಿಗೆ

ಹೈದರಾಬಾದ್: ತಿರುಪತಿ ಲಡ್ಡು ಪ್ರಸಾದ ಕಲಬೆರಕೆ ತುಪ್ಪ ಪ್ರಕರಣದ ಸಂಚುಕೋರರನ್ನು ಪತ್ತೆ ಹಚ್ಚಲು ತನಿಖಾ ಆಯೋಗ ರಚಿಸಲು ಆಂಧ್ರಪ್ರದೇಶ ಸಂಪುಟ ಮಂಗಳವಾರ ಒಪ್ಪಿಗೆ ನೀಡಿದೆ. ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸುಪ್ರೀಂ ಕೋರ್ಟ್ ನೇಮಿಸಿರುವ ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ಈ ಪ್ರಕರಣದ ತನಿಖೆ ನಡೆಸಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ತುಪ್ಪದಲ್ಲಿ ಪ್ರಾಣಿಗಳ ಕೊಬ್ಬು, ಪಾಮ್ ಆಯಿಲ್ ಕಲಬೆರಕೆ ಮಾಡಿರುವುದನ್ನು ದೃಢಪಡಿಸಲಾಗಿದೆ.

ತುಪ್ಪದಲ್ಲಿ ಆಗಿರುವ ಕಲಬೆರಕೆ, ಪೂರೈಕೆ ಅಕ್ರಮ, ಟೆಂಡರ್ ನಿಯಮಗಳನ್ನು ಸಡಿಲಗೊಳಿಸಿರುವುದು, ಲಡ್ಡು ಪ್ರಸಾದದ ಗುಣಮಟ್ಟ ಪರೀಕ್ಷೆಯಲ್ಲಿ ಆಗಿರುವ ಲೋಪಗಳು, ನಕಲಿ ದಾಖಲೆ ಸೃಷ್ಟಿಯ ಬಗ್ಗೆಯೂ ಎಸ್‌ಐಟಿ ವರದಿ ನೀಡಿದೆ. ಈ ಅಂಶಗಳನ್ನು ಆಧರಿಸಿ ತನಿಖಾ ಆಯೋಗ ರಚಿಸಲು ಸಂಪುಟ ನಿರ್ಧಾರ ತೆಗೆದುಕೊಂಡಿದೆ ಎಂದು ಹಣಕಾಸು ಸಚಿವ ಪೈಯಾವುಲ ಕೇಶವ್ ಸಂಪುಟ ಸಭೆಯ ಬಳಿಕ ತಿಳಿಸಿದರು.

ಜನರನ್ನು ಪ್ರಚೋದಿಸಿದ್ದಕ್ಕೆ ಬಂಧನ: ಕೇಂದ್ರ

ಸೋನಮ್ ವಾಂಗ್ಚುಕ್

ನವದೆಹಲಿ (ಪಿಟಿಐ): ‘ದೇಶದ ಭದ್ರತೆಗೆ ಸಂಬಂಧಿಸಿ ಸೂಕ್ಷ್ಮ ಪ್ರದೇಶವಾಗಿರುವ ಲಡಾಖ್‌ನ ಗಡಿ ಪ್ರದೇಶದಲ್ಲಿನ ಜನರನ್ನು ಪ್ರಚೋದಿಸಿದ್ದಕ್ಕಾಗಿ ಪರಿಸರ ಕಾರ್ಯಕರ್ತ ಸೋನಮ್ ವಾಂಗ್ಚುಕ್ ಅವರನ್ನು ಬಂಧಿಸಲಾಗಿದೆ’ ಎಂದು ಕೇಂದ್ರ ಸರ್ಕಾರ ಮತ್ತು ಲಡಾಖ್ ಆಡಳಿತ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ರಾಷ್ಟ್ರೀಯ ಭದ್ರತಾ ಕಾಯ್ದೆಯ ಅನ್ವಯ ವಾಂಗ್ಚುಕ್ ಅವರನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಪತ್ನಿ ಗೀತಾಂಜಲಿ ಆಂಗ್ಮೊ ಅವರ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಪಿ.ವಿ. ವರಾಳೆ ಅವರ ಪೀಠವು ನಡೆಸಿತು.

‘ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿ ತೆಗೆದುಕೊಳ್ಳಬೇಕಾದ ಎಲ್ಲ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡೇ ವಾಂಗ್ಚುಕ್ ಅವರನ್ನು ಬಂಧಿಸಲಾಗಿದೆ’ ಎಂದು ಕೇಂದ್ರ ಸರ್ಕಾರ ವಾದಿಸಿತು.

‘ವ್ಯಾಪಾರ ಒಪ್ಪಂದ ಅತಿ ದೊಡ್ಡ ನಿರ್ಧಾರ’

ಎನ್‌ಡಿಎ ಸಂಸದರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

ಮುಖ್ಯಾಂಶಗಳು
- ವ್ಯಾಪಾರ ಒಪ್ಪಂದ ಯಶಸ್ಸಿಗೆ ಮೆಚ್ಚುಗೆ
- ಒಳ್ಳೆಯ ಕೆಲಸಗಳನ್ನು ಮುಂದುವರಿಸಿ
- ಎನ್‌ಡಿಎ ಸಂಸದರಿಗೆ ಪ್ರಧಾನಿ ಮೋದಿ ಕರೆ

ನವದೆಹಲಿ (ಪಿಟಿಐ): ‘ಭಾರತ ಹಾಗೂ ಅಮೆರಿಕ ನಡುವಿನ ವ್ಯಾಪಾರ ಒಪ್ಪಂದವು ಅತಿ ದೊಡ್ಡ ನಿರ್ಧಾರವಾಗಿದ್ದು, ದೇಶದ ಪ್ರತಿಯೊಬ್ಬರಿಗೂ ಇದರಿಂದ ನೆರವಾಗಲಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ದೇಶದ ಜನರ ಒಳಿತಿಗಾಗಿಯೇ ಕೆಲಸ ಮಾಡಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಸಂಸತ್ ಭವನದಲ್ಲಿ ಮಂಗಳವಾರ ನಡೆದ ಎನ್‌ಡಿಎ ಸಂಸದರ ಸಭೆಯಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ಐರೋಪ್ಯ ಒಕ್ಕೂಟ ಹಾಗೂ ಅಮೆರಿಕದ ಜೊತೆಗೆ ವ್ಯಾಪಾರ ಒಪ್ಪಂದ ಪೂರ್ಣಗೊಳಿಸಿದ್ದಕ್ಕೆ ಎನ್‌ಡಿಎ ಮಿತ್ರಪಕ್ಷಗಳು ಪ್ರಧಾನಿ ಮೋದಿ ಅವರಿಗೆ ಧನ್ಯವಾದ ಸಲ್ಲಿಸಿವೆ. ಇದರಿಂದ ಭಾರತದ ಉತ್ಪಾದಕರು, ರಫ್ತುದಾರರು ಹಾಗೂ ಉದ್ಯಮಿಗಳಿಗೂ ನೆರವಾಗಲಿದೆ ಎಂದು ಅಭಿಪ್ರಾಯಪಟ್ಟಿವೆ.

‘ಈ ಒಪ್ಪಂದದ ಕುರಿತಂತೆ ಇಡೀ ದೇಶದಲ್ಲಿ ಉತ್ಸಾಹವಿದೆ’ ಎಂದು ಕೇಂದ್ರ ಸಂಸದೀಯ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ 9 ಅಂಶಗಳ ವ್ಯಾಪಾರ ಒಪ್ಪಂದ ಮುಕ್ತಾಯಗೊಂಡಿರುವುದಕ್ಕೆ ಸಂಸದರಲ್ಲಿ ಹೆಚ್ಚಿನ ಉತ್ಸಾಹ ತುಂಬಿದೆ. ಇದುವರೆಗೆ ವಿಶ್ವದ 39 ದೇಶಗಳ ಜೊತೆಗೆ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಇದು ನಿಜಕ್ಕೂ ಐತಿಹಾಸಿಕ. ಈ ಎಲ್ಲ 39 ದೇಶಗಳು ಕೂಡ ಅಭಿವೃದ್ಧಿ ಹೊಂದಿದ ದೇಶಗಳೇ ಆಗಿವೆ. ಇಡೀ ದೇಶದಲ್ಲಿ ಉತ್ತಮ ವಾತಾವರಣವಿದೆ’ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

> ಭಾರತದ ಆರ್ಥಿಕ ಪಾಲುದಾರಿಕೆಯನ್ನು ಬಲಪಡಿಸುವ, ವಿಕಸಿತ ಭಾರತದ ದೂರದೃಷ್ಟಿಯನ್ನು ಮುನ್ನಡೆಸುವ ಸಾಮೂಹಿಕ ಬದ್ಧತೆಯನ್ನು ಎನ್‌ಡಿಎ ಸಭೆಯು ಪ್ರತಿಬಿಂಬಿಸಿತು
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ನವದೆಹಲಿಯ ಸಂಸತ್ ಭವನದಲ್ಲಿ ಮಂಗಳವಾರ ನಡೆದ ಎನ್‌ಡಿಎ ಸಂಸದೀಯ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಜೆ.ಪಿ.ನಡ್ಡಾ, ಅನುಪ್ರಿಯಾ ಪಟೇಲ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

‘ಹೆಚ್ಚು ಉತ್ಸಾಹದಿಂದ ಕೆಲಸ ಮಾಡಿ’

‘ಒಳ್ಳೆಯ ಕೆಲಸಗಳಿಂದ ಒಂದಾದ ನಂತರ ಒಂದು ಚುನಾವಣೆಯಲ್ಲಿ ಎನ್‌ಡಿಎ ಮಿತ್ರಕೂಟವು ಗೆಲುವು ಪಡೆಯುತ್ತಿದೆ. ಚುನಾವಣೆಗಳಿಂದ ಗೆಲುವಿಗೆ ತೃಪ್ತರಾಗದೇ ಕೆಲಸ ಮುಂದುವರಿಸಬೇಕು. ತಳಮಟ್ಟದಲ್ಲಿ ನಿಂತು ಜನರ ಕೆಲಸ ಮಾಡಿದಾಗ ಮಾತ್ರ ಚುನಾವಣೆಗಳನ್ನು ಗೆಲ್ಲಲು ಸಾಧ್ಯ ಎಂದು ಮೋದಿ ಅವರು ಮನವರಿಕೆ ಮಾಡಿಕೊಟ್ಟರು’ ಎಂದು ಸಚಿವ ಕಿರಣ್ ರಿಜಿಜು ತಿಳಿಸಿದರು.

ಶಿವಸೇನಾ ಸಂಸದ ಮಿಲಿಂದ್ ದೇವರಾ ಮಾತನಾಡಿ, ‘ಅದು ವ್ಯಾಪಾರ ಒಪ್ಪಂದವೇ ಇರಲಿ, ಬಜೆಟ್ ವಿಚಾರವೇ ಆಗಿರಲಿ, ಭಾರತದ ಹಿತಕ್ಕಾಗಿ ಸರ್ಕಾರ ಕೆಲಸ ಮಾಡುತ್ತಿರುವ ಕುರಿತು ಪ್ರಧಾನಿ ಮೋದಿ ಎಲ್ಲರಿಗೂ ವಿವರಿಸಿದ್ದಾರೆ. ಭಾರತ–ಅಮೆರಿಕ ಹಾಗೂ ಭಾರತ–ಐರೋಪ್ಯ ರಾಷ್ಟ್ರಗಳ ನಡುವಿನ ವ್ಯಾಪಾರ ಒಪ್ಪಂದಗಳು ಯಶಸ್ವಿಯಾದ ಸಂಪೂರ್ಣ ಶ್ರೇಯಸ್ಸು ಮೋದಿ ಅವರಿಗೆ ಸಲ್ಲಬೇಕು. ಇದು ಅವರ ದೃಢನಿಶ್ಚಯದಿಂದ ನಡೆದಿದೆ. ಒಪ್ಪಂದದಿಂದ ಸಣ್ಣ–ಮಧ್ಯಮ ಗಾತ್ರದ ಉದ್ಯಮಗಳಿಗೆ ನೆರವಾಗಲಿದೆ’ ಎಂದು ತಿಳಿಸಿದ್ದಾರೆ.

‘ಸರ್ಕಾರದ ಈ ಸಾಧನೆಯನ್ನು ಎಲ್ಲ ಸಂಸದರು ಕೂಡ ಸ್ವಾಗತಿಸಿದರು’ ಎಂದು ಶಿವಸೇನಾ ನಾಯಕ ಶ್ರೀಕಾಂತ ಶಿಂದೆ ತಿಳಿಸಿದ್ದಾರೆ.

ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ನಿತಿನ್ ನವೀನ್ ಅವರನ್ನು ಸಭೆಯಲ್ಲಿ ಎನ್‌ಡಿಎ ಸಂಸದರು ಅಭಿನಂದಿಸಿದರು.

ಸಭೆಯಲ್ಲಿ ಬಿಜೆಪಿ, ಜೆಡಿಯು, ಎಲ್‌ಜೆಪಿ (ಆರ್), ಶಿವಸೇನಾ, ಜೆಡಿಎಸ್ ಹಾಗೂ ಇತರ ಸಂಸದರು ಭಾಗವಹಿಸಿದ್ದರು.

ಮಣಿಪುರ: ಖೇಮಚಂದ್ ನೂತನ ಮುಖ್ಯಮಂತ್ರಿ


ಖೇಮಚಂದ್ ಸಿಂಗ್

ನವದೆಹಲಿ (ಪಿಟಿಐ): ಮಣಿಪುರದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ವೈ. ಖೇಮಚಂದ್ ಸಿಂಗ್ ಅವರು ಮಂಗಳವಾರ ಆಯ್ಕೆಯಾಗಿದ್ದು, ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಕುಕಿ ಸಮುದಾಯದ ಮಹಿಳಾ ನಾಯಕಿ, ಮಾಜಿ ಸಚಿವೆ ನೆಮ್ಚಾ ಕಿಪ್ಗೆನ್ ಅವರು ಉಪ ಮುಖ್ಯಮಂತ್ರಿಯಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಈ ಮೂಲಕ ಈಶಾನ್ಯದ ರಾಜ್ಯದಲ್ಲಿ ಜನರಿಂದ ಚುನಾಯಿತವಾದ ಸರ್ಕಾರ ಮರುಸ್ಥಾಪನೆಗೊಳಿಸುವ ಪ್ರಕ್ರಿಯೆಗೆ ಚಾಲನೆ ಲಭಿಸಿದೆ. ಮಣಿಪುರದಲ್ಲಿ 2025ರ ಫೆಬ್ರುವರಿ 13ರಿಂದ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಖೇಮಚಂದ್ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಯಿತು. ಎನ್‌ಡಿಎ ಮೈತ್ರಿಕೂಟದ ಎಲ್ಲ ಪಕ್ಷಗಳ ಶಾಸಕರ ಸಭೆ ಶೀಘ್ರ ನಡೆಯಲಿದ್ದು, ಅಲ್ಲಿ ಖೇಮಚಂದ್ ಮತ್ತು ಕಿಪ್ಗೆನ್ ಅವರ ಹೆಸರುಗಳನ್ನು ಅನುಮೋದಿಸುವ ನಿರೀಕ್ಷೆಯಿದೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೇಂದ್ರದ ವೀಕ್ಷಕ ತರುಣ್ ಚುಘ್ ಮತ್ತು ಈಶಾನ್ಯ ರಾಜ್ಯಗಳ ಉಸ್ತುವಾರಿ ಸಂಬಿತ್ ಪಾತ್ರಾ ಸೇರಿದಂತೆ ಇತರರು ಭಾಗವಹಿಸಿದರು.

ಜನರಿಂದ ಆಯ್ಕೆಯಾಗಿರುವ ಸರ್ಕಾರವನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಬಿಜೆಪಿ ಹೈಕಮಾಂಡ್, ಮೈತೇಯಿ, ಕುಕಿ ಸಮುದಾಯದ ಶಾಸಕರು, ಮಿತ್ರ ಪಕ್ಷಗಳಾದ ಎನ್‌ಪಿಎಫ್ ಹಾಗೂ ಎನ್‌ಪಿಪಿ ಪಕ್ಷಗಳ ಶಾಸಕರ ಜತೆ ಹಲವು ಸುತ್ತಿನ ಮಾತುಕತೆ ನಡೆಸಿದೆ.

60 ಸದಸ್ಯಬಲದ ಮಣಿಪುರ ವಿಧಾನಸಭೆಯಲ್ಲಿ ಸದ್ಯ ಬಿಜೆಪಿಯ 37 ಶಾಸಕರಿದ್ದಾರೆ. 2022ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 32 ಸ್ಥಾನಗಳನ್ನು ಗೆದ್ದಿತ್ತು. ಆರು ಸ್ಥಾನಗಳನ್ನು ಗೆದ್ದಿರುವ ಜೆಡಿಯುನ ಐವರು ಶಾಸಕರು ಆ ಬಳಿಕ ಬಿಜೆಪಿಗೆ ಪಕ್ಷಾಂತರಗೊಂಡರು.

ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಕಳೆದ ವರ್ಷ ಫೆ.9ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅದಾದ ನಾಲ್ಕು ದಿನಗಳ ನಂತರ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲಾಗಿದೆ. ಅಲ್ಲದೆ, ರಾಜ್ಯ ವಿಧಾನಸಭೆಯನ್ನು ತಾತ್ಕಾಲಿಕವಾಗಿ ಅಮಾನತಿನಲ್ಲಿರಿಸಲಾಗಿದೆ. ರಾಷ್ಟ್ರಪತಿ ಆಳ್ವಿಕೆಯ ಎರಡನೇ ಅವಧಿ ಫೆಬ್ರುವರಿ 12ರಂದು ಕೊನೆಗೊಳ್ಳಲಿದೆ.

ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯಗಳ ನಡುವಿನ ಜನಾಂಗೀಯ ಸಂಘರ್ಷಕ್ಕೆ 2023ರ ಮೇ ತಿಂಗಳಿನಿಂದ ಇದುವರೆಗೆ 260 ಮಂದಿ ಬಲಿಯಾಗಿದ್ದಾರೆ. ಸಂಘರ್ಷದಿಂದ ಸಾವಿರಾರು ಮಂದಿ ನಿರ್ವಸಿತರಾಗಿದ್ದಾರೆ.

ಚುನಾವಣಾ ಉಸ್ತುವಾರಿ ಸ್ಥಾನ ತೊರೆದ ಅಣ್ಣಾಮಲೈ

ಪ್ರಜಾವಾಣಿ ವಾರ್ತೆ


ಕೆ. ಅಣ್ಣಾಮಲೈ

ಚೆನ್ನೈ: ವಿಧಾನ ಸಭೆಯ ಆರು ಕ್ಷೇತ್ರಗಳ ಬಿಜೆಪಿ ಚುನಾವಣಾ ಉಸ್ತುವಾರಿಯಾಗಿ ನೇಮಕಗೊಂಡಿದ್ದ ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಅಣ್ಣಾಮಲೈ ಮಂಗಳವಾರ ತಮ್ಮ ಜವಾಬ್ದಾರಿಯಿಂದ ಹಿಂದೆ ಸರಿದಿದ್ದಾರೆ.

‘ತಂದೆಯ ಅನಾರೋಗ್ಯದ ಕಾರಣ ನನಗೆ ಪ್ರಯಾಣ ಮಾಡಲು ಸಾಧ್ಯವಿಲ್ಲ. ಹಾಗಾಗಿ ಚುನಾವಣಾ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿದ್ದೇನೆ’ ಎಂದು ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ತಿಳಿಸಿದ್ದಾರೆ.

ತಮ್ಮನ್ನು ಆರು ಕ್ಷೇತ್ರಗಳಿಗೆ ಸೀಮಿತಗೊಳಿಸಿದ ಕಾರಣಕ್ಕೆ ಅಣ್ಣಾಮಲೈ ಅವರು ಪಕ್ಷದ ನಾಯಕತ್ವದ ಮೇಲೆ ಅಸಮಾಧಾನಗೊಂಡಿದ್ದಾರೆ.

ಬಿಜೆಪಿಯು ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡ ಬಳಿಕ ರಾಜ್ಯ ಘಟಕದ ಅಧ್ಯಕ್ಷ ಸ್ಥಾನವನ್ನು ತೊರೆದಿದ್ದ ಅಣ್ಣಾಮಲೈ ಅವರನ್ನು ಪಕ್ಷವು ನಿರ್ಲಕ್ಷಿಸುತ್ತಿದೆ ಎನ್ನಲಾಗುತ್ತಿತ್ತು. ದ್ರಾವಿಡ ಪಕ್ಷಗಳಿಗೆ ಸಡ್ಡು ಹೊಡೆಯುತ್ತಿದ್ದ ಅಣ್ಣಾಮಲೈ ಬಿಜೆಪಿ–ಎಐಎಡಿಎಂಕೆ ಮೈತ್ರಿಯಿಂದ ಅಸಮಾಧಾನಗೊಂಡಿದ್ದರು. ಪಕ್ಷದ ಕಾರ್ಯಕ್ರಮಗಳಿಂದ ದೂರ ಉಳಿದಿದ್ದರು.

‘ವಿಧಾನಸಭೆಯ 6 ಕ್ಷೇತ್ರಗಳಿಗಷ್ಟೇ ಉಸ್ತುವಾರಿಯಾಗಿ ಅಣ್ಣಾಮಲೈ ಅವರನ್ನು ನೇಮಿಸಿರುವುದು ಸರಿಯಲ್ಲ. ಅವರನ್ನು ರಾಜ್ಯದಾದ್ಯಂತ ಪಕ್ಷದ ಕಾರ್ಯಕ್ಕೆ ಬಳಸಿಕೊಳ್ಳಬೇಕಿತ್ತು’ ಎಂದು ಬಿಜೆಪಿಯ ಹಿರಿಯ ನಾಯಕ ತಿಳಿಸಿದ್ದಾರೆ.

‘ಅಣ್ಣಾಮಲೈ ಅವರಂಥ ನಾಯಕರನ್ನು ಹೇಗೆ ಬಳಸಿಕೊಳ್ಳಬೇಕು ಎಂಬುವುದು ರಾಜ್ಯ ನಾಯಕರಿಗೆ ತಿಳಿದಿಲ್ಲ’ ಎಂದು ಇನ್ನೊಬ್ಬ ನಾಯಕರು ಹೇಳಿದ್ದಾರೆ.

ಐ–ಪ್ಯಾಕ್ ದಾಳಿ: ವಿಚಾರಣೆ ಮುಂದೂಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ ರಾಜಕೀಯ ಸಲಹಾ ಸಂಸ್ಥೆ ಐ–ಪ್ಯಾಕ್‌ನ ಕಚೇರಿಯಲ್ಲಿ ನಡೆಸುತ್ತಿದ್ದ ಶೋಧ ಕಾರ್ಯಾಚರಣೆಗೆ ಪಶ್ಚಿಮ ಬಂಗಾಳ ಸರ್ಕಾರ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಅಡ್ಡಿಪಡಿಸಿದ್ದಾರೆಂದು ಆರೋಪಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಫೆಬ್ರುವರಿ 10ಕ್ಕೆ ಮುಂದೂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಫಿಡವಿಟ್ ಸಲ್ಲಿಸಿ, ಸಮಯ ಕೋರಿದೆ ಎಂದು ಇ.ಡಿ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಮೂರ್ತಿ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಎನ್.ವಿ.ಅಂಜಾರಿಯಾ ಅವರಿದ್ದ ನ್ಯಾಯಪೀಠಕ್ಕೆ ಮಂಗಳವಾರ ತಿಳಿಸಿದರು. ಬಳಿಕ ನ್ಯಾಯಪೀಠವು ವಿಚಾರಣೆಯನ್ನು ಮುಂದೂಡಿತು.

ಜನವರಿ 8ರಂದು ಐ–ಪ್ಯಾಕ್‌ನ ಕಚೇರಿ ಹಾಗೂ ಸಂಸ್ಥೆಯ ನಿರ್ದೇಶಕ ಪ್ರತೀಕ್ ಜೈನ್ ಅವರ ನಿವಾಸದ ಮೇಲೆ ಇ.ಡಿ ದಾಳಿ ನಡೆಸಿತ್ತು. ಈ ವೇಳೆ ಸ್ಥಳಕ್ಕೆ ಆಗಮಿಸಿದ ಮಮತಾ ಬ್ಯಾನರ್ಜಿ ಅವರು ಶೋಧ ಕಾರ್ಯಾಚರಣೆಗೆ ಅಡ್ಡಿಪಡಿಸಿ, ಅಲ್ಲಿದ್ದ ಪ್ರಮುಖ ದಾಖಲೆಗಳನ್ನು ಕೊಂಡೊಯ್ದಿದ್ದಾರೆ ಎಂದು ಇ.ಡಿ ಆರೋಪಿಸಿದೆ.

‘ಇ.ಡಿ ಯಾವುದೇ ಪ್ರಾಮಾಣಿಕ ತನಿಖೆಗಾಗಿ ಶೋಧ ನಡೆಸುತ್ತಿರಲಿಲ್ಲ. ಬದಲಿಗೆ ಟಿಎಂಸಿಯ ಚುನಾವಣಾ ಕಾರ್ಯತಂತ್ರವನ್ನು ತಿಳಿದು, ಪ್ರಕ್ರಿಯೆಗಳಿಗೆ ಅಡ್ಡಿಪಡಿಸುವುದಕ್ಕಾಗಿ ಈ ಕಾರ್ಯಾಚರಣೆ ನಡೆಸಿತ್ತು’ ಎಂದು ಟಿಎಂಸಿ ಕೂಡ ಆರೋಪಿಸಿದೆ.

‘ಎಸ್‌ಐಆರ್ ಸಂತ್ರಸ್ತರಿಗೆ ಸಮರ್ಥನೆಗೂ ಅವಕಾಶ ನೀಡುತ್ತಿಲ್ಲ’

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಿಂದ ತೊಂದರೆಗೀಡಾದ ಸಂತ್ರಸ್ತರಿಗೆ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕೂ ಅವಕಾಶ ನೀಡಲಾಗುತ್ತಿಲ್ಲ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಆರೋಪಿಸಿದ್ದಾರೆ. ಜತೆಗೆ ವಿಧಾನಸಭೆ ಚುನಾವಣೆಗಳು ಹೊಸ್ತಿಲಿನಲ್ಲಿರುವಾಗಲೇ ರಾಜ್ಯಗಳಲ್ಲಿ ಎಸ್‌ಐಆರ್ ನಡೆಸುತ್ತಿರುವುದರ ಹಿಂದಿನ ಉದ್ದೇಶ ಏನು ಎಂದೂ ಅವರು ಪ್ರಶ್ನಿಸಿದ್ದಾರೆ.

ಎಸ್‌ಐಆರ್ ಸಂತ್ರಸ್ತ ಕುಟುಂಬಗಳ ಸಮೇತವಾಗಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ‘ಇವರೆಲ್ಲರೂ ಎಸ್‌ಐಆರ್‌ನಿಂದ ಸಂಕಷ್ಟಕ್ಕೆ ಈಡಾದವರು. ನಾನು ಬೇಕಿದ್ದರೆ ಲಕ್ಷಾಂತರ ಮಂದಿಯನ್ನು ಇಲ್ಲಿಗೆ ಕರೆತರಬಹುದಿತ್ತು’ ಎಂದಿದ್ದಾರೆ. ಜತೆಗೆ ಚುನಾವಣೆ ಹೊಸ್ತಿಲಿನಲ್ಲಿರುವ ನಾಲ್ಕು ರಾಜ್ಯಗಳ ಪೈಕಿ ವಿಪಕ್ಷಗಳ ಆಡಳಿತವಿರುವ ಮೂರು ರಾಜ್ಯಗಳಲ್ಲಿ ಎಸ್‌ಐಆರ್ ನಡೆಸಲಾಗುತ್ತಿದೆ. ಬಿಜೆಪಿ ಆಡಳಿತದ ಅಸ್ಸಾಂನಲ್ಲಿ ಏಕಿಲ್ಲ’ ಎಂದೂ ಪ್ರಶ್ನಿಸಿದ್ದಾರೆ.

ಸಿಇಸಿ ಪದಚ್ಯುತಿ: ಬೆಂಬಲಕ್ಕೆ ಮನವಿ

‘ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಿಗೊಳಿಸಲು ವಿರೋಧ ಪಕ್ಷಗಳು ಬೆಂಬಲ ನೀಡಬೇಕು’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮನವಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧದ ಅಭಿಯಾನದ ಭಾಗವಾಗಿ ಮಮತಾ ಅವರು ರಾಷ್ಟ್ರ ರಾಜಧಾನಿಯಲ್ಲಿದ್ದಾರೆ.

ಎಸ್‌ಐಆರ್ ಕುರಿತು ಜ್ಞಾನೇಶ್ ಕುಮಾರ್ ಹಾಗೂ ಇತರ ಚುನಾವಣಾ ಆಯುಕ್ತರೊಂದಿಗೆ ನಡೆದ ಸಭೆಯಿಂದ ಮಮತಾ ಬ್ಯಾನರ್ಜಿ ಹೊರನಡೆದ ಮರುದಿನವೇ ಈ ಹೇಳಿಕೆ ನೀಡಿದ್ದಾರೆ.

‘ಜ್ಞಾನೇಶ್ ಕುಮಾರ್ ಅವರು ಅಹಂಕಾರ ಪ್ರದರ್ಶಿಸಿ, ನಮಗೆ ಅವಮಾನ ಮಾಡಿದರು’ ಎಂದು ಆರೋಪಿಸಿದ್ದಾರೆ.

‘ಮತದಾರರ ಪಟ್ಟಿಯಿಂದ ಟಿಎಂಸಿ ಪಕ್ಷದ ಬೆಂಬಲಿಗರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕಲಾಗುತ್ತಿದೆ’ ಎಂದೂ ದೂರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಂಧನ ಸ್ವಿಚ್ ಪರಿಶೀಲನೆಗೆ ಮುಂದಾದ ಏರ್ ಇಂಡಿಯಾ

ನವದೆಹಲಿ (ಎಎಫ್‌ಪಿ): ಹೀಥ್ರೂ–ಬೆಂಗಳೂರು ಬೋಯಿಂಗ್–787 ವಿಮಾನದ ಇಂಧನ ಪೂರೈಕೆ ಸ್ವಿಚ್‌ಗಳಲ್ಲಿ ಸಮಸ್ಯೆ ಕಂಡುಬಂದ ಕಾರಣದಿಂದಾಗಿ ಏರ್ ಇಂಡಿಯಾ ಸಂಸ್ಥೆಯು ತನ್ನ 33 ವಿಮಾನಗಳಲ್ಲಿನ ಇಂತಹ ಸ್ವಿಚ್‌ಗಳನ್ನು ಪರಿಶೀಲಿಸಲು ಮುಂದಾಗಿದೆ. ಸಂಸ್ಥೆಯ ಆಂತರಿಕ ಮೂಲಗಳು ಎಎಫ್‌ಪಿಗೆ ಈ ಬಗ್ಗೆ ಮಂಗಳವಾರ ಮಾಹಿತಿ ನೀಡಿವೆ.

ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನದಲ್ಲಿ ಸೋಮವಾರ ಸಮಸ್ಯೆ ವರದಿಯಾಗುತ್ತಿದ್ದಂತೆಯೇ ಆದ್ಯತೆಯ ಮೇರೆಗೆ ಈ ಸಮಸ್ಯೆ ಪರಿಹರಿಸಲು ಸಂಸ್ಥೆ ನಿರ್ಧರಿಸಿದೆ. ಹೀಗಾಗಿ ಸಂಚಾರಕ್ಕೆ ಬಳಸಲಾಗುತ್ತಿರುವ ತನ್ನ ಎಲ್ಲಾ ವಿಮಾನಗಳನ್ನೂ ಪರಿಶೀಲನೆಗೆ ಒಳಪಡಿಸಿದೆ. ಈಗಾಗಲೇ ಹಲವು ವಿಮಾನಗಳ ಪರಿಶೀಲನೆ ಕಾರ್ಯ ಪೂರ್ಣಗೊಂಡಿದ್ದು, ಇನ್ನೂ ಯಾವುದೇ ಸಮಸ್ಯೆಗಳು ಕಂಡುಬಂದಿಲ್ಲ ಎಂದು ಮೂಲಗಳು ತಿಳಿಸಿವೆ ಎನ್ನಲಾಗಿದೆ.

ಇಂಧನ ಸ್ವಿಚ್‌ಗಳ ಪರಿಶೀಲನೆಗೆ ಸಂಬಂಧಿಸಿದಂತೆ ಯಾವುದೇ ಪ್ರತಿಕ್ರಿಯೆಯನ್ನು ಬೋಯಿಂಗ್ ನೀಡಿಲ್ಲ. ಅಹಮದಾಬಾದ್‌ನಲ್ಲಿ 260 ಮಂದಿಯನ್ನು ಬಲಿ ಪಡೆದ ಏರ್ ಇಂಡಿಯಾ ವಿಮಾನ ದುರಂತದ ಬಗ್ಗೆ ಭಾರತದ ಆಡಳಿತಾಧಿಕಾರಿಗಳು ತನಿಖೆ ನಡೆಸುತ್ತಿರುವಂತೆಯೇ ಈ ಬೆಳವಣಿಗೆ ನಡೆದಿರುವುದು ಗಮನಾರ್ಹ.

ದಲೈಲಾಮಾ ನಿವಾಸದ ಬಳಿ ಇದ್ದ ಚೀನಾ ಪ್ರಜೆ ಬಂಧನ

ಧರ್ಮಶಾಲಾ (ಪಿಟಿಐ): ‘ಟಿಬೆಟ್‌ನ ಬೌದ್ಧರ ಧರ್ಮಗುರು ದಲೈಲಾಮಾ ಅವರ ಇಲ್ಲಿನ ನಿವಾಸದ ಹತ್ತಿರದಲ್ಲಿಯೇ ಕಳೆದ ನಾಲ್ಕು ತಿಂಗಳಿಗೂ ಅಧಿಕ ದಿನಗಳಿಂದ ವಾಸಿಸುತ್ತಿದ್ದ 60 ವರ್ಷದ ಚೀನಾ ಪ್ರಜೆಯೊಬ್ಬರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಮಂಗಳವಾರ ತಿಳಿಸಿದರು. ಇವರ ಬಳಿ ಭಾರತದ ವೀಸಾ ಇರಲಿಲ್ಲ.

‘ಇಲ್ಲಿನ ಎಸ್‌ಪಿ ಕಚೇರಿ ಬಂದಿದ್ದ ಚೀನಾ ಪ್ರಜೆಗೆ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮಾತನಾಡಲು ಬರುತ್ತಿರಲಿಲ್ಲ. ಅವರಿಗೆ ಚೀನಾ ಭಾಷೆ ಮಾತ್ರವೇ ಬರುತ್ತಿತ್ತು. ಇದರಿಂದ ಅನುಮಾನಗೊಂಡು ಪರಿಶೀಲನೆ ನಡೆಸಲಾಯಿತು. ಅವರ ಬಳಿ ನೇಪಾಳದ ವೀಸಾ ಇತ್ತು. ಅದು 2025ರ ಸೆ.26ಕ್ಕೆ ಕೊನೆಗೊಂಡಿತ್ತು. ಅಲ್ಲಿಂದ ಫೆ.2ರವರೆಗೆ ಇವರು ಧರ್ಮಶಾಲಾದಲ್ಲಿಯೇ ಉಳಿದುಕೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಚಿನ್ನ ಕಳವು: ಟಿಡಿಬಿ ಮಾಜಿ ಅಧಿಕಾರಿ ವಿಚಾರಣೆ

ಕೊಚ್ಚಿ (ಪಿಟಿಐ): ಶಬರಿಮಲೆ ಚಿನ್ನ ಕಳವು ಪ್ರಕರಣದೊಂದಿಗೆ ತಳಕು ಹಾಕಿಕೊಂಡಿರುವ ಅಕ್ರಮ ಹಣ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ತಿರುವಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಮಾಜಿ ಅಧಿಕಾರಿ ಮುರಾರಿ ಬಾಬು ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ವಿಚಾರಣೆ ನಡೆಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಮುರಾರಿ ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಇದೇ ಪ್ರಕರಣದ ತನಿಖೆಯ ಭಾಗವಾಗಿ ಕೇರಳದ ವಿಶೇಷ ತನಿಖಾ ತಂಡವು (ಎಸ್‌ಐಟಿ) ಮುರಾರಿ ಅವರನ್ನು ಬಂಧಿಸಿತ್ತು. ಇತ್ತೀಚೆಗಷ್ಟೇ ಅವರಿಗೆ ಜಾಮೀನು ದೊರೆತಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲ ದಿನಗಳ ಹಿಂದಷ್ಟೇ ಟಿಡಿಬಿಯ ಮತ್ತೊಬ್ಬ ಮಾಜಿ ಅಧಿಕಾರಿ ಎಸ್.ಶ್ರೀಕುಮಾರ್ ಅವರನ್ನೂ ಇ.ಡಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು. ಜತೆಗೆ ಕಳೆದ ತಿಂಗಳು ವಿವಿಧ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆಯನ್ನೂ ಅಧಿಕಾರಿಗಳು ನಡೆಸಿದ್ದರು.

ವಾಟ್ಸ್‌ಆ್ಯಪ್‌ಗೆ ‘ಸುಪ್ರೀಂ’ ತರಾಟೆ

ಒಂದನೇ ಪುಟದಿಂದ...

ಈ ಎರಡೂ ಸಂಸ್ಥೆಗಳು ‘ಈ ದೇಶದ ಸಂವಿಧಾನವನ್ನು ಅಣಕ ಮಾಡಿವೆ’ ಮತ್ತು ಈ ಸಂಸ್ಥೆಗಳ ನಡವಳಿಕೆಯು ‘ಖಾಸಗಿ ಮಾಹಿತಿಯನ್ನು ಸಭ್ಯವಾಗಿ ಕದಿಯುವಂತೆ ಇದೆ’ ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಗ್ರಾಹಕರ ದತ್ತಾಂಶಗಳನ್ನು ಸಂಪೂರ್ಣವಾಗಿ ವಾಣಿಜ್ಯ ಉದ್ದೇಶಕ್ಕಾಗಿ ಬಳಸಿಕೊಂಡಾಗ, ಭಾರತದ ಕಾನೂನಿನ ಅಡಿಯಲ್ಲಿ ಶ್ರದ್ಧೆಯಿಂದ ಸಂರಕ್ಷಿಸಿಕೊಂಡ ಬಂದಿರುವ ಖಾಸಗಿತನದ ಹಕ್ಕುಗಳ ಉಲ್ಲಂಘನೆಯಾಗುವ ಗಂಭೀರ ಅಪಾಯ ಉಂಟಾಗಿದೆ ಎಂದು ನ್ಯಾಯಾಲಯ ಹೇಳಿದೆ.

ದಂಡದ ಹಣವನ್ನು ಠೇವಣಿ ಇರಿಸಲಾಗಿದೆ ಎಂದು ಮೆಟಾ ಪರ ಹಿರಿಯ ವಕೀಲ ಮುಕುಲ್ ರೋಹಟಗಿ ಮತ್ತು ವಾಟ್ಸ್‌ಆ್ಯಪ್ ಪರ ಹಿರಿ ವಕೀಲ ಅಖಿಲ್ ಸಿಬಲ್ ಪೀಠಕ್ಕೆ ತಿಳಿಸಿದರು.

ಈ ಪ್ಲಾಟ್‌ಫಾರ್ಮ್‌ಗಳ ಖಾಸಗಿತನ ನೀತಿಯ ಕುರಿತು ಪೀಠವು ಮತ್ತೆ ತನ್ನ ಕಳವಳ ವ್ಯಕ್ತಪಡಿಸಿತು.

2021ರ ಖಾಸಗಿತನ ನೀತಿಯನ್ನು ಒಪ್ಪಿಕೊಳ್ಳದ ಯಾವುದೇ ಬಳಕೆದಾರ ವಾಟ್ಸ್‌ಆ್ಯಪ್ ಬಳಸುವುದನ್ನು ನಿಷೇಧಿಸುವುದಿಲ್ಲ ಎಂದು ಸಂವಿಧಾನ ಪೀಠಕ್ಕೆ ಭರವಸೆ ನೀಡಲಾಗಿದೆ ಎಂಬ ವಿಚಾರವನ್ನು ರೋಹಟಗಿ ಅವರು ಪೀಠದ ಗಮನಕ್ಕೆ ತಂದರು.

ಮೆಟಾದೊಂದಿಗೆ ಆಗಲಿ ಅಥವಾ ಇತರ ಯಾರೊಂದಿಗೆ ಆಗಲಿ, ಒಂದೇ ಒಂದು ಮಾಹಿತಿ ಹಂಚಿಕೊಳ್ಳುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ನಾವು ಕಟ್ಟುನಿಟ್ಟಿನ ಆದೇಶವನ್ನು ನೀಡಲಿದ್ದೇವೆ ಮತ್ತು ಅದನ್ನು ಅನುಸರಿಸದೇ ಇದ್ದರೆ ಒಂದೇ ಸೆಕೆಂಡ್‌ನಲ್ಲಿ ನಿಮ್ಮನ್ನು ಆಚೆಗೆ ದಬ್ಬುತ್ತೇವೆ ಎಂದು ಪೀಠ ಹೇಳಿದೆ.

‘ಈ ಮಾರುಕಟ್ಟೆಯಲ್ಲಿ ನಿಮ್ಮ ಸಂಪೂರ್ಣ ಏಕಸ್ವಾಮ್ಯ ಇರುವುದರಿಂದ ಜನರಿಗೆ ಬೇರೆ ಯಾವ ಆಯ್ಕೆಗಳಿವೆ, ನಾವು ನಿಮಗೆ ಆಯ್ಕೆಯೊಂದನ್ನು ನೀಡುತ್ತೇವೆ ಎಂದರೆ, ಆ ಆಯ್ಕೆಯೇ ಒಂದು ಒಪ್ಪಂದದ ಹಾಗೆ– ನಿಮ್ಮ ದತ್ತಾಂಶವನ್ನು ನಾವು ಮಾರುತ್ತೇವೆ ಅಥವಾ ವಾಟ್ಸ್‌ಆ್ಯಪ್‌ನಿಂದ ನೀವು ಹೊರನಡೆಯಿರಿ ಎಂದು ಅದರ ಅರ್ಥ. ನಾವು ಅದಕ್ಕೆ ಏಕೆ ಅವಕಾಶ ಕೊಡಬೇಕು’ ಎಂದು ಪೀಠವು ಪ್ರಶ್ನಿಸಿದೆ.

ನ್ಯೂಸ್‌ಪ್ರಿಂಟ್ ಕೊರತೆ: ಐಎನ್‌ಎಸ್

ನವದೆಹಲಿ (ಪಿಟಿಐ): ದೇಶದಲ್ಲಿ ನ್ಯೂಸ್‌ಪ್ರಿಂಟ್ (ಸುದ್ದಿ ಪತ್ರಿಕೆಗಳಿಗೆ ಬಳಸುವ ಕಾಗದ) ಕೊರತೆ ಬಗ್ಗೆ ‘ದಿ ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ’ (ಐಎನ್‌ಎಸ್) ಮಂಗಳವಾರ ಗಂಭೀರ ಕಳವಳ ವ್ಯಕ್ತಪಡಿಸಿದೆ.

‘ಭಾರತದ ವಾರ್ಷಿಕ ನ್ಯೂಸ್‌ಪ್ರಿಂಟ್ ಬಳಕೆ 12 ಲಕ್ಷ ಟನ್‌ಗಳಷ್ಟಿದ್ದು, ದೇಶೀಯ ಉತ್ಪಾದನೆಯು 5 ಲಕ್ಷ ಟನ್‌ಗಳನ್ನು ದಾಟಲು ಕೂಡ ಕಷ್ಟಪಡುತ್ತಿದೆ. ಇದು ಉದ್ಯಮ ತೆವಳುತ್ತಿರುವುದನ್ನು ಒತ್ತಿಹೇಳುತ್ತದೆ’ ಎಂದು ಐಎನ್‌ಎಸ್ ಹೇಳಿದೆ.

ಉದ್ಯೋಗ ವಾಣಿ

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಯ, ತನ್ನ ಬೆಂಗಳೂರಿನಲ್ಲಿರುವ ಉತ್ಪನ್ನ ಅಭಿವೃದ್ಧಿ ಮತ್ತು ನಾವೀನ್ಯತೆ ಕೇಂದ್ರಕ್ಕೆ ಖಾಯಂ ಆಧಾರದ ಮೇಲೆ ವೃತ್ತಿಪರರ ಆವಶ್ಯಕತೆ ಇದೆ.

ಕ್ರ. ಸಂ.	ಹುದ್ದೆ / ಶ್ರೇಣಿ	ವೃತ್ತಿ ಸಂಕೇತ	ವಿಷಯ	ಹುದ್ದೆಗಳ ಸಂಖ್ಯೆ	ದಿನಾಂಕ 01.01.2026 ರಂತೆ ಗರಿಷ್ಠ ವಯೋಮಿತಿ
1	ಹಿರಿಯ ಅಭಿಯಂತರರು E-III ಶ್ರೇಣಿ	US01	ನಾಲ್ಕು ವರ್ಷಗಳ ಅನುಭವದೊಂದಿಗೆ ಏರೋಸ್ಪೇಸ್/ ಏರೋನಾಟಿಕಲ್ ಇಂಜಿನಿರಿಂಗ್ ನಲ್ಲಿ ಬಿ. ಇ / ಬಿ. ಟೆಕ್ ಅಥವಾ ಎರಡು ವರ್ಷಗಳ ಅನುಭವದೊಂದಿಗೆ ಏರೋಸ್ಪೇಸ್/ಏರೋನಾಟಿಕಲ್ ಇಂಜಿನಿರಿಂಗ್ ನಲ್ಲಿ ಎಂ.ಇ / ಎಂ.ಟೆಕ್	04	32 ವರ್ಷ

ಹೆಚ್ಚಿನ ವಿವರಗಳಿಗೆ ದಯವಿಟ್ಟು ನಮ್ಮ ವೆಬ್ ಸೈಟ್ www.bel-india.in (ವೃತ್ತಿ / ನೇಮಕಾತಿ) ಅನ್ನು ವೀಕ್ಷಿಸಿ.

‘Har Ek Kaam Desh Ke Naam’

ನಾಲ್ಕನೇ ಬಾರಿ ಫೈನಲ್‌ಗೆ ಡೆಲ್ಲಿ

ಎಲಿಮಿನೇಟರ್ ಪಂದ್ಯ: ಜೆಮಿಮಾ ಪಡೆಗೆ 7 ವಿಕೆಟ್ ಜಯ • ನಂದನಿ, ಶಿನೆಲ್ ಮಿಂಚು

ವಡೋದರ (ಪಿಟಿಐ): ಆಲ್‌ರೌಂಡ್ ಆಟ ಆಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಎಲಿಮಿನೇಟರ್ ಪಂದ್ಯದಲ್ಲಿ ಮಂಗಳವಾರ 7 ವಿಕೆಟ್‌ಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು. ಅದರೊಂದಿಗೆ, ಲೀಗ್‌ನಲ್ಲಿ ಸತತ ನಾಲ್ಕನೇ ಬಾರಿ ಫೈನಲ್‌ಗೆ ಲಗ್ಗೆ ಇಟ್ಟಿತು.

ಮಹಿಳಾ ಪ್ರೀಮಿಯರ್ ಲೀಗ್

ಚೊಚ್ಚಲ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಜೆಮಿಮಾ ರಾಡ್ರಿಗಸ್ ಪಡೆಯು ಗುರುವಾರ ನಡೆಯಲಿರುವ ಫೈನಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ.

ಕೊತಂಬಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡದ ನಾಯಕಿ ಜೆಮಿಮಾ ಅವರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಸ್ಪಿನ್ನರ್ ನಂದನಿ ಶರ್ಮಾ (44ಕ್ಕೆ2) ಮತ್ತು ಶಿನೆಲ್ ಹೆನ್ರಿ (35ಕ್ಕೆ3) ಅವರು ನಾಯಕಿಯ ತೀರ್ಮಾನವನ್ನು ಸಮರ್ಥಿಸುವಂತೆ ಪರಿಣಾಮಕಾರಿ ಬೌಲಿಂಗ್ ದಾಳಿ ಮಾಡಿದರು. ಆರಂಭಿಕ ಬ್ಯಾಟರ್ ಬೆತ್ ಮೂನಿ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಬಲದಿಂದ ಗುಜರಾತ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 168 ರನ್ ಗಳಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಲಿಜೆಲ್ ಲೀ (43; 24ಎ, 4x8, 6x1) ಹಾಗೂ ಶಫಾಲಿ ವರ್ಮಾ (31; 21ಎ, 4x7) ಅವರು ಮೊದಲ ವಿಕೆಟ್‌ಗೆ 89 ರನ್ ಗಳಿಸಿ, ಭದ್ರ ಬುನಾದಿ ಹಾಕಿಕೊಟ್ಟರು. ಪವರ್‌ಪ್ಲೇನಲ್ಲಿ 75 ರನ್‌ಗಳು ಹರಿದುಬಂದವು. ಸ್ಪಿನ್ನರ್ ಜಾರ್ಜಿಯಾ ವೇರ್‌ಹಾಮ್ ಅವರು ಎಂಟನೇ ಓವರ್‌ನಲ್ಲಿ ಇವರಿಬ್ಬರ ವಿಕೆಟ್ ಪಡೆದರು.

ನಂತರ, ದಕ್ಷಿಣ ಆಫ್ರಿಕಾದ ಲಾರಾ ವೊಲ್ವಾರ್ಟ್ (ಔಟಾಗದೇ 32; 24ಎ, 4x2, 6x1) ಹಾಗೂ ನಾಯಕಿ ಜೆಮಿಮಾ (41; 23ಎ, 4x4, 6x1) ಜವಾಬ್ದಾರಿಯುತ ಬ್ಯಾಟಿಂಗ್‌ನೊಂದಿಗೆ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಇವರಿಬ್ಬರು ಮೂರನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿದರು.

ಬಿರುಸಿನ ಆಟವಾಡುತ್ತಿದ್ದ ಜೆಮಿಮಾ, ರಾಜೇಶ್ವರಿ ಗಾಯಕವಾಡ ಅವರ ಬೌಲಿಂಗ್‌ನಲ್ಲಿ ಸೋಫಿ ಡಿವೈನ್ ಅವರಿಗೆ ಕ್ಯಾಚಿತ್ತರು. ದಕ್ಷಿಣ ಆಫ್ರಿಕಾದ ಮತ್ತೊಬ್ಬ ಆಟಗಾರ್ತಿ ಮರೈಝಾನ್ ಕಾಪ್ ಗೆಲುವಿನ ಬೌಂಡರಿ ಹೊಡೆದರು. ಕ್ಯಾಪಿಟಲ್ಸ್ ತಂಡವು 15.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 169 ರನ್ ಗಳಿಸಿ, ಸುಲಭವಾಗಿ ಗುರಿ ತಲುಪಿತು.

ಎಎಫ್‌ಪಿ ಚಿತ್ರ

ಇದಕ್ಕೆ ಮೊದಲು, ನಂದನಿ ಹಾಗೂ ಶಿನೆಲ್ ಅವರು ಗುಜರಾತ್ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು. ಆ್ಯಷ್ಲೆ ಗಾರ್ಡನರ್ ಪಡೆಯು 59ಕ್ಕೆ4 ವಿಕೆಟ್ ಕಳೆದುಕೊಂಡು ಸಂಕಷ್ಟ ಎದುರಿಸಿತು. ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಮೂನಿ (ಔಟಾಗದೇ 62; 51ಎ, 4X6) ಅವರ ದಿಟ್ಟ ಆಟವು ತಂಡಕ್ಕೆ ನೆರವಾಯಿತು.

ಮೂನಿ ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ ಜಾರ್ಜಿಯಾ ವೇರ್‌ಹಾಮ್ (35; 25ಎ, 4X3, 6X1) ಅವರೊಂದಿಗೆ 61 ರನ್ ಸೇರಿಸಿದರು. ಇದು ತಂಡಕ್ಕೆ ಚೇತೋಹಾರಿಯಾಯಿತು. ಇಡೀ ಇನಿಂಗ್ಸ್‌ನಲ್ಲಿ ದಾಖಲಾದ ಏಕೈಕ ಸಿಕ್ಸರ್ ಅನ್ನು ಜಾರ್ಜಿಯಾ ಹೊಡೆದರು.

ತಂಡದ ಪ್ರಮುಖ ಬ್ಯಾಟರ್‌ಗಳಾದ ಸೋಫಿ ಡಿವೈನ್ (6ರನ್), ಕನಿಕಾ ಅಹುಜಾ (6 ರನ್) ಹಾಗೂ ಅನುಷ್ಕಾ ಶರ್ಮಾ (16 ರನ್) ಅವರು ಬೇಗನೆ ನಿರ್ಗಮಿಸಿದರು. ನಾಯಕಿ ಆ್ಯಷ್ಲೆ ಗಾರ್ಡನರ್ ಹಾಗೂ ಭಾರತಿ ಫೂಲ್ಮಾಲಿ ಖಾತೆಯನ್ನೇ ತೆರೆಯಲಿಲ್ಲ.

ಡೆಲ್ಲಿ ತಂಡ 2023, 2024 ಹಾಗೂ 2025ರ ಆವೃತ್ತಿಗಳಲ್ಲಿ ಫೈನಲ್ ತಲುಪಿತ್ತಾದರೂ, ಒಮ್ಮೆಯೂ ಪ್ರಶಸ್ತಿ ಜಯಿಸಿಲ್ಲ.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 168 (ಬೆತ್ ಮೂನಿ ಔಟಾಗದೇ 62, ಜಾರ್ಜಿಯಾ ವೇರ್‌ಹಾಮ್ 35, ಶಿನೆಲ್ ಹೆನ್ರಿ 35ಕ್ಕೆ3, ನಂದನಿ ಶರ್ಮಾ 44ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 15.4 ಓವರ್‌ಗಳಲ್ಲಿ 3 ವಿಕೆಟ್‌ಗೆ 169 (ಲಿಜೆಲ್ ಲೀ 43, ಶಫಾಲಿ ವರ್ಮಾ 31, ಲಾರಾ ವೊಲ್ವಾರ್ಟ್ ಔಟಾಗದೇ 32, ಜೆಮಿಮಾ ರಾಡ್ರಿಗಸ್ 41; ಜಾರ್ಜಿಯಾ ವೇರ್‌ಹಾಮ್ 28ಕ್ಕೆ2). ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಏಳು ವಿಕೆಟ್ ಜಯ; ಫೈನಲ್ ಪ್ರವೇಶ. **ಪಂದ್ಯದ ಆಟಗಾರ್ತಿ:** ಜೆಮಿಮಾ ರಾಡ್ರಿಗಸ್.

ಕೇರಳ ಸೆಮಿಫೈನಲ್‌ಗೆ

ಸಿಲಾಪತರ್ (ಅಸ್ಸಾಂ) (ಪಿಟಿಐ): ಕೇರಳ, ಪಂಜಾಬ್, ಸರ್ವಿಸಸ್ ಮತ್ತು ರೈಲ್ವೇಸ್ ತಂಡಗಳು ಸಂತೋಷ್ ಟ್ರೋಫಿಗಾಗಿ ನಡೆಯುತ್ತಿರುವ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಸೆಮಿಫೈನಲ್ ಪ್ರವೇಶಿಸಿದವು.

ಗುರುವಾರ ನಾಲ್ಕರ ಘಟ್ಟದ ಪಂದ್ಯದಲ್ಲಿ ಸರ್ವಿಸಸ್ ತಂಡವು ರೈಲ್ವೇಸ್ ವಿರುದ್ಧ, ಕೇರಳ ತಂಡವು ಪಂಜಾಬ್ ವಿರುದ್ಧ ಸೆಣಸಲಿವೆ. ಕರ್ನಾಟಕ ತಂಡವು ಗುಂಪು ಹಂತದಲ್ಲೇ ಹೊರಬಿದ್ದಿತ್ತು.



22 ವರ್ಷದ ಸ್ಪೇನ್ ಕ್ರೀಡಾಪಟು ತನ್ನ ಮೊದಲ ಆಸ್ಟ್ರೇಲಿಯನ್ ಓಪನ್ ಗೆಲ್ಲುವ ಮೂಲಕ, ವೃತ್ತಿ ಜೀವನದ ಅತ್ಯಂತ ಕಿರಿಯ ಗ್ರ್ಯಾಂಡ್ ಸ್ಲ್ಯಾಮ್ ವಿಜೇತರಾಗಿ ಹೊರಹೊಮ್ಮಿದ್ದಾರೆ!

ಪಾಕ್ ವಿರುದ್ಧ ಕೋರ್ಟ್‌ಗೆ ಪ್ರಸಾರಕರು

15ರಂದು ಭಾರತ ತಂಡದ ವಿರುದ್ಧ ಪಂದ್ಯ ಬಹಿಷ್ಕಾರ ಪ್ರಕರಣ

ಕರಾಚಿ/ನವದೆಹಲಿ (ಪಿಟಿಐ): ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಇದೇ 15ರಂದು ಭಾರತದ ಎದುರಿನ ಪಂದ್ಯವನ್ನು ಬಹಿಷ್ಕರಿಸಲು ಮುಂದಾಗಿರುವ ಪಾಕಿಸ್ತಾನದ ವಿರುದ್ಧ ನ್ಯಾಯಾಲಯದ ಮೆಟ್ಟಿಲು ಹತ್ತಲು ಅಧಿಕೃತ ಪ್ರಸಾರಕರಾದ ಜಿಯೊಸ್ಟಾರ್ ಸಿದ್ಧವಾಗಿದೆ.

ಕೊಲಂಬೊದಲ್ಲಿ ನಡೆಯಲಿರುವ ಪಂದ್ಯವನ್ನು ಬಹಿಷ್ಕರಿಸುವುದಾಗಿ ಪಾಕಿಸ್ತಾನ ಸರ್ಕಾರವು ಘೋಷಿಸಿದೆ. ಆದರೆ ಪಾಕ್ ಕ್ರಿಕೆಟ್ ತಂಡವು ಇದುವರೆಗೆ ಐಸಿಸಿಗೆ ಯಾವುದೇ ವಿವರಣೆ ನೀಡಿಲ್ಲ.

ಒಂದೊಮ್ಮೆ ಪಾಕ್ ತಂಡವು ಪಂದ್ಯವನ್ನು ಬಹಿಷ್ಕರಿಸಿದರೆ; ಐಸಿಸಿಯು ಕಠಿಣ ಕ್ರಮಗಳನ್ನು ಜರುಗಿಸುವ ಸಾಧ್ಯತೆಗಳಿವೆ. ಪಾಕಿಸ್ತಾನಕ್ಕೆ ನೀಡಲಾಗುವ ವಾರ್ಷಿಕ ಅನುದಾನ (ಸುಮಾರು 316 ಕೋಟಿ) ವನ್ನು ತಡೆಹಿಡಿಯಲಾಗುವುದು. ಅದೇ ಮೊತ್ತದಿಂದ ಪ್ರಸಾರಕರಿಗೆ ನಷ್ಟಪರಿಹಾರ ತುಂಬಿಕೊಡುವ ಸಾಧ್ಯತೆ ಇದೆ.

‘ಪಾಕ್ ತಂಡವು ಭಾರತದ ಎದುರು ಕಣಕ್ಕಿಳಿಯದೇ ಹೋದರೆ ಭಾರಿ ಮೊತ್ತದ ದಂಡದ ಜೊತೆಗೆ ಕಾನೂನು ಕ್ರಮವನ್ನೂ ಎದುರಿಸಬೇಕಾಗುತ್ತದೆ. ಪ್ರಸಾರಕ ಸಂಸ್ಥೆಯು ಮೊಕದ್ದಮೆ ಕೂಡ ಹೂಡಬಹುದು. ಈ ವಿಷಯವಾಗಿ ಐಸಿಸಿಯ ವ್ಯಾಜ್ಯ ಪರಿಹಾರ ಸಮಿತಿ (ಡಿಆರ್‌ಸಿ) ಮುಂದೆ ಹೋಗುವುದು ಪಾಕಿಸ್ತಾನಕ್ಕೆ ಅನುಕೂಲವಾಗಲಿಕ್ಕಿಲ್ಲ’ ಎಂದು ಪಿಸಿಬಿ ಮೂಲಗಳು ಹೇಳಿವೆ.

ಐಸಿಸಿ
ಪುರುಷರ ಟಿ20 ವಿಶ್ವಕಪ್ 2026

‘ತಟಸ್ಥ ತಾಣದಲ್ಲಿ ಭಾರತ ಮತ್ತು ಪಾಕ್ ತಂಡಗಳು ಪಂದ್ಯದಲ್ಲಿ ಆಡಬೇಕಿದೆ. ಅಲ್ಲದೇ ಪಾಕ್ ತಂಡವು ವಿಶ್ವಕಪ್ ಟೂರ್ನಿಯ ತನ್ನ ಪಾಲಿನ ಎಲ್ಲ ಪಂದ್ಯಗಳನ್ನೂ ಶ್ರೀಲಂಕಾದಲ್ಲಿ ಆಡಲಿದೆ. ಅವರ (ಪಾಕ್) ಇಚ್ಛೆಗೆ ಅನುಗುಣವಾಗಿಯೇ ತಾಣಗಳನ್ನು ನಿರ್ಧರಿಸಲಾಗಿದೆ. ಪಾಕಿಸ್ತಾನ ಸರ್ಕಾರದ ಸೂಚನೆಯನ್ವಯ ಭಾರತದ ಎದುರು ಆಡದಿದ್ದರೆ ಪಾಕ್ ಕ್ರಿಕೆಟ್ ಮಂಡಳಿ (ಪಿಸಿಬಿ) ತೊಂದರೆ ಅನುಭವಿಸಬೇಕಾಗುತ್ತದೆ’ ಎಂದು ಮೂಲಗಳು ಹೇಳಿವೆ.

‘ಎರಡನೇಯದಾಗಿ, ಭಾರತದ ಸರ್ಕಾರವು ತನ್ನ ದೇಶದಲ್ಲಿ ಪಾಕ್ ತಂಡವು ಆಡಲು ಮತ್ತು ಭಾರತವು ಪಾಕಿಸ್ತಾನಕ್ಕೆ ಹೋಗಿ ಆಡಲು ಅನುಮತಿ ನೀಡಿಲ್ಲ. ಆದರೆ ತಟಸ್ಥ ತಾಣದಲ್ಲಿ ಆಡಲು ಅನುಮತಿ ಕೊಟ್ಟಿದೆ. ಆದ್ದರಿಂದ ಏಷ್ಯಾಕಪ್ ಮತ್ತು ಐಸಿಸಿ ಟೂರ್ನಿಗಳಲ್ಲಿ ಉಭಯ ತಂಡಗಳು ಆಡಿವೆ’ ಎಂದು ಪಿಸಿಬಿಯ ಮೂಲಗಳು ಹೇಳಿವೆ.

‘ಐಸಿಸಿಯೊಂದಿಗೆ ಪ್ರಸಾರಕರು ನಾಲ್ಕು ವರ್ಷಗಳ ಒಪ್ಪಂದ ಮಾಡಿಕೊಂಡಿರುತ್ತಾರೆ. ಆ ಒಪ್ಪಂದದಲ್ಲಿ ಭಾರತ ಮತ್ತು ಪಾಕಿಸ್ತಾನ ಕೂಡ ಭಾಗಿಯಾಗಿವೆ. ಉಭಯ ದೇಶಗಳ ನಡುವಣ ಪಂದ್ಯಗಳ ಪ್ರಸಾರದ ಹಕ್ಕುಗಳಿಗೂ ಐಸಿಸಿಗೆ ಪ್ರಸಾರಕರು ಹಣ ಸಂದಾಯ ಮಾಡಿರುತ್ತಾರೆ. ಅದರಿಂದಾಗಿ ಅವರು(ಪ್ರಸಾರಕರು) ಕೋರ್ಟ್‌ನಲ್ಲಿ ದಾವೆ ಹೂಡುವುದು ಕಾನೂನಿನ ಚೌಕಟ್ಟಿನೊಳಗೆ ಸೂಕ್ತವಾಗಿದೆ’ ಎಂದು ಮೂಲಗಳು ವಿವರಿಸಿವೆ.

ಆಯುಷ್ ಪಡೆಗೆ ಅಫ್ಗನ್ ಸವಾಲು

19 ವರ್ಷದೊಳಗಿನವರ ವಿಶ್ವಕಪ್ ಸೆಮಿಫೈನಲ್ ಇಂದು: ವೈಭವ್ ಮೇಲೆ ಕಣ್ಣು

ಹರಾರೆ (ಪಿಟಿಐ): ಐದು ಸಲದ ಯುವ ವಿಶ್ವಕಪ್ ವಿಜೇತ ಭಾರತ 19 ವರ್ಷದೊಳಗಿನವರ ತಂಡವು ಬುಧವಾರ ನಡೆಯುವ ಸೆಮಿಫೈನಲ್‌ನಲ್ಲಿ ಅಫ್ಗಾನಿಸ್ತಾನ ತಂಡವನ್ನು ಎದುರಿಸಲಿದೆ.

ಟೂರ್ನಿಯಲ್ಲಿ ಇದುವರೆಗೆ ಭಾರತದ ಯುವಪಡೆಯು ಅಜೇಯವಾಗಿದೆ. ಐದು ಬಾರಿ (2000, 2008, 2012, 2018 ಮತ್ತು 2022) ಪ್ರಶಸ್ತಿ ಗೆದ್ದಿದೆ. ಆಸ್ಟ್ರೇಲಿಯಾ ಇದುವರೆಗೆ ನಾಲ್ಕು ಸಲ ಗೆದ್ದಿದೆ.

ಭಾರತ ತಂಡವು ಸೂಪರ್ ಸಿಕ್ಸ್ ಕೊನೆಯ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ 58 ರನ್‌ಗಳಿಂದ ಜಯಭೇರಿ ಬಾರಿಸಿತ್ತು. ಅಫ್ಗಾನಿಸ್ತಾನ ತಂಡವು ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಜಯಿಸಿದೆ. ಶ್ರೀಲಂಕಾ ಎದುರು ನಾಲ್ಕು ವಿಕೆಟ್‌ಗಳಿಂದ ಪರಾಭವಗೊಂಡಿತ್ತು. ಆದರೆ ಅನುಭವ ಮತ್ತು ಆಟಗಾರರ ಫಾರ್ಮ್ ನೋಡಿದರೆ ಮೇಲ್ನೋಟಕ್ಕೆ ಭಾರತ ತಂಡ ಬಲಿಷ್ಠವಾಗಿದೆ.

ಭಾರತ ತಂಡದ ವಿಕೆಟ್‌ಕೀಪರ್ ಬ್ಯಾಟರ್ ಅಭಿಗ್ಯಾನ್ ಕುಂಡು ಇಲ್ಲಿಯವರೆಗೆ ಐದು ಪಂದ್ಯಗಳಿಂದ 199 ರನ್ ಸೇರಿಸಿದ್ದಾರೆ. ಅದರಲ್ಲಿ ಎರಡು ಅರ್ಧಶತಕಗಳು ಇವೆ. ಆರಂಭಿಕ ಬ್ಯಾಟರ್ ವೈಭವ್ ಸೂರ್ಯವಂಶಿ (196 ರನ್, 2 ಅರ್ಧಶತಕ), ಆಲ್‌ರೌಂಡರ್ ವಿಹಾನ್ ಮಲ್ಹೋತ್ರಾ (172 ರನ್) ಅವರು ಅಮೋಘ ಲಯದಲ್ಲಿದ್ದಾರೆ. ವಿಹಾನ್ ಒಂದು ಶತಕ ಕೂಡ ಗಳಿಸಿದ್ದಾರೆ.

ಆಯುಷ್ ಮ್ಹಾತ್ರೆ ಹಾಗೂ ವೈಭವ್ ಸೂರ್ಯವಂಶಿ

ಇಂಗ್ಲೆಂಡ್ ಫೈನಲ್‌ಗೆ: ಆಸ್ಟ್ರೇಲಿಯಾಕ್ಕೆ ನಿರಾಸೆ

ಬುಲವಾಯೊ (ಪಿಟಿಐ): ನಾಯಕ ಥಾಮಸ್ ರೇವ್ (110;107ಎ) ಅವರ ಶತಕದ ನೆರವಿನಿಂದ ಇಂಗ್ಲೆಂಡ್ ತಂಡವು ಮಂಗಳವಾರ ಯೂತ್ ವಿಶ್ವಕಪ್ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾವನ್ನು 27 ರನ್‌ಗಳಿಂದ ಮಣಿಸಿತು. 1998ರ ಚಾಂಪಿಯನ್ ಇಂಗ್ಲೆಂಡ್ ತಂಡವು ಎರಡನೇ ಬಾರಿ ಕಿರೀಟ ಗೆಲ್ಲುವ ತವಕದಲ್ಲಿದೆ. ಶುಕ್ರವಾರ ಫೈನಲ್ ಪಂದ್ಯ ನಡೆಯಲಿದೆ.

ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಥಾಮಸ್ ಮತ್ತು ಕ್ಯಾಲೆಬ್ ಫಾಲ್ಕನರ್ (40) ಅವರ ಬ್ಯಾಟಿಂಗ್ ನೆರವಿನಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗೆ 277 ರನ್‌ಗಳ ಸವಾಲಿನ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವು 47.3 ಓವರ್‌ಗಳಲ್ಲಿ 250 ರನ್ ಗಳಿಸಿ ಹೋರಾಟ ಮುಗಿಸಿತು. ನಾಯಕ ಆಲಿವರ್ ಪೀಕ್ (100;88) ಏಕಾಂಗಿ ಹೋರಾಟ ನಡೆಸಿದರೂ ಗೆಲುವಿಗೆ ಸಾಕಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 277. ಆಸ್ಟ್ರೇಲಿಯಾ: 47.3 ಓವರ್‌ಗಳಲ್ಲಿ 250.

ನಾಯಕ ಆಯುಷ್ ಮ್ಹಾತ್ರೆ ಬೌಲಿಂಗ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಒಟ್ಟು ಆರು ವಿಕೆಟ್‌ಗಳು ಅವರ ಖಾತೆಯಲ್ಲಿವೆ. ಅವರು ಬ್ಯಾಟಿಂಗ್‌ನಲ್ಲಿ ಲಯಕ್ಕೆ ಮರಳಬೇಕಿದೆ. ಆರಂಭಿಕ ಬ್ಯಾಟರ್ ಆ್ಯರನ್ ಜಾರ್ಜ್ ಅವರು ಲಯದಲ್ಲಿಲ್ಲ. ಬಲಗೈ ಬ್ಯಾಟರ್ ಆಗಿರುವ ಅವರು ಇದುವರೆಗೆ ಒಟ್ಟು 46 ರನ್ ಮಾತ್ರ ಗಳಿಸಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ವೇಗಿಗಳಾದ ಹೆನಿಲ್ ಪಟೇಲ್ ಮತ್ತು ಆರ್ ಎಸ್. ಅಂಬರೀಷ್ ಅವರು ಕ್ರಮವಾಗಿ 11 ಹಾಗೂ 8 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಎಡಗೈ ಸ್ಪಿನ್ನರ್ ಖಿಲಾನ್ ಪಟೇಲ್ ಐದು ಪಂದ್ಯಗಳಿಂದ ಎಂಟು ವಿಕೆಟ್ ಗಳಿಸಿ ಉತ್ತಮ ಕಾಣಿಕೆ ನೀಡಿದ್ದಾರೆ. ಇದೀಗ ಇವರ ಮುಂದೆ ಮೆಹಬೂಬ್ ಖಾನ್ ನಾಯಕತ್ವದ ಅಫ್ಗನ್ ತಂಡದ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇದೆ. ಖಾಲಿದ್ ಅಹಮದ್‌ಝೈ, ಫೈಸಲ್ ಶಿನೊಝಾದಾ ಹಾಗೂ ಉಜೈರುಲ್ಲಾ ನಿಯಾಝುರ್ ಅವರು ಇದುವರೆಗೆ ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದಾರೆ.

ಬೌಲಿಂಗ್‌ನಲ್ಲಿ ಅಬ್ದುಲ್ ಅಜೀಜ್, ಖಾತಿರ್ ಸ್ಥಾನಿಕ್‌ಝೈ ಮತ್ತು ವಹಿದುಲ್ಲಾ ಜದ್ರಾನ್ ಅವರು ಬ್ಯಾಟರ್‌ಗಳನ್ನು ನಿಯಂತ್ರಿಸಬಲ್ಲ ಸಾಮರ್ಥ್ಯ ಹೊಂದಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆಕಾಶ್ ಹ್ಯಾಟ್ರಿಕ್: ವಾರಿಯರ್ಸ್ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಆಕಾಶ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬೆಂಗಳೂರು ವಾರಿಯರ್ಸ್ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಮಂಗಳವಾರ 3–2ರಿಂದ ಎಂಪೈರ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಕಾಶ್ ಅವರು 8ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು. ಬಳಿಕ, ದ್ವಿತೀಯಾರ್ಧದಲ್ಲಿ (63ನೇ ಹಾಗೂ 78ನೇ ನಿ.) ಎರಡು ಗೋಲು ಗಳಿಸಿದರು. ಎಂಪೈರ್ ತಂಡದ ವಿಷ್ಣುಪ್ರಸಾದ್ ಕೆ. (73ನೇ ನಿ.) ಹಾಗೂ ಸಚಿನ್ ಕುಮಾರ್ ಎಸ್. (74ನೇ ನಿ.) ತಲಾ ಒಂದು ಗೋಲು ಹೊಡೆದರು.

ದಿನದ ಇನ್ನೊಂದು ಪಂದ್ಯದಲ್ಲಿ ಜುನೊ ಎಫ್‌ಸಿ ತಂಡವು 5–0ಯಿಂದ ರಿವೈವ್ ಎಫ್‌ಸಿ ವಿರುದ್ಧ ಸುಲಭ ಜಯ ಸಾಧಿಸಿತು. ಜುನೊ ತಂಡದ ಎಸ್. ಶ್ರೀಕಾಂತ್ ಸಿಂಗ್ (20ನೇ ಹಾಗೂ 56ನೇ ನಿ.) ಎರಡು ಗೋಲು ಗಳಿಸಿದರೆ, ಚಕ್ರೇಶ್ ಆಚಾರ್ಯ (30ನೇ ನಿ.), ಸಾತ್ವಿಕ್ ಶ್ರೀಧರ (47ನೇ ನಿ.) ಹಾಗೂ ಎ.ಮಧುಸೂದನ (74ನೇ ನಿ.) ತಲಾ ಒಂದು ಗೋಲು ಹೊಡೆದರು.

ಕೆಎಸ್‌ಪಿಎಫ್ ತಂಡವು 2–1ರಿಂದ ಯಂಗ್ ಬ್ಲ್ಯೂಸ್ ಎಫ್‌ಸಿ ತಂಡವನ್ನು ಮಣಿಸಿತು. ಬೆಂಗಳೂರು ಗನ್ನರ್ಸ್ ಎಫ್‌ಸಿ ಹಾಗೂ ಇನ್‌ಫೈನೈಟ್ ಬೆಳಗಾವಿ ಎಫ್‌ಸಿ ನಡುವಣ ಪಂದ್ಯ 1–1 ಡ್ರಾ ಆಯಿತು.

ಅಲ್ಕರಾಜ್, ಅರಿನಾ ಅಗ್ರಸ್ಥಾನ ಅಬಾಧಿತ

ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಮಂಗಳವಾರ ಪ್ರಕಟಗೊಂಡ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಬೆಲರೂಸ್‌ನ ಅರಿನಾ ಸಬಲೆಂಕಾ ಅವರ ಅಗ್ರಸ್ಥಾನವೂ ಅಬಾಧಿತವಾಗಿದೆ.

ಸ್ಪೇನ್‌ನ 22 ವರ್ಷದ ಅಲ್ಕರಾಜ್ ಅವರು ಭಾನುವಾರ ನಡೆದ ಫೈನಲ್‌ನಲ್ಲಿ ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರನ್ನು ಸೋಲಿಸಿ ತಮ್ಮ ಮೊದಲ ಆಸ್ಟ್ರೇಲಿಯಾ ಓಪನ್ ಕಿರೀಟ ಗೆದ್ದರು. ಮಾತ್ರವಲ್ಲ, ನಾಲ್ಕೂ ಗ್ರ್ಯಾನ್‌ಸ್ಲಾಮ್ ಗೆದ್ದ ಅತಿ ಕಿರಿಯ ಆಟಗಾರ ಎಂಬ ದಾಖಲೆಯನ್ನೂ ಬರೆದರು.


ಕಾರ್ಲೋಸ್ ಅಲ್ಕರಾಜ್

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದ ಜೊಕೊವಿಚ್ ಅವರಿಗೆ ಪ್ರಶಸ್ತಿ ಸುತ್ತಿನಲ್ಲಿ ನಿರಾಸೆಯಾದರೂ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಒಂದು ಸ್ಥಾನದ ಬಡ್ತಿಯೊಂದಿಗೆ ಮೂರನೇ ಸ್ಥಾನಕ್ಕೇರಿದ್ದಾರೆ. ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಹಿಂದೆಹಾಕಿದ್ದಾರೆ. ಇಟಲಿಯ ಯಾನಿಕ್ ಸಿನ್ನರ್ ಅವರು ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಸಬಲೆಂಕಾ ಅವರು ಆಸ್ಟ್ರೇಲಿಯಾ ಓಪನ್ ಫೈನಲ್‌ನಲ್ಲಿ ಕಜಾಕಸ್ತಾನದ ಎಲಿನಾ ರಿಬಾಕಿನಾ ವಿರುದ್ಧ ಮೂರು ಸೆಟ್‌ಗಳ ಹೋರಾಟದಲ್ಲಿ ಸೋತರೂ ಅಗ್ರಸ್ಥಾನಕ್ಕೆ ಕುತ್ತು ಬಂದಿಲ್ಲ. ರಿಬಾಕಿನಾ ಅವರು ಎರಡು ಸ್ಥಾನಗಳ ಬಡ್ತಿಯೊಂದಿಗೆ ಮೂರನೇ ಸ್ಥಾನಕ್ಕೇರಿದ್ದಾರೆ.


ಅರಿನಾ ಸಬಲೆಂಕಾ

ಪೋಲೆಂಡ್ ತಾರೆ ಇಗಾ ಶ್ವಾಂಟೆಕ್ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಅಮೆರಿಕದ ಅಮಂಡಾ ಅನಿಸಿಮೋವಾ, ಕೊಕೊ ಗಾಫ್ ಮತ್ತು ಜೆಸಿಕಾ ಪೆಗುಲಾ ಅವರು ಕ್ರಮವಾಗಿ ನಾಲ್ಕರಿಂದ ಆರನೇ ಸ್ಥಾನದಲ್ಲಿದ್ದಾರೆ.

ಭಾಂಬ್ರಿಗೆ ಜೀವನ ಶ್ರೇಷ್ಠ ರ‍್ಯಾಂಕಿಂಗ್

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಮೂರನೇ ಸುತ್ತು ತಲುಪಿದ್ದ ಭಾರತದ ಅನುಭವಿ ಡಬಲ್ಸ್ ಆಟಗಾರ ಯುಕಿ ಭಾಂಬ್ರಿ ಅವರು ಎರಡು ಸ್ಥಾನಗಳ ಬಡ್ತಿಯೊಂದಿಗೆ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ 18ನೇ ಸ್ಥಾನಕ್ಕೇರಿದ್ದಾರೆ.

ದಿಗ್ಗಜ ರೋಹನ್ ಬೋಪಣ್ಣ ನಂತರ ಅಗ್ರ 20ರಲ್ಲಿ ಸ್ಥಾನ ಪಡೆದ ಭಾರತದ ಮೊದಲ ಡಬಲ್ಸ್ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 33 ವರ್ಷದ ಭಾಂಬ್ರಿ ಮತ್ತು ಅವರ ಸ್ವೀಡನ್‌ನ ಜತೆಗಾರ ಆ್ಯಂಡ್ರೆ ಗೊರಾನ್ಸನ್ ಜೋಡಿಯು ಮೆಲ್ಬರ್ನ್ ಪಾರ್ಕ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿತ್ತು.

ಈ ಋತುವಿನ ಆರಂಭದಲ್ಲಿ, ಭಾಂಬ್ರಿ ಭಾರತದ ಅಗ್ರಮಾನ್ಯ ಡಬಲ್ಸ್ ಆಟಗಾರನಾಗಿ ಹೊರಹೊಮ್ಮಿದರು. ಕನ್ನಡಿಗ ಬೋಪಣ್ಣ ಅವರು ನಿವೃತ್ತಿ ಘೋಷಿಸಿ, 286 ವಾರಗಳ ಅಗ್ರಸ್ಥಾನದ ಆಧಿಪತ್ಯವನ್ನು ಕೊನೆಗೊಳಿಸಿದರು.

ದೀರ್ಘ ಮಾದರಿ ಕ್ರಿಕೆಟ್‌ನಲ್ಲಿ ಅಂತಿಮ ಓವರ್ ಪೂರ್ಣ ಕಡ್ಡಾಯ: ಎಂಸಿಸಿ ನಿಯಮ

ಲಂಡನ್ (ಪಿಟಿಐ): ಟೆಸ್ಟ್ ಅಥವಾ ಬಹುದಿನಗಳ ಕ್ರಿಕೆಟ್ ಪಂದ್ಯದ ದಿನದಾಟದ ಅಂತಿಮ ಓವರ್ ಪೂರ್ಣಗೊಳಿಸುವುದೂ ಸೇರಿದಂತೆ ಒಟ್ಟು 73 ನಿಯಮಗಳನ್ನು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಪರಿಷ್ಕರಣೆ ಮಾಡಿದೆ. ಈ ಪರಿಷ್ಕೃತ ನಿಯಮಗಳು ಇದೇ ವರ್ಷದ ಅಕ್ಟೋಬರ್‌ನಿಂದ ಜಾರಿಗೆ ಬರಲಿವೆ.

ದಿನದಾಟದ ಅಂತಿಮ ಓವರ್‌ನಲ್ಲಿ ಬೌಲರ್ ವಿಕೆಟ್ ಗಳಿಸಿದರೆ. ಆ ಓವರ್‌ನ ಎಲ್ಲ ಎಸೆತಗಳನ್ನು ಪೂರ್ಣಗೊಳಿಸಬೇಕು. ಸಮಯದ ಕಾರಣ ನೀಡಿ ಓವರ್ ಅನ್ನು ಅರ್ಧಕ್ಕೇ ನಿಲ್ಲಿಸಿ ಮರುದಿನಕ್ಕೆ ಮುಂದೂಡುವಂತಿಲ್ಲ ಎಂದು ನಿಯಮದಲ್ಲಿ ಹೇಳಲಾಗಿದೆ.

‘ಆಧುನಿಕ ಕ್ರಿಕೆಟ್‌ಗೆ ತಕ್ಕಂತೆ ನಿಯಮಗಳನ್ನು ರೂಪಿಸಲಾಗುತ್ತಿದೆ’ ಎಂದು ಎಂಸಿಸಿ ಹೇಳಿದೆ. ಬದಲಾದ ನಿಯಮಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

‘ದಿನದಾಟದ ಕೊನೆಯ ಓವರ್ ಮಧ್ಯದಲ್ಲಿ ಅಥವಾ ಆರಂಭದಲ್ಲಿ ವಿಕೆಟ್ ಪತನವಾದರೆ ಅದನ್ನು ಪೂರ್ಣಗೊಳಿಸಬೇಕು. ಇದರಿಂದ ಪಂದ್ಯದ ನಾಟಕೀಯ ತಿರುವಿನ ಅವಕಾಶವು ಜೀವಂತವಾಗಿರುತ್ತದೆ. ಆದರೆ ಸಮಯ ಮುಗಿದ ಕಾರಣಕ್ಕೆ ಓವರ್‌ನ್ನು ಅರ್ಧಕ್ಕೆ ನಿಲ್ಲಿಸಿ ಮರುದಿನ ಮುಂದುವರಿಸುವುದರಿಂದ ಪಂದ್ಯದ ಸ್ವಾರಸ್ಯವನ್ನು ಕಿತ್ತುಕೊಂಡಂತಾಗಬಹುದು’ ಎಂದು ಎಂಸಿಸಿ ಅಭಿಪ್ರಾಯಪಟ್ಟಿದೆ.

ಕ್ರಿಕೆಟ್ ಸಲಕರಣೆಗಳ ಬಳಕೆಯಲ್ಲಿಯೂ ಕೆಲವು ಮಹತ್ವದ ನಿಯಮಗಳನ್ನು ಪರಿಷ್ಕರಿಸಲಾಗಿದೆ. ಲ್ಯಾಮಿನೇಟ್ ಮಾಡಿರುವ ಬ್ಯಾಟ್‌ಗಳ ಬಳಕೆಯನ್ನು ಕಾನೂನುಬದ್ಧಗೊಳಿಸಲಾಗಿದೆ.

‘ಮುಕ್ತ ಯುಗದ ಕ್ರಿಕೆಟ್‌ನಲ್ಲಿ ಬ್ಯಾಟ್‌ಗಳ ಹೆಚ್ಚುತ್ತಿರುವ ಬೆಲೆಯ ನಿಯಂತ್ರಣಕ್ಕೆ ಹೊಸ ನಿಯಮ ಅಗತ್ಯವಾಗಿದೆ. ಆದ್ದರಿಂದ ಲ್ಯಾಮಿನೇಟ್ ಮಾಡಿರುವ ಬ್ಯಾಟ್ ಬಳಸಬಹುದಾಗಿದೆ’ ಎಂದು ನಿಯಮದಲ್ಲಿ ಹೇಳಲಾಗಿದೆ.

ಸ್ಟಾರ್ ಕಂಟೆಂಡರ್: ಭಾರತದ 33 ಮಂದಿ ಕಣಕ್ಕೆ

ಚೆನ್ನೈ (ಪಿಟಿಐ): ಇದೇ 10ರಿಂದ 15ರವರೆಗೆ ಇಲ್ಲಿ ನಡೆಯಲಿರುವ ವಿಶ್ವ ಟೇಬಲ್ ಟೆನಿಸ್ (ಡಬ್ಲ್ಯುಟಿಟಿ) ಸ್ಟಾರ್ ಕಂಟೆಂಡರ್ ಟೂರ್ನಿಯಲ್ಲಿ ಭಾರತದಿಂದ ದಾಖಲೆಯ 33 ಆಟಗಾರರು ಕಣಕ್ಕಿಳಿಯಲು ಸಜ್ಜಾಗಿದ್ದಾರೆ.

ಪ್ರಿಯಾನುಜ್ ಭಟ್ಟಾಚಾರ್ಯ ಮತ್ತು ಅನುಷಾ ಕುಟುಂಬಲೆ ಅವರು ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಪ್ರಮುಖರು. ಆತಿಥೇಯ ದೇಶದ 23 ಮಂದಿ ಮುಖ್ಯಸುತ್ತಿಗೆ ನೇರ ಪ್ರವೇಶ ಪಡೆದಿದ್ದಾರೆ.

23 ವರ್ಷದ ಅನುಷಾ ಅವರು ವಡೋದರಾದಲ್ಲಿ ನಡೆದ 2026ರ ಡಬ್ಲ್ಯುಟಿಟಿ ಫೀಡರ್ ಸರಣಿಯ ಮಹಿಳಾ ಸಿಂಗಲ್ಸ್‌ನಲ್ಲಿ ಫೈನಲ್ ತಲುಪಿದ್ದರು. 17 ವರ್ಷದ ಪ್ರಿಯಾನುಜ್ ಅವರು 2026ರ ಡಬ್ಲ್ಯುಟಿಟಿ ಯೂತ್ ಕಂಟೆಂಡರ್‌ನ 19 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಚಾಂಪಿಯನ್ ಆಗಿದ್ದರು.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ವೈಲ್ಡ್ ಕಾರ್ಡ್ ಪಡೆದ ಇತರ ಆಟಗಾರ್ತಿಯರಲ್ಲಿ ಸಯಾಲಿ ವಾನಿ, ಕಾವ್ಯಾ ಭಟ್ ಮತ್ತು ತನೀಶಾ ಕೋಟೆಚಾ ಸೇರಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಪ್ರಿಯಾನುಜ್ ಅವರೊಂದಿಗೆ ಅನಿರ್ಬನ್ ಘೋಷ್, ದಿವ್ಯಾಂಶ್ ಶ್ರೀವಾಸ್ತವ ಮತ್ತು ಫ್ರೆಂಚ್‌ನ ರೆಮಿ ಬೆಟೆಲು ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಪ್ರಿಯಾನುಜ್ ಭಟ್ಟಾಚಾರ್ಯ

ಎರಡನೇ ಆವೃತ್ತಿಯ ಈ ಟೂರ್ನಿಯು ಸುಮಾರು ₹2.70 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿದೆ. ಕಳೆದ ಋತುವಿನಲ್ಲಿ ವೃತ್ತಿಪರ ಟೇಬಲ್ ಟೆನಿಸ್‌ನಿಂದ ನಿವೃತ್ತರಾದ ದಿಗ್ಗಜ ಆಟಗಾರ ಅಚಂತಾ ಶರತ್ ಕಮಲ್ ಟೂರ್ನಿಯ ನಿರ್ದೇಶಕರಾಗಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಸವಾಲನ್ನು ಕಳೆದ ಆವೃತ್ತಿಯ ಸೆಮಿಫೈನಲಿಸ್ಟ್ ಮತ್ತು ವಿಶ್ವದ 33ನೇ ಕ್ರಮಾಂಕದ ಮಾನವ್ ಠಕ್ಕರ್ ಮುನ್ನಡೆಸಲಿದ್ದಾರೆ.

ಡಬ್ಲ್ಯುಟಿಟಿ ಫೀಡರ್ ಸರಣಿಯ ಚಾಂಪಿಯನ್ ಮಾನುಷ್ ಶಾ ಸೇರಿದಂತೆ ಅನುಭವಿ ಜಿ. ಸತ್ಯನ್ ಮತ್ತು ಹರ್ಮೀತ್ ದೇಸಾಯಿ ಕೂಡ ಮುಖ್ಯ ಸುತ್ತಿನಲ್ಲಿದ್ದಾರೆ.

ಮಾನುಷ್ ಶಾ ಮತ್ತು ದಿಯಾ ಚಿತಳೆ ಅವರು ಸಿಂಗಲ್ಸ್ ಮುಖ್ಯ ಸುತ್ತಿಗೆ ನೇರ ಪ್ರವೇಶ ಪಡೆದಿದ್ದಾರೆ.

ಭಾರತದ ಶೂಟರ್‌ಗಳ ಮೇಲೆ ನಿರೀಕ್ಷೆ

ನವದೆಹಲಿ (ಪಿಟಿಐ): ಒಲಿಂಪಿಕ್ ಅವಳಿ ಪದಕ ವಿಜೇತೆ ಮನು ಭಾಕರ್ ಮತ್ತು ವಿಶ್ವ ಚಾಂಪಿಯನ್ ಸಾಮ್ರಾಟ್ ರಾಣಾ ಸೇರಿದಂತೆ ಭಾರತದ ಶೂಟರ್‌ಗಳು ಇಲ್ಲಿ ಬುಧವಾರ ಆರಂಭವಾಗುವ ಏಷ್ಯನ್ ಚಾಂಪಿಯನ್ ಷಿಪ್‌ನಲ್ಲಿ (ರೈಫಲ್/ಪಿಸ್ತೂಲ್) ಉತ್ತಮ ಆರಂಭದ ಗುರಿ ಹೊಂದಿದ್ದಾರೆ.

ಇಲ್ಲಿನ ಡಾ.ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ಗಳಲ್ಲಿ ನಡೆಯುವ ಸ್ಪರ್ಧೆಯಲ್ಲಿ ವಿಶ್ವಕಪ್ ಫೈನಲ್ ಚಾಂಪಿಯನ್ ಸುರುಚಿ ಸಿಂಗ್ ಮತ್ತು ಇಶಾ ಸಿಂಗ್ ಅವರೂ ಪದಕ ಬೇಟೆ ಆರಂಭಿಸುವರು.

ಮೊದಲ ದಿನವೇ ನಾಲ್ಕು ಫೈನಲ್ ಸ್ಪರ್ಧೆಗಳು ನಡೆಯಲಿವೆ. ಸೀನಿಯರ್ ಪುರುಷರ ಮತ್ತು ಮಹಿಳೆಯರ 10 ಮೀ. ಏರ್ ಪಿಸ್ತೂಲ್, ಜೂನಿಯರ್ ಮತ್ತು ಯೂತ್ ಪುರುಷರ 10 ಮೀ ಏರ್ ಪಿಸ್ತೂಲ್‌ನಲ್ಲಿ ಪದಕದ ಸ್ಪರ್ಧೆ ನಿಗದಿಯಾಗಿದೆ.

ಮನು, ಇಶಾ, ಸುರುಚಿ ಅವರು ಭಾರತದ ಮಹಿಳೆಯರ ವಿಭಾಗವನ್ನು ಮುನ್ನಡೆಸಲಿದ್ದಾರೆ. ಸಾಮ್ರಾಟ್ ಅವರೊಂದಿಗೆ ವರುಣ್ ತೋಮರ್ ಮತ್ತು ಶರವಣ್ ಕುಮಾರ್ ಅವರು ಪುರುಷರ ತಂಡವನ್ನು ಮುನ್ನಡೆಸಲಿದ್ದಾರೆ.

ಬೆಂಗಳೂರಿನಲ್ಲಿ ಇದೇ 7ರಿಂದ ಡೇವಿಸ್ ಕಪ್ ಟೆನಿಸ್ ಕ್ವಾಲಿಫೈಯರ್ಸ್

ಭಾರತ, ನೆದರ್ಲೆಂಡ್ಸ್ ತಂಡಗಳ ಅಭ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ತಿಂಗಳ 7 ಮತ್ತು 8ರಂದು ಇಲ್ಲಿನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಡೇವಿಸ್ ಕಪ್ ಕ್ವಾಲಿಫೈಯರ್ಸ್ ಮೊದಲ ಸುತ್ತಿನ ಪಂದ್ಯ ಆಡಲಿರುವ ಭಾರತ ಮತ್ತು ನೆದರ್ಲೆಂಡ್ಸ್ ತಂಡಗಳು ಮಂಗಳವಾರ ಇಲ್ಲಿನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದವು.

ಭಾರತ ತಂಡವು ಆಟವಾಡದ ನಾಯಕ ರೋಹಿತ್ ರಾಜಪಾಲ್ ಅವರ ಉಸ್ತುವಾರಿಯಲ್ಲಿ ಸೋಮವಾರವೂ ಅಭ್ಯಾಸದಲ್ಲಿ ಭಾಗಿಯಾಗಿತ್ತು. ವಿಶ್ವದ ಮಾಜಿ ಅಗ್ರಮಾನ್ಯ ಡಬಲ್ಸ್ ಆಟಗಾರ ಪಾಲ್ ಹಾರೂಯಿಸ್ ಅವರು ಕೋಚ್ ಆಗಿರುವ ಡಚ್ ತಂಡ ಇಬ್ಬರು ಪ್ರಮುಖ ಆಟಗಾರರ ಅಲಭ್ಯತೆಯಲ್ಲೂ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ.

ಇಬ್ಬರು ಪ್ರಮುಖ ಸಿಂಗಲ್ಸ್ ಆಟಗಾರರಾದ ಟಾಲೊನ್ ಗ್ರೀಕ್ಸ್‌ಪೂರ್ (ವಿಶ್ವ ಕ್ರಮಾಂಕದಲ್ಲಿ 29ನೇ ಸ್ಥಾನ) ಮತ್ತು ಬಾಟಿಕ್ ವಾನ್ ಡಿ ಝುಂಡ್‌ಶುಲ್ಪ್ (67ನೇ ಸ್ಥಾನ) ಅವರು ಆರನೇ ಕ್ರಮಾಂಕದ ನೆದರ್ಲೆಂಡ್ಸ್ ತಂಡದಲ್ಲಿಲ್ಲ. ನೆದರ್ಲೆಂಡ್ಸ್ ತಂಡ 2024ರಲ್ಲಿ ಫೈನಲ್ ತಲುಪಿತ್ತು.

ನೆದರ್ಲೆಂಡ್ಸ್ ತಂಡದ ಆಟಗಾರರು ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಮಂಗಳವಾರ ತಾಲೀಮು ನಡೆಸಿದರು ಪ್ರಜಾವಾಣಿ ಚಿತ್ರ

‘ಇದು ಎರಡೂ ತಂಡಗಳಿಗೆ ಮಹತ್ವದ ಪಂದ್ಯ. ಸೆಪ್ಟೆಂಬರ್‌ನಲ್ಲಿ ನಡೆಯುವ ವಿಶ್ವಗುಂಪಿನ ಪ್ರಧಾನ ಸುತ್ತಿನಲ್ಲಿ ಆಡಲು ಎಲ್ಲರೂ ಬಯಸುತ್ತಾರೆ. ಭಾರತ ತಂಡ ಉತ್ತಮವಾಗಿ ಆಡಿ ಈ ಹಂತಕ್ಕೆ ತಲುಪಿದೆ. ನಮ್ಮ ತಂಡಕ್ಕೆ ಅವರು ಪ್ರಬಲ ಎದುರಾಳಿಗಳು. ಇಲ್ಲಿ ಕಠಿಣ ಪಂದ್ಯ ನಿರೀಕ್ಷಿಸುತ್ತಿದ್ದೇನೆ’ ಎಂದು ಹಾರೂಯಿಸ್ ಹೇಳಿದರು. 59 ವರ್ಷ ವಯಸ್ಸಿನ ಹಾರೂಯಿಸ್ ಅವರು ಆರು ಗ್ರ್ಯಾನ್‌ಸ್ಲಾಮ್ (ಡಬಲ್ಸ್) ಪ್ರಶಸ್ತಿಗಳನ್ನು ಗೆದ್ದುಕೊಂಡ ಅನುಭವಿ.

‘ಈ ಇಬ್ಬರು ಆಟಗಾರರು ತಮ್ಮ ತವರು ದೇಶದ ರೋಟರ್‌ಡ್ಯಾಮ್‌ನಲ್ಲಿ ಮುಂದಿನ ವಾರ ಆರಂಭವಾಗುವ ಎಟಿಪಿ 500 ಟೂರ್ನಿಯಲ್ಲಿ ಆಡಲಿದ್ದಾರೆ. ಹೀಗಾಗಿ ಅವರು ಇಲ್ಲಿಗೆ ಬಂದಿಲ್ಲ’ ಎಂದು ಕೋಚ್ ಹೇಳಿದರು.

ಒಂದೆಡೆ ಪ್ರವಾಸಿ ತಂಡ, 2025ರ ಸೆಪ್ಟೆಂಬರ್‌ನಲ್ಲಿ ಅರ್ಜೆಂಟೀನಾ ಎದುರು 1–3 ಸೋಲನುಭವಿಸಿದರೆ, ಇನ್ನೊಂದೆಡೆ ಆತಿಥೇಯ ಭಾರತ, ವಿಶ್ವ ಗುಂಪು 1ರ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡಕ್ಕೆ 3–1 ರಿಂದ ಆಘಾತ ನೀಡಿ ಕ್ವಾಲಿಫೈಯರ್ಸ್‌ಗೆ ಅರ್ಹತೆ ಪಡೆದಿತ್ತು. ಸುಮಿತ್ ನಾಗಲ್, ದಕ್ಷಿಣೇಶ್ವರ ಸುರೇಶ್ ಅವರನ್ನು ಒಳಗೊಂಡ ತಂಡ 1993ರ ನಂತರ ಮೊದಲ ಬಾರಿ ಯುರೋಪಿನ ತಂಡದ ಮೇಲೆ ಜಯಗಳಿಸಿತ್ತು.

25 ವರ್ಷ ವಯಸ್ಸಿನ ಜೆಸ್ಪರ್ ಡಿ ಜಾಂಗ್ (88ನೇ ಕ್ರಮಾಂಕ) ಡಚ್ ಸವಾಲನ್ನು ಮುನ್ನಡೆಸಲಿದ್ದಾರೆ. 23 ವರ್ಷ ವಯಸ್ಸಿನ ಗಯ್ ಡೆನ್ ಆಡೆನ್ (162ನೇ ಕ್ರಮಾಂಕ) ಎರಡನೇ ಸಿಂಗಲ್ಸ್ ಆಟಗಾರರಾಗಿದ್ದಾರೆ. ಡೇವಿಡ್ ಪೆಲ್ ಮತ್ತು ಸ್ಯಾಂಡರ್ ಅರೆಂಡ್ಸ್ (ಕ್ರಮವಾಗಿ 29 ಮತ್ತು 40ನೇ ಕ್ರಮಾಂಕ) ಡಬಲ್ಸ್ ಆಟಗಾರರಾಗಿದ್ದಾರೆ.

ಭಾರತ ತಂಡವು ಸುಮಿತ್ ನಾಗಲ್, ದಕ್ಷಿಣೇಶ್ವರ ಸುರೇಶ್, ಯುಕಿ ಭಾಂಬ್ರಿ, ಕರಣ್ ಸಿಂಗ್ ಮತ್ತು ಋತ್ವಿಕ್ ಬೊಲ್ಲಿಪಲ್ಲಿ ಅವರನ್ನು ಒಳಗೊಂಡಿದೆ.

ಪೃಷ್ಠದ ನೋವಿನಿಂದ ಚೇತರಿಕೆಯಲ್ಲಿದ್ದ, 28 ವರ್ಷ ವಯಸ್ಸಿನ ಸುಮಿತ್ ನಾಗಲ್ ಅವರು ಮಂಗಳವಾರ ಅಭ್ಯಾಸದಲ್ಲಿ ಭಾಗಿಯಾದರು.

ಏಷ್ಯನ್ ಸ್ನೂಕರ್: ಪಂಕಜ್ ಫೈನಲ್‌ಗೆ

ದೋಹಾ (ಕತಾರ್): ಹಾಲಿ ಚಾಂಪಿಯನ್ ಪಂಕಜ್ ಅಡ್ವಾಣಿ ಅವರು ಮಂಗಳವಾರ ಏಷ್ಯನ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ 4–0 ಅಂತರದಿಂದ ಇರಾನ್‌ನ ಶಾಹಿನ್ ಸಬ್ಜಿ ಅವರನ್ನು ಸೋಲಿಸಿ ಫೈನಲ್‌ಗೆ ಲಗ್ಗೆಯಿಟ್ಟರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಇರಾನ್‌ನ ಅಮೀರ್ ಸರ್ಕೋಶ್ ಮತ್ತು ಚೀನಾದ ಡೆಂಗ್ ಹೌಹುಯಿ ಮುಖಾಮುಖಿಯಾಗಿದ್ದು, ಆ ಪಂದ್ಯದ ವಿಜೇತರನ್ನು ಪಂಕಜ್ ಅವರು ಪ್ರಶಸ್ತಿ ಸುತ್ತಿನಲ್ಲಿ ಎದುರಿಸಲಿದ್ದಾರೆ.

ಮೂರು ಬಾರಿಯ ಚಾಂಪಿಯನ್ ಅಡ್ವಾಣಿ ತಮ್ಮ ಪಂದ್ಯದಲ್ಲಿ ಶಾಹಿನ್ ವಿರುದ್ಧ ನೇರ ಫ್ರೇಮ್‌ಗಳಲ್ಲಿ ಗೆಲುವು ದಾಖಲಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು 4–0ಯಿಂದ ಯುಎಇಯ ಮೊಹಮ್ಮದ್ ಶೆಹಾಬ್ ವಿರುದ್ಧ ಗೆಲುವು ಸಾಧಿಸಿದ್ದರು.

ಮಹಿಳೆಯರ ವಿಭಾಗದ (10 ರೆಡ್) ಸ್ಪರ್ಧೆಯಲ್ಲಿ ಭಾರತದ ಕೀರ್ತನಾ ಪಾಂಡಿಯನ್ 2-1 ಅಂತರದಿಂದ ಹಾಂಗ್‌ಕಾಂಗ್‌ನ ವಾನ್ ಕಾ ಕೈ ಅವರನ್ನು ಸೋಲಿಸಿ ‘ಡಿ’ ಗುಂಪಿನಲ್ಲಿ ಸತತ ಎರಡನೇ ಗೆಲುವು ಸಾಧಿಸಿದರು. ಆರಂಭಿಕ ಫ್ರೇಮ್‌ನ ಹಿನ್ನಡೆಯಿಂದ ಚೇತರಿಸಿಕೊಂಡ ಕೋಲಾರದ ಕೀರ್ತನಾ ನಂತರದಲ್ಲಿ ಸತತ ಎರಡೂ ಫ್ರೇಮ್‌ಗಳಲ್ಲಿ ಪ್ರಾಬಲ್ಯ ಮೆರೆದರು.

ಆರಂಭಿಕ ಪಂದ್ಯದಲ್ಲಿ ಸೋಲು ಅನುಭವಿಸಿದ್ದ ತಮಿಳುನಾಡಿನ ಅನುಪಮಾ ರಾಮಚಂದ್ರನ್ ಅವರು ಬಿ ಗುಂಪಿನ ತನ್ನ ಎರಡನೇ ಪಂದ್ಯದಲ್ಲಿ 2–1ರಿಂದ ಸೇತಯೇಶ್ ಅಮಿರಾಜಿಮಿ ವಿರುದ್ಧ ಜಯ ಸಾಧಿಸಿದರು.

ನಿಧನ ವಾರ್ತೆ

ಎಚ್. ರಾಜಗೋಪಾಲ್

ಬೆಂಗಳೂರು: ರಾಜ್ಯ ಬ್ಯಾಸ್ಕೆಟ್‌ಬಾಲ್ ತಂಡದ ಮಾಜಿ ಆಟಗಾರ ಎಚ್.ರಾಜಗೋಪಾಲ್ (67) ಅವರು ಅನಾರೋಗ್ಯದಿಂದಾಗಿ ಬೆಂಗಳೂರಿನಲ್ಲಿ ಮಂಗಳವಾರ ಬೆಳಿಗ್ಗೆ ನಿಧನರಾದರು.



ಎಚ್‌ಎಎಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡದ ಆಟಗಾರರಾಗಿ ಖ್ಯಾತಿ ಗಳಿಸಿದ್ದ ಅವರು, 1980ರ ದಶಕದಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು.

ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.